ಭಾನುವಾರ, ಡಿಸೆಂಬರ್ 7, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 337 | ಪುಟ 18
www.prajavani.net prajavani.net prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚಿನ್ನಕ್ಕೆ ಗುರಿ
ಭಾರತದ ಶೂಟರ್ ಸುರುಚಿ ಸಿಂಗ್ ಅವರು ದೋಹಾದಲ್ಲಿ ಶನಿವಾರ ನಡೆದ ಐಎಸ್‌ಎಸ್‌ಎಫ್ ವಿಶ್ವಕಪ್ ಫೈನಲ್‌ನ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು

ಚಿಣ್ಣರ ಸಂಭ್ರಮ
ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ನಡೆದ ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಮಗುವೊಂದು ಸಂಭ್ರಮಿಸಿತು

ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ 4
‘ಮಸೀದಿ: ಏಪ್ರಿಲ್‌ನಿಂದ ಕಾಮಗಾರಿ’ 9

ಸರ್ಕಾರ ಸಾಕುವ ‘ಬಿಳಿಯಾನೆ’

ನಷ್ಟದ ಸುಳಿಯಲ್ಲಿ ನಿಗಮ– ಮಂಡಳಿಗಳು
•ಸಾಲ ತೀರಿಸಲು ಸಾಧ್ಯವಾಗದೆ ಸಂಕಟ

125 ಒಟ್ಟು ಸಾರ್ವಜನಿಕ ವಲಯ ಉದ್ದಿಮೆಗಳು

16	33	34	42
ನಿಷ್ಕ್ರಿಯ ಉದ್ದಿಮೆ	ನಷ್ಟದಲ್ಲಿರುವ ಉದ್ದಿಮೆ	ಲಾಭದಲ್ಲಿರುವ ಉದ್ದಿಮೆ	ಸಾಮಾಜಿಕ ಕಂಪನಿ

ಮಾಹಿತಿ: ಆರ್ಥಿಕ ಇಲಾಖೆ

ಒಳನೋಟ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಎಂಬತ್ತಕ್ಕೂ ಹೆಚ್ಚು ನಿಗಮ- ಮಂಡಳಿಗಳು ಸೇರಿದಂತೆ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ಸಾರ್ವಜನಿಕ ವಲಯದ 125 ಉದ್ದಿಮೆಗಳಿವೆ. ಆ ಪೈಕಿ ಬಹುತೇಕ, ಇತ್ತೀಚಿನ ದಿನಗಳಲ್ಲಿ ‘ರಾಜಕೀಯ ಪುನರ್ವಸತಿ’ ಕೇಂದ್ರಗಳಾಗಿ ಪರಿವರ್ತಿತಗೊಂಡಿವೆ. ಯಾವುದೊ ಸಾರ್ವಜನಿಕ ಉದ್ದೇಶದಿಂದ, ಸಾಮಾಜಿಕ ಆಶಯದಿಂದ ಸ್ಥಾಪನೆಯಾಗುವ ಕೆಲವು ನಿಗಮ- ಮಂಡಳಿಗಳು, ಉದ್ದಿಮೆಗಳು ಅತೃಪ್ತ ರಾಜಕಾರಣಿಗಳನ್ನು ‘ಸಂತೃಪ್ತ’ಗೊಳಿಸುವ ಗಂಜಿ ಕೇಂದ್ರಗಳಾಗುತ್ತಿವೆ.

ಸಂಪುಟದಲ್ಲಿ ಸ್ಥಾನ ವಂಚಿತ ಕೆಲವರಿಗೆ ನಿಗಮ, ಮಂಡಳಿ, ಉದ್ದಿಮೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಕೊಡುಗೆ ನೀಡಿ ಅಸಮಾಧಾನದ ಹೊಗೆ ಏಳದಂತೆ ನೋಡಿಕೊಳ್ಳುವ ಪ್ರಯತ್ನ ಎಲ್ಲ ಪಕ್ಷಗಳ ಅಧಿಕಾರವಧಿಯಲ್ಲೂ ನಡೆದುಕೊಂಡು ಬಂದಿದೆ. ಒಂದಷ್ಟು ಅನುದಾನ, ಅಧ್ಯಕ್ಷ– ಉಪಾಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ, ಸರ್ಕಾರಿ ವಾಹನ, ಕೈತುಂಬ ಸಂಬಳ, ಭತ್ಯೆ, ಕೆಲವರಿಗೆ ವಸತಿ ಸೌಲಭ್ಯ, ಆಪ್ತ ಸಹಾಯಕರು, ಕಚೇರಿ ಕೆಲಸಕ್ಕೆ ಸಿಬ್ಬಂದಿ ಬಿಟ್ಟರೆ ಈ ನಿಗಮ– ಮಂಡಳಿಗಳ ಸಾಧನೆ ಶೂನ್ಯ. ಜನರ ತೆರಿಗೆ ಹಣದಲ್ಲಿ ಸರ್ಕಾರ ಸಾಕುತ್ತಿರುವ ‘ಬಿಳಿಯಾನೆ’ಗಳಾಗಿ ಬಹುತೇಕ ನಿಗಮ, ಮಂಡಳಿಗಳು ಅಸ್ತಿತ್ವ ಉಳಿಸಿಕೊಂಡಿವೆ.

ಅನೇಕ ನಿಗಮ– ಮಂಡಳಿಗಳಿಗೆ ಸ್ವಂತ ಆದಾಯ ಇಲ್ಲ. ರಾಜ್ಯ ಸರ್ಕಾರ ಬಿಡುಗಡೆ ಮಾಡುವ ಅನುದಾನವನ್ನೇ ಅವಲಂಬಿಸಿವೆ. ಕೆಲವು ಆ ಜೀವ-ದ್ರವ್ಯದಿಂದಲೇ ಉಸಿರಾಡುತ್ತಿವೆ. ಬೆರಳೆಣಿಕೆಯ ನಿಗಮಗಳಷ್ಟೆ ಸರ್ಕಾರದಿಂದ ಯಾವುದೇ ನೆರವು ಪಡೆಯದೆ ಜೀವ ಉಳಿಸಿಕೊಂಡಿವೆ.ನಿರಂತರ ನಷ್ಟದಿಂದ ಕೆಲವು ನಿಗಮಗಳು ಲಾಭದ ಹಳಿಗೆ ಬಂದರೂ, ಸಾಲ ಬಾಧ್ಯತೆಯಲ್ಲಿ ಸಿಲುಕಿ, ಆರ್ಥಿಕ ಒತ್ತಡ ಸಹಿಸಲಾಗದೆ ನರಳುತ್ತಿವೆ.

ಸಾರ್ವಜನಿಕ ವಲಯದ 125 ಉದ್ದಿಮೆಗಳ ಪೈಕಿ ಕೇವಲ 34 ಲಾಭದಲ್ಲಿವೆ. 16 ನಿಷ್ಕ್ರಿಯಗೊಂಡಿವೆ. ಇನ್ನು 33 ನಷ್ಟದಲ್ಲಿವೆ ಎಂದು ಇದೇ ಫೆಬ್ರುವರಿ ತಿಂಗಳಲ್ಲಿ ಆರ್ಥಿಕ ಇಲಾಖೆಯು ಸಚಿವ ಸಂಪುಟಕ್ಕೆ ಟಿಪ್ಪಣಿ ಮಂಡಿಸಿದೆ. ಇನ್ನು 42 ಕಂಪನಿ ಅಥವಾ ನಿಗಮಗಳು ಜಾತಿ ಆಧಾರಿತ ಅಥವಾ ಸಾರ್ವಜನಿಕ ಸೇವೆ (ನೀರಾವರಿ ನಿಗಮಗಳು), ಮೂಲಸೌಕರ್ಯ ಅಭಿವೃದ್ಧಿ ಉದ್ದೇಶದಿಂದ (ವಿವಿಧ ಸ್ಮಾರ್ಟ್ ಸಿಟಿ ಲಿಮಿಟೆಡ್) ಸ್ಥಾಪನೆ ಆದವು ಎಂದೂ ಆ ಟಿಪ್ಪಣಿಯಲ್ಲಿ ವಿವರಿಸಿದೆ.

ಶಾಸಕ ಆರ್.ವಿ. ದೇಶಪಾಂಡೆ ನೇತೃತ್ವದ ಕರ್ನಾಟಕ ಆಡಳಿತ ಸುಧಾರಣಾ ಆಯೋಗವು, 80 ನಿಗಮ-ಮಂಡಳಿಗಳ ಐದು ವರ್ಷದ ಆರ್ಥಿಕ ಸ್ಥಿತಿ, ಸಿಬ್ಬಂದಿ, ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ನೀಡಿತ್ತು. ▶6

ಎ.ಐ ಚಿತ್ರ

44 ಉದ್ದಿಮೆಗಳು ಲೆಕ್ಕಪತ್ರವನ್ನೇ ಸಲ್ಲಿಸಿಲ್ಲ!

44 ಸಾರ್ವಜನಿಕ ಉದ್ದಿಮೆಗಳು 2024–25ನೇ ಸಾಲಿನ ಹಾಗೂ ಅದಕ್ಕಿಂತ ಹಿಂದಿನ ಹಲವಾರು ವರ್ಷಗಳ ವಾರ್ಷಿಕ ಲೆಕ್ಕಪತ್ರವನ್ನೇ ಅಂತಿಮಗೊಳಿಸಿಲ್ಲ. ಅಷ್ಟೇ ಅಲ್ಲ, ಸಾರ್ವಜನಿಕ ವಲಯದ ದಿ. ಮೈಸೂರು ಅಸಿಟೆಡ್ ಆ್ಯಂಡ್ ಕೆಮಿಕಲ್ಸ್ ಕಂಪನಿ ಲಿಮಿಟೆಡ್, ಕರ್ನಾಟಕ ಟೆಲಿಕಾಂ ಲಿಮಿಟೆಡ್ ಮತ್ತು ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್ ಈ ಮೂರು ಉದ್ದಿಮೆಗಳು ಕಳೆದ 20 ವರ್ಷಗಳಿಂದಲೂ ಲೆಕ್ಕಪತ್ರವನ್ನೇ ಮಂಡಿಸಿಲ್ಲ. ಈ ಮೂರೂ ಕಂಪನಿಗಳು ಅಸ್ತಿತ್ವದಲ್ಲಿದೆಯೇ ಇಲ್ಲವೊ ಎಂಬ ಬಗ್ಗೆಯೇ ಮಾಹಿತಿ ಇಲ್ಲ! ವಾರ್ಷಿಕ ಲೆಕ್ಕಪತ್ರ ಸಲ್ಲಿಸದ ಮತ್ತು ಅಸ್ತಿತ್ವದಲ್ಲಿದೆಯೇ ಎಂಬ ಅನುಮಾನ ಇರುವ ಉದ್ದಿಮೆಗಳ ಪಟ್ಟಿಯ ಸಹಿತ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಇದೇ ಅ. 14ರಂದು ಪತ್ರ ಕಳುಹಿಸಿರುವ ಪ್ರಧಾನ ಮಹಾಲೇಖಪಾಲರು, ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಈ ಬಗ್ಗೆ ಸೂಚನೆ ನೀಡುವಂತೆ ತಿಳಿಸಿದ್ದಾರೆ. ಸಾರ್ವಜನಿಕ ಉದ್ದಿಮೆಗಳು ನಿಗದಿತ ಕಾಲಮಿತಿಯೊಳಗೆ ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ ಆಯಾ ಆರ್ಥಿಕ ವರ್ಷ ಮುಕ್ತಾಯಗೊಂಡ ಆರು ತಿಂಗಳ ಒಳಗಾಗಿ ವಾರ್ಷಿಕ ಲೆಕ್ಕಪತ್ರಗಳನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಬೇಕು ಎಂದು ಸರ್ಕಾರ 2023ರ ಜ. 13ರಂದು ಸ್ಪಷ್ಟ ಸೂಚನೆ ನೀಡಿದೆ. ವಾರ್ಷಿಕ ಲೆಕ್ಕಪತ್ರ ಸಲ್ಲಿಸದಿರುವುದು ಶಾಸನಬದ್ಧ ನಿಬಂಧನೆಗಳ ಉಲ್ಲಂಘನೆ. ಹೀಗಾಗಿ, ಎಲ್ಲ ಸಾರ್ವಜನಿಕ ಉದ್ದಿಮೆಗಳು ನಿಯಮಾನುಸಾರ ನಿಗದಿತ ಅವಧಿಯೊಳಗೆ ಅಂತಿಮ ವಾರ್ಷಿಕ ಲೆಕ್ಕಪತ್ರಗಳನ್ನು ಮಹಾಲೇಖಪಾಲರ ಕಚೇರಿಗೆ ಸಲ್ಲಿಸಲು ಕ್ರಮ ವಹಿಸಬೇಕು ಎಂದು ಆಡಳಿತ ಇಲಾಖೆಗಳಿಗೆ ಆರ್ಥಿಕ ಇಲಾಖೆ ಇದೇ ಅ. 15ರಂದು ಟಿಪ್ಪಣಿ ಕಳುಹಿಸಿದೆ.

ಆರ್ಥಿಕ ಇಲಾಖೆಯ ದಾಖಲೆ ಪ್ರಕಾರ ನಿಷ್ಕ್ರಿಯಗೊಂಡಿರುವ 16 ಕಂಪನಿಗಳು

1. ಕರ್ನಾಟಕ ರಾಜ್ಯ ಆಗ್ರೊ ಕಾರನ್ ಪ್ರಾಡಕ್ಟ್ಸ್, 2. ಕರ್ನಾಟಕ ಕೃಷಿ ಕೈಗಾರಿಕೆಗಳ ನಿಗಮ ನಿಯಮಿತ, 3. ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತ, 4. ಬೆಂಗಳೂರು ಪಿಆರ್‌ಆರ್ ಅಭಿವೃದ್ಧಿ ನಿಗಮ ನಿಯಮಿತ, 5. ಮೈಸೂರು ತಂಬಾಕು ಕಂಪನಿ ನಿಯಮಿತ, 6. ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್, 7. ಕರ್ನಾಟಕ ರಾಜ್ಯ ವೀನರ್ಸ್ ಲಿಮಿಟೆಡ್, 8. ಸಿ. ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್, 9. ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್, 10. ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್, 11. ದಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್, 12. ಎನ್‌ಜಿಇಎಫ್ ಲಿಮಿಟೆಡ್ (ಬೆಂಗಳೂರು), 13. ಕರ್ನಾಟಕ ಟೆಲಿಕಾಂ ಲಿಮಿಟೆಡ್, 14. ದಿ. ಮೈಸೂರು ಅಸಿಟೆಡ್ ಆ್ಯಂಡ್ ಕೆಮಿಕಲ್ಸ್ ಕಂಪನಿ ಲಿಮಿಟೆಡ್, 15 ವಿಜಯನಗರ ಸ್ಟೀಲ್ ಲಿಮಿಟೆಡ್, 16. ಬೆಂಗಳೂರು ಉಪ ನಗರ ರೈಲು ಕಂಪನಿ ಲಿಮಿಟೆಡ್

ದಕ್ಷಿಣ ಆಫ್ರಿಕಾ	ಭಾರತ	ಫಲಿತಾಂಶ
270 (47.5 ಓವರ್‌ಗಳಲ್ಲಿ)	1 ವಿಕೆಟ್‌ಗೆ 271 (39.5 ಓವರ್‌ಗಳಲ್ಲಿ)	ಫಲಿತಾಂಶ: ಭಾರತಕ್ಕೆ 9 ವಿಕೆಟ್ ಜಯ. ಸರಣಿಯಲ್ಲಿ 2-1ರ ಗೆಲುವು

ಭಾರತಕ್ಕೆ ಸರಣಿ ಕಿರೀಟ

ವಿಶಾಖಪಟ್ಟಣಂ: ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಭಾರತ ತಂಡವು ಶನಿವಾರ ಇಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಪಂದ್ಯದಲ್ಲಿ ಜಯಿಸಿತು. ಅದರೊಂದಿಗೆ 2–1ರಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು. ತಲಾ ನಾಲ್ಕು ವಿಕೆಟ್ ಗಳಿಸಿದ ವೇಗಿ ಪ್ರಸಿದ್ಧಕೃಷ್ಣ ಮತ್ತು ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರ ಅಮೋಘ ಬೌಲಿಂಗ್, ಯಶಸ್ವಿ ಜೈಸ್ವಾಲ್ ಅವರ ಶತಕದಿಂದಾಗಿ ಭಾರತಕ್ಕೆ ಜಯದ ಹಾದಿ ಸುಲಭವಾಯಿತು. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರೂ ಮಿಂಚಿದರು.



ಕೈದಿಗಳಿಗೆ ಡ್ರಗ್ಸ್, ಸಿಗರೇಟ್: ವೀಕ್ಷಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳಿಗೆ ಸಿಗರೇಟ್ ಹಾಗೂ ಡ್ರಗ್ಸ್ ಪೂರೈಸುತ್ತಿದ್ದ ಪ್ರಕರಣದಲ್ಲಿ ಜೈಲಿನ ವೀಕ್ಷಕರೊಬ್ಬರನ್ನು (ವಾರ್ಡರ್) ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಹುಲ್ ಪಾಟೀಲ

ರಾಹುಲ್ ಪಾಟೀಲ ಬಂಧಿತ ಆರೋಪಿ. ‘ಕೈದಿಗಳಿಗೆ ಪೂರೈಸಲು ತಂದಿದ್ದ ಎರಡು ಪ್ಯಾಕ್ ಸಿಗರೇಟ್ ಹಾಗೂ 60 ಗ್ರಾಂ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕೇಂದ್ರ ಕಾರಾಗೃಹದ ಸೂಪರಿಂಟೆಂಡೆಂಟ್ ಎಚ್.ಎ. ಪರಮೇಶ್ ಅವರು ಜೈಲರ್ ಕಾಂತಪ್ಪ ಪಾಟೀಲ ಅವರ ಮೂಲಕ ದೂರು ನೀಡಿದ್ದರು. ▶9

ಬಿಜೆಪಿ, ಟಿಎಂಸಿ ನಡುವೆ ಜಟಾಪಟಿ

ಕೋಲ್ಕತ್ತ(ಪಿಟಿಐ): ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ‘ಬಾಬರಿ ಮಸೀದಿ ಶೈಲಿ’ಯ ಮಸೀದಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸುವ ಶಾಸಕ ಹುಮಾಯೂನ್ ಕಬೀರ್ ಯೋಜನೆ ಟಿಎಂಸಿ ಹಾಗೂ ಬಿಜೆಪಿ ನಡುವೆ ಜಟಾಪಟಿಗೆ ಕಾರಣವಾಗಿದೆ. ▶9

ರಾಜ್ಯಕ್ಕೆ ಅನ್ಯಾಯ ಆದರೂ ಧ್ವನಿ ಎತ್ತಿಲ್ಲ

ಹಾಸನ: ‘ಅಹಿಂದ ಸಂಘಟಿಸಿದ್ದು ನಾನು. ಅಹಿಂದಕ್ಕೆ ಎಚ್.ಡಿ. ಕುಮಾರ ಸ್ವಾಮಿ ಅವರದ್ದೇನು ಕೊಡುಗೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು. ▶4

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಕೈ’ ಹೈಕಮಾಂಡ್ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಳಗಾವಿ ವಿಧಾನಮಂಡಲ ಅಧಿವೇಶನಕ್ಕೆ ಸುಮಾರು 36 ಗಂಟೆಗಳಷ್ಟೇ ಉಳಿದಿರುವ ಸಮಯದಲ್ಲಿ ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕ ಸರ್ಕಾರದ ನಾಯಕತ್ವ ವಿಷಯದ ಬಗ್ಗೆ ಸಮಾಲೋಚಿಸಿರುವುದು ‘ಕೈ’ ಪಾಳಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಅಧಿಕಾರ ಹಂಚಿಕೆಯ ವಿಷಯದಲ್ಲಿ ತಮ್ಮಲ್ಲಿ ಯಾವುದೇ ಭಿನ್ನಮತ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉಪಾಹಾರ ಕೂಟದ ಮೂಲಕ ಬಿಂಬಿಸಿದ ಬಳಿಕ ರಾಜ್ಯ ಕಾಂಗ್ರೆಸ್‌ನಲ್ಲಿ ಬಣ ಬಡಿದಾಟ ತಣ್ಣಗಾಗಿತ್ತು.

ಹರಿಯಾಣದ ನಿವೃತ್ತ ಐಎಎಸ್ ಅಧಿಕಾರಿಯೊಬ್ಬರ ಕುಟುಂಬದ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸಲು ಬುಧವಾರ ರಾತ್ರಿ ದೆಹಲಿಗೆ ಬಂದಿದ್ದ ಡಿ.ಕೆ. ಶಿವಕುಮಾರ್, ‘ನಾನು ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದಿಲ್ಲ. ಅವರನ್ನು ಮುಜುಗರಕ್ಕೆ ಸಿಲುಕಿಸಲು ಇಷ್ಟಪಡುವುದಿಲ್ಲ’ ಎಂದು ಹೇಳಿದ್ದರು. ಅದಾದ ಮೂರು ದಿನಗಳ ಬಳಿಕ ಕಾಂಗ್ರೆಸ್ ವರಿಷ್ಠರು ಸಭೆ ಸೇರಿ ಸುಮಾರು ಎರಡು ಗಂಟೆಗಳ ಕಾಲ ಚರ್ಚಿಸಿರುವುದು ಕುತೂಹಲ ಮೂಡಿಸಿದೆ. ಸಂಸತ್‌ನ ಚಳಿಗಾಲದ ಅಧಿವೇಶನದ ಮುಗಿದ ಬಳಿಕವಷ್ಟೇ ಕಾಂಗ್ರೆಸ್ ವರಿಷ್ಠರು ಇನ್ನೊಂದು ಸುತ್ತಿನ ಸಭೆ ನಡೆಸುವ ಸಂಭವ ಇದೆ.

ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ನಿವಾಸದಲ್ಲಿ ಶನಿವಾರ ಸಂಜೆ ನಡೆದ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಭಾಗಿಯಾಗಿದ್ದರು. ▶8

ಮಾತು ಕೊಟ್ಟ ಮೇಲೆ ಮಾಡುತ್ತೇವೆ: ಸಿ.ಎಂ

ಹಾಸನ: ನಾಯಕತ್ವಕ್ಕಾಗಿ ‘ಅಂತರ್ಯುದ್ಧ’ ನಡೆಸುತ್ತಲೇ ‘ಉಪಾಹಾರ ಸಭೆ’ಗಳ ಮೂಲಕ ಒಗ್ಗಟ್ಟು ಪ್ರದರ್ಶಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಶನಿವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ನೀಡಿರುವ ಹೇಳಿಕೆಗಳು ರಾಜಕೀಯ ವಲಯದಲ್ಲಿ ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿವೆ.

‘ಮಾತು ಕೊಡಲ್ಲ. ಕೊಟ್ಟ ಮೇಲೆ ಮಾಡಿಯೇ ಮಾಡುತ್ತೇವೆ’ ಎಂದು ಸಿದ್ದರಾಮಯ್ಯ ಹೇಳಿದರು. ಹೇಮಾವತಿ ಜಲಾಶಯದ ಕುರಿತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಪ್ರಸ್ತಾಪಿಸಿದ್ದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಕೊಟ್ಟ ಮಾತಿನಂತೆ ನಡೆದುಕೊಂಡ ಸರ್ಕಾರ ಇದ್ದರೆ ಅದು ಕಾಂಗ್ರೆಸ್ ಸರ್ಕಾರ’ ಎಂದರು. ‘ಹೇಮಾವತಿ ಜಲಾಶಯದ ಬಳಿ ಉದ್ಯಾನ, ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ’ ಎಂದು ತಿಳಿಸಿದರು.

ಹೊಸ ಪರ್ವ ಮಾಡೋಣ– ಡಿಕೆಶಿ

‘ಮುಂದಿನ ದಿನದಲ್ಲಿ ಮತ್ತೆ ಈ ರಾಜ್ಯದಲ್ಲಿ ಹೊಸ ಶಕ್ತಿ ತುಂಬಿ, ಹೊಸ ಬದಲಾವಣೆ, ಹೊಸ ಪರ್ವ ಮಾಡೋಣ’ ಎಂದು ಡಿ.ಕೆ.ಶಿವಕುಮಾರ್ ಹೇಳಿದರು. ‘ನಮ್ಮ ಹುಟ್ಟು ನಮ್ಮ ಕೈಯಲ್ಲಿ ಇಲ್ಲ. ಆದರೆ ನಾವು ಮುಟ್ಟಬೇಕಾದ ಗುರಿ ನಮ್ಮ ಕೈಯಲ್ಲೇ ಇದೆ. ನಿಮ್ಮ ವಿಶ್ವಾಸ ಇದೇ ರೀತಿ ಇರಲಿ’ ಎಂದು ಅವರು ಭಾಷಣದ ವೇಳೆ ತಿಳಿಸಿದರು.

ಈ ಕುರಿತು ಸುದ್ದಿಗಾರರಿಗೆ ಸ್ಪಷ್ಟನೆ ನೀಡಿದ ಅವರು, ‘ನಾವು ಜನರ ಪರವಾಗಿ ಕೆಲಸ ಮಾಡಿದಾಗ ಮಾತ್ರವಲ್ಲವೇ ಗುರಿ ಮುಟ್ಟುವುದು? ನಮ್ಮ ಸಾಧನೆಗಳು ಜನರನ್ನು ತಲುಪುತ್ತಿವೆ. ಗ್ಯಾರಂಟಿ ಯೋಜನೆಯಿಂದ ಜನರಿಗೆ ₹ 1.11 ಲಕ್ಷ ಕೋಟಿಯಷ್ಟು ತಲುಪುತ್ತಿದ್ದಂತೆ ಗ್ಯಾರಂಟಿ ಸಮಾವೇಶ ಮಾಡಬೇಕು ಎಂದು ನಾನು ಹಾಗೂ ಕೃಷ್ಣ ಬೈರೇಗೌಡರು ಚರ್ಚೆ ಮಾಡುತ್ತಿದ್ದೆವು. ಹೀಗೆ ನಮ್ಮ ಹೊಸ ಆಲೋಚನೆಗಳಿವೆ. ಅವುಗಳನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ’ ಎಂದರು.

ನಿರ್ದಿಷ್ಟ ಕಂಪನಿಗೆ ಅನುಕೂಲ ಮಾಡಿಕೊಡಲು ನಿಯಮದಲ್ಲೇ ಬದಲಾವಣೆ
ಮಂಚ–ಹಾಸಿಗೆ: ನಿಯಮ ಇಬ್ಬಗೆ

• ಚಂದ್ರಹಾಸ ಹಿರೇಮಳಲಿ

₹20 ಕೋಟಿ	8,140	₹20 ಕೋಟಿ	36,300
ಮಂಚಗಳ ಪೂರೈಕೆಯ ಟೆಂಡರ್ ಮೊತ್ತ	ಪೂರೈಸಬೇಕಿರುವ ಮಂಚಗಳು	ಹಾಸಿಗೆ ಪೂರೈಕೆಯ ಟೆಂಡರ್ ಮೊತ್ತ	ಪೂರೈಸಬೇಕಿರುವ ಹಾಸಿಗೆಗಳು

ಬೆಂಗಳೂರು: ಹಾಸ್ಟೆಲ್‌ಗಳಿಗೆ ಮಂಚ ಪೂರೈಸುವ ಗುತ್ತಿಗೆಯನ್ನು ಒಂದು ನಿರ್ದಿಷ್ಟ ಕಂಪನಿಗೆ ಸಿಗುವಂತೆ ಮಾಡಿಕೊಡಲು ಮುಂದಾಗಿರುವ ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಗೆ ವಿರುದ್ಧವಾಗಿ ಟೆಂಡರ್ ನಿಯಮವನ್ನೇ ಬದಲಾವಣೆ ಮಾಡಿದೆ.

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಂಚ ಹಾಗೂ ಹಾಸಿಗೆ ಪೂರೈಸಲು ತಲಾ ₹20 ಕೋಟಿ ಮೌಲ್ಯದ ಎರಡು ಪ್ರತ್ಯೇಕ ಟಂಡರ್ ಕರೆಯಲಾಗಿದೆ. ಹಾಸಿಗೆಗಳಿಗೆ ಕರೆದಿರುವ ಟೆಂಡರ್ ನಿಯಮಗಳನ್ನು ಕಾಯ್ದೆಗೆ ಅನುಗುಣವಾಗಿ ರೂಪಿಸಿದ್ದು, ಮಂಚಗಳ ಪೂರೈಕೆಗೆ ಕೆಲ ನಿಯಮಗಳನ್ನು ಸಡಿಲಿಸುವ ಮೂಲಕ ಇಲಾಖೆ ಇಬ್ಬಗೆಯ ನೀತಿ ಅನುಸರಿಸಿದೆ.

ಸಮಾಜ ಕಲ್ಯಾಣ ಇಲಾಖೆ ಅಧೀನದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ₹20 ಕೋಟಿ ಮೊತ್ತದಲ್ಲಿ ಎರಡು ಸ್ತರದ (ಟೂ–ಟೈರ್) 8,140 ಮಂಚಗಳನ್ನು ಹಾಗೂ ₹20 ಕೋಟಿ ಮೊತ್ತದಲ್ಲಿ 36,300 ಹಾಸಿಗೆಗಳನ್ನು ಪೂರೈಸಲು ಅರ್ಹ ತಯಾರಕರು, ಸರಬರಾಜುದಾರರಿಂದ ಅಕ್ಟೋಬರ್ 30ರಂದು ಟೆಂಡರ್ ಆಹ್ವಾನಿಸಲಾಗಿದೆ. ಆದರೆ, ಮಂಚ ಹಾಗೂ ಹಾಸಿಗೆಗೆ ಪ್ರತ್ಯೇಕ ನಿಯಮ ರೂಪಿಸಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಗೆ ವಿರುದ್ಧವಾಗಿ ಮಂಚ ಪೂರೈಕೆಯ ನಿಯಮಗಳನ್ನು ಪ್ರಕಟಿಸಲಾಗಿದೆ.

> **ಯಾವ ಕಾರಣಕ್ಕಾಗಿ ಹಿಂದೆ ₹14.5 ಕೋಟಿ ಮೊತ್ತದ ಟೆಂಡರ್ ರದ್ದು ಮಾಡಲಾಗಿತ್ತೋ, ಅದೇ ಕಂಪನಿಗೆ ಅನುಕೂಲ ಮಾಡಿಕೊಡಲು ಟೆಂಡರ್ ನಿಯಮವನ್ನೇ ಬದಲಾಯಿಸಲಾಗಿದೆ**
> **ಎಚ್.ಅರುಣ್,** ಮಾಹಿತಿ ಹಕ್ಕು ಕಾರ್ಯಕರ್ತ

ಯಾವುದೇ ಸಾಮಗ್ರಿಯನ್ನು ಸರಬರಾಜು ಮಾಡಲು ಇ-ಟೆಂಡರ್‌ಗೆ ಅರ್ಜಿ ಸಲ್ಲಿಸುವ ಕಂಪನಿಗಳು ಕೇಂದ್ರ, ರಾಜ್ಯ ಸರ್ಕಾರಗಳಿಗೆ ಟೆಂಡರ್ ಮೊತ್ತದ ಶೇ 80ರಷ್ಟು ಮೌಲ್ಯದ ನಿಗದಿತ ಸಾಮಗ್ರಿಗಳನ್ನು ನೇರವಾಗಿ ಪೂರೈಸಿದ ಅನುಭವ ಪ್ರಮಾಣಪತ್ರ ಹೊಂದಿರಬೇಕು. ಆದರೆ, ₹20 ಕೋಟಿ ಮೌಲ್ಯದ ಮಂಚಗಳನ್ನು ಪೂರೈಸಲು ಕರೆದಿರುವ ಟೆಂಡರ್ ನಿಯಮದಲ್ಲಿ ಈ ಅಂಶವನ್ನು ಕೈಬಿಟ್ಟು, ಇತರೆ ವಿತರಕರ ಮೂಲಕವೂ ಸಾಮಗ್ರಿಗಳನ್ನು ಪೂರೈಸಿದ ಕಂಪನಿಗಳಿಗೂ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

ಹಾಸಿಗೆಗಳ ಪೂರೈಕೆಗೆ ಕರೆದ ಟೆಂಡರ್‌ನಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳಿಗೆ ನಿಗದಿತ ಸಾಮಗ್ರಿಗಳನ್ನು ನೇರವಾಗಿ ಪೂರೈಸಿದ ಅನುಭವ ಪ್ರಮಾಣಪತ್ರ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ.

ಮಂಚಕ್ಕೆ ಎರಡು ಟೆಂಡರ್: ಹಾಸ್ಟೆಲ್ ವಿದ್ಯಾರ್ಥಿಗಳಿಗೆ ₹20 ಕೋಟಿ ವೆಚ್ಚದಲ್ಲಿ ಮಂಚ ಪೂರೈಸುವ ಟೆಂಡರ್ ಪ್ರಕ್ರಿಯೆಗೆ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಸಮಾಜ ಕಲ್ಯಾಣ ಇಲಾಖೆ ಈ ಮೊತ್ತವನ್ನು ಎರಡು ಭಾಗಗಳಾಗಿ ವಿಂಗಡಿಸಿ ಬೆಳಗಾವಿ, ಕಲಬುರಗಿ ವಿಭಾಗದ ಹಾಸ್ಟೆಲ್‌ಗಳಿಗೆ ₹10 ಕೋಟಿ ಮೌಲ್ಯದಲ್ಲಿ 4,070 ಮಂಚಗಳು ಹಾಗೂ ಮೈಸೂರು, ಬೆಂಗಳೂರು ವಿಭಾಗದ ಹಾಸ್ಟೆಲ್‌ಗಳಿಗೆ ₹10 ಕೋಟಿ ಮೌಲ್ಯದಲ್ಲಿ ಅಷ್ಟೇ ಸಂಖ್ಯೆಯ ಮಂಚಗಳನ್ನು ಪೂರೈಸಲು ಎರಡು ಪ್ರತ್ಯೇಕ ಟೆಂಡರ್ ಅಧಿಸೂಚನೆ ಹೊರಡಿಸಿದೆ.

ಹಿಂದೆಯೂ ರದ್ದಾಗಿತ್ತು ಟೆಂಡರ್

ಹಾಸ್ಟೆಲ್‌ಗಳಿಗೆ ಮಂಚಗಳನ್ನು ₹14.5 ಕೋಟಿ ಮೌಲ್ಯದಲ್ಲಿ ಪೂರೈಸಲು ಇದೇ ವರ್ಷದ ಆರಂಭದಲ್ಲಿ ಟೆಂಡರ್ ಕರೆಯಲಾಗಿತ್ತು. ಹಲವು ಅರ್ಹ ಕಂಪನಿಗಳು ಇದ್ದರೂ ನಿಯಮಗಳನ್ನು ಉಲ್ಲಂಘಿಸಿ ನಿಗದಿತ ಅರ್ಹತೆ ಪಡೆಯದ ‘ಛಾಯ್ಸ್ ಫರ್ನ್ ಟೆಕ್ ಎಲ್‌ಎಲ್‌ಪಿ’ ಕಂಪನಿಗೆ ಮೊದಲ ಹಂತದಲ್ಲಿ ₹5 ಕೋಟಿ ಮೊತ್ತಕ್ಕೆ ಮಂಚಗಳನ್ನು ಪೂರೈಸಲು ಅವಕಾಶ ನೀಡಲಾಗಿತ್ತು.

ಟೆಂಡರ್ ರದ್ದು ಮಾಡಬೇಕು ಎಂದು ಕರ್ನಾಟಕ ಸರ್ಕಾರದ ಉದ್ಯಮವಾದ ಬೆಂಗಳೂರು ನಗರ ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ಸೇರಿದಂತೆ ಹಲವು ಕಂಪನಿಗಳು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದವು. ದೂರುಗಳನ್ನು ಸ್ವೀಕರಿಸಿ ವಿಚಾರಣೆ ನಡೆಸಿದ್ದ ಸಮಾಜ ಕಲ್ಯಾಣ ಇಲಾಖೆಯ ಅಂದಿನ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಟೆಂಡರ್ ರದ್ದುಪಡಿಸಿದ್ದರು. ಸಚಿವ ಸಂಪುಟದ ಅನುಮೋದನೆ ಪಡೆದು ಇ-ಟೆಂಡರ್ ಅಧಿಸೂಚನೆ ಹೊರಡಿಸಲು ಸೂಚಿಸಿದ್ದರು.

ಟಿಕೆಟ್ ಮೊತ್ತ ಪೂರ್ಣ ಮರುಪಾವತಿಗೆ ಆದೇಶ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): ಇಂಡಿಗೊ ಸಂಸ್ಥೆಗೆ ಸೇರಿದ ವಿಮಾನಗಳ ಹಾರಾಟದಲ್ಲಿನ ವ್ಯತ್ಯಯವು ಐದನೇ ದಿನವಾದ ಶನಿವಾರವೂ ಮುಂದುವರಿದಿದೆ. ಇದರ ಬೆನ್ನಲ್ಲೇ ರದ್ದಾದ ವಿಮಾನಗಳ ಟಿಕೆಟ್ ಮೊತ್ತವನ್ನು ಪೂರ್ಣವಾಗಿ ಪ್ರಯಾಣಿಕರಿಗೆ ಮರುಪಾವತಿಸಬೇಕು ಎಂದು ಸರ್ಕಾರ ನಿರ್ದೇಶಿಸಿದೆ.

‘ಸಂಚಾರ ರದ್ದಾದ ವಿಮಾನಗಳ ಟಿಕೆಟ್ ಮೊತ್ತವನ್ನು ಪ್ರಯಾಣಿಕರಿಗೆ ಭಾನುವಾರದೊಳಗೆ ಪೂರ್ಣವಾಗಿ ಮರುಪಾವತಿಸಬೇಕು’ ಎಂದು ನಾಗರಿಕ ವಿಮಾನಯಾನ ಸಚಿವಾಲಯವು ಶನಿವಾರ ಇಂಡಿಗೊ ಸಂಸ್ಥೆಗೆ ತಿಳಿಸಿದೆ.

‘ಅಲ್ಲದೆ ಪ್ರಯಾಣಿಕರ ಸರಕು, ಸಾಮಗ್ರಿಗಳನ್ನು ಮುಂದಿನ ಎರಡು ದಿನಗಳಲ್ಲಿ (48 ಗಂಟೆಗಳಲ್ಲಿ) ಪತ್ತೆ ಹಚ್ಚಿ ಪ್ರಯಾಣಿಕರ ವಿಳಾಸಕ್ಕೆ ತಲುಪಿಸಬೇಕು’ ಎಂದೂ ಸಚಿವಾಲಯ ಶನಿವಾರ ಸೂಚಿಸಿದೆ. ಶುಕ್ರವಾರ 1000ಕ್ಕೂ ಹೆಚ್ಚು, ಶನಿವಾರ 800ಕ್ಕೂ ಹೆಚ್ಚು ಇಂಡಿಗೊ ವಿಮಾನಗಳ ಸಂಚಾರ ರದ್ದಾಗಿದ್ದವು.

ವಿಳಂಬ ಸಲ್ಲ: ‘ಪ್ರಯಾಣಿಕರಿಗೆ ಮರುಪಾವತಿ ಪ್ರಕ್ರಿಯೆ ವಿಳಂಬವಾಗಬಾರದು. ಭಾನುವಾರ ರಾತ್ರಿ 8 ಗಂಟೆಯೊಳಗೆ ಈ ಪ್ರಕ್ರಿಯೆ ಪೂರ್ಣಗೊಳ್ಳಬೇಕು. ಇಲ್ಲದಿದ್ದರೆ ಸಂಸ್ಥೆ ವಿರುದ್ಧ ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ’ ಎಂದು ಸಚಿವಾಲಯ ಎಚ್ಚರಿಕೆ ನೀಡಿದೆ.

ರದ್ದಾದ ವಿಮಾನಗಳ ಪ್ರಯಾಣಿಕರು ತಮ್ಮ ಪ್ರಯಾಣವನ್ನು ಮತ್ತೊಂದು ದಿನಕ್ಕೆ ಮರು ಹೊಂದಿಸಲು ಬಯಸಿದರೆ, ಅದಕ್ಕೆ ಮರು ವೇಳಾಪಟ್ಟಿಯ ಶುಲ್ಕ ವಿಧಿಸಬಾರದು ಎಂದೂ ಅದು ಸೂಚಿಸಿದೆ. ▶9

ದೆಹಲಿಯ ವಿಮಾನ ನಿಲ್ದಾಣದಲ್ಲಿ ಶನಿವಾರ ಪ್ರಯಾಣಿಕರೊಬ್ಬರು ವಿಮಾನಕ್ಕಾಗಿ ಕಾಯುತ್ತಾ ವಿಶ್ರಾಂತಿ ಪಡೆದರು —ಪಿಟಿಐ ಚಿತ್ರ

ತೆರಿಗೆ ಸಂಗ್ರಹ ಹೆಚ್ಚಿಸಲು ವಿನೂತನ ಕ್ರಮ: ಬೆಳಿಗ್ಗೆ 5.30ರಿಂದಲೇ ಕಾರ್ಯಾಚರಣೆ
ಹೆಚ್ಚು ತೆರಿಗೆ ಸಂಗ್ರಹಿಸಿದರೆ ಟ್ರಾಲಿ, ವಾಚ್

• ಮನೋಜಕುಮಾರ್ ಗುದ್ದಿ

ಕಲಬುರಗಿ: ದಶಕಗಳಿಂದ ಬಾಕಿ ಇರುವ ಆಸ್ತಿ ತೆರಿಗೆ ಸಂಗ್ರಹಿಸಲು ಜಿಲ್ಲೆಯ ಆಳಂದ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳು ವಿನೂತನ ಕ್ರಮಕ್ಕೆ ಮುಂದಾಗಿವೆ. ಜನರು ಹೊಲಗಳಿಗೆ ಹೋಗುವ ಮೊದಲೇ ಬೆಳಿಗ್ಗೆ 5.30ಕ್ಕೆ ಮನೆ ಮುಂದೆ ಹಾಜರಾಗುತ್ತಿದ್ದಾರೆ. ಸಂಜೆಯ ಬಳಿಕವೂ ಮನೆಗಳಿಗೆ ತೆರಳಿ ತೆರಿಗೆ ಬಾಕಿ ಸಂಗ್ರಹ ಮಾಡುತ್ತಿದ್ದಾರೆ.

ಈ ಕ್ರಮಕ್ಕೆ ತಾಲ್ಲೂಕಿನಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಒಂದೇ ದಿನ ₹ 69 ಲಕ್ಷ ತೆರಿಗೆ ಸಂಗ್ರಹವಾಗಿದೆ. ಕಲಬುರಗಿ ಜಿಲ್ಲೆಯಲ್ಲಿಯೇ ಆಳಂದ ತಾಲ್ಲೂಕು ಅತಿ ಹೆಚ್ಚು (42) ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ. ಹೆಚ್ಚಿನ ತೆರಿಗೆ ಸಂಗ್ರಹಕ್ಕಾಗಿ ಪಣತೊಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬಿಲ್ ಕಲೆಕ್ಟರ್ ಹಾಗೂ ಕಂಪ್ಯೂಟರ್ ಆಪರೇಟರ್‌ಗಳು ತೆರಿಗೆ ಸಂಗ್ರಹ ಅಭಿಯಾನಕ್ಕೆ ಮೂರು ದಿನ ಮೊದಲೇ ಮನೆಗಳಿಗೆ ತೆರಳಿ ನೋಟಿಸ್ ನೀಡಿದ್ದರು. ಇಂಥ ದಿನ ಬರುವುದಾಗಿ ತಿಳಿದು ಅಂದು ಹಣ ಹೊಂದಿಸಿಕೊಳ್ಳು-ವಂತೆಯೂ ತಿಳಿಸಿದ್ದರು.

ನಿಗದಿತ ದಿನದಂದು ಬೆಳಿಗ್ಗೆ 5.30ರಿಂದಲೇ ತೆರಿಗೆ ಕಾರ್ಯಾಚರಣೆ ಶುರು ಮಾಡಿದರು. ಮುಂಚೆಯೇ ಆಸ್ತಿ ತೆರಿಗೆಯ ನೋಟಿಸ್ ಸಿಕ್ಕಿದ್ದರಿಂದ ಆಸ್ತಿಗಳ ಮಾಲೀಕರು ದುಡ್ಡನ್ನು ತಮ್ಮ ಬಳಿ ಇಟ್ಟುಕೊಂಡಿದ್ದರು. ಸ್ಥಳದಲ್ಲೇ ತೆರಿಗೆ ಹಣ ಪಾವತಿಸಿದರು. ಬೆಳಿಗ್ಗೆಯಿಂದ ಮಧ್ಯಾಹ್ನ 12ರವರೆಗೆ, ಸಂಜೆ 4ರಿಂದ 6 ಗಂಟೆಯವರೆಗೆ, ಬಾಕಿ ಉಳಿಸಿಕೊಂಡಿರುವವರ ಮನೆಗಳಿಗೆ ತೆರಳಿ ಆಸ್ತಿ ತೆರಿಗೆ ಸಂಗ್ರಹಿಸಲಾಯಿತು. ಜನರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ತೆರಿಗೆ ಸಂಗ್ರಹಕ್ಕೆ ಹೋದರೆ ಜನರು ಮೂಲಸೌಕರ್ಯಗಳನ್ನು ಕಲ್ಪಿಸದಿರುವ ಬಗ್ಗೆ ಪ್ರಶ್ನಿಸಿ ತೆರಿಗೆ ಕೊಡಲಿಕ್ಕಿಲ್ಲ ಎಂದು ಭಾವಿಸಿ ಹಿಂಜರಿಕೆಯಿಂದಲೇ ಮನೆಗಳಿಗೆ ತೆರಳಿದ ಪಿಡಿಒ ಒಬ್ಬರಿಗೆ ಜನರು ಸ್ವಾಗತಿಸಿ ಬಾಕಿ ತೆರಿಗೆ ಪಾವತಿಸಿದ್ದಾರೆ. ತಮ್ಮ 24 ವರ್ಷಗಳ ವೃತ್ತಿ ಜೀವನದಲ್ಲಿ ಇಷ್ಟೊಂದು ತೆರಿಗೆ ಸಂಗ್ರಹವಾಗಿರಲಿಲ್ಲ ಎಂದು ತಿಳಿಸಿದ್ದಾರೆ. ತೆರಿಗೆ ಸಂಗ್ರಹ-ವಾದಷ್ಟೂ ಹೆಚ್ಚಿನ ಮೂಲಸೌಕರ್ಯ ಕಲ್ಪಿಸಲು ನೆರವಾಗಲಿದೆ ಎಂಬುದನ್ನು ಗ್ರಾಮಸ್ಥರಿಗೆ ತಿಳಿಸಿದ್ದೇವೆ ಎನ್ನುತ್ತಾರೆ ಆಳಂದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಾನಪ್ಪ ಕಟ್ಟಿಮನಿ.

‘ಹೆಚ್ಚು ತೆರಿಗೆ ಸಂಗ್ರಹಿಸಿದ ಪಿಡಿಒ, ಬಿಲ್ ಕಲೆಕ್ಟರ್ ಹಾಗೂ ಕಂಪ್ಯೂಟರ್ ಆಪರೇಟರ್‌ಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಹೆಚ್ಚು ಸಾಧನೆ ಮಾಡಿದ ಮೂವರು ಪಿಡಿಒಗಳಿಗೆ ಟ್ರಾಲಿ, ಆರು ಜನ ಬಿಲ್ ಕಲೆಕ್ಟರ್ ಹಾಗೂ ಕಂಪ್ಯೂಟರ್ ಆಪರೇಟರ್‌ಗಳಿಗೆ ಟೈಟನ್ ವಾಚ್‌ಗಳನ್ನು ವೈಯಕ್ತಿಕವಾಗಿ ಖರೀದಿಸಿ ವಿತರಿಸಿದ್ದೇನೆ’ ಎಂದು ಮಾನಪ್ಪ ಮಾಹಿತಿ ನೀಡಿದರು.

ಆಳಂದ ತಾಲ್ಲೂಕಿನಲ್ಲಿ ಅತಿ ಹೆಚ್ಚು ತೆರಿಗೆ ಸಂಗ್ರಹಿಸಿದ ಗ್ರಾ.ಪಂ.ಪಿಡಿಒ ಅವರಿಗೆ ತಾ.ಪಂ.ಇಒ ಮಾನಪ್ಪ ಕಟ್ಟಿಮನಿ ಹಾಗೂ ಅಧಿಕಾರಿಗಳು ಟ್ರಾಲಿ ನೀಡಿದರು

ವೈದ್ಯಕೀಯ: ಮೂರನೇ ಸುತ್ತಿನ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶದಂತೆ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಮೂರನೇ ಸುತ್ತಿನ ಸೀಟು ಹಂಚಿಕೆಯ ಪರಿಷ್ಕೃತ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಕಟಿಸಿದೆ.

ಕೆಇಎ ಅ.24ರಂದು ಪ್ರಕಟಿಸಿದ್ದ ತಾತ್ಕಾಲಿಕ ಫಲಿತಾಂಶವನ್ನು ಹೈಕೋರ್ಟ್ ಆದೇಶದಂತೆ ರದ್ದು ಪಡಿಸಲಾಗಿದ್ದು, ಪರಿಷ್ಕೃತ ಫಲಿತಾಂಶ ಪ್ರಕಟಿಸಲಾಗಿದೆ.

ಆಕ್ಷೇಪಣೆಗಳು ಇದ್ದಲ್ಲಿ ಡಿ.7ರಂದು ಮಧ್ಯಾಹ್ನ 3ರ ಒಳಗೆ ಇ-ಮೇಲ್ (keauthority-ka@nic.in) ಮೂಲಕ ಕಳುಹಿಸಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಡಿ.8ರಂದು ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಸೀಟು ಹಂಚಿಕೆಯಾದವರು ಡಿ.10ರ ಒಳಗೆ ಶುಲ್ಕ ಪಾವತಿಸಬೇಕು ಎಂದು ಸೂಚಿಸಿದ್ದಾರೆ. ▶9

ಹವಾಮಾನ ಮುನ್ಸೂಚನೆ: ನಗರದಲ್ಲಿ ಮುಂಜಾನೆ ಮೋಡ ಕವಿದ ವಾತಾವರಣ ಇರಲಿದ್ದು, ರಾತ್ರಿ ವೇಳೆ ಚಳಿಯ ಅನುಭವ ಆಗಲಿದೆ

‘ಅಂಗವಿಕಲರ ದಿನ ಆಚರಿಸದ ರಾಜ್ಯ ಸರ್ಕಾರ’

ಬೆಂಗಳೂರು: ವಿಶ್ವ ಅಂಗವಿಕಲರ ದಿನವನ್ನು ರಾಜ್ಯ ಸರ್ಕಾರವು ಈ ಬಾರಿ ಆಚರಿಸದಿರುವುದು ದುರದೃಷ್ಟಕರ ಎಂದು ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ತಿಳಿಸಿದ್ದಾರೆ.

ಡಿ.3ರಂದು ಅಂಗವಿಕಲರ ದಿನವನ್ನು ನೆರೆಹೊರೆಯ ರಾಜ್ಯಗಳು ವಿಜೃಂಭಣೆಯಿಂದ ಆಚರಿಸುವ ಮೂಲಕ ಅಂಗವಿಕಲರಲ್ಲಿ ಆತ್ಮವಿಶ್ವಾಸ ಮೂಡಿಸಿವೆ. ದೇಶ ಮಾತ್ರವಲ್ಲ, ಎಲ್ಲೆಡೆ ಈ ದಿನ ಆಚರಿಸಲಾಗಿದೆ. ಆದರೆ, ರಾಜ್ಯ ಸರ್ಕಾರವು ಡಿ. 8ರಿಂದ ಬೆಳಗಾವಿಯಲ್ಲಿ ನಡೆಯಲಿರುವ ಅಧಿವೇಶನದ ನೆಪವೊಡ್ಡಿ ಆಚರಿಸಿಲ್ಲ ಎಂದು ದೂರಿದ್ದಾರೆ.

ಈಗಾಗಲೇ ದಿನಾಂಕ ಮೀರಿರುವುದರಿಂದ ಈ ತಿಂಗಳ ಒಳಗೆ ದಿನಾಚರಣೆ ಮಾಡಬೇಕು. ಮುಂದಿನ ವರ್ಷದಿಂದ ಈ ರೀತಿ ಲೋಪ ಆಗದಂತೆ ಕ್ರಮ ವಹಿಸಬೇಕು ಎಂದು ಅಂಗವಿಕಲರ ಶ್ರೇಯೋಭಿವೃದ್ಧಿ ಬಯಸುವ ವಿವಿಧ ಸಂಘಟನೆಗಳ ಮುಖಂಡರು ಆಗ್ರಹಿಸಿದ್ದಾರೆ.

ಹೆಡ್ ಕಾನ್‌ಸ್ಟೆಬಲ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಕಮಿಷನರ್ ಕಚೇರಿ ಆವರಣದಲ್ಲಿ ನಿಲುಗಡೆ ಮಾಡಿದ್ದ ಕಾರಿನಲ್ಲಿದ್ದ ₹11 ಲಕ್ಷ ಹಣ ಕದ್ದು ನಾಟಕವಾಡಿದ್ದ ಹೆಡ್ ಕಾನ್‌ಸ್ಟೆಬಲ್ ಜಬೀವುಲ್ಲಾ ಅವರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೇಂದ್ರ ವಿಭಾಗದ ಸೈಬರ್ ಠಾಣೆಯ ಇನ್‌ಸ್ಪೆಕ್ಟರ್ ಉಮೇಶ್ ಅವರು ನೀಡಿದ ದೂರಿನ ಮೇರೆಗೆ ಜಬೀವುಲ್ಲಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕೆಂಗೇರಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ವಂಚನೆ ಪ್ರಕರಣವನ್ನು ಇತ್ತೀಚೆಗೆ ಸೈಬರ್ ಕ್ರೈಂ ಠಾಣೆಗೆ ವರ್ಗಾವಣೆ ಆಗಿತ್ತು. ವಂಚಕನ ಪತ್ತೆಗಾಗಿ ಆರ್‌ಎಸ್‌ಐ ಮಂಜುನಾಥ್ ನೇತೃತ್ವದ ತಂಡವನ್ನು ಇನ್‌ಸ್ಪೆಕ್ಟರ್ ಉಮೇಶ್ ರಚಿಸಿದ್ದರು. ಈ ತಂಡದಲ್ಲಿ ಆರೋಪಿತ ಹೆಡ್ ಕಾನ್‌ಸ್ಟೆಬಲ್ ಸಹ ಇದ್ದರು ಎಂದು ಮೂಲಗಳು ಹೇಳಿವೆ.

ಸೈಬರ್ ಅಪರಾಧ ಪ್ರಕರಣವೊಂದರಲ್ಲಿ ಬಂಧಿಸಲಾಗಿದ್ದ ಆರೋಪಿಯನ್ನು ಕಮಿಷನರ್ ಕಚೇರಿ ಆವರಣದಲ್ಲಿರುವ ಸಿಸಿಬಿ ಸೈಬರ್ ಕ್ರೈಂ ಠಾಣೆಗೆ ವಿಚಾರಣೆಗೆಂದು ತನಿಖಾಧಿಕಾರಿಗಳು ಕರೆತಂದಿದ್ದರು. ಜಪ್ತಿ ಮಾಡಿಕೊಂಡಿದ್ದ ಆರೋಪಿಯ ಕಾರನ್ನು ಸಹ ತಂದಿದ್ದರು. ಆ ಕಾರಿನಲ್ಲಿದ್ದ ಹಣವನ್ನು ಜಬೀವುಲ್ಲಾ ಕಳ್ಳತನ ಮಾಡಿದ್ದರು. ಕಳ್ಳತನ ಮಾಡುತ್ತಿದ್ದ ದೃಶ್ಯ ಸೆರೆಯಾಗಿತ್ತು. ಅದನ್ನು ಆಧರಿಸಿ, ತನಿಖೆ ನಡೆಸಿದಾಗ ಜಬೀವುಲ್ಲಾ ಕೃತ್ಯ ಎಸಗಿರುವುದು ಸಾಬೀತಾಗಿತ್ತು ಎಂದು ತನಿಖಾ ಮೂಲಗಳು ಹೇಳಿವೆ.

‘ಕದ್ದ ಹಣದಿಂದ ಜಬೀವುಲ್ಲಾ ಅವರು ಪತ್ನಿಗೆ ಚಿನ್ನದ ಆಭರಣ ಮಾಡಿಸಿಕೊಟ್ಟಿದ್ದರು. ಉಳಿದ ಹಣವನ್ನು ಹಾಸಿಗೆ ಕೆಳಗೆ ಬಚ್ಚಿಟ್ಟಿದ್ದರು’ ಎಂದು ಪೊಲೀಸರು ಹೇಳಿದರು.

ಪ್ರತ್ಯೇಕ ಪ್ರಕರಣ: ₹78 ಲಕ್ಷ ವಂಚನೆ

ಟೆಕಿ ಸೇರಿದಂತೆ ಹಣ ಕಳೆದುಕೊಂಡ ಮೂವರು, ಪೊಲೀಸರಿಂದ ತನಿಖೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಸೈಬರ್ ಅಪರಾಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಸೈಬರ್ ವಂಚನೆ ಪ್ರಕರಣಗಳಲ್ಲಿ ಟೆಕಿ ಸೇರಿದಂತೆ ಮೂವರು ₹78 ಲಕ್ಷ ಕಳೆದುಕೊಂಡಿದ್ದಾರೆ.

ಹಣ ಕಳೆದುಕೊಂಡವರು ನೀಡಿದ ದೂರಿನ ಮೇರೆಗೆ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿ ಪ್ರಕರಣ ದಾಖಲಿಸಿಕೊಂಡು ಸೈಬರ್ ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಬೆಳ್ಳಂದೂರಿನ ರಮೇಶ್ ಕುಮಾರ್ ಹೆಗ್ಡೆ ಅವರು ಸೈಬರ್ ವಂಚಕರ ಗಾಳಕ್ಕೆ ಸಿಲುಕಿ ₹28 ಲಕ್ಷ ಕಳೆದುಕೊಂಡಿದ್ದಾರೆ.

ನವೆಂಬರ್ 11ರಂದು ಅವರು ಮುಸ್ಕಾನ್ ಅಗರ್ವಾಲ್ ಹೆಸರಿನ ವ್ಯಕ್ತಿ ‘ಟೆಲಿಗ್ರಾಂ’ ಆ್ಯಪ್ ಮೂಲಕ ಪಾರ್ಟ್‌ಟೈಮ್ ಜಾಬ್ ಬಗ್ಗೆ ಸಂದೇಶ ಕಳುಹಿಸಿದ್ದರು. ನಂತರ, ಕರೆ ಮಾಡಿ ಲಿಂಕ್ ಮೂಲಕ ನೋಂದಣಿ ಮಾಡಿಕೊಂಡು ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರಲಿದೆ ಎಂಬುದಾಗಿ ನಂಬಿಸಿದ್ದರು. ದೂರುದಾರರು ತಮ್ಮ ಹೆಸರಿನಲ್ಲಿದ್ದ ಬ್ಯಾಂಕ್ ಖಾತೆ ಹಾಗೂ ಪತ್ನಿಯ ಬ್ಯಾಂಕ್ ಖಾತೆಯಿಂದ ವಂಚಕರು ಕಳುಹಿಸಿದ್ದ 20 ಪ್ರತ್ಯೇಕ ಬ್ಯಾಂಕ್ ಖಾತೆಗಳಿಗೆ ₹28.42 ಲಕ್ಷ ವರ್ಗಾವಣೆ ಮಾಡಿದ್ದರು. ಆರಂಭದಲ್ಲಿ ₹9 ಸಾವಿರ ಲಾಭವನ್ನು ವಂಚಕರು ವಾಪಸ್ ನೀಡಿದ್ದರು. ನಂತರ, ಯಾವುದೇ ಹಣವನ್ನೂ ನೀಡಿಲ್ಲ. ಕೆಲವು ದಿನಗಳ ಬಳಿಕ ವಂಚನೆಗೆ ಒಳಗಾಗಿರುವುದು ದೂರುದಾರರಿಗೆ ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಹೂಡಿಕೆ ಹೆಸರಿನಲ್ಲಿ ವಂಚನೆ
- ಉದ್ಯೋಗದ ಆಮಿಷವೊಡ್ಡಿ ಮೋಸ

ಯುವಕನಿಂದ ₹45 ಲಕ್ಷ ದೋಚಿದ ಕಳ್ಳರು: ಸೈಬರ್ ವಂಚಕರ ಬಲೆಗೆ ಬಿದ್ದು ಯುವಕ ಸಾಯಿಮಣಿ ಪ್ರಸಾದ್ ಮುದ್ದಣ್ಣ ಅವರು ₹45 ಲಕ್ಷ ಕಳೆದುಕೊಂಡಿದ್ದಾರೆ. ಸಾಯಿಮಣಿ ಅವರಿಗೆ ‘ಶಾದಿ ಡಾಟ್ ಕಾಂ’ನಲ್ಲಿ ಕಾರುಣ್ಯ ರಾಘವ್ ಎಂಬುವವರ ಪರಿಚಯವಾಗಿತ್ತು. ಇಬ್ಬರು ಮೊಬೈಲ್ ಸಂಖ್ಯೆಯನ್ನು ಪರಸ್ಪರ ಬದಲಾವಣೆ ಮಾಡಿಕೊಂಡು ಚಾಟ್ ನಡೆಸುತ್ತಿದ್ದರು. ಕ್ರಿಪ್ಟೊ ಕರೆನ್ಸಿಗೆ ಸಂಬಂಧಿಸಿದ ಆ್ಯಪ್‌ನ ಲಿಂಕ್ ಕಳುಹಿಸಿ, ಅದರ ಮೇಲೆ ಕ್ಲಿಕ್ ಮಾಡಿ ನೋಂದಣಿ ಮಾಡಿಕೊಳ್ಳವಂತೆ ಕಾರುಣ್ಯ ಅವರು ಸಾಯಿಮಣಿ ಅವರಿಗೆ ತಿಳಿಸಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಯ ಮಾತು ನಂಬಿದ್ದ, ದೂರುದಾರರು ಲಿಂಕ್ ಮೇಲೆ ಕ್ಲಿಕ್ ಮಾಡಿ ನೋಂದಣಿ ಮಾಡಿಕೊಂಡಿದ್ದರು. ಆರಂಭದಲ್ಲಿ ₹50 ಸಾವಿರ ಹೂಡಿಕೆ ಮಾಡಿದ್ದರು. ಆ ಹಣಕ್ಕೆ ಲಾಭದ ರೂಪದಲ್ಲಿ ₹30 ಸಾವಿರ ವಾಪಸ್ ನೀಡಲಾಗಿತ್ತು. ಇನ್ನೂ ಹೆಚ್ಚಿನ ಹಣ ಹೂಡಿದರೆ ಅಧಿಕ ಲಾಭ ದೊರೆಯಲಿದೆ ಎಂದು ಸೈಬರ್ ವಂಚಕರು ಆಮಿಷವೊಡ್ಡಿದ್ದರು.

ಅಪರಾಧ ಸುದ್ದಿ

ವಂಚಕರು ಕಳುಹಿಸಿದ ಬೇರೆ ಬೇರೆ ಬ್ಯಾಂಕ್‌ನ 3 ಖಾತೆಗಳಿಗೆ ದೂರುದಾರರು ₹45 ಲಕ್ಷ ವರ್ಗಾವಣೆ ಮಾಡಿದ್ದರು. ಅದಾದ ಮೇಲೆ ಆರೋಪಿಗಳು ಸಂಪರ್ಕಕ್ಕೆ ಸಿಕ್ಕಿಲ್ಲ ಎಂದು ಮೂಲಗಳು ಹೇಳಿವೆ.

₹15 ಲಕ್ಷ ಕಳೆದುಕೊಂಡ ಟೆಕಿ: ವೈಟ್‌ಫೀಲ್ಡ್ ನಿವಾಸಿ, ಸಾಫ್ಟ್‌ವೇರ್ ಉದ್ಯೋಗಿ ಶ್ರೀನಿವಾಸ್ ಶಾವಿ ಅವರು ₹15 ಲಕ್ಷ ಕಳೆದುಕೊಂಡಿದ್ದು ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಗೆ ದೂರು ನೀಡಿದ್ದಾರೆ.

ಅಪರಿಚಿತರು ಕಳುಹಿಸಿದ ಲಿಂಕ್ ಮೂಲಕ ‘ವೆಲ್ತ್ ಹಂಟರ್ಸ್ ನೆಟ್‌ವರ್ಕ್ ಎಕ್ಸ್’ ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರ್ಪಡೆಗೊಂಡಿದ್ದರು. ಆ ಗ್ರೂಪ್‌ನಲ್ಲಿ ಷೇರು ಮಾರುಕಟ್ಟೆಯ ಚರ್ಚೆ ಆಗಿತ್ತು. ಅದೇ ಗ್ರೂಪ್‌ನಲ್ಲಿ ಸೈಬರ್ ವಂಚಕರು ಮಾತು ನಂಬಿದ್ದ ದೂರುದಾರರು, ಹೂಡಿಕೆ ಮಾಡಲು ಆರಂಭಿಸಿದ್ದರು. ಆರಂಭದಲ್ಲಿ ₹25 ಸಾವಿರ ಹೂಡಿಕೆ ಮಾಡಿದ್ದರು. ಬಳಿಕ ₹15.80 ಲಕ್ಷ ಹೂಡಿಕೆ ಮಾಡಿ ಹಣ ಕಳೆದುಕೊಂಡಿದ್ದಾರೆ ಎಂದು ಸೈಬರ್ ಪೊಲೀಸರು ತಿಳಿಸಿದರು.

ಎ.ಸಿಗೆ ₹25 ಸಾವಿರ, ತಹಶೀಲ್ದಾರ್‌ಗೆ ₹50 ಸಾವಿರ ದಂಡ

ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿದವರಿಗೆ ಸಕಾಲದಲ್ಲಿ ಮಾಹಿತಿ ನೀಡದೆ ನಿರ್ಲಕ್ಷಿಸಿದ ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ ಕಿರಣ್ ಅವರಿಗೆ ₹25 ಸಾವಿರ ದಂಡ ಮತ್ತು ಬೆಂಗಳೂರು ಉತ್ತರ ತಹಶೀಲ್ದಾರ್ ಮಧುರಾಜ್ ಅವರಿಗೆ ಮಾಹಿತಿ ಆಯೋಗ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ತಲಾ ₹25 ಸಾವಿರ ದಂಡ ವಿಧಿಸಿದೆ.

ನಿಗದಿತ ಅವಧಿಯಲ್ಲಿ ಮಾಹಿತಿ ನೀಡದಿರುವುದಲ್ಲದೆ, ಆಯೋಗದ ವಿಚಾರಣೆಗಳಿಗೂ ಸತತ ಗೈರು ಹಾಜರಾಗಿ ನಿರ್ಲಕ್ಷ್ಯ ತೋರಿದ್ದಕ್ಕಾಗಿ ಆಯೋಗ ಅಧಿಕಾರಿಗಳಿಗೆ ದಂಡ ವಿಧಿಸಿದೆ. ದಂಡ ವಿಧಿಸಿರುವುದಲ್ಲದೆ, ಮಾಹಿತಿ ಹಕ್ಕು ಕಾಯ್ದೆಯನ್ನು ಉಲ್ಲಂಘಿಸಿದ್ದಕ್ಕಾಗಿ ಇಲಾಖಾ ವಿಚಾರಣೆ ನಡೆಸಿ, ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳುವಂತೆ ಯಾಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬಾರದು ಎಂದು ಇಬ್ಬರೂ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಕೂಡ ನೀಡಿದೆ.

ಬೆಂಗಳೂರು ಬೆಳತೂರು ಕಾಲೊನಿ ನಿವಾಸಿ ವೆಂಕಟೇಶ್ ಅವರು ವರ್ಷಗಳ ಹಿಂದೆ ಕೆ.ದೊಮ್ಮಸಂದ್ರ ಗ್ರಾಮದ ತಮ್ಮ ಜಮೀನಿಗೆ ಸಂಬಂಧಪಟ್ಟ ಕೆಲವು ದಾಖಲೆಗಳನ್ನು ಒದಗಿಸುವಂತೆ ಬೆಂಗಳೂರು ಉತ್ತರದ ಉಪ ವಿಭಾಗಾಧಿಕಾರಿಗೆ ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿದ್ದರು. ನಿಗದಿತ ಅವಧಿಯಲ್ಲಿ ಮಾಹಿತಿ ನೀಡದ ಹಿನ್ನೆಲೆಯಲ್ಲಿ ಆಯೋಗಕ್ಕೆ ಅವರು ಮೇಲ್ಮನವಿ ಸಲ್ಲಿಸಿದ್ದರು.

ಆಯೋಗ ಎ.ಸಿ ಅವರಿಗೆ ವಿಚಾರಣೆಗೆ ಹಾಜರಾಗಿ ಈ ಬಗ್ಗೆ ವಿವರ ನೀಡುವಂತೆ ಸೂಚಿಸಿತ್ತು. ಹಲವು ವಿಚಾರಣೆಗಳಿಗೆ ಸತತ ಗೈರಾಗಿದ್ದ ಅಧಿಕಾರಿಗೆ ಕಾರಣ ಕೇಳಿ ಆಯೋಗ ನೋಟಿಸ್ ನೀಡಿತ್ತು. ಆದರೆ, ಅಧಿಕಾರಿ ಆಯೋಗದ ನೋಟಿಸ್‌ಗೆ ಉತ್ತರಿಸದೇ ನಿರ್ಲಕ್ಷಿಸಿದ್ದರು. ಕಾಯ್ದೆಯನ್ನು ಉಲ್ಲಂಘಿಸಿದ್ದಕ್ಕಾಗಿ ದಂಡ ವಿಧಿಸಿದ್ದಲ್ಲದೆ, ತಕ್ಷಣ ಅರ್ಜಿದಾರರಿಗೆ ಮಾಹಿತಿ ನೀಡುವಂತೆ ಆಯೋಗ ಆದೇಶಿಸಿದೆ. ಜೊತೆಗೆ ಶಿಸ್ತುಕ್ರಮದ ಎಚ್ಚರಿಕೆ ನೀಡಿದೆ.

ಬೆಂಗಳೂರಿನ ಚಂದ್ರಪ್ಪ, ಮಾಳಗಾಳು ಗ್ರಾಮದ ತಮ್ಮ ಕುಟುಂಬದ ಆಸ್ತಿಯ ದಾಖಲೆಗಳಿಗಾಗಿ ಉತ್ತರ ತಹಶೀಲ್ದಾರ್‌ಗೆ ಅರ್ಜಿ ಸಲ್ಲಿಸಿದ್ದರು. ತಹಶೀಲ್ದಾರ್ ಮಧುರಾಜ್ ಕೂಡ ಮಾಹಿತಿ ನೀಡದೆ, ವಿಚಾರಣೆಗಳಿಗೆ ಸತತ ಗೈರಾಗಿದ್ದರು. ಆಯೋಗ ನೀಡಿದ್ದ ಶೋಕಾಸ್ ನೋಟಿಸ್‌ಗೂ ಉತ್ತರಿಸಿರಲಿಲ್ಲ. ಅವರಿಗೂ ಎರಡು ಪ್ರತ್ಯೇಕ ಪ್ರಕರಣದಲ್ಲಿ ಒಟ್ಟು ₹50 ಸಾವಿರ ದಂಡ ವಿಧಿಸಿದ್ದಲ್ಲದೆ, ಅರ್ಜಿದಾರರಿಗೆ ತಕ್ಷಣ ಸೂಕ್ತ ದಾಖಲೆ ಒದಗಿಸುವಂತೆ ಆಯೋಗ ಆದೇಶಿಸಿದೆ.

ಉದ್ದೇಶಪೂರ್ವಕವಾಗಿ ಅರ್ಜಿದಾರರನ್ನು ಅಲೆದಾಡಿಸಿ ಸತಾಯಿಸುವ ಅಧಿಕಾರಿಗಳಿಂದ ಸಂತ್ರಸ್ತ ಅರ್ಜಿದಾರರಿಗೆ ಪರಿಹಾರ ಕೊಡಿಸಲೂ ಕಾಯ್ದೆಯಲ್ಲಿ ಅವಕಾಶ ಇದೆ ಎಂದು ಆಯೋಗ ತಿಳಿಸಿದೆ.

ಇತ್ತೀಚೆಗೆ, ಇದೇ ರೀತಿ ಅರ್ಜಿದಾರರಿಗೆ ಮಾಹಿತಿ ನೀಡದೇ ನಿರ್ಲಕ್ಷಿಸಿದ್ದ ಬೆಂಗಳೂರು ದಕ್ಷಿಣ ಎಸಿ ವಿಶ್ವನಾಥ್, ದೊಡ್ಡಬಳ್ಳಾಪುರ ಎಸಿ ದುರ್ಗಾಶ್ರೀ, ಕೆ.ಆರ್. ಪುರಂ ತಹಶೀಲ್ದಾರ್ ರಾಜು, ದೇವನಹಳ್ಳಿ ತಹಶೀಲ್ದಾರ್ ಅನಿಲ್ ಸೇರಿ ಹಲವು ಅಧಿಕಾರಿಗಳಿಗೆ ಆಯೋಗ ದಂಡ ವಿಧಿಸಿತ್ತು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052.
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/72/2025-26 ದಿನಾಂಕ: 05.12.2025

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿಎಂಆರ್ 2016, ದಿನಾಂಕ: 24.06.2016 ರನ್ವಯ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಪೆಮ್ಮನಹಳ್ಳಿ ಗ್ರಾಮವು “ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ” ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/194/ಬಿಎಂಆರ್/2016ರ ದಿನಾಂಕ: 20.05.2017ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4(ಎ)(4)ರನ್ವಯ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದಲ್ಲಿ ಹಿಂದಿನ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಸರ್ಕಾರದಿಂದ ಅನುಮೋದನೆಯಾಗಿ ಜಾರಿಯಲ್ಲಿರುವ ಮಹಾಯೋಜನೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಅಧಿಸೂಚನೆ ಸಂ.ನಅಇ/150/ಬಿಎಂಆರ್/2013 ದಿನಾಂಕ: 01.06.2015ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರನ್ವಯ ಈ ಕೆಳಕಂಡಂತೆ ಕೈಗಾರಿಕೆ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರ ಅಡಿಯಲ್ಲಿ ಈ ಕೆಳಕಂಡಂತೆ ಹೊಸದಾಗಿ ಭೂಉಪಯೋಗ ನಿಗಧಿಪಡಿಸುವ ಸಂಬಂಧ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಹೊಸದಾಗಿ ನಿಗದಿಪಡಿಸಲು ಕೋರಿರುವ ಭೂಉಪಯೋಗ
1	ಡಾ॥ ಶ್ರೀನಿವಾಸ್ ಹೆಚ್. ಬಿನ್ ಹನುಮಪ್ಪ, ಹೊಸ ಮನೆ ನಂ.11, ಹಳೇ ಮನೆ ನಂಬರ್–44ಬಿ, ಕನಸು, 19ನೇ ಡಿ ಮುಖ್ಯರಸ್ತೆ, ಕೇತಮಾರನಹಳ್ಳಿ ಪಾರ್ಕ್ ಹತ್ತಿರ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ಉತ್ತರ, ಬೆಂಗಳೂರು ನಗರ ಜಿಲ್ಲೆ–560010.	ನೆಲಮಂಗಲ	ಸೋಂಪುರ	ಪೆಮ್ಮನಹಳ್ಳಿ	71	4–27	ಸಾರ್ವಜನಿಕ ಉಪಯುಕ್ತತೆ (Public Utility)	ಕೈಗಾರಿಕೆ
2	ಶ್ರೀ ಬೈರಣ್ಣ ಬಿನ್ ಲೇಟ್ ಸಿದ್ದಬೈರಯ್ಯ, ಪೆಮ್ಮನಹಳ್ಳಿ ಗ್ರಾಮ, ನೆಲಮಂಗಲ	ನೆಲಮಂಗಲ	ಸೋಂಪುರ	ಪೆಮ್ಮನಹಳ್ಳಿ	72/1	2–19	ಸಾರ್ವಜನಿಕ ಉಪಯುಕ್ತತೆ (Public Utility)	ಕೈಗಾರಿಕೆ

ಸಹಿ/–,
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಎಲ್‌ಸಿ/4269/2025–26

₹686 ಕೋಟಿ ಮೌಲ್ಯದ ಜಮೀನು ಒತ್ತುವರಿ ತೆರವು

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ₹686.25 ಕೋಟಿ ಮೌಲ್ಯದ ಒಟ್ಟು 21 ಎಕರೆ 37.08 ಗುಂಟೆ ಸರ್ಕಾರಿ ಜಮೀನನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ನೇತೃತ್ವದಲ್ಲಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಯಿತು.

ವಿವಿಧ ತಾಲ್ಲೂಕುಗಳ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಖರಾಬು, ಗೋಮಾಳ, ರಾಜಕಾಲುವೆ, ಬಾವಿ, ಗುಂಡುತೋಪು, ಸರ್ಕಾರಿ ಗುಟ್ಟೆ ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು.

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ಹೂಡಿ ಗ್ರಾಮದಲ್ಲಿ 4.08 ಗುಂಟೆ, ಬಿದರಹಳ್ಳಿ ಹೋಬಳಿಯ ಮಾರಗೊಂಡನಹಳ್ಳಿ ಗ್ರಾಮದಲ್ಲಿ 0.17 ಗುಂಟೆ, ಆನೇಕಲ್ ತಾಲ್ಲೂಕಿನ ವಣಕನಹಳ್ಳಿಯಲ್ಲಿ 0.10 ಗುಂಟೆ, ಅತ್ತಿಬೆಲೆ ಹೋಬಳಿಯ ಇಂಡ್ಲಬೆಲೆ ಗ್ರಾಮದಲ್ಲಿ ರಾಜಕಾಲುವೆ 0.06 ಗುಂಟೆ, ಚಂದಾಪುರ ಗ್ರಾಮದ ವಿಸ್ತೀರ್ಣ 0.22 ಗುಂಟೆ, ಸರ್ಜಾಪುರ ಹೋಬಳಿಯ ಮುತ್ತನಲ್ಲೂರು ಅಮಾನಿಕೆರೆ ಗ್ರಾಮದಲ್ಲಿ 0.13 ಗುಂಟೆ, ನಾರಾಯಣಘಟ್ಟ ಗ್ರಾಮದಲ್ಲಿ 3 ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ರಘುವನಹಳ್ಳಿ ಗ್ರಾಮದಲ್ಲಿ 0.11 ಗುಂಟೆ, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ರಾಮಪಾಳ್ಯ ಗ್ರಾಮದಲ್ಲಿ 1 ಎಕರೆ 0.19 ಗುಂಟೆ, ಯಶವಂತಪುರ ಹೋಬಳಿಯ ಚಿಕ್ಕಬಾಣಾವರ ಗ್ರಾಮದಲ್ಲಿ 0.29 ಗುಂಟೆ, ಯಲಹಂಕ ತಾಲ್ಲೂಕಿನ ಯಲಹಂಕ ಹೋಬಳಿಯ ಚೊಕ್ಕನಹಳ್ಳಿ ಗ್ರಾಮದಲ್ಲಿ 14ಎಕರೆ 0.26 ಗುಂಟೆ ತೆರವುಗೊಳಿಸಲಾಗಿದೆ.

ಬಿಡಿಎ ವತಿಯಿಂದ ಕಾರ್ಯಾಚರಣೆ ನಡೆಸಿ ಅಕ್ರಮ ಕಟ್ಟಡವನ್ನು ತೆರವುಗೊಳಿಸಲಾಯಿತು

₹47 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಥಣಿಸಂದ್ರ ಮತ್ತು ಕೆ. ನಾರಾಯಣಪುರದಲ್ಲಿ ಸುಮಾರು ₹47 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಪೂರ್ವ ತಾಲ್ಲೂಕಿನ ಕೆ.ಆರ್. ಪುರ ಹೋಬಳಿಯ ಥಣಿಸಂದ್ರ ಗ್ರಾಮದ ಸರ್ವೆ ನಂ. 84/7ರ 2095 ಚದರ ಅಡಿ ವಿಸ್ತೀರ್ಣದ ಮೂಲೆ ನಿವೇಶನದಲ್ಲಿ ನಿರ್ಮಿಸಿದ್ದ ಅನಧಿಕೃತ ಕಟ್ಟಡವನ್ನು ಬಿಡಿಎ ಸಿಬ್ಬಂದಿ ತೆರವುಗೊಳಿಸಿದರು.

ಕೆ. ನಾರಾಯಣಪುರದ ಸರ್ವೆ ನಂ. 29/3ರ 22000 ಚದರ ಅಡಿ ವಿಸ್ತೀರ್ಣದ ಮೂಲೆ ನಿವೇಶನದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡ ತೆರವುಗೊಳಿಸಲಾಯಿತು.

ಥಾಮಸ್ ಕುಕ್‌ನಿಂದ ಹಾಲಿಡೇ ಕಾರ್ನಿವಲ್; ವಿಶೇಷ ರಿಯಾಯಿತಿ

ಹುಬ್ಬಳ್ಳಿ: ಥಾಮಸ್ ಕುಕ್ ಇಂಡಿಯಾ ಲಿಮಿಟೆಡ್ ವತಿಯಿಂದ ಬೆಂಗಳೂರಿನ ಬ್ರಿಗೇಡ್ ಗೇಟ್‌ವೇನಲ್ಲಿರುವ ಶೆರಟನ್ ಗ್ರ್ಯಾಂಡ್ ಹೋಟೆಲ್ ಮತ್ತು ಸಿಟಿ ಸೆಂಟರ್‌ನಲ್ಲಿರುವ ರ್‍ಯಾಡಿಸನ್ ಹೋಟೆಲ್‌ನಲ್ಲಿ ಡಿ.7ರಂದು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಹಾಲಿಡೇ ಕಾರ್ನಿವಲ್‌ನ ವಿಶೇಷ ಸೌಲಭ್ಯಗಳು ಸಿಗಲಿವೆ.

ಯುರೋಪ್ ಪ್ರವಾಸ ಕೈಗೊಳ್ಳುವವರು ಮುಂಗಡವಾಗಿ ಬುಕ್ಕಿಂಗ್ ಮಾಡಿದರೆ ಕ್ರೂಸ್ ಹಾಲಿಡೇಸ್ ಉಚಿತವಾಗಿ ದೊರೆಯಲಿದೆ. ಸ್ಥಳದಲ್ಲೇ ಬುಕ್ಕಿಂಗ್ ಮಾಡಿದರೆ ಹೆಚ್ಚುವರಿ ರಿಯಾಯಿತಿ ಪಡೆಯುವ ಅವಕಾಶ ನೀಡಲಾಗಿದೆ.

ಯುರೋಪ್‌ಗೆ ಬೇಸಿಗೆ ಪ್ರವಾಸ ಕೈಗೊಳ್ಳುವವರಿಗೆ ₹1.70 ಲಕ್ಷದಿಂದ ಪ್ಯಾಕೇಜ್‌ಗಳು ಆರಂಭವಾಗುತ್ತವೆ. ತೀರ್ಥಯಾತ್ರೆ ವಿಶೇಷ ಪ್ರವಾಸಗಳು (ಚಾರ್‌ಧಾಮ್, ಅಯೋಧ್ಯೆ), ಲಕ್ಷದ್ವೀಪಕ್ಕೆ ವಿಶೇಷ ಕ್ರೂಸ್ ಪ್ರವಾಸ, ಅಯೋಧ್ಯೆಗೆ ವಿಶೇಷ ಗ್ರೂಪ್ ಟೂರ್‌ಗೆ ಸ್ಪಾಟ್ ಬುಕ್ಕಿಂಗ್‌ನಲ್ಲಿ ಹೆಚ್ಚುವರಿ ರಿಯಾಯಿತಿ ಪಡೆಯುವ ಅವಕಾಶ ನೀಡಲಾಗಿದೆ.

ಥಾಮಸ್ ಕುಕ್ ಕಂಪನಿಯಿಂದ ಆಸ್ಟ್ರೇಲಿಯಾ, ಜಪಾನ್, ಕೊರಿಯಾ, ದಕ್ಷಿಣ ಆಫ್ರಿಕಾ, ಆಗ್ನೇಯ ಏಷ್ಯಾ, ಜಪಾನ್‌ನ ಗ್ರೀನ್ ಲ್ಯಾಂಡ್‌ಗೆ ಮತ್ತು ದೇಶದ ಕಾಶ್ಮೀರ, ಲಡಾಖ್, ಹಿಮಾಚಲ ಪ್ರದೇಶ, ಉತ್ತರಾಖಂಡ, ಗೋವಾ, ಅಂಡಮಾನ್, ಕೇರಳ, ರಾಜಸ್ಥಾನ, ಗುಜರಾತ್‌ಗೆ ಕ್ರೂಸ್ ಹಾಲಿಡೇಸ್ ಕೂಡ ಲಭ್ಯವಿದೆ.

ಏಳು ದಿನಗಳ ಭೂತಾನ್ ಚಾರ್ಟರ್ ವಿಶೇಷ ಪ್ರವಾಸ ₹99 ಸಾವಿರಕ್ಕೆ ಲಭ್ಯ. ಯುರೋಪ್ ಗ್ರೂಪ್ ಟೂರ್‌ನಲ್ಲಿ ಕನ್ನಡ ತಿಳಿದಿರುವ ವ್ಯವಸ್ಥಾಪಕರು ಲಭ್ಯವಿರುತ್ತಾರೆ. ಹಿರಿಯ ನಾಗರಿಕರಿಗೆ ಮಾತ್ರ ವಿಶೇಷ ಪ್ರವಾಸ ಲಭ್ಯವಿದೆ.

ಹಾಲಿಡೇ ಪ್ಲಾನ್‌ಗಾಗಿ ಥಾಮಸ್ ಕುಕ್ ಇಂಡಿಯ ಲಿಮಿಟೆಡ್‌ನ ಮಲ್ಲೇಶ್ವರ, ಎಂ.ಜಿ.ರಸ್ತೆ ಮತ್ತು ಬಸವೇಶ್ವರನಗರ ಶಾಖೆ ಅಥವಾ ಅಶೋಕ ಸೋಮಯಾಜಿ (99640 27269), ಪಾಂಡುರಂಗ ಜಿ.ಎಂ (96209 99066) ಅವರನ್ನು ಸಂಪರ್ಕಿಸಬಹುದು.

Banking Partner SBI | Refreshment Partner MOGU MOGU | Special Partner BHIMA | Nutrition Partner ನಂದಿನಿ | Associate Sponsors ಪೂರ್ವಿಕಾ, VIPS, talent sprint, ICS MAHESH PU COLLEGE
Associate Sponsors SIDDAGANGA, ಮಾರ್ಗದರ್ಶಿ | TV partner | Knowledge partner QURIOSITY

ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಹಿತ್ಯ ಸಂಭ್ರಮ

ಎರಡು ದಿನಗಳ ಬೆಂಗಳೂರು ಸಾಹಿತ್ಯ ಉತ್ಸವಕ್ಕೆ ಚಾಲನೆ: ವಿಚಾರಗೋಷ್ಠಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷದ ಬಹುತೇಕ ದಿನಗಳು ಪ್ರತಿಭಟನೆಗಳಿಗೆ ವೇದಿಕೆಯಾಗುತ್ತಿದ್ದ ಸ್ವಾತಂತ್ರ್ಯ ಉದ್ಯಾನವು ಸಾಹಿತ್ಯ ಸಂಭ್ರಮಕ್ಕೆ ಸಾಕ್ಷಿಯಾದರೆ, ಕೈದಿಗಳು ಹಾಗೂ ಹೋರಾಟಗಾರರು ಮಲಗುತ್ತಿದ್ದ ಸ್ಥಳಗಳು ಗಹನವಾದ ಚರ್ಚೆಗಳಿಗೆ ವೇದಿಕೆ ಆಗಿದ್ದವು.

ಎರಡು ದಿನಗಳ ಬೆಂಗಳೂರು ಸಾಹಿತ್ಯ ಉತ್ಸವದ 14ನೇ ಆವೃತ್ತಿಗೆ ಶನಿವಾರ ಚಾಲನೆ ದೊರೆಯಿತು.

ಪ್ರಮುಖವಾಗಿ ನಾಲ್ಕು ವೇದಿಕೆಗಳಲ್ಲಿ ನಡೆದ ವಿಚಾರಗೋಷ್ಠಿಗಳು ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಆಗುಹೋಗುಗಳನ್ನು ಕೇಂದ್ರೀಕರಿಸಿದ್ದವು. ತಮ್ಮಿಷ್ಟದ ಗೋಷ್ಠಿಗಳನ್ನು ಆಲಿಸಲು ಬಂದಿದ್ದ ಕೆಲ ಸಾಹಿತ್ಯಾಸಕ್ತರು ನಿರಾಶರಾದ ಪ್ರಸಂಗವೂ ನಡೆಯಿತು. ಇಂಡಿಗೊ ಏರ್‌ಲೈನ್ಸ್‌ಗೆ ಸೇರಿದ ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾದ ಕಾರಣ ವಿಷಯ ತಜ್ಞರಲ್ಲಿ ಕೆಲವರು ಗೈರಾಗಿದ್ದರು. ಇದರಿಂದಾಗಿ ಬೇರೆ ವಿಷಯಗಳ ಮೇಲೆ ಗೋಷ್ಠಿಗಳು ನಡೆದವು.

ಅಭಿಮಾನಿ ಬಳಗ ಪುಸ್ತಕಗಳಿಗೆ ತಮ್ಮಿಷ್ಟದ ಬರಹಗಾರರ ಹಸ್ತಾಕ್ಷರಗಳನ್ನು ಪಡೆದು ಸಂಭ್ರಮಿಸಿತು. ಮಕ್ಕಳಿಗಾಗಿಯೇ ವಯೋಮಿತಿ ಅನುಸಾರ ಮೂರು ವೇದಿಕೆಗಳನ್ನು ಸೃಷ್ಟಿಸಲಾಗಿತ್ತು. ಅಮರ ಚಿತ್ರಕಥಾ ರಸಪ್ರಶ್ನೆ, ಮನರಂಜನೆಯ ಕಾರ್ಯಕ್ರಮಗಳನ್ನೂ ಮಕ್ಕಳಿಗಾಗಿ ರೂಪಿಸಲಾಗಿತ್ತು.

‘ಭಾಷಾ ವೈವಿಧ್ಯದಲ್ಲಿ ದೇಶದ ಸೌಂದರ್ಯ’

‘ಭಾಷಾ ವೈವಿಧ್ಯದಲ್ಲಿ ದೇಶದ ಸೌಂದರ್ಯ ಅಡಗಿದೆ. ಬಹುತ್ವವೇ ದೇಶದ ಜೀವಾಳ. ಯಾವುದೇ ಒಂದು ಭಾಷೆಯನ್ನು ಹೇರಲು ಸಾಧ್ಯವಿಲ್ಲ. ಭಾಷಾ ರಾಜಕಾರಣಕ್ಕೆ ಅವಕಾಶ ನೀಡಬಾರದು’ ಎಂದು ವಿಷಯ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದರು. ‘ಒಂದು ದೇಶ ಒಂದೇ ಭಾಷೆಯನ್ನು ಮಾತನಾಡಬೇಕೇ?’ ಎಂಬ ಗೋಷ್ಠಿಯಲ್ಲಿ ಅನುವಾದಕಿ ದೀಪಾ ಭಾಸ್ತಿ, ವಿಮರ್ಶಕ ಜಿ.ಎನ್. ದೇವಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಬರಹಗಾರ ಸಮಂತ್ ಸುಬ್ರಮಣಿಯನ್ ನಿರ್ವಹಿಸಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಮಕ್ಕಳು ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

‘ಸಮೀಕ್ಷೆಯಿಂದ ಜನರ ಬದುಕು ದರ್ಶನ’

‘ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿದ್ದ ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ’ಯಿಂದ ಜನರ ವಾಸ್ತವ ಬದುಕು ದರ್ಶನ ಸಾಧ್ಯವಾಯಿತು’ ಎಂದು ಸಮೀಕ್ಷಾ ಅವಧಿಯ ಅನುಭವವನ್ನು ಬರಹಗಾರರೂ ಆಗಿರುವ ಸಮೀಕ್ಷಕರು ಹಂಚಿಕೊಂಡರು.

‘ಸಮೀಕ್ಷೆಯಲ್ಲಿ ಕಂಡ ಬದುಕಿನ ಕಥೆಗಳು’ ಗೋಷ್ಠಿಯನ್ನು ಕಥೆಗಾರ ಅಬ್ದುಲ್ ರಶೀದ್ ನಿರ್ವಹಿಸಿದರು. ಶಿಕ್ಷಕರೂ ಆಗಿರುವ ಲೇಖಕಿ ಸುಧಾ ಅಡುಕುಳ, ಕವಯತ್ರಿ ಹಸೀನಾ ಮಲ್ನಾಡ್ ಹಾಗೂ ಬರಹಗಾರ ಗುರುಪ್ರಸಾದ್ ಕಂತಲಗೆರೆ ಅವರು ಸಮೀಕ್ಷೆಯ ಅವಧಿಯಲ್ಲಿ ಎದುರಿಸಿದ ಸವಾಲು, ಕಲಿತ ಪಾಠಗಳ ಬಗ್ಗೆ ವಿವರಿಸಿದರು.

‘ನಾವು ಶಿಕ್ಷಕರೆಂಬ ಅಹಂನಿಂದ ಹೊರಬರಲು ಸಮೀಕ್ಷೆ ಸಹಕಾರಿಯಾಯಿತು. ಜನರ ಜತೆಗಿನ ಸಂವಾದವು ಅವರ ಜತೆಗೆ ಆಪ್ತ ಸಂಬಂಧ ಏರ್ಪಡಿಸಿತು’ ಎಂದು ಹೇಳಿದರು. ಹಸೀನಾ, ‘ವಿದ್ಯಾರ್ಥಿಗಳು ಕೌಟುಂಬಿಕ ಹಿನ್ನೆಲೆ ತಿಳಿಯಲು ಸಹಕಾರಿಯಾಯಿತು. ಬುರ್ಖಾ ಧರಿಸಿದ್ದರೂ ಎಲ್ಲರಂತೆ ಜನರನ್ನು ನೋಡಿದ್ದು, ಜನರು ಉತ್ತಮವಾಗಿ ಸ್ಪಂದಿಸಿದರು’ ಎಂದರು.

‘ಡಿಕೆಶಿ ಮುಖ್ಯಮಂತ್ರಿ ಆಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿ.ಕೆ.ಶಿವಕುಮಾರ್ ಅವರು ಅತಿ ಹಿಂದುಳಿದ ವರ್ಗಗಳ ನಾಯಕ. ಅವರು ಮುಖ್ಯಮಂತ್ರಿ ಆಗಬೇಕು’ ಎಂದು ಅತಿಹಿಂದುಳಿದ ವರ್ಗಗಳ ಸ್ವಾಮೀಜಿಗಳು ಆಶಯ ವ್ಯಕ್ತಪಡಿಸಿದ್ದಾರೆ.

ಚಿತ್ರದುರ್ಗದ ಛಲವಾದಿ ಜಗದ್ಗುರು ಪೀಠದ ಬಸವನಾಗಿದೇವ ಶರಣರು, ಕುಂಬಾರ ಪೀಠದ ಬಸವಮೂರ್ತಿ ಕುಂಬಾರಗುಡ್ಡಯ್ಯ ಸ್ವಾಮೀಜಿ ಸೇರಿ ಹನ್ನೊಂದು ಸ್ವಾಮೀಜಿಗಳು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಶುಕ್ರವಾರ ಭೇಟಿಯಾಗಿದ್ದರು.

‘ರಾಜ್ಯದಲ್ಲಿ ಅತಿಹಿಂದುಳಿದವರ ಸಮಾವೇಶ ನಡೆಸಬೇಕು ಮತ್ತು ಆ ಸಮಾವೇಶದ ಅಧ್ಯಕ್ಷತೆಯನ್ನು ತಾವೇ ವಹಿಸಿಕೊಳ್ಳಬೇಕು’ ಎಂದು ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರ ಜತೆ ಮಾತನಾಡಿದ ಶಿವಕುಮಾರ್ ಅವರು, ‘ಸ್ವಾಮೀಜಿಗಳು ಬಂದು, ನೀವು ಮುಖ್ಯಮಂತ್ರಿ ಆಗಿ ಎಂದು ಹಾರೈಸಿದರು. ಆದರೆ ಅದನ್ನೆಲ್ಲಾ ನಮ್ಮ ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

ವಳಗೆರೆಹಳ್ಳಿ ನಿವಾಸಿಗಳ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿದರು

ಬೀದಿನಾಯಿಗಳ ಆಶ್ರಯ ತಾಣಕ್ಕೆ ಸ್ಥಳೀಯರ ವಿರೋಧ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸುಭಾಷ್ ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಪಾ ಲಿವಿಂಗ್ ಅನಿಮಲ್ಸ್ (ಪ್ರಾಣಿಗಳ ಆಶ್ರಯ ಕೇಂದ್ರ) ಸಂಸ್ಥೆಯನ್ನು ತಾತ್ಕಾಲಿಕ ನಾಯಿಗಳ ಆಶ್ರಯ ತಾಣವಾಗಿ ವಿಸ್ತರಿಸುವ ಜಿಬಿಎ ಪ್ರಸ್ತಾವಕ್ಕೆ ಸ್ಥಳೀಯರಿಂದ ವಿರೋಧ ವ್ಯಕ್ತವಾಗಿದೆ.

‘ಸುಪ್ರೀಂಕೋರ್ಟ್ ಸೂಚನೆಯಂತೆ ಬೀದಿ ನಾಯಿಗಳ ಆರೈಕೆಗಾಗಿ ಕೃಪಾ ಕೇಂದ್ರವನ್ನು ತಾತ್ಕಾಲಿಕ ಆಶ್ರಯ ತಾಣವಾಗಿಸುವ ಪ್ರಸ್ತಾವವನ್ನು ಪಾಲಿಕೆ ಸರ್ಕಾರದ ಮುಂದಿಟ್ಟಿದೆ. ಸಂಸ್ಥೆಯು ನಿಯಮ ಉಲ್ಲಂಘಿಸಿ ಬೀದಿ ನಾಯಿಗಳು ಹಾಗೂ ರೋಗ ಪೀಡಿತ ಪಶುಗಳನ್ನು ತಂದಿಟ್ಟುಕೊಂಡು ಸುತ್ತಮುತ್ತಲ ನಾಗರಿಕರಿಗೆ ರೋಗ ಹರಡಿಸುತ್ತಿದೆ ಎಂದು ವಳಗೆರೆಹಳ್ಳಿ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ಎನ್.ಕದರಪ್ಪ ಸುದ್ದಿಗೋಷ್ಠಿಯಲ್ಲಿ ಆತಂಕ ವ್ಯಕ್ತಪಡಿಸಿದರು.

‘ಕಡಿಮೆ ಸ್ಥಳದಲ್ಲಿ ಹೆಚ್ಚು ನಾಯಿಗಳನ್ನು ಕೂಡಿ ಹಾಕಿರುವುದರಿಂದ ಪರಸ್ಪರ ಕಚ್ಚಾಡುತ್ತವೆ. ಸತ್ತ ಪ್ರಾಣಿಗಳನ್ನು ಕೇಂದ್ರದ ಸಮೀಪದ ಕೆರೆಯ ಅಂಚಿನಲ್ಲಿ ಹೂಳುತ್ತಿರುವ ಕಾರಣ ಅಂತರ್ಜಲವೂ ಮಲಿನವಾಗುತ್ತಿದೆ’ ಎಂದು ದೂರಿದರು.

ಕೂಡಲೇ ಪ್ರಸ್ತಾವನೆ ಹಿಂಪಡೆಯದಿದ್ದರೆ ಬಡಾವಣೆಯ ಸಾವಿರಾರು ಕುಟುಂಬಗಳು ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಒಕ್ಕೂಟದ ಸದಸ್ಯರು ಎಚ್ಚರಿಸಿದರು.

ಅಮ್ಮನಗುಡ್ಡದಲ್ಲಿ ಪ್ರತಿಷ್ಠಾಪನೆಗೊಂಡ ಆದಿಶಕ್ತಿ ವಿಶ್ವರೂಪ 27 ಅಡಿ ಎತ್ತರದ ಏಕಶಿಲಾ ವಿಗ್ರಹ

27 ಅಡಿ ಎತ್ತರದ ಏಕಶಿಲಾ ವಿಗ್ರಹ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಸಮೀಪದ ಕನ್ನಮಂಗಲ ಗೇಟ್ ಬಳಿಯ ಅಮ್ಮನಗುಡ್ಡದಲ್ಲಿ ಆದಿಶಕ್ತಿ ವಿಶ್ವರೂಪದ 27 ಅಡಿ ಎತ್ತರದ ಏಕಶಿಲಾ ವಿಗ್ರಹದ ಪ್ರತಿಷ್ಠಾಪನಾ ಮಹೋತ್ಸವ ಶುಕ್ರವಾರ ನೆರವೇರಿತು.

ಮಹೋತ್ಸವದಲ್ಲಿ ಧರ್ಮ ಗುರುಗಳು, ರಾಜಕೀಯ ಮುಖಂಡರು ಭಾಗವಹಿಸಿದ್ದರು. ದೇವಿ ಉಪಾಸಕರು ಸಂಸ್ಥಾಪಕ ನರಸಿಂಹಮೂರ್ತಿ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಆಚರಣೆಗಳನ್ನು ಆಗಮಿಕ ಅಶ್ವತ್ಥನಾರಾಯಣ ನೆರವೇರಿಸಿದರು.

27 ಅಡಿ ಎತ್ತರದ ಕೃಷ್ಣಶಿಲೆಯ ದೇವಿ ವಿಶ್ವರೂಪದ ವಿಗ್ರಹದಲ್ಲಿ ತ್ರಿಮೂರ್ತಿಗಳ ಜನ್ಮದಾತೆಯ ದಶಾವತಾರಗಳನ್ನು ಬಿಡಿಸಲಾಗಿದೆ. ಆರು ಅಡಿ ಪೀಠಭಾಗದಲ್ಲಿ ಮೂರು ಹಂತದ ಪೀಠ ಸ್ಥಾಪಿಸಿ, ಲಿಖಿತನಾಮ ಜಪ ಮತ್ತು ಪ್ರತಿಷ್ಠಾಪನೆಗೂ ಮುನ್ನ ಪೀಠದ ಕೆಳಗೆ ಸಾಲಿಗ್ರಾಮ ಶಿಲೆಗಳನ್ನು ಭಕ್ತರು ಹಾಕಿ ಧನ್ಯತೆ ಪಡೆದರು. ಶನಿವಾರ ಗಿರಿಜಾ ಕಲ್ಯಾಣೋತ್ಸವ ನಡೆಯಲಿದೆ.

ಕರ್ನಾಟಕ ರಾಜ್ಯೋತ್ಸವದಲ್ಲಿ ಸಾಹಿತಿ ರಾಜಶೇಖರಯ್ಯ ಮಠಪತಿ ಅವರನ್ನು ಸನ್ಮಾನಿಸಲಾಯಿತು. ಎಂ.ಶಿಲ್ಪಾ, ಬರಗೂರು ರಾಮಚಂದ್ರಪ್ಪ, ಸ್ಮಿತಾರೆಡ್ಡಿ, ವ.ಚ.ಚನ್ನೇಗೌಡ, ಕೆ.ಎಸ್.ಪ್ರಭುಸ್ವಾಮಿ ಉಪಸ್ಥಿತರಿದ್ದರು

‘ಒಳಮೀಸಲಾತಿ ಹೆಚ್ಚಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾಷೆ ಹೆಸರಲ್ಲಿ ಸಂಘರ್ಷಕ್ಕೆ ಇಳಿಯುವ ಬದಲು, ಬದುಕು ಗಟ್ಟಿಯಾಗಲು ಕನ್ನಡಿಗರಿಗೆ ವೃತ್ತಿ ಶಿಕ್ಷಣ, ಉದ್ಯೋಗದಲ್ಲಿ ಒಳ ಮೀಸಲಾತಿ ಪ್ರಮಾಣ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಸಲಹೆ ನೀಡಿದರು.

> **ಇಂಗ್ಲಿಷ್, ಸಂಸ್ಕೃತ, ಹಿಂದಿ ಪದಗಳನ್ನು ಕನ್ನಡೀಕರಿಸಿಗೊಂಡು ಜನ ಬಳಸುತ್ತಿದ್ದಾರೆ. ಬಳಕೆಯಿಂದಲೇ ಭಾಷೆ ಉಳಿಯಬಲ್ಲದು**
> **ಬರಗೂರು ರಾಮಚಂದ್ರಪ್ಪ,** ಸಾಹಿತಿ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ ಶಾಂತಿನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 70ನೇ ಕರ್ನಾಟಕ ರಾಜ್ಯೋತ್ಸವದಲ್ಲಿ ಅವರು ಮಾತನಾಡಿದರು.

‘ಸರ್ವಜನಾಂಗದ ಶಾಂತಿಯ ತೋಟ ಎಂದು ನಮ್ಮನ್ನು ಕರೆದುಕೊಂಡರೂ, ತೋಟದಲ್ಲಿ ರಕ್ತ ಮೆತ್ತಿಕೊಂಡಿದೆ. ಜಾತಿಯ ಜೈಲು ಕಟ್ಟಿಕೊಂಡಿದ್ದೇವೆ. ಧರ್ಮದ ದ್ವೇಷದ ದ್ವೀಪದೊಳಗೆ ಬದುಕುವಂತ ಸನ್ನಿವೇಶ ತಂದುಕೊಂಡಿದ್ದೇವೆ. ಸೂಫಿ ಸಂತರು ಹಾಗೂ ತತ್ವಪದಕಾರರ ಪರಂಪರೆ ನಮ್ಮದು. ಅಂತಹ ಪರಂಪರೆ ಉಳಿಸಿಕೊಳ್ಳುವ ಹೊಣೆಯೂ ಇದೆ’ ಎಂದರು.

‘ಅಳಿದು ಹೋಗುವ 20 ಭಾಷೆಗಳ ಪಟ್ಟಿಯಲ್ಲಿ ಕನ್ನಡವೂ ಇದೆ. ಜನಗಳ ಭಾಷೆ ಆಗಿರುವುದರಿಂದ ಕನ್ನಡ ಎಂದಿಗೂ ನಾಶ ಆಗುವುದಿಲ್ಲ. ಆದರೆ ಉಳಿಸಿಕೊಳ್ಳುವ ಸವಾಲು ನಮ್ಮ ಮುಂದೆ ಇದ್ದೇ ಇದೆ’ ಎಂದು ಹೇಳಿದರು.

ಬಿಎಂಟಿಸಿ ಮಾಹಿತಿ ಮತ್ತು ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕಿ ಎಂ.ಶಿಲ್ಪ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ನಿರ್ದೇಶಕಿ ಸ್ಮಿತಾ ರೆಡ್ಡಿ, ಕೆಎಸ್‌ಆರ್‌ಟಿಸಿ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಗೌರವ ಅಧ್ಯಕ್ಷ ವ.ಚ.ಚನ್ನೇಗೌಡ, ಅಧ್ಯಕ್ಷ ಕೆ.ಎಸ್. ಪ್ರಭುಸ್ವಾಮಿ ಉಪಸ್ಥಿತರಿದ್ದರು.

ಸಾಹಿತಿ ರಾಜಶೇಖರಯ್ಯ ಮಠಪತಿ ಅವರನ್ನು ಸನ್ಮಾನಿಸಲಾಯಿತು. 51 ವಿದ್ಯಾರ್ಥಿಗಳಿಗೆ ಕನ್ನಡ ವಿದ್ಯಾಶ್ರೀ ಹಾಗೂ 79 ಕಾರ್ಮಿಕರಿಗೆ ಕನ್ನಡಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪಾಲಿಕೆ ಕಟ್ಟಡಕ್ಕೆ 'ನೀಲಿ–ಹಸಿರು' ಪರಿಕಲ್ಪನೆ

ಜಿಬಿಎ ವತಿಯಿಂದ ನಾಲ್ಕು ಕಟ್ಟಡಗಳ ನಿರ್ಮಾಣ; ಡಿಪಿಆರ್ ತಯಾರಿಸಲು ಟೆಂಡರ್

• ಆರ್. ಮಂಜುನಾಥ್

ಬೆಂಗಳೂರು: ನಾಲ್ಕು ನಗರ ಪಾಲಿಕೆಗಳ ಹೊಸ ಕಟ್ಟಡಗಳನ್ನು 'ನೀಲಿ–ಹಸಿರು ಕಟ್ಟಡ ಪರಿಕಲ್ಪನೆ'ಯಲ್ಲಿ ನಿರ್ಮಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ನಿರ್ಧರಿಸಿದೆ.

ನೀರಿನ ನಿರ್ವಹಣೆ ಮತ್ತು ಪ್ರಕೃತಿಗೆ ಹಾನಿಕಾರಕವಾಗದಂತೆ ಸುಸ್ಥಿರ ರೀತಿಯಲ್ಲಿ, ಪರಿಸರಸ್ನೇಹಿಯಾಗಿ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಹೊಸದಾಗಿ ರಚನೆಯಾಗಿರುವ ಐದು ನಗರ ಪಾಲಿಕೆಗಳಲ್ಲಿ ಕೇಂದ್ರ ನಗರ ಪಾಲಿಕೆ, ಜಿಬಿಎ ಕೇಂದ್ರ ಕಚೇರಿ ಆವರಣದಲ್ಲಿ ಅನೆಕ್ಸ್–3 ಕಟ್ಟಡವನ್ನು ನೀಡಲಾಗುತ್ತಿದೆ. ಇನ್ನುಳಿದ ನಾಲ್ಕು ನಗರ ಪಾಲಿಕೆಗಳಿಗೆ ಹೊಸದಾಗಿ ಕಟ್ಟಡಗಳನ್ನು ಏಕ ರೂಪದಲ್ಲಿ ನಿರ್ಮಿಸುವ ಉದ್ದೇಶದಿಂದ, ಸ್ಥಳಗಳನ್ನು ನಿಗದಿಪಡಿಸಲಾಗಿದೆ.

ಹೊಸ ನಗರ ಪಾಲಿಕೆಗಳ ಕಟ್ಟಡ ವಿನ್ಯಾಸ ಹಾಗೂ ಲೊಗೊಗಳನ್ನು ನಾಗರಿಕರು, ಯುವ ವಾಸ್ತುಶಿಲ್ಪಿಗಳಿಂದ ಆಹ್ವಾನಿಸುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದರು. ಆದರೆ, ಅದು ಕಾರ್ಯಗತವಾಗಲಿಲ್ಲ. ಅಂತಿಮವಾಗಿ, ಜಿಬಿಎ 'ನೀಲಿ–ಹಸಿರು ಪರಿಕಲ್ಪನೆಯಲ್ಲಿ' ಕಟ್ಟಡಗಳನ್ನು ನಿರ್ಮಿಸಲು ವಿನ್ಯಾಸ ಸೇರಿದಂತೆ ಎಲ್ಲ ರೀತಿಯ ವ್ಯವಸ್ಥೆಗಳನ್ನು ಒಳಗೊಂಡ ಕಟ್ಟಡ ನಕ್ಷೆ– ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಟೆಂಡರ್ ಆಹ್ವಾನಿಸಿದೆ.

60 ದಿನ ಡಿಪಿಆರ್ ತಯಾರಿಸಲು ನೀಡಲಾಗುವ ಒಟ್ಟು ಸಮಯ

10ನೇ ದಿನ ಡಿಪಿಆರ್‌ನ ಆರಂಭಿಕ ವರದಿ ಸಲ್ಲಿಕೆ	**40**ನೇ ದಿನ ವಾಸ್ತುಶಿಲ್ಪದೊಂದಿಗೆ ಕಾರ್ಯಸಾಧ್ಯತಾ ವರದಿ	**55**ನೇ ದಿನ ವಿನ್ಯಾಸ, ಡ್ರಾಯಿಂಗ್ ಜೊತೆಗೆ ಡಿಪಿಆರ್ ಸಜ್ಜು	**60**ನೇ ದಿನ ಕಟ್ಟಡ ನಿರ್ಮಾಣ ಗುತ್ತಿಗೆಗೆ ಬಿಡ್ಡಿಂಗ್ ದಾಖಲೆ ಸಿದ್ಧ



'ನೀಲಿ–ಹಸಿರು' ಪರಿಕಲ್ಪನೆ ಕಟ್ಟಡದ ಮಾದರಿ

ಎಲ್ಲೆಲ್ಲಿ ನಗರ ಪಾಲಿಕೆ ಕಟ್ಟಡ?

ಪೂರ್ವ ನಗರ ಪಾಲಿಕೆ
ಬಸವಪುರ ಗ್ರಾಮದ ಸರ್ವೆ ನಂ.1, ಮಹದೇವಪುರ

ಪಶ್ಚಿಮ ನಗರ ಪಾಲಿಕೆ
ನಾಗರಬಾವಿ ವೃತ್ತದ ಸಮೀಪ, ಚಂದ್ರಾ ಲೇಔಟ್

ಉತ್ತರ ನಗರ ಪಾಲಿಕೆ
ಚೊಕ್ಕನಹಳ್ಳಿ ಗ್ರಾಮದ ಸರ್ವೆ ನಂ. 75/4

ದಕ್ಷಿಣ ನಗರ ಪಾಲಿಕೆ
ಬನಶಂಕರಿ ಮೆಟ್ರೊ ನಿಲ್ದಾಣದ ಹಿಂಭಾಗದ ಜಾಗ, ಕನಕಪುರ ರಸ್ತೆ

ಏನಿದು ನೀಲಿ–ಹಸಿರು ಕಟ್ಟಡ?

ನೀಲಿ: ಸುಸ್ಥಿರ ನೀರು ನಿರ್ವಹಣೆಯ ಯೋಜನೆಗಳತ್ತ ಗುರಿ ಹೊಂದಬೇಕು. ಇದರಲ್ಲಿ ಮಳೆ ನೀರು ಸಂಗ್ರಹ, ಅದರ ಮರು ಬಳಕೆಯ ವ್ಯವಸ್ಥೆಗಳಿರಬೇಕು. ಒಳಚರಂಡಿ ನೀರನ್ನು ಹಿಡಿದಿಟ್ಟು, ಅದನ್ನು ಸಂಸ್ಕರಿಸಿ ಅಂತರ್ಜಲ ಮರುಪೂರಣಗೊಳಿಸುವ ಜೊತೆಗೆ ಪ್ರವಾಹ ನಿಯಂತ್ರಕವನ್ನಾಗಿಸುವ ವ್ಯವಸ್ಥೆ ರೂಪಿಸಬೇಕು. ತ್ಯಾಜ್ಯನೀರು ಸಂಸ್ಕರಣೆ, ಅದರ ಬಳಕೆಗಾಗಿ ಕಟ್ಟಡದ ಆವರಣದಲ್ಲೇ 'ಗ್ರೇ–ವಾಟರ್' ಸಂಸ್ಕರಣೆ ಘಟಕವಿರಬೇಕು. ಅದನ್ನು ಉದ್ಯಾನ ಸೇರಿದಂತೆ ಇತರೆ ಉಪಯೋಗಕ್ಕೆ ಬಳಸಬೇಕು. 'ಬ್ಲೂ–ರೂಫ್'ಗಳನ್ನು ಸ್ಥಾಪಿಸುವ ಮೂಲಕ ಮಳೆ ನೀರನ್ನು ತಾತ್ಕಾಲಿಕವಾಗಿ ಸಂಗ್ರಹಿಸಿ, ಒಳಚರಂಡಿ ವ್ಯವಸ್ಥೆಗೆ ಬಿಡುವ ಮುನ್ನ ಕೊಳ ಅಥವಾ ಇತರೆ ಸಂಗ್ರಹ ಘಟಕಗಳಲ್ಲಿ ಸಂಗ್ರಹಿಸಬೇಕು.

ಹಸಿರು: ಹಸಿರು ಚಾವಣಿಗಳನ್ನು ಅಳವಡಿಸಿ, ಬಾಷ್ಪೀಕರಣದ ಮೂಲಕ ಕಟ್ಟಡವನ್ನು ತಂಪಾಗಿಸುವ ಹಾಗೂ ಜೀವವೈವಿಧ್ಯವನ್ನು ವೃದ್ಧಿಸುವ ಜೀವಂತ ಗೋಡೆಗಳನ್ನು ನಿರ್ಮಿಸಬೇಕು. ಕಾರ್ಬನ್ ಕಡಿತಗೊಳಿಸಲು, ವಾಯುಗುಣಮಟ್ಟ ಉತ್ತಮವಾಗಿಸಲು ನಗರ ಅರಣ್ಯೀಕರಣ ಹಾಗೂ ರಸ್ತೆಗೆ ಹೊಂದಿಕೊಂಡ ಗಿಡ–ಮರಗಳನ್ನು ಬೆಳೆಸಬೇಕು. ನೈಸರ್ಗಿಕವಾಗಿ ನೀರನ್ನು ಸಂಸ್ಕರಿಸುವ ಜೌಗು ಪ್ರದೇಶ ಹಾಗೂ ಸಸ್ಯಕ್ಷೇತ್ರವನ್ನು ನಿರ್ಮಿಸಬೇಕು. ಬರ–ಸಹಿಷ್ಣು, ಸ್ಥಳೀಯ ಸಸ್ಯಗಳನ್ನು ನೆಟ್ಟು ಕೃತಕ ನೀರಾವರಿಯ ಅಗತ್ಯ ಪೂರೈಸಬೇಕು. ಸೌರಶಕ್ತಿ ಉತ್ಪಾದನೆಯ ಪ್ಯಾನಲ್‌ಗಳನ್ನು ಅಳವಡಿಸಬೇಕು.

75,000 ಚದರಡಿ ಪ್ರತಿ ಪಾಲಿಕೆ ಕಟ್ಟಡದ ನಿವೇಶನ

ಸೌಲಭ್ಯಗಳು: ಕೌನ್ಸಿಲ್ ಸಭಾಂಗಣ, ಕಂದಾಯ, ಎಂಜಿನಿಯರಿಂಗ್, ಆರೋಗ್ಯ, ಮೂಲಸೌಕರ್ಯ, ಗುಣಮಟ್ಟ ನಿಯಂತ್ರಣ ವಿಭಾಗದ ಕಚೇರಿಗಳು, ಕ್ಯಾಬಿನ್‌ಗಳು, ಸಭಾಂಗಣಗಳು, ನಿರೀಕ್ಷಣಾ ತಾಣ, ಐಟಿ ಘಟಕ, ದಾಖಲೆ ಕೊಠಡಿ, ಸಮಗ್ರ ನಿಯಂತ್ರಣ ಕೊಠಡಿ, ಗ್ರಂಥಾಲಯ, ವಾಹನ ನಿಲುಗಡೆ ಮತ್ತು ಕೆಫೆಟೇರಿಯಾ

ನಗರೀಕರಣದಿಂದ ಮಣ್ಣಿನ ಆರೋಗ್ಯ ಕ್ಷೀಣ: ಕುಲಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿಯಾದ ನಗರೀಕರಣ ಮತ್ತು ಕೈಗಾರಿಕಾ ಪ್ರದೇಶಗಳ ಹೆಚ್ಚಳದಿಂದ ಮಣ್ಣಿನ ಆರೋಗ್ಯ ಕ್ಷೀಣಿಸುತ್ತಿದೆ. ಮಣ್ಣಿನಲ್ಲಿ ಸಾವಯವ ಅಂಶ ಕಡಿಮೆಯಾಗುತ್ತಿದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಶುಕ್ರವಾರ ನಡೆದ ವಿಶ್ವ ಮಣ್ಣು ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಆರೋಗ್ಯಕರ ನಗರಗಳಿಗೆ ಆರೋಗ್ಯಕರ ಮಣ್ಣು ಎಂಬ ಘೋಷವಾಕ್ಯದೊಂದಿಗೆ ಮಣ್ಣಿನ ದಿನವನ್ನು ಈ ಬಾರಿ ಆಚರಿಸಲಾಗುತ್ತಿದೆ. ನಗರ ಪ್ರದೇಶಗಳಲ್ಲಿ ತ್ಯಾಜ್ಯ ಪದಾರ್ಥಗಳು ಸರಿಯಾಗಿ ವಿಲೇವಾರಿಯಾಗದೇ ಭಾರಿ ಲೋಹ ಹಾಗೂ ಮೈಕ್ರೋ ಪ್ಲಾಸ್ಟಿಕ್ ಅಂಶಗಳು ಮಣ್ಣಿನ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ನಗರ ಪರಿಸರದ ವೈಭವವು ಮಣ್ಣಿನ ಆರೋಗ್ಯದಿಂದ ಕೂಡಿದೆ. ನಾಗರಿಕರು ನಗರದ ಮಣ್ಣು ಹಾಗೂ ಪರಿಸರದ ನಿರ್ವಹಣೆಗೆ ಹೆಚ್ಚು ಆದ್ಯತೆ ನೀಡಬೇಕು' ಎಂದರು.

'ಇಂದಿನ ಪೀಳಿಗೆಯ ಮಂದಿ ಹೆಚ್ಚು ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆ ಮಾಡುವ ಮೂಲಕ ಮಣ್ಣಿನಲ್ಲಿರುವ ಫಲವತ್ತತೆಯನ್ನು ಹಾಳು ಮಾಡುತ್ತಿದ್ದಾರೆ. ಇದು ಮನುಷ್ಯರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ' ಎಂದರು.

ಮಣ್ಣಿನ ಆರೋಗ್ಯದ ಕುರಿತು ಜಾಗೃತಿ ಮೂಡಿಸಲು ವಸ್ತುಪ್ರದರ್ಶನ ಹಾಗೂ ಬೀದಿ ನಾಟಕವನ್ನು ಏರ್ಪಡಿಸಲಾಯಿತು.

ಸುದ್ದಿ 2 ನಿಮಿಷ

'ಬಿಬಿಸಿ ಭೂ ಪರಿಹಾರ: ಡಿಸಿಎಂ ಹೇಳಿಕೆ ವಾಸ್ತವಕ್ಕೆ ವಿರುದ್ಧ'

ಬೆಂಗಳೂರು: 'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ–ಪಿಆರ್‌ಆರ್1) ಯೋಜನೆಗೆ ಭೂಮಿ ನೀಡುವ ರೈತರಿಗೆ ಅತ್ಯುತ್ತಮ ಪರಿಹಾರ ನೀಡಲಾಗುತ್ತಿದೆ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ವಾಸ್ತವಕ್ಕೆ ವಿರುದ್ಧವಾದುದು' ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘ ಆಕ್ರೋಶ ವ್ಯಕ್ತಪಡಿಸಿದೆ.

'ಬಿಬಿಸಿ ವಿಚಾರದಲ್ಲಿ ಸರ್ಕಾರದ ಪರಿಹಾರ ಯಾರು ಒಪ್ಪುವುದಿಲ್ಲವೋ ಅವರಿಗೆ ನ್ಯಾಯಾಲಯದಲ್ಲಿ ಹಳೆಯ ದರದಲ್ಲಿ ಠೇವಣಿ ಇರಿಸುವಂತೆ ಅಧಿಕಾರಿಗಳಿಗೆ ಶಿವಕುಮಾರ್ ಅವರು ಸೂಚಿಸಿರುವುದು ಸರಿಯಲ್ಲ. 21 ವರ್ಷಗಳ ಯೋಜನೆ ಇದಾಗಿದ್ದು, ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ' ಎಂದು ಸಂಘದ ಪದಾಧಿಕಾರಿ ಜಗದೀಶ್ ಹೇಳಿದ್ದಾರೆ.

'ಟಿಡಿಆರ್, ಎಫ್‌ಎಆರ್ ಸೇರಿ ಸಂತ್ರಸ್ತ ರೈತರಿಗೆ ಐದು ಆಯ್ಕೆಗಳ ಪರಿಹಾರವನ್ನು ನೀಡಲಾಗಿದೆ. ಪರಿಹಾರ ನಿಗದಿಪಡಿಸಲು ಮಾರ್ಗಸೂಚಿ ದರವನ್ನು ಪರಿಗಣಿಸಿ ಸಂಧಾನ ಸೂತ್ರ ಅಳವಡಿಸಲು ಸೂಚಿಸಲಾಗಿದೆ. ಆದರೆ, ಮಾರ್ಗಸೂಚಿ ದರವನ್ನು ಉದ್ದೇಶಪೂರ್ವಕವಾಗಿ ಕಡಿಮೆ ಮಾಡಲಾಗಿದೆ' ಎಂದು ಆರೋಪಿಸಿದ್ದಾರೆ.

'2016ರಲ್ಲಿ ಜಾರಿಗೆ ಬರಬೇಕಿದ್ದ ಮಾರ್ಗಸೂಚಿ ದರಗಳ ಹೆಚ್ಚಳವನ್ನು ತಡೆಹಿಡಿಯುವಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಬಿಡಿಎ ಪತ್ರ ಬರೆದಿತ್ತು. ಪ್ರಾಧಿಕಾರದ ಹಸ್ತಕ್ಷೇಪದ ಪರಿಣಾಮ ಭೂ ಸ್ವಾಧೀನಕ್ಕೆ ಒಳಪಡುವ ಜಮೀನುಗಳ ಮಾರ್ಗಸೂಚಿ ದರವು ಶೇಕಡ 60ಕ್ಕಿಂತ ಹೆಚ್ಚು ಕಡಿತ ಮಾಡಲಾಗಿದೆ' ಎಂದು ರೈತ ಹೋರಾಟಗಾರ ಶ್ರೀನಿವಾಸ್ ಹೇಳಿದ್ದಾರೆ.

'ಪಿಆರ್‌ಆರ್ ಸಂಬಂಧಿತ ಪ್ರಕರಣಗಳನ್ನು ಸುಪ್ರೀಂ ಕೋರ್ಟ್, ರಾಜ್ಯ ಹೈಕೋರ್ಟ್‌ಗೆ ವರ್ಗಾಯಿಸಿದೆ. ಕಾನೂನಿನ ಪ್ರಕಾರ ಮೆರಿಟ್ ಆಧಾರದ ಮೇಲೆ ಆಲಿಸಿ ತೀರ್ಪು ನೀಡುವಂತೆಯೂ ನ್ಯಾಯಾಲಯ ನಿರ್ದೇಶಿಸಿದೆ' ಎಂದು ತಿಳಿಸಿದ್ದಾರೆ.

6 ನಗರಗಳಲ್ಲಿ ಶುದ್ಧ ವಾಯು

ನವದೆಹಲಿ: ವಾಯುವಿನ ಗುಣಮಟ್ಟ ಉತ್ತಮವಾಗಿರುವ ದೇಶದ 10 ನಗರಗಳ ಪಟ್ಟಿಯಲ್ಲಿ ರಾಜ್ಯದ ಮೈಸೂರು, ಕೊಪ್ಪಳ, ಚಿಕ್ಕಮಗಳೂರು, ಯಾದಗಿರಿ, ಚಾಮರಾಜನಗರ, ವಿಜಯಪುರ ಸ್ಥಾನ ಪಡೆದಿವೆ.

ಇಂಧನ ಮತ್ತು ಶುದ್ಧ ವಾಯು ಸಂಶೋಧನಾ ಕೇಂದ್ರವು (ಸಿಆರ್‌ಇಎ) ಈ ಅಧ್ಯಯನ ನಡೆಸಿದೆ. ಉತ್ತರ ಪ್ರದೇಶದ ಗಾಜಿಯಾಬಾದ್ ಅತಿ ಹೆಚ್ಚು ಮಾಲಿನ್ಯ ಹೊಂದಿರುವ ನಗರ. ನವೆಂಬರ್‌ನಲ್ಲಿ ಗಾಜಿಯಾಬಾದ್‌ನ ಮಾಲಿನ್ಯ ಪ್ರಮಾಣವು ರಾಷ್ಟ್ರೀಯ ಸರಾಸರಿಯನ್ನೂ ಮೀರಿ ಏರಿಕೆ ಕಂಡಿದೆ ಎಂದು ಈ ವರದಿಯು ಹೇಳಿದೆ.

ದೇಶದಲ್ಲಿ ಅತಿ ಹೆಚ್ಚು ಮಾಲಿನ್ಯ ಹೊಂದಿರುವ 10 ನಗರಗಳ ಪಟ್ಟಿಯಲ್ಲಿ ನೊಯಿಡಾ, ಬಹದ್ದೂರ್‌ಗಢ, ದೆಹಲಿ, ಹಾಪುರ್, ಗ್ರೇಟರ್ ನೊಯಿಡಾ, ಬಾಗ್ಪತ್, ಸೋನಿಪತ್, ಮೀರತ್ ಮತ್ತು ರೋಹಟಕ್ ಸೇರಿವೆ. ದೆಹಲಿ ನಾಲ್ಕನೆಯ ಸ್ಥಾನದಲ್ಲಿದೆ.

ಅತಿ ಹೆಚ್ಚು ಮಾಲಿನ್ಯ ಹೊಂದಿರುವ ನಗರಗಳ ಪಟ್ಟಿಯಲ್ಲಿ 6 ನಗರಗಳು ಉತ್ತರ ಪ್ರದೇಶಕ್ಕೆ ಮತ್ತು ಮೂರು ನಗರಗಳು ಹರಿಯಾಣಕ್ಕೆ ಸೇರಿವೆ. ಈ ನಗರಗಳಲ್ಲಿ ವಾಯುವಿನ ಗುಣಮಟ್ಟವು ಅಪಾಯಕಾರಿ ಹಂತಕ್ಕೆ (ಪಿಎಂ2.5) ತಲುಪಿದೆ ಎಂದು ಸಿಆರ್‌ಇಎ ಹೇಳಿದೆ.

ಅತಿ ಹೆಚ್ಚು ಮಾಲಿನ್ಯ ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ರಾಜಸ್ಥಾನ ಮೊದಲ ಸ್ಥಾನದಲ್ಲಿದ್ದರೆ, ಶುದ್ಧ ವಾಯು– ಸ್ವಚ್ಛ ನಗರ ಎಂಬ ಹೆಗ್ಗಳಿಕೆಗೆ ಮೇಘಾಲಯದ ಶಿಲ್ಲಾಂಗ್ ಪಾತ್ರವಾಗಿದೆ.

ಗುಲಾಬಿ ಮಾರ್ಗ: ಮೊದಲ ರೈಲು ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಳೇನ ಅಗ್ರಹಾರ–ನಾಗವಾರ ಸಂಪರ್ಕಿಸುವ ನಮ್ಮ ಮೆಟ್ರೊ ಗುಲಾಬಿ ಮಾರ್ಗಕ್ಕಾಗಿ ಬಿಇಎಂಎಲ್ ಪ್ರೊಟೊ ಟೈಪ್ ಚಾಲಕ ರಹಿತ ಎಂಜಿನ್‌ನ ರೈಲು ಕೋಚ್‌ಗಳನ್ನು ನಿರ್ಮಿಸುತ್ತಿದ್ದು, ಅದರ ಮೊದಲ ರೈಲನ್ನು ಡಿ.11ಕ್ಕೆ ಬಿಡುಗಡೆ ಮಾಡಲಿದೆ.

ಗುಲಾಬಿ ಮಾರ್ಗವು 21.26 ಕಿ.ಮೀ. ಉದ್ದ ಇದ್ದು, ಇದರಲ್ಲಿ 13.76 ಕಿ.ಮೀ. ಸುರಂಗ ಮಾರ್ಗವಾಗಿದೆ. ಭೂಗತ ಮಾರ್ಗದಲ್ಲಿ 12 ನಿಲ್ದಾಣಗಳು ಹಾಗೂ ಎತ್ತರಿಸಿದ ಮಾರ್ಗದಲ್ಲಿ 6 ನಿಲ್ದಾಣಗಳಿವೆ. ತಾವರೆಕೆರೆಯಿಂದ ಕಾಳೇನ ಅಗ್ರಹಾರದವರೆಗೆ 7.5 ಕಿ.ಮೀ. ಉದ್ದದ ಎತ್ತರಿಸಿದ ಮಾರ್ಗದಲ್ಲಿ ಸಿವಿಲ್ ಕಾಮಗಾರಿಗಳು, ಹಳಿ ಅಳವಡಿಕೆ ಸಹಿತ ಬಹುತೇಕ ಕಾರ್ಯಗಳು ಪೂರ್ಣಗೊಂಡಿವೆ. ತಾಂತ್ರಿಕ ಕೆಲಸಗಳಷ್ಟೇ ಬಾಕಿ ಉಳಿದಿದೆ. ಎತ್ತರಿಸಿದ ಮಾರ್ಗದಲ್ಲಿ 2026ರ ಮೇ ಅಥವಾ ಜೂನ್‌ನಲ್ಲಿ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಹೊಂದಿದೆ.

'ಕಾಳೇನ ಅಗ್ರಹಾರ–ತಾವರೆಕೆರೆ ಮಧ್ಯೆ ಮೆಟ್ರೊ ರೈಲು ಸಂಚಾರ ಆರಂಭಿಸುವಾಗ 6–7 ರೈಲು ಕೋಚ್‌ಗಳು ಇರಬೇಕಾಗುತ್ತದೆ. ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ರೈಲುಗಳನ್ನು ಪೂರೈಸಲಿದ್ದು, ಮೊದಲ ರೈಲು ತಯಾರಾಗಿದೆ. ಹೊಸ ತಿಪ್ಪಸಂದ್ರದಲ್ಲಿರುವ ಬಿಇಎಂಎಲ್‌ನಿಂದ 20 ಕಿ.ಮೀ. ದೂರದಲ್ಲಿರುವ ಕೊತ್ತನೂರು ಡಿಪೊಗೆ ಒಯ್ಯಲಾಗುವುದು. ಆನಂತರ ಬೋಗಿಗಳನ್ನು ಜೋಡಣೆ ಮಾಡಿ ವಿವಿಧ ಪರೀಕ್ಷೆಗಳನ್ನು ನಡೆಸಲಾಗುವುದು' ಎಂದು ಬಿಎಂಆರ್‌ಸಿಎಲ್ ಅಧಿಕಾರಿ ರಮಾನಂದ್ ಮಾಹಿತಿ ನೀಡಿದರು.

ಗುಲಾಬಿ ಮಾರ್ಗಕ್ಕೆ 16 ಕೋಚ್ ಮತ್ತು ನೀಲಿ ಮಾರ್ಗಕ್ಕೆ 37 ಕೋಚ್‌ಗಳನ್ನು ₹3,177 ಕೋಟಿಯಲ್ಲಿ ಪೂರೈಸಲು ಬಿಎಂಆರ್‌ಸಿಎಲ್–ಬಿಇಎಂಎಲ್ ನಡುವೆ 2023ರಲ್ಲಿ ಒಪ್ಪಂದವಾಗಿತ್ತು. 2025ರ ಡಿಸೆಂಬರ್ ಒಳಗೆ 20 ಕೋಚ್‌ಗಳನ್ನು ಪೂರೈಸುವುದಾಗಿ ಬಿಇಎಂಎಲ್ ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್ ಭರವಸೆ ನೀಡಿದ್ದರು. ಸದ್ಯ ಒಂದು ರೈಲು ಪೂರೈಕೆಯಾಗುತ್ತಿದೆ. ಹೆಚ್ಚುವರಿಯಾಗಿ ಗುಲಾಬಿ ಮಾರ್ಗಕ್ಕೆ ಏಳು ಕೋಚ್ ಪೂರೈಸಲು ₹405 ಕೋಟಿಯ ಒಪ್ಪಂದವನ್ನೂ ಬಿಇಎಂಎಲ್ ಮಾಡಿಕೊಂಡಿದೆ.

ನೃತ್ಯ ಪ್ರದರ್ಶನ

ಯುನೈಟೆಡ್ ಕಾಂಪೋಸಿಟ್ ಪಿಯು ಕಾಲೇಜಿನ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ವೈಬ್ರಾನ್ಸ್ 4.0' ಪ್ರಯುಕ್ತ ಶನಿವಾರ ವಿವಿಧ ಸ್ಪರ್ಧೆಗಳು ನಡೆದು, ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಕ್ಷಯ ಪರೀಕ್ಷಾ ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಕ್ಷಯ ಪರೀಕ್ಷಾ ಯಂತ್ರಕ್ಕೆ (ಸಿಬಿಎನ್‌ಎಎಟಿ) ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

ಸಿಂಜೆಂಟ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಲ್ಲಿ ₹ 1.5 ಕೋಟಿ ಮೊತ್ತದಲ್ಲಿ 7 ಯಂತ್ರಗಳನ್ನು ನೀಡಿದೆ. 3 ಯಂತ್ರಗಳನ್ನು ವಿಜಯನಗರ ಜಿಲ್ಲೆಗೆ, 3 ಯಂತ್ರಗಳನ್ನು ಕೋಲಾರ ಜಿಲ್ಲೆಗೆ ನೀಡಲಾಗಿದ್ದು, ಒಂದನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ನೀಡಲಾಗಿದೆ ಎಂದರು.

'ಈ ಯಂತ್ರಗಳಿಂದ ಕ್ಷಯ ರೋಗವನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಲು ಸಾಧ್ಯ. ಮೈಕ್ರೋಸ್ಕೋಪಿಕ್ ಪರೀಕ್ಷೆಯಲ್ಲಿ ಕೆಲವೊಮ್ಮೆ ಆರಂಭಿಕ ಹಂತದಲ್ಲಿ ರೋಗ ಪತ್ತೆ ಸಾಧ್ಯವಾಗದೆ ರೋಗಿಗೆ ಸಮಸ್ಯೆ ಆಗುತ್ತಿತ್ತು. ಈ ವಿಧಾನದಲ್ಲಿ 10,000 ಎಂಎಲ್ ಬೆಸಿಲಿಯನ್ ಇದ್ದರೆ ಮಾತ್ರ ರೋಗವನ್ನು ಗುರುತಿಸಬಹುದು. ಅದಕ್ಕೂ ಕಡಿಮೆ ಇದ್ದಾಗ ಗುರುತಿಸುವುದು ಕಷ್ಟ ಆಗುತ್ತಿತ್ತು. ಸಿಬಿಎನ್‌ಎಎಟಿಯಲ್ಲಿ 137ಎಂಎಲ್ ಇದ್ದಾಗಲೂ ಪತ್ತೆ ಹಚ್ಚಬಹುದಾಗಿದೆ' ಎಂದು ಹೇಳಿದರು.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/56/2025–26 ದಿನಾಂಕ: 04–12–2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳೀಪುರ ಗ್ರಾಮ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
1	ಶ್ರೀ ಹರ್ಷಿತ್ ಗೌಡ ಬಿನಾರ್. ಮಂಜುನಾಥ ಮತ್ತು ಶ್ರೀ ಶೋಭನ್ ಬಾಬು ಎಸ್.ಎನ್. ಬಿನ್ ನಾರಾಯಣಸ್ವಾಮಿ, ಮೆ॥ ಪದ್ಮ ಕನ್ ಸ್ಟ್ರಕ್ಷನ್ಸ್ & ಡೆವಲಪರ್ಸ್	161/1	01-00
2		161/2	01-12
3	ಶ್ರೀ ಡಿ. ಜನಾರ್ಧನ್ ಸ್ವಾಮಿ ಬಿನ್ ದೊಡ್ಡಮುನಿಶಾಮಪ್ಪ	161/3	01-07
4	ಶ್ರೀ ಡಿ. ಪ್ರಭಾಕರ್ ಬಿನ್ ದೊಡ್ಡಮುನಿಶಾಮಪ್ಪ	161/4	01-07
5	ಶ್ರೀ ಹರ್ಷಿತ್ ಗೌಡ ಬಿನ್ ಆರ್. ಮಂಜುನಾಥ ಮತ್ತು ಶ್ರೀ ಶೋಭನ್ ಬಾಬು ಎಸ್.ಎನ್. ಬಿನ್ ನಾರಾಯಣಸ್ವಾಮಿ, ಮೆ॥ ಪದ್ಮ ಕನ್ ಸ್ಟ್ರಕ್ಷನ್ಸ್ & ಡೆವಲಪರ್ಸ್	162/1	00-36
6		162/2	00-36
7		162/3	00-36
8	ಶ್ರೀಮತಿ ಕಲಾವತಿ ಬಿನ್ ಎಂ. ನಾರಾಯಣಸ್ವಾಮಿ	162/4	00-37
9	ಶ್ರೀ ಹರ್ಷಿತ್ ಗೌಡ ಬಿನ್ ಆರ್. ಮಂಜುನಾಥ ಮತ್ತು ಶ್ರೀ ಶೋಭನ್ ಬಾಬು ಎಸ್.ಎನ್. ಬಿನ್ ನಾರಾಯಣಸ್ವಾಮಿ, ಮೆ॥ ಪದ್ಮ ಕನ್ ಸ್ಟ್ರಕ್ಷನ್ಸ್ & ಡೆವಲಪರ್ಸ್	162/5	00-36

ಷರಾ:– ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆ / ವಸತಿ ಸಮುಚ್ಚಯ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನ / ಮನೆಗಳನ್ನು ಒದಗಿಸಿಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/4271/ಅಡ್ವರ್ಟೋರ್/2025–26

28ನೇ ಘಟಿಕೋತ್ಸವದಲ್ಲಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ

'ನಿಮ್ಹಾನ್ಸ್ ಪಾಲಿಟ್ರಾಮಾ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಸೇವೆ ವಿಸ್ತರಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದ್ದು, ಸಂಸ್ಥೆಯ ಉತ್ತರ ಕ್ಯಾಂಪಸ್‌ನಲ್ಲಿ (ಕ್ಯಾಲಸನಹಳ್ಳಿ) ಪಾಲಿಟ್ರಾಮಾ ಕೇಂದ್ರ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ ನೀಡಿದರು.

ನಿಮ್ಹಾನ್ಸ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 28ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು. '40 ಎಕರೆಯಲ್ಲಿ ₹ 498 ಕೋಟಿ ಮೊತ್ತದಲ್ಲಿ 300 ಬೆಡ್‌ಗಳ ಪಾಲಿಟ್ರಾಮಾ ಕೇಂದ್ರ ನಿರ್ಮಾಣಕ್ಕೆ ಒಪ್ಪಿಗೆ ದೊರೆತಿದೆ. ಅಲ್ಲದೆ, ಸಂಸ್ಥೆಯ ಸೆಂಟ್ರಲ್ ಕ್ಯಾಂಪಸ್‌ನಲ್ಲಿ ₹440 ಕೋಟಿಯಲ್ಲಿ ನಾಲ್ಕು ಮಹಡಿಗಳ ಹೊರರೋಗಿ ವಿಭಾಗದ (ಒಪಿಡಿ) ಕಾಂಪ್ಲೆಕ್ಸ್ ನಿರ್ಮಿಸಲೂ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ನಿತ್ಯ ಸುಮಾರು ಐದು ಸಾವಿರ ರೋಗಿಗಳಿಗೆ ಸೇವೆ ಒದಗಿಸುವ ಸಾಮರ್ಥ್ಯವನ್ನು ಇದು ಹೊಂದಿರಲಿದೆ' ಎಂದು ಹೇಳಿದರು.

ನಿಮ್ಹಾನ್ಸ್‌ನ 28ನೇ ಘಟಿಕೋತ್ಸವದಲ್ಲಿ ಪದಕಗಳಿಸಿದ ವಿದ್ಯಾರ್ಥಿಗಳ ಸಂಭ್ರಮ –ಪ್ರಜಾವಾಣಿ ಚಿತ್ರ

'ಟೆಲಿಮನಸ್' ಸಹಾಯವಾಣಿಯಲ್ಲಿ 30 ಲಕ್ಷ ಕರೆಗಳನ್ನು ಸ್ವೀಕರಿಸಿ, ಪರಿಣಾಮಕಾರಿಯಾಗಿ ಸ್ಪಂದಿಸಲಾಗಿದೆ. ಕಲ್ಯಾಣ ಕರ್ನಾಟಕ, ದೇಶದ ಈಶಾನ್ಯ ರಾಜ್ಯಗಳಿಗೆ ವೈದ್ಯಕೀಯ ಸೇವೆ ತಲುಪಿಸುವ ನಿಟ್ಟಿನಲ್ಲಿ ನಿಮ್ಹಾನ್ಸ್ ವೈದ್ಯರನ್ನು ರೂಪಿಸಬೇಕು' ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ, 'ಹೆಚ್ಚುತ್ತಿರುವ ಮನೋವೈದ್ಯಕೀಯ ಮತ್ತು ಮಾನಸಿಕ ಅಸ್ವಸ್ಥತೆಗಳ ಸವಾಲು ಎದುರಿಸಲು ವಿಶೇಷ ನವೀಕೃತ ಮತ್ತು ನಾವೀನ್ಯತಾ ಪ್ರಯತ್ನ ಕೈಗೊಳ್ಳಬೇಕಾದ ಅಗತ್ಯವಿದೆ' ಎಂದು ಹೇಳಿದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, 'ನಿಮ್ಹಾನ್ಸ್‌ನಲ್ಲಿ ಕಳೆದ ವರ್ಷ ದಾಖಲೆಯ 6.85 ಲಕ್ಷ ರೋಗಿಗಳಿಗೆ ಸೇವೆ ಕಲ್ಪಿಸಿದ್ದು, ಪ್ರಯೋಗಾಲಯದ ಮೂಲಕ 23.5 ಲಕ್ಷ ರೋಗಿಗಳಿಗೆ ರೋಗನಿರ್ಣಯ ಮಾಡಿದ್ದೇವೆ. 8 ಸಾವಿರ ಶಸ್ತ್ರಚಿಕಿತ್ಸೆ ನೆರವೇರಿಸಲಾಗಿದೆ' ಎಂದರು.

28ನೇ ಘಟಿಕೋತ್ಸವದಲ್ಲಿ 251 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಜತೆಗೆ 28 ವಿದ್ಯಾರ್ಥಿಗಳು ವಿಷಯಾಧಾರಿತ ಪದಕ ಪಡೆದರು.

'ಕನ್ನಡ ಭಾಷೆಗೆ ಆದ್ಯತೆ ನೀಡಿ'

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಮೊದಲ ಪ್ರಾಶಸ್ತ್ಯ ಸಿಗಬೇಕು ಎಂದು ಶಾಸಕ ಎನ್.ಶ್ರೀನಿವಾಸ್ ಹೇಳಿದರು.

ಸೋಂಪುರ ಹೋಬಳಿಯ ಮಾಕೇನಹಳ್ಳಿ ಗ್ರಾಮದಲ್ಲಿ ನಡೆದ 5ನೇ ವರ್ಷದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಕನ್ನಡ ಭಾಷೆ ತಾಯಿ ಇದ್ದಂತೆ. ಅನ್ಯ ಭಾಷೆಗಳನ್ನು ಕಲಿತರೂ ಮಾತೃಭಾಷೆಗೆ ಆದ್ಯತೆ ನೀಡಬೇಕು ಎಂದರು.

ಮುಖಂಡ ಗೋವಿಂದರಾಜು ಮಾತನಾಡಿ, ಕನ್ನಡ ನಾಡಿಗೆ ಸೇವೆ ಸಲ್ಲಿಸಿರುವ ಗಣ್ಯರ ಹೆಸರನ್ನು ಗ್ರಾಮ, ನಗರಗಳ ರಾಜಬೀದಿಗಳಿಗೆ ಇಡಬೇಕು. ಕನ್ನಡ ಕಾರ್ಯಕ್ರಮಗಳು ಹೆಚ್ಚಾಗಬೇಕು ಎಂದರು.

ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಎನ್‌ಪಿಎ ಸದಸ್ಯ ಪ್ರಕಾಶ್, ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಾಂಜಿನೇಯ, ಮಾಜಿ ಅಧ್ಯಕ್ಷರಾದ ಶಿವಕುಮಾರ್, ಸಿದ್ದರಾಜು, ಎಸ್‌ಡಿಎಂಸಿ ಅಧ್ಯಕ್ಷ ನರಸಿಂಹಮೂರ್ತಿ ಹಾಗೂ ಗ್ರಾಮಸ್ಥರು ಇದ್ದರು.

ನಗರದ ಜನರಿಗೆ, ವಿದ್ಯಾರ್ಥಿಗಳಿಗೆ ವಿವಿಧ ತೋಟಗಾರಿಕೆ ಚಟುವಟಿಕೆ ಪರಿಚಯಿಸುವ ಉದ್ದೇಶ

'ಹಾರ್ಟಿ ಟೂರಿಸಂ'ಗೆ ಪ್ರಚಾರದ ಕೊರತೆ

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರವಾಸಿಗಳು, ವಿದ್ಯಾರ್ಥಿಗಳು, ಐ.ಟಿ. ಕ್ಷೇತ್ರದಲ್ಲಿ ಇರುವವರಿಗೆ ತೋಟಗಾರಿಕೆ ಹಾಗೂ ಸ್ಥಳೀಯ ಸಸ್ಯ ಸಂಪನ್ಮೂಲಗಳನ್ನು ಪರಿಚಯಿಸುವ ಉದ್ದೇಶದಿಂದ ಎರಡು ವರ್ಷಗಳ ಹಿಂದೆ ಆರಂಭಿಸಿರುವ 'ತೋಟಗಾರಿಕೆ ಪ್ರವಾಸೋದ್ಯಮ' ಪ್ರಚಾರದ ಕೊರತೆಯಿಂದಾಗಿ ಪ್ರವಾಸಿಗರನ್ನು ಸೆಳೆಯುವಲ್ಲಿ ವಿಫಲವಾಗಿದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿಯಲ್ಲಿ ತೋಟಗಾರಿಕೆ ಇಲಾಖೆಯ 35 ಎಕರೆ ಪ್ರದೇಶದ ಸಸ್ಯಕ್ಷೇತ್ರವನ್ನು ಗುರುತಿಸಿ, ಅಭಿವೃದ್ಧಿಪಡಿಸಲಾಗಿದೆ. ಇಲ್ಲಿ ಸಸ್ಯಗಳ ಜೀವವೈವಿಧ್ಯತೆಯ ಜೊತೆಗೆ ತೋಟಗಾರಿಕೆ ಪ್ರವಾಸೋದ್ಯಮದ ಮಾದರಿ ರೂಪಿಸಲು ₹30 ಲಕ್ಷದಿಂದ ₹40 ಲಕ್ಷ ವೆಚ್ಚ ಮಾಡಲಾಗಿದೆ. ಇದುವರೆಗೆ ಯಾರೂ ಬಂದಿಲ್ಲ. ಕೇವಲ ಶಾಲಾ ಮಕ್ಕಳು ಮಾತ್ರ ಭೇಟಿ ನೀಡುತ್ತಿದ್ದಾರೆ.

ಪಾಲಿ ಹೌಸ್‌ನಲ್ಲಿ ಬೆಳೆದಿರುವ ಸಸ್ಯಗಳನ್ನು ಮಕ್ಕಳು ವೀಕ್ಷಿಸಿದರು

ಇಲ್ಲಿ ಏನಿದೆ?: ಸಪೋಟ ಹಾಗೂ ಔಷಧೀಯ ಸಸಿಗಳು ಒಳಗೊಂಡಂತೆ 200ಕ್ಕೂ ಹೆಚ್ಚಿನ ಬಗೆಯ ಹಣ್ಣಿನ ಬೆಳೆಗಳ ತಾಕುಗಳಿವೆ. ನಿಸರ್ಗದ ನಡುವೆ ಸೈಕ್ಲಿಂಗ್ ಹಾಗೂ ನಡಿಗೆ ಪಥಗಳನ್ನು ನಿರ್ಮಿಸಲಾಗಿದೆ. ಉದ್ಯಾನ, ಸಾಹಸ ಕ್ರೀಡೆಗಳು ಹಾಗೂ ಮಕ್ಕಳಿಗಾಗಿ ಒಳಾಂಗಣ ಆಟದ ಆವರಣ ಇದೆ. ಅಲ್ಲದೆ ಕಿಚನ್ ಗಾರ್ಡನ್, ತಾರಸಿ ತೋಟಕ್ಕೆ ಬೇಕಾದ ಸಸಿಗಳನ್ನು ಮಾರಾಟ ಮಾಡಲಾಗುತ್ತದೆ.

'ಈ ಪ್ರವಾಸದಲ್ಲಿ ತೋಟಗಾರಿಕೆ ಅನುಭವ ನೀಡುವುದು. ಕುಂಡಗಳನ್ನು ಸಿದ್ಧಪಡಿಸುವುದು, ಸಸಿಗಳನ್ನು ಬೆಳೆಸುವುದು, ಎರೆಹುಳು ಗೊಬ್ಬರ ತಯಾರಿಕೆ ವಿಧಾನ, ಜೇನು ಸಾಕಾಣಿಕೆ ಹಾಗೂ ಕೃಷಿ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಇದೆ. ಸಾರ್ವಜನಿಕರು ಒಂದು ದಿನದ ಪ್ರವಾಸಕ್ಕಾಗಿ ಯಾವುದೊ ರೆಸಾರ್ಟ್‌ಗೆ ಹೋಗುವ ಬದಲು ಮಕ್ಕಳ ಜೊತೆಗೆ ಇಲ್ಲಿಗೆ ಬರಬೇಕು. ಇಲ್ಲಿ ತೋಟಗಾರಿಕೆ ಚಟುವಟಿಕೆಗಳನ್ನು ನೋಡುವುದರ ಜೊತೆಗೆ ಇದರಲ್ಲಿ ಭಾಗವಹಿಸಬಹುದು' ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ತಿಳಿಸಿದರು.

'ತಿಪ್ಪಗೊಂಡನಹಳ್ಳಿ ಸಸ್ಯಕ್ಷೇತ್ರಕ್ಕೆ ಭೇಟಿ ನೀಡುವ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ಹಾಗೂ ಆಧುನಿಕ ತೋಟಗಾರಿಕೆ ಕುರಿತು ಅರಿವು ಮೂಡಿಸುವುದು ತೋಟಗಾರಿಕೆ ಪ್ರವಾಸೋದ್ಯಮದ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಹಾಗೂ ನಗರವಾಸಿಗಳು ವಿವಿಧ ತೋಟಗಾರಿಕೆ ಚಟುವಟಿಕೆಗಳ ಅನುಭವ ಪಡೆದುಕೊಳ್ಳಬೇಕಾದರೆ ಇಲ್ಲಿಗೆ ಒಮ್ಮೆ ಭೇಟಿ ನೀಡಬೇಕು' ಎಂದು ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕ ಕೆ.ಎಂ.ಪರಶಿವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ತಿಪ್ಪಗೊಂಡನಹಳ್ಳಿ ಸಸ್ಯಕ್ಷೇತ್ರಕ್ಕೆ ಶಾಲಾ ಮಕ್ಕಳು ಉಚಿತವಾಗಿ ಭೇಟಿ ನೀಡುತ್ತಿದ್ದಾರೆ. ಸಾರ್ವಜನಿಕರ ಪ್ರವೇಶಕ್ಕೆ ಶುಲ್ಕ ನಿಗದಿಪಡಿಸುವ ಕುರಿತು ಪ್ರಸ್ತಾವ ಸಲ್ಲಿಕೆ ಆಗಿದೆ. ತೋಟಗಾರಿಕೆ ಪ್ರವಾಸೋದ್ಯಮದ ಕುರಿತು ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ' ಎಂದರು.

'ಒಂದು ದಿನದ ಪ್ರವಾಸಕ್ಕೆ ₹1,400 ನಿಗದಿ'



'ತೋಟಗಾರಿಕೆ ಪ್ರವಾಸೋದ್ಯಮ ಉತ್ತೇಜಿಸಲು ತೋಟಗಾರಿಕೆ ಇಲಾಖೆಯು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಕೆಎಸ್‌ಟಿಡಿಸಿ) ಜೊತೆಗೆ ಒಪ್ಪಂದ ಮಾಡಿಕೊಂಡಿದೆ. ಶಿವಗಂಗೆ ತಿಪ್ಪಗೊಂಡನಹಳ್ಳಿಗೆ ಒಂದು ದಿನದ ಪ್ರವಾಸ ಪ್ಯಾಕೇಜ್ ರೂಪಿಸಲಾಗಿದೆ' ಎಂದು ಪರಶಿವಮೂರ್ತಿ ತಿಳಿಸಿದರು.

'ಇದು ಗುರುವಾರದಿಂದ ಭಾನುವಾರದವರೆಗೆ ಇರಲಿದೆ. ಬೆಳಿಗ್ಗೆ 6.30ಕ್ಕೆ ಯಶವಂತಪುರದ ಕೆಎಸ್‌ಟಿಡಿಸಿ ಕಚೇರಿಯಿಂದ ವಾಹನ ಹೊರಡಲಿದ್ದು, ಸಂಜೆ 6ಗಂಟೆಗೆ ಬೆಂಗಳೂರಿಗೆ ಹಿಂದಿರುಗಲಿದೆ. ಇದಕ್ಕಾಗಿ ₹1,400 ಶುಲ್ಕ ನಿಗದಿಪಡಿಸಲಾಗಿದೆ' ಎಂದು ತಿಳಿಸಿದರು.

ಮಾಹಿತಿಗೆ: https://kstdc.co/tour_packages/shivagange-tippagondanahalli-farm-tour/, 080-43344334/ 8970650070

‘ಪ್ರತಿ ವರ್ಷ ಭೀಮ ದಸರಾ ನಡೆಸಿ’

ಅಂಬೇಡ್ಕರ್ ಮಹಾಪರಿನಿರ್ವಾಣ ಕಾರ್ಯಕ್ರಮದಲ್ಲಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ದಸರಾ ಮಾದರಿಯಲ್ಲಿ ಪ್ರತಿ ವರ್ಷ ಭೀಮ ದಸರಾವನ್ನು ಸರ್ಕಾರ ಆಚರಿಸಬೇಕು ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ರಾಜ್ಯ ಸಂವಿಧಾನ ಬಳಗದ ಅಧ್ಯಕ್ಷ ಎಸ್. ಜಯಕಾಂತ್ ಚಾಲುಕ್ಯ ಆಗ್ರಹಿಸಿದರು.

ಡಾ.ಬಿ.ಆರ್. ಅಂಬೇಡ್ಕರ್ ಮಹಾ ಪರಿನಿರ್ವಾಣದ ಅಂಗವಾಗಿ ನಾಗಸೇನಾ ಶಾಲೆಯಿಂದ ಶೃಂಗಾರ್ ಪ್ಯಾಲೇಸ್‌ವರೆಗೆ ಭಗವಾನ್ ಬುದ್ಧ ಮತ್ತು ಅಂಬೇಡ್ಕರ್ ಅವರ ಅಸ್ಥಿಯನ್ನು ಶನಿವಾರ ಮೆರವಣಿಗೆಯಲ್ಲಿ ತಂದು ಚೈತ್ಯಾಲಯ ಮಾದರಿಯಲ್ಲಿ ಇರಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಪರಿನಿರ್ವಾಣದ ಸಮಯದಲ್ಲಿ ದಸರಾ ಆಚರಿಸಬೇಕು. ದಸರಾ ಮೆರವಣಿಗೆ ರೀತಿಯಲ್ಲೇ ವಿಧಾನ ಸೌಧದಿಂದ ಅರಮನೆ ಮೈದಾನದವರೆಗೆ ಆನೆ ಮೇಲಿನ ಅಂಬಾರಿಯಲ್ಲಿ ಬಾಬಾ ಸಾಹೇಬರ ಬಂಗಾರದ ಪುತ್ಥಳಿಯನ್ನು ಇರಿಸಿ ಮೆರವಣಿಗೆ ನಡೆಸಬೇಕು. ಪರಿಶಿಷ್ಟ ಜಾತಿ ಉಪಯೋಜನೆಯ ಅನುದಾನದಲ್ಲಿ ಈ ಹಬ್ಬಕ್ಕೆ ₹3 ಕೋಟಿ ಒದಗಿಸಬೇಕು ಎಂದು ಒತ್ತಾಯಿಸಿದರು. ಬಂಗಾರದ ಪುತ್ಥಳಿ ನಿರ್ಮಿಸಲು ಪ್ರತಿಯೊಬ್ಬರೂ ಕನಿಷ್ಠ ಒಂದು ರೂಪಾಯಿ ಆದರೂ ನೀಡಬೇಕು. ಸರ್ಕಾರ ಪುತ್ಥಳಿ ಅನಾವರಣಗೊಳಿಸಬೇಕು ಎಂದರು.

ಮುಂಬೈಯ ದಾದರ್‌ನಲ್ಲಿರುವ ಚೈತ್ಯಭೂಮಿಯ ಮಾದರಿಯಲ್ಲಿ, ಇಲ್ಲಿ ತಾತ್ಕಾಲಿಕ ಚೈತ್ಯಾಲಯ ನಿರ್ಮಿಸಲಾಗಿದೆ. ದಾದರ್‌ಗೆ ಹೋಗಲು ಸಾಧ್ಯವಾಗದವರು ನಿರ್ವಾಣದ ದಿನ ಇಲ್ಲೇ ಭೇಟಿ ನೀಡಲಿ ಎಂಬುದು ಇದರ ಉದ್ದೇಶವಾಗಿದೆ. ದಾದರ್‌ನಿಂದ ಅಂಬೇಡ್ಕರ್ ಅಸ್ಥಿ, ಶ್ರೀಲಂಕಾದಿಂದ ಬುದ್ಧನ ಅಸ್ಥಿ ತರಲಾಗಿದೆ ಎಂದರು.

ಭಿಕ್ಕುಣಿ ಮೈತ್ರಿ ಮಾತಾಜಿ ಮಾತನಾಡಿ, ‘ಅಂಬೇಡ್ಕರ್ ನೀಡಿದ ಉಡುಗೊರೆಯನ್ನು ನಾವು ಮರೆಯುವಂತಿಲ್ಲ. ಅವರು ನೀಡಿದ ಸಂವಿಧಾನ, ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಇದ್ದರೂ ಭಾರತದಿಂದ ಮರೆಯಾಗಿದ್ದ ಬೌದ್ಧ ಧರ್ಮವನ್ನು ಪುನರ್‌ಸ್ಥಾಪಿಸಿದ ಕೊಡುಗೆಗಳನ್ನು ಮರೆಯಬಾರದು’ ಎಂದರು.

ಬೌದ್ಧ ಭಿಕ್ಕುಗಳಾದ ಭಂತೆ ಬೋಧಿದತ್ತ ಮಹಾಥೇರ, ಭಂತೆ ನಾಗಸೇನ, ಭಿಕ್ಕುಣಿ ಗೌತಮಿ ಮಾತಾಜಿ, ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಹೆಲಿಕಾಪ್ಟರ್ ಮೂಲಕ ಪುಷ್ಪಾರ್ಪಣೆ, ಹಗಲು ರಾತ್ರಿ ಬುದ್ಧವಂದನೆ, ಭೀಮಗೀತೆ ಗಾಯನ ನಡೆಯಿತು.

ಬೆಂಗಳೂರಿನ ಅರಮನೆ ಮೈದಾನ– ಶೃಂಗಾರ್ ಪ್ಯಾಲೇಸ್‌ನಲ್ಲಿ ನಿರ್ಮಿಸಿರುವ ತಾತ್ಕಾಲಿಕ ಚೈತ್ಯಾಲಯಕ್ಕೆ ಬುದ್ಧ ಮತ್ತು ಬಿ.ಆರ್‌. ಅಂಬೇಡ್ಕರ್ ಅವರ ಅಸ್ಥಿಯನ್ನು ತರಲಾಯಿತು –ಪ್ರಜಾವಾಣಿ ಚಿತ್ರ

‘ಸಂವಿಧಾನದ ಬೆಳಕು ಆರದಿರಲಿ’

ದಲಿತ ಸಂಘಟನೆ ಮುಖಂಡ ಸುಬ್ಬು ಹೊಲೆಯಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಅವರು ಅಸಮಾನತೆ ಅಳಿಸಲು ಸಂವಿಧಾನ ಎಂಬ ಬೆಳಕನ್ನು ಕೊಟ್ಟಿದ್ದಾರೆ. ಅದನ್ನು ಉಳಿಸಿಕೊಳ್ಳುವುದು ಎಲ್ಲರ ಕರ್ತವ್ಯ ಎಂದು ದಲಿತ ಸಂಘರ್ಷ ಸಮಿತಿ ಮುಖಂಡ ಸುಬ್ಬು ಹೊಲೆಯಾರ್ ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಅಂಬೇಡ್ಕರ್ ಪ್ರತಿಮೆ ಬಳಿ ‘ಸಂವಿಧಾನ ಬೆಳಕು ಉಳಿಸಿ–ಅಸಮಾನತೆಯ ಕತ್ತಲನ್ನು ಅಳಿಸಿ’ ಎಂಬ ಘೋಷದಡಿ ಶನಿವಾರ ಆಯೋಜಿಸಿದ್ದ ಅಂಬೇಡ್ಕರ್ ಪರಿನಿರ್ವಾಣ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ರಾಜ್ಯದಲ್ಲಿ ಅನೇಕ ಚಳವಳಿಗಳು ಬಂದು ಹೋಗಿವೆ. ವಚನ ಸಾಹಿತ್ಯದ ನಂತರ ಕಮ್ಯುನಿಸ್ಟರು ಹೊರತುಪಡಿಸಿದರೆ, ದಲಿತ ಸಂಘರ್ಷ ಸಮಿತಿ ಒಂದೇ ಮನುಷ್ಯತ್ವದ ಪರವಾಗಿ ಹೋರಾಡಿದ್ದು. ದಸಂಸ ರಾಜ್ಯದ ಚಳವಳಿಗಳ ತಾಯಿ ಎಂದರೆ ತಪ್ಪು ಆಗಲಾರದು. ಅಂಬೇಡ್ಕರ್ ಒಂದು ಜಾತಿ, ಸಮುದಾಯಕ್ಕೆ ಮೀಸಲಾಗದೇ ದೇಶಕ್ಕೆ ಉತ್ತಮವಾದ ಸಂವಿಧಾನ ಕೊಟ್ಟಿದ್ದಾರೆ’ ಎಂದು ತಿಳಿಸಿದರು.

ಸರ್ಕಾರಿ ನೌಕರರ ಸಂಘದ ಖಜಾಂಚಿ ಶಿವರುದ್ರಯ್ಯ ಮಾತನಾಡಿ, ‘ದಲಿತ ಸಂಘರ್ಷ ಸಮಿತಿ ಈವರೆಗೂ ಸಮಾನತೆ ಎಂಬ ರಥವನ್ನು ಎಳೆದುಕೊಂಡು ಬಂದಿದೆ. ಅದನ್ನು ಹಿಂದಕ್ಕೆ ತಳ್ಳುವ ಕೆಲಸ ಮಾಡಬೇಡಿ. ಯಾರೇ ಆಗಲಿ ದಲಿತ ಸಮುದಾಯವನ್ನು ಮುಂದಕ್ಕೆ ತಳ್ಳುವ ಕೆಲಸ ಮಾಡಬೇಕು’ ಎಂದರು.

ದಸಂಸ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಇಂದಿರಾ ಕೃಷ್ಣಪ್ಪ, ಶ್ರೀರಾಮ್, ನಿರ್ಮಲಾ, ಪುರುಷೋತ್ತಮ ದಾಸ್, ಬಾಲಕೃಷ್ಣ, ವಕೀಲ ನರಸಿಂಹಮೂರ್ತಿ ಭಾಗವಹಿಸಿದ್ದರು.

ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೇಣದ ಬತ್ತಿ ಹಚ್ಚಿ ಬಿ.ಆರ್‌. ಅಂಬೇಡ್ಕರ್ ಪ್ರತಿಮೆಗೆ ಗೌರವ ಸಲ್ಲಿಸಲಾಯಿತು. ಮಾವಳ್ಳಿ ಶಂಕರ್‌, ಇಂದಿರಾ ಕೃಷ್ಣಪ್ಪ, ಕಾರಳ್ಳಿ ಶ್ರೀನಿವಾಸ್‌, ಸುಬ್ಬು ಹೊಲೆಯಾರ್‌, ಜಿಗಳ ಶ್ರೀರಾಮ್‌, ಮಣಿಪಾಲ್ ರಾಜಪ್ಪ, ನಿರ್ಮಲಾ, ಸಂಪಂಗಿರಾಮು ಇದ್ದರು –ಪ್ರಜಾವಾಣಿ ಚಿತ್ರ

ಜಯದೇವ ಸಂಸ್ಥೆಗೆ ನಾಲ್ಕನೇ ಬಾರಿ ‘ಎನ್‌ಎಬಿಎಚ್’ ಮಾನ್ಯತೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ನಾಲ್ಕನೆ ಬಾರಿಗೆ ಎನ್‌ಎಬಿಎಚ್ (ಆಸ್ಪತ್ರೆಗಳು ಮತ್ತು ಆರೋಗ್ಯ ಪೂರೈಕೆದಾರರ ರಾಷ್ಟ್ರೀಯ ಮಾನ್ಯತೆ ಮಂಡಳಿ) ಮಾನ್ಯತೆ ಪಡೆದಿದೆ.

ಹೆಚ್ಚು ಬಾರಿ ಈ ಮನ್ನಣೆ ಪಡೆದ ರಾಜ್ಯದ ಏಕೈಕ ಸರ್ಕಾರಿ ಸ್ವಾಯತ್ತ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆಸ್ಪತ್ರೆ ಒದಗಿಸುವ ಗುಣಮಟ್ಟದ ಚಿಕಿತ್ಸೆ, ಆರೈಕೆ ಹಾಗೂ ವೈದ್ಯಕೀಯ ಸೌಲಭ್ಯಗಳ ಆಧಾರದ ಮೇಲೆ ಈ ಮಾನ್ಯತೆ ನೀಡಲಾಗುತ್ತದೆ.

‘ಭಾರತದ ಗುಣಮಟ್ಟ ಮಂಡಳಿಯ ಗುಣಮಟ್ಟ ತಜ್ಞರ ತಂಡವು ಕಳೆದ ಜುಲೈನಲ್ಲಿ ಸಂಸ್ಥೆಗೆ ಭೇಟಿ ನೀಡಿತ್ತು. ವೈದ್ಯಕೀಯ ಸೇವೆ ಹಾಗೂ ಸೌಲಭ್ಯಗಳ ಪರಿಶೀಲನೆ ನಡೆಸಿತ್ತು. ಸ್ವಚ್ಛತೆ, ರೋಗಿಗಳ ಮೇಲಿನ ನಿಗಾ ವ್ಯವಸ್ಥೆ, ಕಡತಗಳ ನಿರ್ವಹಣೆ, ರೋಗಿಗಳ ಆರೈಕೆ ಮತ್ತು ಚಿಕಿತ್ಸಾ ವಿಧಾನಗಳು, ಹೊರರೋಗಿಗಳ ವಿಭಾಗ, ಒಳರೋಗಿಗಳ ವಿಭಾಗ, ತುರ್ತು ಚಿಕಿತ್ಸಾ ವಿಭಾಗ ಒಳಗೊಂಡು ಎಲ್ಲ ವಿಭಾಗಗಳ ಕಾರ್ಯಕ್ಷಮತೆ ಪರಿಶೀಲಿಸಿತ್ತು. ಎಲ್ಲ ವಿಭಾಗಗಳಲ್ಲಿ ನಿಗದಿತ ಮಾನದಂಡ ಹೊಂದಿದ್ದರಿಂದ ಈ ಮಾನ್ಯತೆ ದೊರೆತಿದೆ’ ಎಂದು ಸಂಸ್ಥೆ ನಿರ್ದೇಶಕ ಡಾ.ಬಿ. ದಿನೇಶ್ ತಿಳಿಸಿದ್ದಾರೆ.

‘ಪ್ರತಿ ಮೂರು ವರ್ಷಕ್ಕೊಮ್ಮೆ ನೀಡುವ ಈ ಮಾನ್ಯತಾ ಪ್ರಮಾಣ ಪತ್ರವನ್ನು 2015ರಿಂದಲೂ ಸತತವಾಗಿ ಸಂಸ್ಥೆ ಪಡೆಯುತ್ತಿದೆ. ಎಲ್ಲರಿಗೂ ಕಡಿಮೆ ಮತ್ತು ರಿಯಾಯಿತಿ ದರದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ. ನಿತ್ಯ 1,800ಕ್ಕೂ ಅಧಿಕ ಮಂದಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಾರೆ’ ಎಂದು ಹೇಳಿದ್ದಾರೆ.

‘ಜಿಬಿಎಗೆ ಉಪ ಲೋಕಾಯುಕ್ತರನ್ನು ನೇಮಿಸಿ’

ಬೆಂಗಳೂರು: ‘ಜಿಬಿಎ ಸೇರಿದಂತೆ ಐದು ನಗರ ಪಾಲಿಕೆಗಳ ಆಡಳಿತದಲ್ಲಿ ಭ್ರಷ್ಟಾಚಾರ ತಡೆಗಟ್ಟಲು ಹಾಗೂ ಪಾರದರ್ಶಕತೆ ತರಲು ಪ್ರತ್ಯೇಕವಾಗಿ ಉಪ ಲೋಕಾಯುಕ್ತರನ್ನು ನೇಮಿಸಬೇಕು’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ಬಿಬಿಎಂಪಿ ಆಡಳಿತದಲ್ಲಿ ಲಕ್ಷಾಂತರ ಕೋಟಿ ರೂಪಾಯಿ ಲೂಟಿ ಮಾಡಲಾಗಿದೆ. ಆರೋಪಿಗಳಿಂದ ಇದುವರೆಗೂ ಬಿಡಿಗಾಸು ಜಪ್ತಿ ಮಾಡಲು ಸಾಧ್ಯವಾಗಿಲ್ಲ. ಯಾರಿಗೂ ಶಿಕ್ಷೆಯೂ ಆಗಿಲ್ಲ. ಇದೇ ರೀತಿಯ ಭ್ರಷ್ಟ ಆಡಳಿತ ಸದ್ಯ ಜಿಬಿಎದಲ್ಲಿ ನಡೆಯುತ್ತಿದೆ. ಉಪ ಲೋಕಾಯುಕ್ತರಿಗೆ ಜಿಬಿಎ ಕೇಂದ್ರ ಕಚೇರಿಯಲ್ಲಿಯೇ ಸಕಲ ವ್ಯವಸ್ಥೆಗಳುಳ್ಳ ಕಚೇರಿಯನ್ನು ನೀಡಬೇಕು’ ಎಂದು ಒತ್ತಾಯಿಸಿದರು.

ಎಎಪಿ ಪ್ರಚಾರ ಸಮಿತಿ ಅಧ್ಯಕ್ಷ ಲಕ್ಷ್ಮಿಕಾಂತ್ ರಾವ್ ಮಾತನಾಡಿ, ‘ಈಗಿರುವ ಕಾನೂನಿನಲ್ಲಿ ಗುತ್ತಿಗೆದಾರರನ್ನು ನೇರವಾಗಿ ಆರೋಪಿಗಳಾಗಿ ಮಾಡಲು ಸಾಧ್ಯವಿಲ್ಲ. ಹಾಗಾಗಿ ಮುಂಬರುವ ವಿಧಾನಸಭೆ ಅಧಿವೇಶನದಲ್ಲಿ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತಂದು ಭ್ರಷ್ಟ ಗುತ್ತಿಗೆದಾರರನ್ನೂ ಕಾನೂನಿನ ಅಂಕುಶಕ್ಕೆ ಒಳಪಡಿಸಬೇಕು’ ಎಂದರು. ಎಎಪಿ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ, ರಾಜ್ಯ ಕಾರ್ಯದರ್ಶಿ ರವಿಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೋಲಾರ ವಿಭಾಗ, ಕೋಲಾರ

ಸಂಖ್ಯೆ:ಕರಾಸಾ/ಕೋವಿ/ಸಂಚಾರ/ವಾಣಿಜ್ಯ/1713/2025–26 ದಿನಾಂಕ: 03.12.2025

ಸಂಧಾನ/ಮಾತುಕತೆ ಪ್ರಕಟಣೆ ಸಂ.08/2025(ವಾಣಿಜ್ಯ ಮಳಿಗೆಗಳು) (ಸಾ.ಸ್ಥಾ.ಆದೇಶ ಸಂಖ್ಯೆ 787/17 ಹಾಗೂ ಪೂರಕ ಆದೇಶಗಳಂತೆ) ಹಾಗೂ ಸಂಧಾನ/ಮಾತುಕತೆ ಪ್ರಕಟಣೆ ಸಂ.08/2025(ಹೋರ್ಡಿಂಗ್ಸ್) (ಸಾ.ಸ್ಥಾ.ಆದೇಶ ಸಂಖ್ಯೆ 788/17 ಹಾಗೂ ಮೂಲಕ ಆದೇಶಗಳಂತೆ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೋಲಾರ ವಿಭಾಗದ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ ಮತ್ತು ಹೋರ್ಡಿಂಗ್ಸ್‌ಗಳಿಗೆ ಸಂಧಾನ/ಮಾತುಕತೆ ಪ್ರಕಟಣೆ 08/2025 ಹೊರಡಿಸಿದ್ದು ದಿ:23–12–2025 ರಂದು 12.00 ಗಂಟೆಗೆ ಸಂಧಾನವನ್ನು ನಿಗಧಿಪಡಿಸಲಾಗಿದೆ. ಆಸಕ್ತಿದಾರರು ಕಛೇರಿ ವೇಳೆಯಲ್ಲಿ ಸೂಚಿತ ಅರ್ಜಿ ಶುಲ್ಕ ಪಾವತಿಸಿ ದಿ:– 22–12–2025 ರ 12.00 ಗಂಟೆಯವರೆಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ನಿಗದಿತ ಅರ್ಜಿ ಶುಲ್ಕದ ಡಿಡಿ ಸಲ್ಲಿಸಿ ಅಥವಾ ಈ ಕಛೇರಿಯಲ್ಲಿ ನಗದು ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಷರತ್ತು ಮತ್ತು ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ ಕ.ರಾ.ರ.ಸಾ.ನಿಗಮ ಕೋಲಾರ ವಿಭಾಗದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ 7760990602 (ವಿಭಾಗೀಯ ಸಂಚಲನಾಧಿಕಾರಿಗಳು), 7760990620 (ಸಹಾಯಕ ಸಂಚಾರ ಅಧೀಕ್ಷಕರು), 8660322880 (ವಿಷಯ ನಿರ್ವಾಹಕರು).

ಯಾವುದೇ ಕಾರಣ ನೀಡದೆ ಸಂಧಾನ/ಮಾತುಕತೆ ಪುರಸ್ಕರಿಸುವ ಹಾಗೂ ತಿರಸ್ಕರಿಸುವ, ಮಂದೂಡುವ ಮತ್ತು ರದ್ದು ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ : ಕೋಲಾರ

ಡಿಐಪಿಆರ್/ಸಿಪಿ/4275/ಸಿಸಿಎಲ್/2025–26

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ಮಾಲೀಕರಾದ ದಿವಂಗತ ಎಂ. ಕೃಷ್ಣಪ್ಪ ರವರ ಮಗ ಶ್ರೀ. ಎಸ್. ಕೆ. ಉದಯಶಂಕರ್ (“ಮಾಲೀಕರು”) ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತು ಸದರಿ ಮಾಲೀಕರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾರಾಟದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು, ಸದರಿ ಶ್ರೀ. ಎಸ್. ಕೆ. ಉದಯಶಂಕರ್ ರವರ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯೂಲ್ ಸ್ವತ್ತನು ಖರೀದಿಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ನಗರ, ವೈಯಾಲಿಕಾವಲ್, ೭ನೇ ಮುಖ್ಯ ರಸ್ತೆ ಯಲ್ಲಿರುವ ಪೂರ್ವ - ಪಶ್ಚಿಮ 45 ಅಡಿ, ಉತ್ತರ - ದಕ್ಷಿಣ 30 ಅಡಿ ಒಟ್ಟು ವಿಸ್ತೀರ್ಣ 1350 ಚದರ ಅಡಿಉಳ್ಳ ಸ್ವತ್ತಿನ ಸಂಖ್ಯೆ 317, ಮುನಿಸಿಪಲ್ ನಂ. 2, ಪಿಐಡಿ ನಂ. 5/47/2, ಸ್ವತ್ತಿನ ನಂ. 317/2, ಇ-ಪಿಐಡಿ ನಂ. 1444541989, ಉಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ; ಪಶ್ಚಿಮಕ್ಕೆ : ಸ್ವತ್ತಿನ ನಂ. 320; ಉತ್ತರಕ್ಕೆ: ಸ್ವತ್ತಿನ ನಂ. 316; ಮತ್ತು ದಕ್ಷಿಣಕ್ಕೆ : ಸ್ವತ್ತಿನ ನಂ. 318;.

ಬೆಂಗಳೂರು **ದಿನಾಂಕ : ಡಿಸೆಂಬರ್ 07, 2025**

ಸಹಿ./- **ಎ. ಸುಪ್ರೀತ್,** ವಕೀಲರು, **ಕ್ರೆಸ್ಟ್ ಲಾ ಪಾರ್ಟ್ನರ್ಸ್,**
33, ಝುವಿಯರ್ ಲೇಔಟ್, 1ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು– 560 047.
ದೂ: 080-41473535 / 080-41473536

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Engg/ Production Technical

SVSLER Engineering
REQUIRES FULL TIME **WELDERS**
with 3 to 4 years experience for Metal Fabrication work @ Singasandra, Hosa Road.
Call: 7676527098

URGENT REQUIREMENT- BE/ Diploma (Civil)/ Any Degree-Freshers/ Experienced in Bangalore, 2 Wheeler Must. 9845009445

General

REQUIRED
Applications are invited from Graduate/Post-graduate candidates below 50 years of age with finance and customer centric background and experience in NBFCs or other FIs/ Banks on provisional basis for delivering value added services to customers in an enterprise with an asset base of around Rs.200 crores situated in Bengaluru.
Salary negotiable and no bar for right candidate.
Aspirants fulfilling the above criteria may send their softcopy of handwritten application along with passport size photo on or before **21st Dec. 2025** to below mentioned Email-ID.
Selection will be based on merit and competence followed by personal interview.
Email-ID: prasadancb@gmail.com

CELESTIUM FINANCIAL Ltd. We are Hiring COLLECTION EXECUTIVES We are a RBI registered leading NBFC located in Bangalore. Requirements: Resident of Bangalore for at least 5 years, Must own a two-wheeler, Should be able to read, write and speak Kannada, Experience in finance market preferred. Graduation degree not compulsory Basic pay plus incentive payout as per industry norm Contact Us: +917406424211 info@celestium.in

WANTED FOR Data entry job in accounts department qualification PU-Pass with`work experience or`just B.Com pass location wilson`garden siddaiah-Road Near Shantinagar bus-stand Call:9535218502 9845351200

WANTED OFFICE Assistant/ Clerk (FEMALE) Bommanahalli (Bangalore) Ph: 9980140661 email: starsilks@gmail.com

Drivers

WANTED DRIVERS for Tata intra. Salary 18,000 to 22,000 + Food + Accomodation Timings: 10am to 9pm Sunday holiday Location: Bannerghatta, Bangalore Call 8050666007/ 9148899007

Marketing & Sales

WANTED EXPERIENCED marketing executive Vinayaka digital press Offset digital packaging Doddakallasandra bangalore 9972999959

Multiple Vacancy

ಮೆ. ವಿಸ್ಡಂ ಸೆಕ್ಯೂರಿಟಿ ಸರ್ವೀಸಸ್
ನಂ. 106, 1ನೇ ಮಹಡಿ, 40 ಅಡಿ ರಸ್ತೆ, ಮಂಜುನಾಥನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು–560010.
ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳ ನೇಮಕಾತಿ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ರಾಜ್ಯಾದ್ಯಂತ ಖಾಲಿ ಇರುವ ವಿವಿಧ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಮೆ॥ ವಿಸ್ಡಮ್ ಸೆಕ್ಯೂರಿಟಿ ಸರ್ವೀಸಸ್ ವತಿಯಿಂದ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಯ ವಿವರ	ಅರ್ಹತೆ (Qualification)	ಹುದ್ದೆಗಳ ಸಂಖ್ಯೆ
1.	ಹಾರ್ಡ್‌ವೇರ್ ಕನ್ಸಲ್ಟೆಂಟ್ (ತಾಂತ್ರಿಕ)	ಬಿ.ಇ (ಐಟಿ)/ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್‌ನಲ್ಲಿ ಡಿಪ್ಲೊಮಾ, ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್ ಪ್ರಮಾಣಪತ್ರದೊಂದಿಗೆ ಕನಿಷ್ಠ 2 ವರ್ಷಗಳ ಅನುಭವ.	1
2.	ತಾಂತ್ರಿಕೇತರ ಕನ್ಸಲ್ಟೆಂಟ್ಸ್ (Non-Technical)	1) ಯಾವುದೇ ಪದವಿ ಅಥವಾ ತತ್ಸಮಾನ ಅರ್ಹತೆ. 2) ದ್ವಿತೀಯ ಪಿಯುಸಿ (12ನೇ) ಪಾಸ್, ಕಂಪ್ಯೂಟರ್ ಜ್ಞಾನ ಹೊಂದಿರಬೇಕು.	1
3.	ಫೈರ್‌ಮ್ಯಾನ್ (ಟೆಕ್)	ಫೈರ್ ಮತ್ತು ಸೇಫ್ಟಿಯಲ್ಲಿ ಡಿಪ್ಲೊಮಾ ಅಥವಾ ತತ್ಸಮಾನ ಅರ್ಹತೆ.	1
4.	ಟ್ಯಾಲಿ ಕನ್ಸಲ್ಟೆಂಟ್	ಟ್ಯಾಲಿಯೊಂದಿಗೆ ಬಿ.ಕಾಂ (B.Com)	1
5.	ಪ್ರಾಜೆಕ್ಟ್ ಅಸಿಸ್ಟೆಂಟ್ (ಯೋಜನಾ ಸಹಾಯಕ)	ಕೆಮಿಕಲ್ / ಎನ್ವಿರಾನ್ಮೆಂಟಲ್ (ಪರಿಸರ) / ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ ಅಥವಾ ಎನ್ವಿರಾನ್ಮೆಂಟಲ್ ಸೈನ್ಸ್‌ನಲ್ಲಿ ಎಂ.ಎಸ್ಸಿ. ಮೊದಲ ಶ್ರೇಣಿಯಲ್ಲಿ ಉತ್ತೀರ್ಣರಾಗಿರಬೇಕು.	56
6.	ಸೈಂಟಿಫಿಕ್ ಅಸಿಸ್ಟೆಂಟ್ (ವೈಜ್ಞಾನಿಕ ಸಹಾಯಕ)	ಕಂಪ್ಯೂಟರ್ ಜ್ಞಾನದೊಂದಿಗೆ ಬಿ.ಎಸ್ಸಿ., ಕೆಮಿಸ್ಟ್ರಿ (B.Sc., Chemistry)	25
7.	ಡಾಟಾ ಎಂಟ್ರಿ ಆಪರೇಟರ್	ದ್ವಿತೀಯ ಪಿಯುಸಿ (12ನೇ) ಪಾಸ್ ಮತ್ತು ಇಂಗ್ಲೀಷ್ ಹಾಗೂ ಕನ್ನಡ ಟೈಪಿಂಗ್ (ಸೀನಿಯರ್) ಜೊತೆಗೆ ಕಂಪ್ಯೂಟರ್ ಜ್ಞಾನ.	54
8.	ರಿಸೆಪ್ಷನಿಸ್ಟ್ (ಸ್ವಾಗತಕಾರರು)	ದ್ವಿತೀಯ ಪಿಯುಸಿ (12ನೇ) ಪಾಸ್ ಜೊತೆಗೆ ಕಂಪ್ಯೂಟರ್ ಜ್ಞಾನ.	1
9.	ಕ್ಲರ್ಕ್ (ಗುಮಾಸ್ತರು)	ಪಿಯುಸಿ ಜೊತೆಗೆ ಕಂಪ್ಯೂಟರ್ ನಿರ್ವಹಣೆ ಅಗತ್ಯ.	51
10.	ಫೀಲ್ಡ್ ಅಸಿಸ್ಟೆಂಟ್ (ಕ್ಷೇತ್ರ ಸಹಾಯಕ)	ವಿಜ್ಞಾನ ವಿಷಯದಲ್ಲಿ ಪಿಯುಸಿ / 12ನೇ ತರಗತಿ ಪಾಸ್.	48
11.	ಡ್ರೈವರ್ಸ್ (ಚಾಲಕರು)	ಎಸ್.ಎಸ್.ಎಲ್.ಸಿ (SSLC) ಪಾಸ್, ಮಾನ್ಯವಾದ ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು.	80
12.	ಪಿಯೋನ್ (ಜವಾನರು)	ಎಸ್.ಎಸ್.ಎಲ್.ಸಿ ಪಾಸ್, ಕನ್ನಡ ಓದಲು ಮತ್ತು ಬರೆಯಲು ಬರುವುದು ಕಡ್ಡಾಯ.	81
13.	ಭದ್ರತಾ ರಕ್ಷಕರು (Security Guards)	ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು.	147
		ಒಟ್ಟು	547

ಆಯ್ಕೆಪ್ರಕ್ರಿಯೆಯು ಸದರಿ ಹುದ್ದೆಗಳಿಗೆ ಅವಶ್ಯವಿರುವ ವಿದ್ಯಾರ್ಹತೆ, ಅನುಭವ ಹಾಗೂ ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮದ (ಎಸ್.ಸಿ–17%, ಎಸ್.ಟಿ–7%, ಒಬಿಸಿ–32%, ಜನರಲ್ ಮೆರಿಟ್ – 44%) ಪ್ರಕಾರ ನಡೆಯುತ್ತದೆ.
ಅರ್ಹ ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ದಿನಾಂಕ 06.12.2025 ರಿಂದ 13.12.2025 ರ ಒಳಗೆ ಎಲ್ಲಾ ವಿವರಗಳೊಂದಿಗೆ, ವಿದ್ಯಾರ್ಹತೆ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳೊಂದಿಗೆ ನಮ್ಮ ಕೇಂದ್ರ ಕಛೇರಿಯಾದ : ಮೆ॥ ವಿಸ್ಡಂ ಸೆಕ್ಯೂರಿಟಿ ಸರ್ವೀಸಸ್, ನಂ. 106, 1ನೇ ಮಹಡಿ, 40 ಅಡಿ ರಸ್ತೆ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು–560010 ಇಲ್ಲಿಗೆ ಖುದ್ದಾಗಿ ಸಲ್ಲಿಸಲು ತಿಳಿಸಿದೆ.
ಅಪೂರ್ಣ ಮಾಹಿತಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ದೂರವಾಣಿ ಸಂಖ್ಯೆ : 99452 30204, 90359 16688, 99452 422768.

ARVIND PROPERTIES
We are HIRING
JOIN OUR TEAM
Open Positions
- OFFICE MANAGER
- TEAM LEADERS
- TELE CALLERS
- SALES EXECUTIVES

Freshers /min 1 yr Exp. in Real estate sector
Salary ₹25000+ Incentives
Apply Now
99986 08666
www.arvindproperties.com

Teachers/ Professors

ACHIEVE SCHOOL, 17th Main Road, Near SLV, BDA Complex, Siddanna Layout, Banashankari Stage II, Bengaluru- 560070 Mob: 91642-22288 Urgently Requires 1.SANSKRIT- Middle & High School 2.MATHS- Middle School 3.ENGLISH- Middle School 4.LIBRARIAN 5.SOCIAL TEACHER- High School

Wanted

WANTED EXPERIENCED Dhobis for a laundry washing unit in Bannerghatta, Bangalore Salary : 18,000 to 25,000 Call: 9880266007 / 8050666007

WANTED SITE Supervisor Civil Diploma/ Engineer for a Construction/ Interiors Company Contact: 9141441444

EDUCATIONAL

General

TEACHER REQUIRED FOR PRIMARY AND HIGH SCHOOL FOR SCIENCE AND EVS contact Kenmore School Basavanagudi Jayanagar whatsapp 9901501185

DH Classifieds More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply

www.dhclassifieds.com BOOK NOW
Book your ad with us now! For more details contact:
+91 98451 14560 | +91 98862 13331 | 080-45557163/164

REAL ESTATE SELLING

Sites

Anjanapura

SALE BDA 30x40 Anjanapura 5th G-block south facing 40x60 west facing commercial site 2nd block, 9620041313, 9945373839

Airport Road

"SALE SITE 40x60 BIAAPA approved before International Airport close to Defence & Aero park Rs.5900/- P.Sft. 9845286505"

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

AVAILABLE 30X40 North Facing Site Sale, 10th Block, 100 Feet Road Near, Contact: DEVARAJ 9993959099, 9799099699.

AVAILABLE 40X60 West Facing Site Sale, 10th Block, 40 Feet Road. Contact: DEVARAJ. 9993959099, 9799099699.

SALE BSK 6th stage 4th B-block 40x60 west facing 2Cr also 40x60 south facing 6th block 2.10Cr, owners 9945373839, 9620041313

BANASHANKARI 6TH Stage 10th Block 40×60 North Facing 100ft Road Parallel Contact: 9738028011

Bannerghatta Road

AKSHAYANAGARA 3562 SQFT A KATHA 11000/- NANDANAVANA 30x40, 40x60 3500/- NISARGA LAYOUT 50x80 5000/- 9449655947

Domlur

40X61 WF SITE SALE Clear Title, Immediate Settlment Old Airport Road, KHB 1st Stage: 8310681025

Hosur Road

ANEPALYA BANGALORE Property, 3360 sq ft. next to CMP Centre off Hosur Road available for sale. Buyers call 9844349701

Hebbal

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

Intl Airport Road

EMBASSY SPRINGS 50X80, Jade Gardens 100X100, Century Eden 40X50, Hollywood Town 60X80, Supreme Estates 9632974714

Kempegowda Layout

SITE FOR SALE 40X60 East Facing BDA 40 feet Road
Very Good Location Rs 8500/- Negotiable Nada Prabhu Kempegowda Layout Near Metro Station
Contact: 6366711598

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Nagarabhavi

"NAGARBHAVI/ VISHVESHWARAIAH / KEMPEGOWDA LAYOUT 30x40,40x60 OR ANY MEASUREMENT SITES REQUIRED & AVAILABLE PREFERABLY OWNER/ ALLOTTE SITES. 9845268611"

"NAGARABHAVI DEEPA COMPLEX Sale 40x60 MPM Layout East North Corner 80% White, Immediate Registration. 9448432633"

DIRECT OWNER 20x30, 30x40 Site House Nagarbhavi BDA Complex Near Metro Station: 9620696913/ 9880781399

Nandini Layout

NANDINI LAYOUT BDA 20x30 East facing, No.19, Narasimhaswamy Layout For Sale. Contact. 9845729728.

Out-Station

PENUKONDA NEAR KIA Car-Factory, Madakasira Highway, 50X100 (4-SITES) Resi Converted, Gated Community, 400/- PSft: 8310681025

Peenya

"PLOTS FOR SALE in`Peenya 2nd Stage, DC.Conversion, East facing Adjacent Sites. 2220`Sqft & 2260`Sqft. Rs.7000/- Per Sqft. Contact: 9353057779"

Rajarajeshwari Nagar

RR.NAGAR BEML 5th Stage 6560 Sqft. West Facing, Vastu Site Sale, Suitable for Apartment Contact: 9448121223.

Sahakarnagar

SALE BDA NORTH FACING 40X60 SITE SAHAKARNAGAR NTI LAYOUT Rs. 21,000/- NEGOTIABLE CALL 9342235296 BROKERS EXCUSE

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

VIJAYNAGAR 40X60 West, 30x51 South, 35x51 North, 35x51 South, Vijaynagar Extn 30x40 House Duplex. 9448411596.

Vishweshwariah Layout

BDA SITE FOR SALE 30X40 South Facing
Very Good Location Rs 2 Cr. Negotiable Visveswaraiah Layout 8th Block
Contact: 9611577666

"30X40 NORTH FACING PRIME RESIDENTIAL BDA SITE SALE 1ST BLOCK VISHVESHWARAIAH LAYOUT [GENUINE BUYERS]. 9845143579"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

"VISHVESWARAIAH 6TH-BLOCK 60ft Road 75 Squares Building on 50x80 South facing for sale. 9845500019/ 7019314962"

DIRECT OWNER 30x40 E/F VISHVESHWARAIAH LAYOUT, Near 100 feet Road, Rs.9000/- Contact: 9742681666, 9886634578

BDA SITE SALE VISHVESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

'DIRECT OWNER' 20x30 N/F Vishveshwaraiah Layout 2nd Block, Near Kommagatta, Full Developed Area: 8496030007/ 8310885235

Uttarahalli

30X40 A, E-KHATA DONE. N/W CORNER 2 SITES FOR SALE MARUTI LAYOUT SUBRAMANYAPURA UTTARAHALLI 9738643338

Vidyaranyapura

INDEPENDENT 60'X40' BEL 2 Block Prime Location (4 BHK Duplex) 16000/- S/F Semi Furnished :9844264852

Mysore

MYSORE MUDA Site Vijayanagara, 2nd Stage, South West Corner, 3912 Sqft, Site No. 1387, Price 13500/ Sqft Negotiable: 9845059328

House

BTM Layout

HOUSE & Site For sale 30×40,40×60 East&North Facing For Sale BTM 2nd Stage.Rathnakar: 9945377119/ 9844099557

Hoskote

NEW 4BHK Fully_Furnished, East`Facing Villa @ HOSKOTE, BMRDA, HPA Approved, 1.91 Crore.Nego, HAMSA 9886544124.

Jayanagar

JAYANAGARA 40X52 (2100sft) BDA Property For Sale Living Condition 4BHK Independent House Excellent Location Clear Title 9845341034

J P Nagar

JPNAGAR 5TH PHASE VINAYAKANAGARA OLD HOUSE (30'X40') SALE 2CRORE FETCHING RENTAL INCOME 1LAKH CALL:9448052264

Kumaraswamy Layout

KUMARSWAMY LAYOUT Near Dayananda sagar college Prime Location 40x64 East/South Corner Commercial old House Sale Call:9845069739 9380613718

Multiple Locations

WANTED / AVAILABLE PG BUILDINGS For Sale in Bangalore
(60 Paisa to 1 Rupee) with Rental Income, Price Ranging From 5Cr to 10Cr.
Contact: 9900399006

Nagarabhavi

NAGARABHAVI RENT Independent Triplex 4BHK Luxurious House Lift, 4-Car-Parks Borewell Master Bedrooms 1.1 Lakhs: 9036207777

HOUSE G+3 Floors, 15x40 SF, Shanthaveri Gopalagowdanagara, Moodalapalya, Nagarabhavi, A Katha, 98 Lakh Direct Owner 9739957911

Vijayanagar

VIJAYANAGAR KHB Allotment 35×50, South Facing, with Old House, Residential/ Semi Commercial, Opposite Indraprastha Hotel: 9845059328

PROPERTY CORNER
ಕ್ಲಾಸಿಫೈಡ್ಸ್

LAND FOR LEASE BANGALORE & MYSORE
We Are Looking Prime Commercial Land (Empty Plot) For Long-Term Lease In Top Locations Across Bangalore And Mysore.
- High footfall area
- Minimum area: 1500 sq. ft. and above
- High-visibility commercial zones
- Real estate brokers, please excuse

DIRECT OWNERS CONTACT: (11 AM TO 7 PM)
+91 7483 233 755

AVAILABLE FOR RENT
On St. Marks Road (MANANDI PLAZA), 3000 sq.ft Fully furnished Brand New office space with 60 to 70 workstations, Cabins, Lounge Area, Terrace Cafeteria. Immediate occupation Contact Owner 98450 48332

GBA LIMITS MYSORE ROAD, BIDADI.
FARM LAND PLOTS FOR SALE
Rs.750 OLD PRICE PER SQFT
Rs.649 NEW PRICE PER SQFT
NELAMANGALA Near BYLAANJANEYA TEMPLE Just 5 Minutes from TUMKUR HIGHWAY
Rs.1250 OLD PRICE PER SQFT
Rs.999 NEW PRICE PER SQFT
WITH WORLD CLASS AMENITIES.
For MORE DETAILS CALL 8880660099

CONSTRUCTION MATERIALS FOR SALE
Large quantity of used construction materials in good conditions. Such as Shuttering Plate, Jacks, Spans, Cuplock scaffolding & Machinery such as 1Bag, 2, 3&4 Bag Mixers, and Tractor Mounted 16 KVA D.G, Material hoist Electrical & Diesal 30 & 40 mts height, Cutting & Bar Bending Machines (Electrical) for sale.
Contact: 6360605636 / 8431164733

Vidyaranyapura

4-STORY HOUSE FOR SALE in Ramchandrapura, Jalahalli (Post) Bangalore 13. Size: 20X30. Built area 2700 Sqft: 1,75,00,000/- 9880450523.

Flat

Kanakapura Road

HIGH RENTAL INCOME PROPERTIES FOR SALE NEAR METRO STATIONS ON KANAKAPURA ROAD. SARAKKI HOMES: 9663676464

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Agricultural Land Converted

Nelamangala

DC CONVERTED land 10000 sqft near Nelamangala check post main road, yellow zone. Contact 9886789567.

Commercial Building

Malleshwaram

SALE OFFICE SPACE 3600Sq.ft. Furnished 4th Floor,Vishnupriya Towers, Beside Srirampura Metro Station Price: 15,000/Sq.ft. Call:9900029200

Commercial Land

J P Nagar

SALE A.EAST South Corner 8760Sqft, B.East Facing 10,890sft C.4 side Road 21,780sft PLOTS on 80 feet Main Road Near RV Engineering College J.P.NAGAR 8TH PHASE, Uttarahalli Hobli. 'A' KATHA BETTERMENT CHARGE PAID, BDA NOC, DC Conversion 9986090000/ 7259316827

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Farm House/ Land/ Resorts

Hosur

DOCTOR'S RESORT 0.67 acre, beautiful nature, next to Hosur highway, 90min from Bangalore enroute Hoggenekal falls. (3.6Cr): 9632921289

Commerical

M G Road And Around

A DESPERATE SALE:1465Sft North facing, 2 Adjacent OFFICE UNITS, with view of RACE COURSE Swiss Complex. 570Sft- 95Lac 900Sft-1.67Cr Call: 97404-15657

Vijayanagar

450-SQFT COMMERCIAL Office Space Floor Wise For Sale Opposite to Vijayanagar Metro Station Contact: 7676900174 9945569909

Industrial & Factory

Tumkur Road

SALE/ BUILT to suit 10 Acres Industrial Warehouse Land Opposite to Namaste Bangalore Hotel. 9141326819

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

MORE Classifieds Ads on Subsequent Pages

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

FOR RENT/ SALE Fully Furnished Office Old Airport Road VDB TOUCHDOWN Next to HAL Museum 7447Sqft 96 Work Stations 5 Cabins 3 Meeting Room 1 Board 1 MD Cabin 6 Carparks. No PHONE CALLS WHATS APP MESSAGE ONLY TO: 9845031550

COMMERCIAL BUILDING available for Rent 350 sqft Basment, 1st Floor -300sqft, 5th Floor 800sqft all amenities including at Goraguntepalya, Tumkur Road, Bengaluru . Mob-9448274566

COMMERCIAL BUILDING for Rent 8000 sq.ft with 40hp; I & II floor Near ABB Nelamangala Contact: 9482802330

Farm House/Land/ Resorts

10 ACRES of land with coconut plantation and fruits is available for lease at Chikkanayakanahalli, Tumkur. contact: 9902545995

House

RENT: 2BHK, Pooja Room, Semifurnished GIRINAGAR 1BHK Attached Ist Floor, Hanumanthnagar. Owner: Mobile: 78925-30410/ 94488-09902.

2 BHK House for Rent 1st Floor Margosa Road,10th Cross Malleswaram, Vegetarian Only Contact: 7259808481/ 9902309528

READY INDEPENDENT FURNISHED TWO BHK 1KM FROM MANYATA TECH PARK FOR LEASE CONTACT 9901106749

MATRIMONIAL

Grooms Wanted

Kannada

GROOM WANTED
A reputed Lingayat family from North Karnataka invites Proposal from a reputed & good family from Bengaluru, having a smart, Qualified Boy between 30 to 33 years age for their daughter aged 31 well Qualified, smart, Bengaluru girl to following e-mail ID basavarajbng111@gmail.com

Brides Wanted

Hindu

BRIDE WANTED
Hindu SC - AD 30/169, B.E. MBA well placed boy from well settled family seeks suitable bride. Caste No Bar
Contact 94486 64461

BUSINESS

Business to Business

Finance

ALL LOANS AVAILABLE @4% YEARLY INTEREST PERSONAL BUSINESS PROJECT TAKEOVER MORTGAGE MINIMUM DOCUMENTATION QUICK DISBURSEMENT MAHALAKSHMI FINANCE 9984823862

Business Offers

General

GET 20% off on Gold&Silver coins avail Loans. Contact: Greenheap. Ph :8618862730

PERSONAL

Change of Name

I, SUNIL Varghese K.P S/O Paul K.S residing at No.302, Vandana Eastwood, Haraluru Road, Somasandra Palya, HSR Layout, Bengaluru-560102. Have changed my name to Sunil Varghese vide affidavit dated 4/12/2025 before notary A.S_Narayana Reddy.

CHANGE OF NAME
I, SHEKAR VELLIA BARNABAS S/o. VELLIA BARNABAS Residing at No.46, New No.221, Sapna, 8th 'C' Main Road, Sreenidhi Layout, Vidyaranyapura, Bengaluru-560097 have changed my Name to **SHEKAR BARNABAS** vide affidavit dated: 03.12.2025 Sworn before Notary Varija C.J., Bangalore.

I, BALARAMA S/o Mallikarjuna, residing at Bhovi Galli, Tq: Chincholi, Dist: Gulbarga, Karnataka, have changed my name to Balarama Chincholi. Henceforth, I shall be known by this name.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

THE KENMORE SCHOOL
SINCE 1978
THE KENNORE SCHOOL

ADMISSIONS OPEN

Where learning inspires excellence

- Smart Classrooms
- Science & Computer Labs
- Art & Sports
- Holistic Development

SCAN FOR ADMISSION

31/1 KANAKAPURA ROAD, BASAVANAGUDI, BENGALURU - 560 004
9901501185 kenmoreschool@gmail.com

3 BHK LUXURY FLATS FOR SALE
DREAMVILLE HOME

PROJECT BY PROMAX PROPERTIES
ISO 9001:2015 CERTIFIED
TRADE MARK REGISTERED

Few Flats are Available

Ready to Move in

Amenities

- GYM
- Library
- Waking Track
- Kids Play area
- Club House
- Party Hall

SBI | ICICI Bank | AXIS BANK | HDFC BANK

BBMP APPROVED

RERA APPROVED
PRM/KA/ RERA/1251/446/PR/220622/005013

8073977742 / 9901834205
promaxdreamvillehome.com

Kothanur, Hennur Main Road Bangalore. 77

SESHADRIPURAM EDUCATIONAL TRUST
Seshadripuram Group of Institutions
Bengaluru • Mysuru • Mandya • Tumakuru

Karnataka Kreeda Poshaka Award

The President, Trustees, Principals, Staff and Students
of **Seshadripuram Group of Institutions**
heartily thank the
Department of Youth Empowerment & Sports, Government of Karnataka
for conferring on us the prestigious
Karnataka Kreeda Poshaka Award
consisting of a Citation and
Rs. 10.0 lakhs prize money.

We are also proud of our students who achieved National and International fame in sports arena and brought laurels to our Institutions.

Our Honorary General Secretary receiving the Award from Sri. Siddaramaiah, Hon'ble Chief Minister of Karnataka, on behalf of the Trust. Dr. K. Govindaraj, MLC, Sri Rizwan Arshad, MLA and Sri. R. Chethan, Commissioner, were present during the occasion.

N. R. Pandith Aradhya
President

Dr. Wooday P. Krishna
Honorary General Secretary

ರಾಜ್ಯಕ್ಕೆ ಅನ್ಯಾಯವಾದರೂ ಧ್ವನಿ ಎತ್ತಿಲ್ಲ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಸಿದ್ದರಾಮಯ್ಯ ಆರೋಪ

ಪ್ರಜಾವಾಣಿ ವಾರ್ತೆ

ಹಾಸನ: 'ಅಹಿಂದ ಸಂಘಟಿಸಿದ್ದು ನಾನು. ಭಾಗ್ಯಗಳು, ಗ್ಯಾರಂಟಿ ಯೋಜನೆಗಳನ್ನು ಮಾಡಿರುವುದು ಯಾರಿಗೆ? ಬಡವರಿಗೆ, ದಲಿತರಿಗೆ, ಹಿಂದುಳಿದವರಿಗೆ. ಅಹಿಂದಕ್ಕೆ ಎಚ್.ಡಿ. ಕುಮಾರಸ್ವಾಮಿ ಅವರದ್ದೇನು ಕೊಡುಗೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

'ಅಹಿಂದಕ್ಕೆ ಸಿದ್ದರಾಮಯ್ಯ ಕೊಡುಗೆ ಏನು' ಎಂಬ ಕುಮಾರಸ್ವಾಮಿ ಹೇಳಿಕೆಗೆ ನಗರದಲ್ಲಿ ಶನಿವಾರ ಪ್ರತಿಕ್ರಿಯಿಸಿ, 'ಅವರು ರೈತನ ಮಗನಲ್ವಾ? ಮೇಕೆದಾಟು ಯೋಜನೆಗೆ ಒಪ್ಪಿಗೆ ಕೊಡಿಸಲು ಆಗಿಲ್ಲ' ಎಂದರು.

'ಯೋಜನೆ ಕುರಿತು ಸುಪ್ರೀಂ ಕೋರ್ಟ್ ರಾಜ್ಯದ ಪರ ತೀರ್ಪು ನೀಡಿದ್ದರೂ ಕೇಂದ್ರವು ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಈ ಬಗ್ಗೆಯೂ ಕುಮಾರಸ್ವಾಮಿ ಧ್ವನಿ ಎತ್ತಿಲ್ಲ. ಇದರಿಂದ ಮಂಡ್ಯ ಜಿಲ್ಲೆಗೆ ಅನ್ಯಾಯವಾಗಿದೆ. ಜಿಲ್ಲೆಗೆ ಕುಮಾರಸ್ವಾಮಿ ಕೊಡುಗೆ ಏನು' ಎಂದು ಕೇಳಿದರು.

'ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಕೊಡುವುದಾಗಿ ಬಜೆಟ್‌ನಲ್ಲಿ ಘೋಷಿಸಿದ್ದ ನಿರ್ಮಲಾ ಸೀತಾರಾಮನ್ ಯಾವುದೇ ಅನುದಾನ ನೀಡಿಲ್ಲ. ಕೇಂದ್ರ ಸರ್ಕಾರ ಜಿಎಸ್‌ಟಿ ಕಡಿಮೆ ಮಾಡಿದ್ದರಿಂದ ರಾಜ್ಯಕ್ಕೆ ₹12 ಸಾವಿರ ಕೋಟಿ ನಷ್ಟವಾಗುತ್ತಿದೆ. ಪ್ರಸಕ್ತ ವರ್ಷ ₹ 1.20 ಲಕ್ಷ ಕೋಟಿ ತೆರಿಗೆ ಸಂಗ್ರಹಿಸುವ ಗುರಿ ಇತ್ತು. ಕೇಂದ್ರದ ನೀತಿಯಿಂದ ನಷ್ಟವಾಗಿದೆ. ಈ ಕುರಿತು ಕುಮಾರಸ್ವಾಮಿ ಏಕೆ ಮಾತನಾಡುವುದಿಲ್ಲ' ಎಂದು ಪ್ರಶ್ನಿಸಿದರು.

'ಪ್ರತಿಪಕ್ಷಗಳು ಕಾಂಗ್ರೆಸ್ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಕುರಿತು ಮಾತನಾಡುತ್ತಿವೆ. ಅದಕ್ಕೆ ನಾವು ತಯಾರಿದ್ದು, ಯಾವುದೇ ಸವಾಲು ಎದುರಿಸುತ್ತೇವೆ. ನಮ್ಮ ಸರ್ಕಾರ ತೆರೆದ ಪುಸ್ತಕವಾಗಿದ್ದು, ಪಾರದರ್ಶಕ ಆಡಳಿತ ನೀಡುತ್ತಿದೆ' ಎಂದರು.

'ನವೆಂಬರ್, ಡಿಸೆಂಬರ್ ಕ್ರಾಂತಿ ಎಂಬುದಿಲ್ಲ. ಕಾಂಗ್ರೆಸ್ ಹೈಕಮಾಂಡ್ ತೀರ್ಪಿಗೆ ನಾನು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬದ್ಧರಾಗಿದ್ದೇವೆ' ಎಂದು ಪುನರುಚ್ಚರಿಸಿದರು.

ಸಿ.ಎಂ ಪ್ರಶ್ನೆಗಳು

- ಅಹಿಂದಕ್ಕೆ ಎಚ್‌ಡಿಕೆ ಕೊಡುಗೆ ಏನು?
- ಅವರು ರೈತನ ಮಗನಲ್ವಾ?

ಹಾಸನದಲ್ಲಿ ಶನಿವಾರ ನಡೆದ ಸರ್ಕಾರಿ ಸೇವೆ ಸಮರ್ಪಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಜನರತ್ತ ಕೈಬೀಸಿದರು. ಸಂಸದ ಶ್ರೇಯಸ್ ಪಟೇಲ್, ಶಾಸಕ ಕೆ.ಎಂ. ಶಿವಲಿಂಗೇಗೌಡ ಇದ್ದರು

'ನೋಟಿಸ್ ಮೂಲಕ ಹೆದರಿಸಲು ಸಾಧ್ಯವಿಲ್ಲ'

ಹಾಸನ: 'ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ನನಗೆ, ಡಿ.ಕೆ. ಸುರೇಶ್ ಅವರಿಗೆ ನೋಟಿಸ್ ಕೊಡುತ್ತಾರೆ ಎಂಬ ನಿರೀಕ್ಷೆ ಮಾಡಿರಲಿಲ್ಲ. ಹಾಗೆ ನನ್ನನ್ನು ಹೆದರಿಸಬಹುದೆಂದುಕೊಂಡಿದ್ದರೆ, ಅದು ತಪ್ಪು. ನಮ್ಮ ಪಕ್ಷಕ್ಕೆ ದುಡ್ಡು ಕೊಡದೇ ಇನ್ಯಾರಿಗೆ ಕೊಡೋಣ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ನಮ್ಮನ್ನು ಅವರು ಕರೆಯಬಾರದಿತ್ತು. ಎಲ್ಲ ವಿವರವನ್ನು ಜಾರಿ ನಿರ್ದೇಶನಾಲಯಕ್ಕೆ ಕೊಟ್ಟಿದ್ದು, ಆರೋಪಪಟ್ಟಿಯಲ್ಲಿ ನಮ್ಮ ಹೆಸರು ಸೇರಿಸಿಲ್ಲ. ನಮ್ಮ ಹೇಳಿಕೆ ತೆಗೆದುಕೊಂಡು ಬಿಟ್ಟಿದ್ದರು' ಎಂದರು. 'ಈ ಹಂತದಲ್ಲಿ ಏಕೆ ಕರೆದರೆಂದು ಗೊತ್ತಿಲ್ಲ. ನಾನು ಹೋಗುತ್ತೇನೆ. ನೋಟಿಸ್ ಓದಿದ್ದೇನೆ. ನಮ್ಮ ವಕೀಲರೊಂದಿಗೆ ಮಾತನಾಡಿ ಉತ್ತರ ಕೊಡುತ್ತೇನೆ' ಎಂದರು.

ಕಾರ್ಟಿಯರ್ ವಾಚ್ ವಿಚಾರದ ಕುರಿತು ಪ್ರಸ್ತಾಪಿಸಿದ ಅವರು, 'ಯಾರು ಯಾವ ಶರ್ಟ್, ವಾಚ್, ಕನ್ನಡಕ ಹಾಕ್ತಾರೆ? ಆ ಬಗ್ಗೆ ಯಾರನ್ನೂ ಪ್ರಶ್ನಿಸಲ್ಲ. ಇವೆಲ್ಲ ವೈಯಕ್ತಿಕ ವಿಚಾರಗಳು. ₹1 ಸಾವಿರದ ಅಥವಾ ₹ 10 ಲಕ್ಷದ ವಾಚು ಕಟ್ಟುತ್ತೇನೆ ಎಂಬುದು ನನಗೆ ಬಿಟ್ಟದ್ದು. ಅದು ನನ್ನ ಆಸ್ತಿ, ನನ್ನ ಕಷ್ಟ, ನನ್ನ ಶ್ರಮ' ಎಂದರು.

'ಏನೋ ಪಾಪ, ವಿರೋಧ ಪಕ್ಷದವರು ಗೊತ್ತಿಲ್ಲದೇ ಮಾತನಾಡಿದ್ದಾರೆ ಅಷ್ಟೇ. ಛಲವಾದಿ ನಾರಾಯಣಸ್ವಾಮಿಗೆ ಇನ್ನೂ ಅನುಭವ ಇಲ್ಲ. ಎಲೆಕ್ಷನ್‌ಗೆ ನಿಂತಿದ್ದಾರಾ? ಇಲ್ಲ. ನನ್ನ ವ್ಯವಹಾರ ನನಗೆ ಗೊತ್ತಿದೆ. ನನ್ನ ವ್ಯವಹಾರ, ಬದುಕು ಏನೆಂಬುದು ಬಿಜೆಪಿಯ ಶೇ 90ರಷ್ಟು ಜನರಿಗೆ ಗೊತ್ತಿದೆ' ಎಂದರು.

ಸಿದ್ದರಾಮಯ್ಯ ಕೆಳಗಿಳಿಸಿದರೆ ಹೋರಾಟ; ಸಿದ್ದಣ್ಣ ತೇಜಿ

ಹುಬ್ಬಳ್ಳಿ: 'ಸಿದ್ದರಾಮಯ್ಯ ಅವರು ಐದು ವರ್ಷ ಮುಖ್ಯಮಂತ್ರಿಯಾಗಿ ಇರುವರು ಎಂಬ ಕಾರಣಕ್ಕೆ ಅಹಿಂದ ಸಮುದಾಯಗಳು ಕಾಂಗ್ರೆಸ್ ಬೆಂಬಲಿಸಿವೆ. ಅವರನ್ನು ಹುದ್ದೆಯಿಂದ ಕೆಳಗಿಳಿಸಲು ತೀರ್ಮಾನಿಸಿದರೆ, ರಾಜ್ಯದಾದ್ಯಂತ ಉಗ್ರ ಹೋರಾಟ ಮಾಡುತ್ತೇವೆ' ಎಂದು ಅಹಿಂದ ಕರ್ನಾಟಕ ಸಂಘಟನೆಯ ಸಂಚಾಲಕ ಸಿದ್ದಣ್ಣ ತೇಜಿ ಹೇಳಿದರು.

'ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್ ಅವರ ಮುಖ ನೋಡಿ ಕಾಂಗ್ರೆಸ್‌ಗೆ ಮತ ಹಾಕಿಲ್ಲ. ಸಿದ್ದರಾಮಯ್ಯ ಅವರ ಮೇಲೆ ಯಾವುದೇ ಹಗರಣಗಳ ಆರೋಪವಿಲ್ಲ. ಹೀಗಾಗಿ ಅವರ ಮೇಲೆ ನಂಬಿಕೆಯಿಟ್ಟು ಕಾಂಗ್ರೆಸ್‌ಗೆ ಮತ ಹಾಕಿದ್ದೇವೆ' ಎಂದರು.

ಚಿಟಿಕೆ ಸುದ್ದಿ

ಅರಣ್ಯ ಭೂಮಿ ಹಕ್ಕು ನೀಡಲು ಒತ್ತಾಯ

ಕಾರವಾರ: 'ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಹಕ್ಕುಪತ್ರ ವಿತರಿಸಲು ಉನ್ನತಮಟ್ಟದ ಸಭೆ ನಡೆಸಲು ಸರ್ಕಾರ ನಿರ್ಧರಿಸಬೇಕು' ಎಂದು ಒತ್ತಾಯಿಸಿ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ನೇತೃತ್ವದಲ್ಲಿ ಶನಿವಾರ ಸಮಾವೇಶ ನಡೆಯಿತು.

'ಬೆಳಗಾವಿಯಲ್ಲಿ ನಡೆಯುವ ಚಳಿಗಾಲ ಅಧಿವೇಶನದಲ್ಲಿ ಈ ಕುರಿತು ಚರ್ಚೆಯಾಗಬೇಕು' ಎಂದು ಆಗ್ರಹಿಸಲಾಯಿತು.

ಸಾವಿರಾರು ಜನರು ನಗರದ ಮುಖ್ಯರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಬುಡಕಟ್ಟು ಸಮುದಾಯಗಳ ಜನರು, ಅರಣ್ಯವಾಸಿಗಳು ಪಾಲ್ಗೊಂಡಿದ್ದರು. ಇಲ್ಲಿನ ಮಾಲಾದೇವಿ ಮೈದಾನದಲ್ಲಿ ನಡೆದ ಸಮಾವೇಶದಲ್ಲಿ 6 ಸಾವಿರಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು.

₹ 37.57 ಲಕ್ಷ ಮೌಲ್ಯದ ಹತ್ತಿ ಕಳವು

ಯಾದಗಿರಿ: ಹತ್ತಿ ಮಿಲ್ ಮಾಲೀಕನಿಗೆ ವಂಚಿಸಿ ₹37.57 ಲಕ್ಷ ಮೌಲ್ಯದ 246 ಕ್ವಿಂಟಲ್ ಹತ್ತಿ ಕಳವು ಮಾಡಿದ ಆರೋಪದಡಿ ಲಾರಿ ಮಾಲೀಕ, ಚಾಲಕ ಸೇರಿ ಮೂವರ ವಿರುದ್ಧ ಸೈದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ರಾಂಪುರ ಗ್ರಾಮದ ಮುಂದಕಶ್ ಬಾಬು ಕಾಟನ್ ಜಿನ್ನಿಂಗ್ ಮಿಲ್ ಮಾಲೀಕ ಸಿದ್ದಾರ್ಥ ಬಾಬು ಅವರು ಮಹಾರಾಷ್ಟ್ರದ ಲಾರಿ ಮಾಲೀಕ ಪಿಂಜಾರಿ ಜುನೆದ್, ಮಧ್ಯಪ್ರದೇಶದ ಲಾರಿ ಚಾಲಕ ಜುಬೇರ್ ಖಾನ್ ಹಾಗೂ ಟ್ರಾನ್ಸ್‌ಪೋರ್ಟ್ ಮಾಲೀಕ ಕಮಲ ಕಿಶೋರ್ ವಿರುದ್ಧ ದೂರು ನೀಡಿದ್ದಾರೆ.

ಸಿದ್ದಾರ್ಥ ಅವರು ರಾಜಸ್ಥಾನದ ಕಾಂಚನ್ ಇಂಡಿಯಾ ಲಿಮಿಟೆಡ್‌ಗೆ ತಲುಪಿಸುವಂತೆ ₹37.57 ಲಕ್ಷ ಮೌಲ್ಯದ 246 ಕ್ವಿಂಟಲ್ ಹತ್ತಿಯನ್ನು ಜುಬೇರ್ ಚಲಾಯಿಸುತ್ತಿದ್ದ ಲಾರಿಯಲ್ಲಿ ತುಂಬಿದ್ದರು. ಚಾಲಕ ಸೇರಿ ಮೂವರು ಅದನ್ನು ಕಳ್ಳತನ ಮಾಡಿದ್ದಾರೆ. ಅವರ ಫೋನ್ ನಂಬರ್‌ಗಳು ಸಹ ಸ್ವಿಚ್ ಆಫ್ ಆಗಿವೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಐಐಎಸ್‌ಸಿ: ಸದಸ್ಯರ ಆಯ್ಕೆ

ಕುಮಾರ ನಾಯಕ

ತೇಜಸ್ವಿ ಸೂರ್ಯ

ನವದೆಹಲಿ: ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪರಿಷತ್‌ನ ಸದಸ್ಯರಾಗಿ ರಾಯಚೂರು ಸಂಸದ ಜಿ.ಕುಮಾರ ನಾಯಕ ಹಾಗೂ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಚುನಾಯಿತರಾಗಿದ್ದಾರೆ.

ಸಂಸ್ಥೆಗೆ ಲೋಕಸಭೆಯಿಂದ ಇಬ್ಬರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ಸಲ ನಡೆದ ಚುನಾವಣೆಯಲ್ಲಿ ಇವರಿಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರು. ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸುದ್ದಿ 2 ನಿಮಿಷ

ಅಧಿಕಾರ ಹಂಚಿಕೆಯ ಕರಾರು ಆಗಿಲ್ಲ: ಬಸವರಾಜ ರಾಯರಡ್ಡಿ

ಶಿರಸಿ: 'ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ ನಡುವೆ ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆಯ ಕರಾರು ಆಗಿಲ್ಲ. ಇನ್ನೂ ಎರಡುವರೆ ವರ್ಷ ಸಿದ್ದರಾಮಯ್ಯ ಅವರೇ ಶಾಸಕಾಂಗ ನಾಯಕರಾಗಿ, ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ' ಎಂದು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಸ್ಪಷ್ಟಪಡಿಸಿದರು.

'ಅಭಿಮಾನಿಗಳು ಡಿ.ಕೆ.ಶಿವಕುಮಾರ ಮುಖ್ಯಮಂತ್ರಿಯಾಗಲಿ ಎಂದು ಹೇಳಿದ್ದು ಹೊರತುಪಡಿಸಿದರೆ, ಸ್ವತಃ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವುದಾಗಿ ಹೇಳಿಲ್ಲ. ಎರಡುವರೆ ವರ್ಷ ನಾನು, ಎರಡುವರೆ ವರ್ಷ ನೀನು ಎಂಬ ಕರಾರು ಕೂಡ ಮಾಡಿಕೊಂಡಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಶಾಸಕಾಂಗ ನಾಯಕರನ್ನು ತೀರ್ಮಾನ ಮಾಡುವವರು ಶಾಸಕರು ಮತ್ತು ಪಕ್ಷದ ವರಿಷ್ಠರು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.



'ಡಿ.ಕೆ.ಶಿವಕುಮಾರ ಮುಖ್ಯಮಂತ್ರಿ ಆಗಬಾರದು ಎಂದು ಯಾರೂ ಹೇಳಿಲ್ಲ. ಸಮಯ ಬಂದಾಗ ಆಗುತ್ತಾರೆ. ಸಿ.ಎಂ ಬದಲಾವಣೆ ಅಧ್ಯಾಯ ಮುಗಿದಿದ್ದು, ಡಿ.8ರಿಂದ ಅಧಿವೇಶನ ಪ್ರಾರಂಭಗೊಳ್ಳುತ್ತದೆ. ಉಳಿದಿರುವ ಅವಧಿಯಲ್ಲಿ ರಾಜ್ಯಕ್ಕೆ ಒಳ್ಳೆಯ ಆಡಳಿತ ನೀಡುವುದಕ್ಕೆ ಸಿಎಂ ಸಿದ್ದರಾಮಯ್ಯ ತೀರ್ಮಾನಿಸುವರು' ಎಂದರು.

'ವಾಚ್ ಮೂಲ ತಿಳಿಯಲು ಐ.ಟಿ ತನಿಖೆ ನಡೆಸಲಿ'

ಕಲಬುರಗಿ: 'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಕಟ್ಟಿರುವ ದುಬಾರಿ ವಾಚ್ ಯಾವ ಮೂಲದಿಂದ ಬಂದಿದೆ ಎಂದು ಬಿಜೆಪಿಯವರು ವೃಥಾ ಆರೋಪ ಮಾಡುವ ಬದಲು ಕೇಂದ್ರ ಸರ್ಕಾರದ ಐಟಿ ಇಲಾಖೆಯಿಂದ ಏಕೆ ತನಿಖೆ ನಡೆಸಬಾರದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿಯವರಿಗೆ ಯಾರು ಏನು ಊಟ ಮಾಡಿದರು, ಯಾವ ಬಟ್ಟೆ ಹಾಕಿಕೊಂಡರು, ಯಾವ ಕಂಪನಿ ವಾಚ್ ಧರಿಸಿದರು ಎಂಬುದೇ ಮುಖ್ಯವಾದಂತಿದೆ. ಪ್ರಧಾನಿ ನರೇಂದ್ರ ಮೋದಿಯವರು ₹10 ಲಕ್ಷ ಮೊತ್ತದ ತಮ್ಮದೇ ಹೆಸರನ್ನು ಅಳವಡಿಸಿದ್ದ ಸೂಟ್ ಹಾಕಿಕೊಂಡಾಗ ಅದರ ಆದಾಯ ಮೂಲ ಎಲ್ಲಿಯದು ಎಂಬುದನ್ನು ಏಕೆ ಪ್ರಶ್ನಿಸಲಿಲ್ಲ' ಎಂದು ತಿರುಗೇಟು ನೀಡಿದರು.

'ಈ ವಾಚ್ ಧರಿಸಿದವರು ಆಸ್ತಿವಂತರಿದ್ದಾರೆ. ತಮಗಿಷ್ಟವಾದ ವಾಚ್ ಹಾಕಿಕೊಂಡಿರಬಹುದು. ಬಿಜೆಪಿಯವರಿಗೇಕೆ ಇಷ್ಟು ಅಸಹನೆ' ಎಂದು ಹರಿಹಾಯ್ದರು.

'ತಮ್ಮದು ಸಾಂಸ್ಕೃತಿಕ ಸಂಘಟನೆ ಎಂದು ನೂರು ವರ್ಷಗಳ ಇತಿಹಾಸ ಹೊಂದಿರುವ ಆರ್‌ಎಸ್‌ಎಸ್ ಹೇಳುತ್ತಿದ್ದು, ಗುರುದಕ್ಷಿಣೆ ಹೆಸರಲ್ಲಿ ಸಾವಿರಾರು ಕೋಟಿ ರೂಪಾಯಿ ನಿಧಿ ಸಂಗ್ರಹಿಸಿದೆ. ಅದಕ್ಕೆ ಆದಾಯ ತೆರಿಗೆ ಕಟ್ಟಿದ್ದಾರೆಯೇ? ಅಮೆರಿಕದಲ್ಲಿ ತನ್ನ ಪರ ಲಾಬಿ ಮಾಡಲು ಆರ್‌ಎಸ್‌ಎಸ್ 330 ಸಾವಿರ ಡಾಲರ್ ವೆಚ್ಚ ಮಾಡಿದೆ. ಇದಕ್ಕೆ ಹಣ ಎಲ್ಲಿಂದ ಬಂತು? ಇವುಗಳಿಗೆ ಮೊದಲು ಬಿಜೆಪಿಯವರು ಉತ್ತರ ಹೇಳಲಿ' ಎಂದರು.



ಬೈಲಹೊಂಗಲ ಕೇಂದ್ರವಾಗಿ ಹೊಸ ಜಿಲ್ಲೆ ರಚಿಸುವಂತೆ ಆಗ್ರಹಿಸಿ ಶನಿವಾರ 'ಬೈಲಹೊಂಗಲ ಬಂದ್' ಮಾಡಲಾಯಿತು ಪ್ರಜಾವಾಣಿ ಚಿತ್ರ

ಸರ್ಕಾರಿ ಶಾಲಾ ಅವ್ಯವಹಾರವೂ ಬಯಲಿಗೆ: ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ಪ್ರತಿ ಇಲಾಖೆಯಲ್ಲೂ ಅಕ್ರಮ, ಅವ್ಯವಹಾರ ತುಂಬಿ ತುಳುಕುತ್ತಿದೆ. ಭ್ರಷ್ಟಾಚಾರ ತಾಂಡವವಾಡು ತ್ತಿದೆ ಎಂಬ ಉಪಲೋಕಾಯುಕ್ತರ ಹೇಳಿಕೆ ಸಾಬೀತು ಮಾಡುವಂತೆ ಸರ್ಕಾರಿ ಶಾಲೆಗಳ ಸಾಮಗ್ರಿ ಖರೀದಿ ಅವ್ಯವಹಾರ ಬಯಲಿಗೆ ಬಂದಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

ಆರ್‌.ಅಶೋಕ

'ಎಕ್ಸ್'ನಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, 'ಸರ್ಕಾರಿ ಶಾಲೆಗಳಿಗೆ ಖರೀದಿ ಮಾಡಿರುವ ಲ್ಯಾಪ್‌ಟಾಪ್, ಎಲ್‌ಇಡಿ ಪ್ರೊಜೆಕ್ಟರ್, ಯುಪಿಎಸ್ ಸೇರಿದಂತೆ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ನಿಯಮ ಉಲ್ಲಂಘನೆ ಮಾಡಿ, ಅವ್ಯವಹಾರ ನಡೆಸಿರುವ ವಿಷಯ ಲೋಕಾಯುಕ್ತ ದಾಳಿಯಲ್ಲಿ ಬಯಲಾಗಿದೆ. ಸಿದ್ದರಾಮಯ್ಯ ಸಂಪುಟ 'ಆಲಿ ಬಾಬಾ–34 ಕಳ್ಳರ ಕಥೆ'ಯಾಗಿದೆ' ಎಂದು ದೂರಿದ್ದಾರೆ.

'ದಿನಕ್ಕೊಂದು ಹಗರಣ, ದಿನಕ್ಕೊಂದು ಅಕ್ರಮ, ದಿನಕ್ಕೊಂದು ಅವ್ಯವಹಾರ. ದಿನಬೆಳಗಾದರೆ ಇವನ್ನೆಲ್ಲ ನೋಡಿ ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕದ ಜನರು ರೋಸಿ ಹೋಗಿದ್ದಾರೆ. ರಾಜೀನಾಮೆ ಕೊಟ್ಟು ರಾಜ್ಯವನ್ನು ಉಳಿಸಲಿ' ಎಂದು ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರದ ಭ್ರಷ್ಟಾಚಾರಕ್ಕೆ ಶಿಕ್ಷಣ ಕ್ಷೇತ್ರ ಹಾಳಾಗುತ್ತಿದೆ. ಇದರ ಪರಿಣಾಮವನ್ನು ಶಾಲಾ ಮಕ್ಕಳು ಎದುರಿಸುವಂತಾಗಿದೆ. ಸದನದಲ್ಲೂ ಈ ಬಗ್ಗೆ ಚರ್ಚೆ ಮಾಡುತ್ತೇವೆ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಮನುವಾದಿಯಾದ ಕುಮಾರಸ್ವಾಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಜತೆ ಮೈತ್ರಿ ಮಾಡಿಕೊಂಡ ನಂತರ ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಮನುವಾದಿಯಾಗಿದ್ದಾರೆ. ಹಾಗಾಗಿ ಭಗವದ್ಗೀತೆಯನ್ನು ಪಠ್ಯಕ್ಕೆ ಸೇರಿಸಬೇಕು ಎಂದು ಸಲಹೆ ನೀಡಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ವಿಧಾನಸೌಧದ ಮುಂಭಾಗ ಇರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಅವರು ಮಾತನಾಡಿದರು. 'ಭಗವದ್ಗೀತೆಯನ್ನು ಪಠ್ಯಕ್ಕೆ ಸೇರಿಸಬೇಕೆಂದು ಕುಮಾರಸ್ವಾಮಿ ಕೇಂದ್ರ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದಾರೆ. ಇದು ಬಿಜೆಪಿ–ಜೆಡಿಎಸ್ ಮೈತ್ರಿಯ ಫಲ' ಎಂದರು.

'ಹಿಂದೂ ಧರ್ಮದ ಸಾಮಾಜಿಕ ವ್ಯವಸ್ಥೆಗೆ ಅಂಬೇಡ್ಕರ್ ಅವರು ರೋಸಿ ಹೋಗಿದ್ದರು. ಅವರ ಕೊನೆಯ ದಿನಗಳಲ್ಲಿ ಬೌದ್ಧ ಧರ್ಮ ಸ್ವೀಕರಿಸಿದ್ದರು. ಹುಟ್ಟುವಾಗ ಹಿಂದೂವಾಗಿದ್ದೆ, ಸಾಯುವಾಗ ಹಿಂದೂವಾಗಿ ಸಾಯಲಾರೆ. ಹಿಂದೂ ಧರ್ಮದ ಸುಧಾರಣೆಗೆ ಪ್ರಯತ್ನಪಟ್ಟು, ಅದು ಸಾಧ್ಯವಾಗದೆ ಬೌದ್ಧ ಧರ್ಮ ಸ್ವೀಕರಿಸಿದ್ದಾಗಿ ಹೇಳಿದ್ದರು' ಎಂದು ಸಿದ್ದರಾಮಯ್ಯ ಸ್ಮರಿಸಿದರು.

'ಮನುವಾದ–ಭಗವದ್ಗೀತೆಗೆ ಸಂಬಂಧವೇನು'

ಮಂಡ್ಯ: 'ಮನುವಾದಕ್ಕೂ ಭಗವದ್ಗೀತೆಗೂ ಏನು ಸಂಬಂಧ? ಹಾಗಾದರೆ, ಸಿದ್ದರಾಮಯ್ಯ ಅವರು ಮಕ್ಕಳಿಗೆ ಏನು ಬೋಧಿಸಲು ಹೇಳುತ್ತಾರೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

'ಭಗವದ್ಗೀತೆಯನ್ನು ಶಾಲಾ ಪಠ್ಯದಲ್ಲಿ ಸೇರಿಸುವಂತೆ ಹೇಳಿದ್ದೇನೆ. ಮತಾಂತರ ಮಾಡಲಿಕ್ಕೆ ಈ ಹೇಳಿಕೆ ನೀಡಿಲ್ಲ. ಮಕ್ಕಳ ಬದುಕು, ಸಮಾಜವನ್ನು ಸಿದ್ದರಾಮಯ್ಯ ನೇತೃತ್ವದಲ್ಲಿ ಯಾವ ರೀತಿ ಬೆಳೆಸುತ್ತಿದ್ದಾರೆಂಬುದನ್ನು ಗಮನಿಸಿ ಹೇಳಿದ್ದೇನೆ' ಎಂದು ಪ್ರತಿಪಾದಿಸಿದರು.

'ಸಮಾಜದಲ್ಲಿ ಘರ್ಷಣೆ ಉಂಟು ಮಾಡಬೇಕೆಂಬುದಷ್ಟೆ ಸಿದ್ದರಾಮಯ್ಯ ತಲೆಯಲ್ಲಿದೆ. 10 ವರ್ಷಗಳಿಂದ ಅಹಿಂದ ಹೆಸರಿನಲ್ಲಿ ಮಜಾ ಮಾಡಿದ್ದಾರೆ. ಈ ಸಮುದಾಯಗಳಿಗೆ ಅವರ ಕೊಡುಗೆ ಏನು? ಎಷ್ಟು ಬಗೆಹರಿಸಿದ್ದಾರೆ? ಅಹಿಂದದಲ್ಲಿರುವ ಅನೇಕ ಸಣ್ಣ ಜಾತಿಗಳಿಗೆ ಅವರ ಕೊಡುಗೆ ಏನು? ಯಾರಿಗೆ ಆದ್ಯತೆ ಕೊಟ್ಟಿದ್ದಾರೆ' ಎಂದು ಪ್ರಶ್ನಿಸಿದರು.

'ಸಂಬಂಧಿಕರ ಜೊತೆ ರಕ್ತದೋಕುಳಿ ನಡೆಸಬಾರದು ಎಂದು ಭಗವದ್ಗೀತೆ ಹೇಳುತ್ತದೆ. ಈ ಸರ್ಕಾರ ಕಾನೂನುಬಾಹಿರ ಚಟುವಟಿಕೆ ಬೆಂಬಲಿಸುತ್ತಿರುವುದರಿಂದಲೇ ಭಗವದ್ಗೀತೆ ಈ ಸಂದರ್ಭದಲ್ಲಿ ಅವಶ್ಯವೆಂದು ಪ್ರತಿಪಾದಿಸಿದ್ದೇನೆ' ಎಂದರು. 'ಇಲ್ಲಸಲ್ಲದ್ದನ್ನು ಆರೋಪಿಸಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಪ್ರಯತ್ನ ನಡೆದಿದೆ' ಎಂಬ ಶಾಸಕ ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿ, 'ಸಿದ್ದರಾಮಯ್ಯ ನಡೆದು ಬಂದ ಹಿನ್ನೆಲೆ ಏನು? ಈ ಮಟ್ಟಕ್ಕೆ ಏರಲು ಯಾರು ಕಾರಣ? ಅವರಿಗೆ ಯಾರಿಂದ ತೊಂದರೆಯಾಗಿದೆ? ಅವೆಲ್ಲದ್ದರ ಬಗ್ಗೆ ಅವರು ಹೇಳಬೇಕು. ನಿನ್ನೆ ಮೊನ್ನೆಯಷ್ಟೇ ಬಂದಿರುವ ಯತೀಂದ್ರ ಅವರಿಗೆ ಇತಿಹಾಸ ಗೊತ್ತಿಲ್ಲ' ಎಂದರು.

'ಸಿದ್ಧಾಂತ ಗಾಳಿಗೆ ತೂರಿದ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಕಾರವಾರ/ಶಿರಸಿ: '90ರ ದಶಕದ ಸಿದ್ದರಾಮಯ್ಯ ಅಧಿಕಾರ ಉಳಿಸಿಕೊಳ್ಳುವುದಕ್ಕಾಗಿ ಈಗ ಸಂಪೂರ್ಣ ಬದಲಾಗಿದ್ದಾರೆ. ಸಿದ್ಧಾಂತಗಳನ್ನೆಲ್ಲ ಗಾಳಿಗೆ ತೂರಿದ್ದಾರೆ' ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಕಾರವಾರದಲ್ಲಿ ಆರೋಪಿಸಿದರು.

'ನಾನು, ಸಿದ್ದರಾಮಯ್ಯ ಒಂದು ಕಾಲದಲ್ಲಿ ಒಟ್ಟಿಗೆ ಇದ್ದವರು. ಆಗಿನ ಸಮಯಕ್ಕಿಂತ ಈಗ ಅವರು ಭಿನ್ನವಾಗಿದ್ದಾರೆ. ಸಂಪೂರ್ಣ ಬಹುಮತ ಸಿಕ್ಕರೂ ಜನಪರ ಆಡಳಿತ ನೀಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ಇದೇ ಕಾರಣಕ್ಕೆ ಜನರು ಭ್ರಮ ನಿರಸನಗೊಂಡಿದ್ದಾರೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ತಾತ್ಕಾಲಿಕ ಕದನ ವಿರಾಮ: 'ಚಳಿಗಾಲ ಅಧಿವೇಶನ ಬಂದ ಕಾರಣ ಮುಖ್ಯಮಂತ್ರಿ ಕುರ್ಚಿ ಕದನ ತಾತ್ಕಾಲಿಕ ವಿರಾಮ ಸ್ಥಿತಿ ತಲುಪಿದೆ. ಅಧಿವೇಶನದ ಬಳಿಕ ಇದು ಜೋರಾಗಲಿದೆ' ಎಂದು ಸಂಸದ ಜಗದೀಶ ಶೆಟ್ಟರ್ ಶಿರಸಿಯಲ್ಲಿ ಹೇಳಿದರು.

'ಅನುದಾನ ಬೇಕಾದರೆ ಒಳ್ಳೆಯ ನಾಟಿ ಕೋಳಿ ಅಡುಗೆ ಮಾಡುವುದಾಗಿ ಹೇಳಿ, ಸಿಎಂ ಸಿದ್ದರಾಮಯ್ಯ ವಿಧಾನಸಭಾ ಅಧಿವೇಶನ ಬಿಟ್ಟು ಬೇಕಾದರೂ ಬರುತ್ತಾರೆ' ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಟೀಕಿಸಿದರು.

ಆದಿಚುಂಚನಗಿರಿ ಶ್ರೀಗಳ ಕ್ಷಮೆ ಕೇಳಿದ ಎಚ್‌ಡಿಕೆ

ಮಂಡ್ಯ: 'ಇತ್ತೀಚೆಗೆ ನಡೆದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನಾನು ನೀಡಿದ್ದ ಹೇಳಿಕೆಯಿಂದ ಆದಿಚುಂಚನಗಿರಿಯ ನಿರ್ಮಲಾನಂದನಾಥ ಶ್ರೀಗಳಿಗೆ ನೋವಾಗಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಮಂಡ್ಯದ ವಿ.ಸಿ. ಫಾರಂನಲ್ಲಿ ಶನಿವಾರ ಕೃಷಿ ಮೇಳದ ಕಾರ್ಯಕ್ರಮದಲ್ಲಿ ಮಾತನಾಡಿ, 'ಅಗೌರವವಾಗಬಾರದು ಎಂಬ ಕಾರಣಕ್ಕೆ ಶ್ರೀಗಳನ್ನು ಬಳಸಿಕೊಳ್ಳಬಾರದು ಎಂದಿದ್ದೆ. ಸಮಾಜದ ಗೌರವ ಉಳಿಸಲಿಕ್ಕೆಂದೇ ಬಾಲಗಂಗಾಧರನಾಥ ಸ್ವಾಮೀಜಿ ಬೀದಿಗೆ ಬಂದವರು. ದೇವೇಗೌಡರು ಸಿಎಂ ಆಗಲಿ ಎಂಬುದು ಅವರ ಮನಸ್ಸಿನಲ್ಲಿತ್ತು. ನನ್ನನ್ನು ಕಂಡರೂ ಅವರಿಗೆ ತುಂಬಾ ವಾತ್ಸಲ್ಯವಿತ್ತು' ಎಂದರು.

ಖರೀದಿ ಕೇಂದ್ರ ತೆರೆಯಿರಿ: 'ನಮ್ಮ ಕಾಲದಲ್ಲಿ ಹಣ ಬಿಡುಗಡೆಯಾದ ಕಾಮಗಾರಿಗೆ ಟೇಪ್ ಕಟ್ ಮಾಡಲು ಸಿಎಂ ಹಾಸನಕ್ಕೆ ಹೋಗಿದ್ದಾರೆ. ಸರ್ಕಾರ ಜನರ ನಂಬಿಕೆಯನ್ನು ಉಳಿಸಿಕೊಂಡಿಲ್ಲ. ಕೇಂದ್ರ ಸರ್ಕಾರವನ್ನು ರಾಜಕೀಯಕ್ಕಾಗಿ ಟೀಕಿಸುತ್ತಿದ್ದಾರೆ. ಬೆಂಬಲ ಬೆಲೆ ನಿಗದಿ ಸಮಸ್ಯೆಯನ್ನು ರಾಜ್ಯ ಸರ್ಕಾರ ಬಗೆಹರಿಸಿಕೊಳ್ಳಲಿ. ಮೊದಲು ಖರೀದಿ ಕೇಂದ್ರ ತೆರೆದು ನಂತರ ಕೇಂದ್ರವನ್ನು ಕೇಳಿ. ಬೆಂಬಲ ಬೆಲೆಯನ್ನು ಕಾರ್ಯರೂಪಕ್ಕೆ ತರುವುದು ರಾಜ್ಯದ ಕರ್ತವ್ಯ' ಎಂದರು.

'ಸಿಎಂ, ಡಿಸಿಎಂ ಎಷ್ಟು ಲಕ್ಷ ಬೆಲೆಯ ವಾಚ್ ಕಟ್ಟಿದ್ದಾರೆಂಬುದು ಮುಖ್ಯವಲ್ಲ, ಹೇಗೆ ಖರೀದಿಸಿದರೆಂಬುದು ಮುಖ್ಯ. ಅವರ ದುಡಿಮೆ ದುಡ್ಡಿನಲ್ಲಿ ಖರೀದಿಸಿದ್ದಾರಾ ಹೇಗೆ ಎಂಬುದು ಮುಖ್ಯ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮಂಡ್ಯದ ವಿ.ಸಿ.ಫಾರಂನಲ್ಲಿ ಶನಿವಾರ ಹಳ್ಳಿಕಾರ್ ತಳಿಯ ಜೋಡೆತ್ತುಗಳನ್ನು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಮತ್ತು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ವೀಕ್ಷಿಸಿದರು. ಮಾಜಿ ಸಚಿವ ಸಿ.ಎಸ್‌.ಪುಟ್ಟರಾಜು ಇದ್ದಾರೆ

ಬೈಲಹೊಂಗಲ ಬಂದ್ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಬೆಳಗಾವಿ ಜಿಲ್ಲೆಯ ವಿಭಜಿಸಿ ಬೈಲಹೊಂಗಲ ಕೇಂದ್ರವಾಗಿ ಹೊಸ ಜಿಲ್ಲೆ ರಚಿಸುವಂತೆ ಆಗ್ರಹಿಸಿ, ಜಿಲ್ಲಾ ಹೋರಾಟ ಸಮಿತಿ, ಕನ್ನಡಪರ ಸಂಘಟನೆಗಳು, ರೈತ ಸಂಘಟನೆಗಳು ಶನಿವಾರ ಕರೆ ನೀಡಿದ್ದ 'ಬೈಲಹೊಂಗಲ ಬಂದ್'ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಇಲ್ಲಿನ ಕೇಂದ್ರ ಬಸ್ ನಿಲ್ದಾಣ ಪ್ರಯಾಣಿಕರಿಲ್ಲದೇ ಬಿಕೋ ಎನ್ನುತ್ತಿತ್ತು. ಶಾಲೆ, ಕಾಲೇಜು, ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು. ಮಾರುಕಟ್ಟೆಗಳಲ್ಲಿ ಜನ ಸಂಚಾರ ವಿರಳವಾಗಿತ್ತು. ವಕೀಲರು ನ್ಯಾಯಾಲಯ ಕಲಾಪಗಳಿಂದ ದೂರ ಉಳಿದರು. ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಲಾಯಿತು.

'ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಮಟೂರ ಬಾಳಪ್ಪ ಅವರಂಥ ಮಹಾನ್ ವ್ಯಕ್ತಿಗಳು ಹುಟ್ಟಿದ ನೆಲವಿದು. ಬ್ರಿಟಿಷ್ ಆಳ್ವಿಕೆ ಕಾಲದಿಂದಲೂ ಉಪ ವಿಭಾಗವಾಗಿದೆ. ಹೊಸ ಜಿಲ್ಲೆ ರಚಿಸುವಂತೆ ದಶಕಗಳಿಂದಲೂ ಹೋರಾಟ ಮುಂದುವರಿದಿದೆ. ಸರ್ಕಾರ ಕಿವಿಗೊಟ್ಟಿಲ್ಲ' ಎಂದು ಹೊಸೂರ ಮಡಿವಾಳೇಶ್ವರ ಮಠದ ಗಂಗಾಧರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ, ಜಿಲ್ಲಾ ಹೋರಾಟ ಸಮಿತಿ ಅಧ್ಯಕ್ಷ ಶಿವರಂಜನ ಬೋಳನ್ನವರ, ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಶಂಕರ ಮಾಡಲಗಿ ಅನೇಕರು ನೇತೃತ್ವ ವಹಿಸಿದ್ದರು.

ಬಜರಂಗದಳ–ಕಾಂಗ್ರೆಸ್ ಗುಂಪುಗಳ ನಡುವೆ ಘರ್ಷಣೆ

ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ

ಪ್ರಜಾವಾಣಿ ವಾರ್ತೆ

ಕಡೂರು (ಚಿಕ್ಕಮಗಳೂರು): ತಾಲ್ಲೂಕಿನ ಸಖರಾಯಪಟ್ಟಣ ಗ್ರಾಮದಲ್ಲಿ ಬಜರಂಗದಳ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಗುಂಪಿನ ನಡುವೆ ನಡೆದ ಘರ್ಷಣೆಯಲ್ಲಿ ಗ್ರಾಮ ಪಂಚಾಯಿತಿ ಕಾಂಗ್ರೆಸ್ ಬೆಂಬಲಿತ ಸದಸ್ಯ ಗಣೇಶ ಗೌಡ (38) ಮೃತಪಟ್ಟಿದ್ದಾರೆ.

ಗಣೇಶಗೌಡ

ಗಣೇಶ ಗೌಡ ಮತ್ತು ಬಜರಂಗ ದಳ ಕಾರ್ಯಕರ್ತ ಸಂಜಯ್ ನಡುವೆ ಶುಕ್ರವಾರ ಸಂಜೆ ಜಗಳ ಆರಂಭವಾಗಿ ಹೊಡೆದಾಟ ನಡೆದಿತ್ತು. ಬಳಿಕ ಮದ್ಯದ ಅಂಗಡಿ ಬಳಿ ಸಂಜಯ್ ಮತ್ತು ಸ್ನೇಹಿತರು ಗಣೇಶ ಗೌಡ ಅವರ ಮೇಲೆ ಹಲ್ಲೆ ನಡೆಸಿದ್ದರು.

ಸಖರಾಯಪಟ್ಟಣಕ್ಕೆ ಹೊಂದಿಕೊಂಡಂತೆ ಇರುವ ಕಲ್ಮರಡಿ ಮಠದ ಬಳಿ ಕಾರ್‌ನಲ್ಲಿ ಬಂದ ಗಣೇಶ ಗೌಡ ತಂಡದ ಮೇಲೆ ಸಂಜಯ್ ಮತ್ತು ಸ್ನೇಹಿತರು ಕಲ್ಲು ತೂರಾಟ ನಡೆಸಿದ್ದರು. ಈ ಸಂದರ್ಭದಲ್ಲಿ ಗಣೇಶ ಗೌಡ ಅವರ ಜತೆಗಿದ್ದವರು ಓಡಿದ್ದಾರೆ. ಒಬ್ಬರೇ ಇದ್ದ ಗಣೇಶ ಗೌಡ ಅವರ ಮೇಲೆ ಮತ್ತೊಂದು ಗುಂಪಿನವರು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ತಲೆಗೆ ಪೆಟ್ಟಾಗಿದ್ದರಿಂದ ಅವರು ಮೃತಪಟ್ಟರು.

ಶನಿವಾರ ಬೆಳಿಗ್ಗೆ ಶವವನ್ನು ಸಖರಾಯಪಟ್ಟಣಕ್ಕೆ ತಂದಾಗ ಕಾಂಗ್ರೆಸ್ ಕಾರ್ಯಕರ್ತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಬಜರಂಗದಳ ಮತ್ತು ಬಿಜೆಪಿ ವಿರುದ್ಧ ಘೋಷಣೆ ಕೂಗಿ ಹತ್ಯೆ ನಡೆಸಿದವರನ್ನು ಬಂಧಿಸುವಂತೆ ಆಗ್ರಹಿಸಿದರು.

ಶಾಸಕ ಎಚ್.ಡಿ. ತಮ್ಮಯ್ಯ, ಮುಖಂಡರಾದ ಬಿ.ಎಲ್. ಶಂಕರ್ ಮತ್ತು ಮಹಡಿಮನೆ ಸತೀಶ್ ಕಾರ್ಯಕರ್ತರನ್ನು ಸಮಾಧಾನಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಎಚ್.ಡಿ. ತಮ್ಮಯ್ಯ, 'ಐವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ಮತ್ತು ನಾನು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ. ಈ ಪ್ರಕರಣದ ಹಿಂದೆ ಎಷ್ಟೇ ಪ್ರಭಾವಿಗಳಿದ್ದರೂ ಬಂಧಿಸುವಂತೆ ತಿಳಿಸಿದ್ದೇವೆ. ಗಣೇಶಗೌಡ ಅವರ ಏಳಿಗೆ ಸಹಿಸದ ಎದುರಾಳಿಗಳು ಈ ಕೃತ್ಯ ನಡೆಸಿದ್ದಾರೆ' ಎಂದರು.

ತನಿಖೆಗೆ ಸೂಚನೆ: ಜಾರ್ಜ್

'ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ ಘಟನೆ ಅತೀವ ನೋವು ತಂದಿದೆ. ಕಟ್ಟುನಿಟ್ಟಿನ ತನಿಖೆ ನಡೆಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ಸೂಚನೆ ನೀಡಿದ್ದೇನೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

'ಶಾಂತಿಯುತವಾಗಿ ದತ್ತ ಜಯಂತಿಗೆ ಎಲ್ಲರೂ ಶ್ರಮ ವಹಿಸಿದ್ದಾರೆ. ಬಳಿಕ ಈ ಘಟನೆ ನಡೆದಿರುವುದು ಬೇಸರ ತಂದಿದೆ. ಗಣೇಶ್‌ಗೌಡ ಹತ್ಯೆ ಪಕ್ಷಕ್ಕೂ ನಷ್ಟ ತಂದಿದೆ' ಎಂದರು.

ಚಿಕ್ಕಮಗಳೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ ಕುರಿತು ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿರುವೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಇಬ್ಬರಿಗೆ ಜೈಲ್ ಗಾರ್ಡ್

ಘರ್ಷಣೆಯಲ್ಲಿ ಗಾಯಗೊಂಡಿರುವ ಮತ್ತೊಂದು ಗುಂಪಿನ ಸಂಜಯ್ ಮತ್ತು ನಿತೀನ್ ಕೂಡ ಚಿಕ್ಕಮಗಳೂರಿನ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗಣೇಶ್‌ಗೌಡ ಹತ್ಯೆ ಪ್ರಕರಣದಲ್ಲಿ ಇಬ್ಬರಿಗೂ ಜೈಲ್ ಗಾರ್ಡ್(ಕಾವಲಿಗೆ ಪೊಲೀಸರ ನಿಯೋಜನೆ) ಹಾಕಿದ್ದಾರೆ. ಸಖರಾಯಪಟ್ಟಣದಲ್ಲಿ ಬಿಗುವಿನ ವಾತಾವರಣ ಇರುವುದರಿಂದ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

'ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ. ಆಸ್ಪತ್ರೆಯಲ್ಲಿರುವ ಇಬ್ಬರಿಗೆ ಜೈಲ್ ಗಾರ್ಡ್ ಹಾಕಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ತಿಳಿಸಿದರು.

ಶಾಸಕ ಕೊತ್ತೂರು ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪರಿಶಿಷ್ಟ ಜಾತಿಗೆ ಮೀಸಲಾದ ಮುಳಬಾಗಿಲು ಕ್ಷೇತ್ರಕ್ಕೆ 2013ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಆಯ್ಕೆಯಾಗಿದ್ದಾರೆ' ಎಂದು ಆರೋಪಿಸಿ ದಾಖಲಾಗಿದ್ದ ಎಫ್‌ಐಆರ್ ಪ್ರಶ್ನಿಸಿ ಅಂದಿನ ಶಾಸಕ ಜಿ.ಮಂಜುನಾಥ್ (ಕೊತ್ತೂರು ಮಂಜುನಾಥ್) ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಕೊತ್ತೂರು ಮಂಜುನಾಥ್

ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಅಲೋಕ್ ಅರಾಧೆ ಅವರ ಪೀಠವು, 'ಅರ್ಜಿದಾರರು ರಿಟ್ ಮೇಲ್ಮನವಿ ಬಾಕಿ ಇದೆ ಎಂಬ ನೆಪದಲ್ಲಿ ಮಧ್ಯಂತರ ತಡೆಯಾಜ್ಞೆ ಪಡೆಯುವ ಮೂಲಕ ಕಾನೂನು ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿತು.

ಪ್ರಕರಣವೇನು: ಜಿ.ಮಂಜುನಾಥ್ 2013ರಲ್ಲಿ ಮುಳಬಾಗಿಲು ಮೀಸಲು ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದರು. ಚುನಾವಣಾ ಆಯೋಗಕ್ಕೆ ಸಲ್ಲಿಸಲಾದ ಪ್ರಮಾಣ ಪತ್ರದಲ್ಲಿ, 'ನಾನು ಬುಡಗ ಜಂಗಮ ಜಾತಿಗೆ ಸೇರಿದ್ದೇನೆ' ಎಂದು ಸಾರಿಕೊಂಡಿದ್ದರು. ಜೆಡಿಎಸ್‌ನ ಪರಾಜಿತ ಅಭ್ಯರ್ಥಿ ಮುನಿನಂಜಪ್ಪ ಇವರ ಜಾತಿ ಪ್ರಮಾಣದ ಸಿಂಧುತ್ವ ಪ್ರಶ್ನಿಸಿದ್ದರು. ಈ ಪ್ರಕರಣ ತಹಶೀಲ್ದಾರ್, ಜಿಲ್ಲಾಧಿಕಾರಿ, ಸಿವಿಲ್ ನ್ಯಾಯಾಲಯ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಒಳಪಟ್ಟಿತ್ತು. ಅಂತಿಮವಾಗಿ ಮಂಜುನಾಥ್ ಆಯ್ಕೆಯನ್ನು ಹೈಕೋರ್ಟ್ 2018ರ ಏಪ್ರಿಲ್‌ನಲ್ಲಿ ಅಸಿಂಧುಗೊಳಿಸಿ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಮಂಜುನಾಥ್ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು. ಈ ಮೇಲ್ಮನವಿ ವಜಾಗೊಳಿಸಿದ್ದ ಸುಪ್ರೀಂ ಕೋರ್ಟ್, ಮಂಜುನಾಥ್ ಅವರ ಜಾತಿ ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿಗೆ ನಿರ್ದೇಶಿಸಿತ್ತು. 'ಒಂದು ವೇಳೆ ಜಾತಿ ಪರಿಶೀಲನಾ ಸಮಿತಿಯ ನಿರ್ಣಯದ ಬಗ್ಗೆ ನಿಮಗೇನಾದರೂ ಆಕ್ಷೇಪಣೆ ಉದ್ಭವಿಸಿದರೆ ಪುನಃ ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಬಹುದು' ಎಂದು ಮಂಜುನಾಥ್‌ಗೆ ಸ್ವಾತಂತ್ರ್ಯ ನೀಡಿತ್ತು.

ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಈ ಕುರಿತು ವಿಚಾರಣೆ ನಡೆಸಿದ್ದ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು 2021ರ ಅಕ್ಟೋಬರ್ 27ರಂದು ತನ್ನ ವರದಿ ಸಲ್ಲಿಸಿತ್ತು. ಈ ವರದಿಯಲ್ಲಿ, 'ಜಿ.ಮಂಜುನಾಥ್ ಬುಡಗ ಜಂಗಮ ಜಾತಿಗೆ ಸೇರಿಲ್ಲ. ಬೈರಾಗಿ ಜಾತಿಗೆ ಸೇರಿದವರು' ಎಂದು ತಿಳಿಸಲಾಗಿತ್ತು.

ಈ ವರದಿಯನ್ನು ಆಕ್ಷೇಪಿಸಿ ಮಂಜುನಾಥ್ ಹೈಕೋರ್ಟ್‌ನಲ್ಲಿ ಪುನಃ ರಿಟ್ ಅರ್ಜಿ ಸಲ್ಲಿಸಿದ್ದರು. ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಆಯ್ಕೆಯಾಗಿದ್ದ ಜಿ.ಮಂಜುನಾಥ್ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು. ಆ ಬಳಿಕ ಮುಳಬಾಗಿಲು ಠಾಣೆಯಲ್ಲಿ ಮಂಜುನಾಥ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಈ ಎಫ್‌ಐಆರ್ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿತ್ತು. ಪ್ರಸ್ತುತ ಕೊತ್ತೂರು ಕೋಲಾರ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿದ್ದಾರೆ.

ಚಿಟಿಕೆ ಸುದ್ದಿ

ಸಾಮೂಹಿಕ ವಿವಾಹ ಫೆ. 26ಕ್ಕೆ

ಬೆಂಗಳೂರು: ಶ್ರೀ ಬನಶಂಕರಿ ಸಾಮೂಹಿಕ ವಿವಾಹ ವೇದಿಕೆಯಿಂದ 2026ರ ಫೆಬ್ರುವರಿ 26ರಂದು ಬನಶಂಕರಿ ದೇವಿ ದೇವಸ್ಥಾನದ ಆವರಣದಲ್ಲಿ 27ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ಆಯೋಜಿಸಲಾಗಿದೆ.

ವೇದಿಕೆ ವ್ಯವಸ್ಥಾಪಕರಾದ ಎ.ಎಚ್. ಬಸವರಾಜು, ಆರ್. ದಾಮೋದರ್ ನಾಯ್ಡು, '26 ವರ್ಷದಿಂದ 1,591 ಉಚಿತ ಸಾಮೂಹಿಕ ವಿವಾಹಗಳನ್ನು ನೆರವೇರಿಸಲಾಗಿದೆ. ಜಾತಿ, ಮತ, ಬೇಧವಿಲ್ಲದೇ ಎಲ್ಲ ಸಮುದಾಯದವರಿಗೆ ಒಂದೇ ಮದುವೆ ಮಂಟಪದಲ್ಲಿ ವಿವಾಹ ಮಹೋತ್ಸವ ಹಮ್ಮಿಕೊಳ್ಳಲಾಗುತ್ತಿದೆ' ಎಂದರು.

ವಧು ವರರಿಗೆ ಹಿಂದೂ ಸಂಪ್ರದಾಯದಂತೆ ಬಟ್ಟೆ, ಬಾಸಿಂಗ, ಕಂಕಣ ದಾರ, ಹೂವಿನ ಹಾರ, ಮಾಂಗಲ್ಯ, ಕಾಲುಂಗುರ, ಪೇಟ ನೀಡಲಾಗುತ್ತದೆ. ಊಟದ ವ್ಯವಸ್ಥೆ ಇರಲಿದೆ. 2026ರ ಫೆ. 15ರೊಳಗೆ ನೋಂದಣಿ ಮಾಡಿಕೊಳ್ಳಬೇಕು ಎಂದರು.

ಮಾಹಿತಿಗೆ: 98450 61887.

ಕಲಾತ್ಮಕ ಧಾರಾವಾಹಿಗೆ ಅರ್ಜಿ

ಬೆಂಗಳೂರು: ಬೆಂಗಳೂರು ದೂರದರ್ಶನ ಕೇಂದ್ರ ನಿರ್ಮಿಸಲಿರುವ ಕಲಾತ್ಮಕ ಧಾರಾವಾಹಿ ನಿರ್ದೇಶನ ಮಾಡಲು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಚಲನಚಿತ್ರ ನಿರ್ದೇಶಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು ಎಂದು ಆಕಾಶವಾಣಿ ಹಾಗೂ ದೂರದರ್ಶನದ ದಕ್ಷಿಣ ವಲಯದ ಉಪ ಮಹಾನಿರ್ದೇಶಕ ಭಾಗ್ಯವಾನ್ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಡಿಸೆಂಬರ್ 14 ಕಡೆ ದಿನ. ನಿರ್ದೇಶಕರು, ಧಾರಾವಾಹಿ ವಿಭಾಗ. ದೂರದರ್ಶನ ಕೇಂದ್ರ. ಜೆ.ಸಿ. ನಗರ, ಬೆಂಗಳೂರು – 560006 ಇಲ್ಲಿಗೆ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದು. ಇಲ್ಲವಾದಲ್ಲಿ ddchandanaserial@gmail.com ಈ ಮೇಲ್ ಮೂಲಕವೂ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹೇಳಿದ್ದಾರೆ.

ರಾಜ್ಯಮಟ್ಟದ ಸಮಾವೇಶ ಇಂದು

ಬೆಂಗಳೂರು: ಆರ್ಯ ಈಡಿಗ ವಧು-ವರರ ರಾಜ್ಯಮಟ್ಟದ ಸಮಾವೇಶವನ್ನು ಶೇಷಾದ್ರಿಪುರಂನಲ್ಲಿರುವ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಆವರಣದಲ್ಲಿ ಡಿ.7ರ ಭಾನುವಾರ ಬೆಳಿಗ್ಗೆ 11.30ಕ್ಕೆ ಆಯೋಜಿಸಲಾಗಿದೆ.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ಹಾಗೂ ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘದ ಸಹಯೋಗದೊಂದಿಗೆ ನಡೆಯುವ ಸಮಾವೇಶದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ವಹಿಸುವರು. ನೋಂದಾಯಿತ ಕುಟುಂಬದವರು, ಸಂಬಂಧಿಕರು, ವಧು ವರರು ಸಮಾವೇಶದಲ್ಲಿ ಭಾಗಿಯಾಗಬಹುದು ಎಂದು ಪ್ರಧಾನ ಕಾರ್ಯದರ್ಶಿ ಎಚ್.ಟಿ.ಮೋಹನ್ ದಾಸ್ ತಿಳಿಸಿದ್ದಾರೆ.

'ಬಿಜೆಪಿ 40 ಸ್ಥಾನಕ್ಕೆ ತೃಪ್ತಿಪಡಬೇಕು'

ಶಿರಸಿ: 'ಬಿ.ಎಸ್.ಯಡಿಯೂರಪ್ಪ ಹಾಗೂ ಅವರ ಕುಟುಂಬವನ್ನು ಖುಷಿಪಡಿಸಲು ಕೇಂದ್ರ ಬಿಜೆಪಿ ನಾಯಕರು ಕೆಲಸ ಮಾಡುತ್ತಿದ್ದಾರೆ. ಇವರಿಬ್ಬರೂ ಜೀರೋ ಎಂಬುದು ಯಾವಾಗ ಜ್ಞಾನೋದಯ ಆಗುತ್ತದೆಯೋ ಗೊತ್ತಿಲ್ಲ. ಯಡಿಯೂರಪ್ಪ ಹಾಗೂ ವಿಜಯೇಂದ್ರ ನೇತೃತ್ವದಲ್ಲಿ ಚುನಾವಣೆ ಎದುರಿಸಿದರೆ 40 ಸ್ಥಾನಕ್ಕೆ ತೃಪ್ತಿಪಡಬೇಕು' ಎಂದು ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ರಸ್ತೆಗೆ 6 ತಿಂಗಳಲ್ಲಿ ₹4,808 ಕೋಟಿ ವೆಚ್ಚ

2026ರ ಮೇ ಅಂತ್ಯಕ್ಕೆ 2,008 ಕಿ.ಮೀ ರಸ್ತೆ ಅಭಿವೃದ್ಧಿ: ತುಷಾರ್ ಗಿರಿನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ 2026ರ ಮೇ ಅಂತ್ಯಕ್ಕೆ ಎರಡು ಸಾವಿರಕ್ಕೂ ಹೆಚ್ಚು ಕಿ.ಮೀ ಉದ್ದದ ರಸ್ತೆಗಳು ಅತ್ಯುನ್ನತ ದರ್ಜೆಯಲ್ಲಿ ಅಭಿವೃದ್ಧಿಯಾಗಲಿವೆ.

ವೈಟ್ ಟಾಪಿಂಗ್, ಡಾಂಬರೀಕರಣ, ಹೈಡೆನ್ಸಿಟಿ ಕಾರಿಡಾರ್, ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ₹4 ಸಾವಿರಕ್ಕೂ ಹೆಚ್ಚು ಹಣ ವ್ಯಯಿಸಲಾಗುತ್ತಿದೆ. ಈ ಕಾಮಗಾರಿಗಳೆಲ್ಲ 2026ರ ಮೇ ಅಂತ್ಯಕ್ಕೆ ಮುಗಿಯಲಿವೆ ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

₹1,700 ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ಮಾರ್ಚ್‌ನೊಳಗೆ 157.39 ಕಿ.ಮೀ ರಸ್ತೆ ವೈಟ್ ಟಾಪಿಂಗ್ ಆಗಲಿದೆ. ₹694 ಕೋಟಿ ವೆಚ್ಚದಲ್ಲಿ 392.39 ಕಿ.ಮೀ ರಸ್ತೆಯನ್ನು 2026ರ ಜನವರಿ ಅಂತ್ಯಕ್ಕೆ ಡಾಂಬರೀಕರಣ ಮಾಡಲಾಗುತ್ತಿದೆ. ₹273 ಕೋಟಿ ವೆಚ್ಚದ 78.98 ಕಿ.ಮೀ ಹೈಡೆನ್ಸಿಟಿ ಕಾರಿಡಾರ್ ಕಾಮಗಾರಿಯೂ 2026 ಜನವರಿ ಅಂತ್ಯಕ್ಕೆ ಮುಗಿಯಲಿದೆ ಎಂದರು. 701.12 ಕಿ.ಮೀ ಉದ್ದದ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಿಗೆ ಬಿಟುಮಿನಸ್ ಕಾಂಕ್ರೀಟ್, ಚರಂಡಿ ಹೂಳು ತೆಗೆಯುವುದು, ಶೋಲ್ಡರ್ ಡ್ರೈನ್ ನಿರ್ಮಾಣ, ಪಾದಚಾರಿ ಮಾರ್ಗ ದುರಸ್ತಿ ಕಾಮಗಾರಿಗಳನ್ನು ₹1,241 ಕೋಟಿ ವೆಚ್ಚದಲ್ಲಿ 2026ರ ಮೇ ಅಂತ್ಯಕ್ಕೆ ಮುಗಿಸಲಾಗುವುದು ಎಂದು ತಿಳಿಸಿದರು.

678.93 ಕಿ.ಮೀ ಉದ್ದ ವಾರ್ಡ್ ರಸ್ತೆಗಳಿಗೆ ಬಿಟುಮಿನಸ್ ಕಾಂಕ್ರೀಟ್, ಚರಂಡಿ ಹೂಳು ತೆಗೆಯುವುದು, ಶೋಲ್ಡರ್ ಡ್ರೈನ್ ನಿರ್ಮಾಣ, ಪಾದಚಾರಿ ಮಾರ್ಗ ದುರಸ್ತಿ ಕಾಮಗಾರಿಗಳನ್ನು ₹900 ಕೋಟಿ ವೆಚ್ಚದಲ್ಲಿ 2026ರ ಮೇ ಅಂತ್ಯಕ್ಕೆ ಮುಗಿಸಲಾಗುವುದು ಎಂದರು.

ಎಂ.ಜಿ. ರಸ್ತೆಗೆ ವೈಟ್‌ಟಾಪಿಂಗ್ ಇಲ್ಲ: ಅತಿ ಹೆಚ್ಚು ವಾಹನ ಸಂಚಾರವಿರುವ ಎಂ.ಜಿ.ರಸ್ತೆಯನ್ನು ವೈಟ್‌ಟಾಪಿಂಗ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದಕ್ಕೆ ತೀರ್ಮಾನಿಸಲಾಗಿತ್ತು. ಆದರೆ, ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಸಂಚಾರ ಪೊಲೀಸರು ಅವಕಾಶ ನೀಡುತ್ತಿಲ್ಲ. ಹೀಗಾಗಿ, ಡಾಂಬರೀಕರಣ ಮಾಡುವುದಕ್ಕೆ ಚಿಂತನೆ ನಡೆಸಲಾಗಿದೆ ಎಂದು ತುಷಾರ್ ಗಿರಿನಾಥ್ ಹೇಳಿದರು.

157.39 ಕಿ.ಮೀ ರಸ್ತೆಗೆ ವೈಟ್ ಟಾಪಿಂಗ್ | **392.39** ಕಿ.ಮೀ ರಸ್ತೆಗೆ ಡಾಂಬರೀಕರಣ | **78.98** ಕಿ.ಮೀ ಹೈಡೆನ್ಸಿಟಿ ಕಾರಿಡಾರ್ ಅಭಿವೃದ್ಧಿ

701.12 ಕಿ.ಮೀ ಮುಖ್ಯ–ಉಪ ಮುಖ್ಯ ರಸ್ತೆಗಳಿಗೆ ಬಿಟುಮಿನಸ್ ಕಾಂಕ್ರೀಟ್ | **678.93** ಕಿ.ಮೀ ವಾರ್ಡ್ ರಸ್ತೆಗಳಿಗೆ ಬಿಟುಮಿನಸ್ ಕಾಂಕ್ರೀಟ್

ನಗರದಲ್ಲಿ 10 ಖಾತಾ ಸೇವಾ ಕೇಂದ್ರ

ಇ-ಖಾತಾ, ಹೊಸ ಖಾತಾ, ಬಿ ಖಾತಾದಿಂದ ಎ ಖಾತಾಗೆ ಅರ್ಜಿ ಸಲ್ಲಿಸಲು ಪಾಸ್‌ಪೋರ್ಟ್ ಸೇವಾ ಕೇಂದ್ರದ ಮಾದರಿಯಲ್ಲಿ ನಗರದಲ್ಲಿ 10 ಖಾತಾ ಸೇವಾ ಕೇಂದ್ರ ಆರಂಭಿಸಲಾಗುವುದು ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ತಿಳಿಸಿದರು.

ಜಿಬಿಎ ವ್ಯಾಪ್ತಿಯ ಐದೂ ನಗರ ಪಾಲಿಕೆ ವ್ಯಾಪ್ತಿಯ 10 ವಲಯದಲ್ಲಿ ತಲಾ ಒಂದು ಖಾತಾ ಸೇವಾ ಕೇಂದ್ರ ಆರಂಭಿಸಲಾಗುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸೇವಾ ಕೇಂದ್ರದಲ್ಲಿ ಇ- ಖಾತಾ ಅರ್ಜಿ ಸಲ್ಲಿಕೆ, ಹೊಸ ಖಾತಾ ಅರ್ಜಿ ಹಾಗೂ ಬಿ ಖಾತಾ ಆಸ್ತಿಗೆ ಎ ಖಾತಾ ಪಡೆಯುವುದಕ್ಕೆ ಅರ್ಜಿ ಸಲ್ಲಿಕೆ, ಖಾತಾ ವಿತರಣೆ ಸಂಬಂಧಿಸಿದಂತೆ ಎಲ್ಲ ಕಾರ್ಯಗಳನ್ನು ಖಾತಾ ಸೇವಾ ಕೇಂದ್ರದಲ್ಲಿ ನೀಡಲಾಗುವುದು ಎಂದು ತಿಳಿಸಿದರು.

ಬೆಂಗಳೂರು ಒನ್ ಕೇಂದ್ರ ಹಾಗೂ ಒಂದು ಸಾವಿರಕ್ಕೂ ಅಧಿಕ ಖಾಸಗಿ ವ್ಯಕ್ತಿಗಳು ಇ-ಖಾತಾಗೆ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ಅದರೊಂದಿಗೆ ಸ್ವಯಂ ಪ್ರೇರಿತರಾಗಿ ಆಸ್ತಿ ಮಾಲೀಕರೇ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆದರೂ, ಈವರೆಗೆ 8.21 ಲಕ್ಷ ಆಸ್ತಿ ಮಾಲೀಕರು ಅರ್ಜಿ ಸಲ್ಲಿಸಿ, 8.16 ಲಕ್ಷ ಆಸ್ತಿ ಮಾಲೀಕರು ಖಾತಾ ಪಡೆದುಕೊಂಡಿದ್ದಾರೆ. ಇನ್ನೂ ಸುಮಾರು 10 ಲಕ್ಷ ಮಾಲೀಕರು ಅರ್ಜಿ ಹಾಕಲು ಮುಂದಾಗಿಲ್ಲ. ಸೇವಾ ಕೇಂದ್ರ ಮೂರು ತಿಂಗಳಲ್ಲಿ ಆರಂಭವಾಗಲಿದೆ ಎಂದರು.

ಆಸ್ತಿ ಮಾಲೀಕರ ಖಾತಾ ಅರ್ಜಿಗಳನ್ನು ಅನಗತ್ಯವಾಗಿ ತಿರಸ್ಕರಿಸುವಂತಿಲ್ಲ. ತಿರಸ್ಕರಿಸಿದ ಅರ್ಜಿಗಳನ್ನು, 25 ಜನರ ಕಣ್ಗಾವಲು ತಂಡ ಮರು ಪರಿಶೀಲಿಸಲಿದೆ. ಅನಗತ್ಯವಾಗಿ ಅರ್ಜಿ ತಿರಸ್ಕರಿಸಿದರೆ, ಕಂದಾಯ ವಿಭಾಗದ ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಎ ಖಾತಾಗೆ 3 ಸಾವಿರ ಅರ್ಜಿ

ಬಿ ಖಾತಾ ಆಸ್ತಿಗಳಿಗೆ ಎ ಖಾತಾ ವಿತರಿಸುವಂತೆ ಈವರೆಗೆ 3,252 ಅರ್ಜಿಗಳು ಸಲ್ಲಿಕೆಯಾಗಿವೆ. ಇದರಲ್ಲಿ ಶೇ 98ರಷ್ಟು ಮಾಲೀಕರು ನಕ್ಷೆಯ ದಾಖಲೆ ನೀಡಿಲ್ಲ. ಜಿಬಿಎಯಿಂದ ನಕ್ಷೆ ರಚಿಸಿ, ದಾಖಲೆ ಸೃಷ್ಟಿಸಿ ಖಾತಾ ನೀಡಲಾಗುವುದು ಎಂದು ಹೇಳಿದರು. ₹1,500 ಕೋಟಿ: ಪ್ರೀಮಿಯಂ ಎಫ್‌ಎಆರ್ ವಿರುದ್ಧದ ಪ್ರಕರಣ ನ್ಯಾಯಾಲಯದಲ್ಲಿ ವಜಾಗೊಂಡಿದೆ. ಹೀಗಾಗಿ, ಅದರ ಅನುಷ್ಠಾನದಿಂದ, ವಾರ್ಷಿಕ ₹2,000 ಕೋಟಿ ಸಂಗ್ರಹವಾಗುವ ನಿರೀಕ್ಷೆ ಇದೆ ಎಂದು ಮುನೀಶ್ ಮೌದ್ಗಿಲ್ ಹೇಳಿದರು.

ಆಸ್ತಿ ಸಂಗ್ರಹ (₹ಕೋಟಿಗಳಲ್ಲಿ)

ನಗರ ಪಾಲಿಕೆ	ಬೇಡಿಕೆ	ಸಂಗ್ರಹ	ಬಾಕಿ
ಕೇಂದ್ರ ನಗರ ಪಾಲಿಕೆ	1,273.77	679.92	593.84
ಪೂರ್ವ ನಗರ ಪಾಲಿಕೆ	1,673.45	952.07	721.37
ಉತ್ತರ ನಗರ ಪಾಲಿಕೆ	1,242.33	605.22	637.10
ದಕ್ಷಿಣ ನಗರ ಪಾಲಿಕೆ	1,228.84	680.41	548.43
ಪಶ್ಚಿಮ ನಗರ ಪಾಲಿಕೆ	1,281.58	699.01	582.56
ಒಟ್ಟು	6,700.00	3,616.66	3,083.33

ಗುಂಡಿಮುಕ್ತ ಇಲ್ಲ: ತುಷಾರ್ ಗಿರಿನಾಥ್

'ನಗರದಲ್ಲಿ ಗುಂಡಿಮುಕ್ತ ರಸ್ತೆಯ ಭರವಸೆಯನ್ನು ಸದ್ಯಕ್ಕೆ ನೀಡಲಾಗುವುದಿಲ್ಲ. ಅದಾಗಬೇಕಾದರೆ, ಕಸ ವಿಲೇವಾರಿ, ಜಲಮಂಡಳಿಯ ಕೊಳವೆ ವ್ಯವಸ್ಥೆ, ನೀರು ಗಾಲುವೆ ವ್ಯವಸ್ಥಿತವಾಗಿರಬೇಕಾಗಿದೆ. ಅದು ಸದ್ಯಕ್ಕೆ ಸಾಧ್ಯವಿಲ್ಲ' ಎಂದು ತುಷಾರ್ ಗಿರಿನಾಥ್ ಹೇಳಿದರು.

ಸಾವಿರಾರು ಕೋಟಿ ರಸ್ತೆ ಅಭಿವೃದ್ಧಿ ಹೂಡಿಕೆ ಮಾಡುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಬೆಂಗಳೂರಿನಲ್ಲಿ ರಸ್ತೆ ಗುಂಡಿ ಸಮಸ್ಯೆ ಇರುವುದಿಲ್ಲವೇ ಎಂಬ ಸುದ್ದಿಗಾರರ ಪ್ರಶ್ನೆಗೆ, 'ಆರೇಳು ವರ್ಷದಿಂದ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಅಭಿವೃದ್ಧಿ ಯಾವುದೇ ವೆಚ್ಚ ಮಾಡಿಲ್ಲ. ಇದೀಗ ವೆಚ್ಚ ಮಾಡಲಾಗುತ್ತಿದೆ' ಎಂದರು.

2025ರ ಏಪ್ರಿಲ್‌ನಿಂದ ಇಲ್ಲಿಯವರೆಗೆ, ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ 22,539 ರಸ್ತೆ ಗುಂಡಿಗಳನ್ನು ₹18 ಕೋಟಿ ವೆಚ್ಚದಲ್ಲಿ ಮುಚ್ಚಲಾಗಿದೆ. ₹45 ಕೋಟಿ ವೆಚ್ಚದಲ್ಲಿ ವಾರ್ಡ್ ರಸ್ತೆಗಳ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

'500 ಎಕರೆ ಸರ್ಕಾರಿ ಭೂಮಿ ಪ್ರಭಾವಿಗಳಿಂದ ಕಬಳಿಕೆ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿಯಲ್ಲಿ ₹12 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ 500 ಎಕರೆ ಸರ್ಕಾರಿ ಭೂಮಿಯನ್ನು ಪ್ರಭಾವಿಗಳು ಕಬಳಿಸಿದ್ದು, ಅವರ ವಿರುದ್ಧ ಕ್ರಮ ಕೈಗೊಂಡು ಭೂಮಿಯನ್ನು ವಶಕ್ಕೆ ಪಡೆದುಕೊಳ್ಳಬೇಕು ಎಂದು ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಎನ್.ಆರ್. ರಮೇಶ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಎ.ಟಿ. ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ ವರದಿಯಂತೆ ಯಶವಂತಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ 1,600 ಎಕರೆಗಳಿಗೂ ಹೆಚ್ಚು ವಿಸ್ತೀರ್ಣದ ಸರ್ಕಾರಿ ಸ್ವತ್ತುಗಳಿವೆ. ಇದರಲ್ಲಿ 500 ಎಕರೆಯನ್ನು ಕಬಳಿಸಲಾಗಿದೆ. ಈ ಬಗ್ಗೆ 8,879 ಪುಟಗಳ ದಾಖಲೆ ಸಹಿತ ದೂರು ದಾಖಲಿಸಲಾಗಿದೆ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ, ಕಂದಾಯ ಸಚಿವರು, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆದು, ಎಂಟು ಪ್ರಕರಣಗಳಲ್ಲಿ ಕಬಳಿಸಲಾಗಿರುವ ಸರ್ಕಾರಿ ಭೂಮಿಯನ್ನು ವಶಕ್ಕೆ ಪಡೆದುಕೊಳ್ಳಬೇಕು. ಕಾನೂನು ಪ್ರಕಾರ ಜಿಲ್ಲಾಧಿಕಾರಿ ಕ್ರಮ ಕೈಗೊಳ್ಳುವಂತೆ ಸೂಚಿಸಬೇಕು ಎಂದು ಮನವಿ ಮಾಡಲಾಗಿದೆ' ಎಂದರು.

'ಶಾಸಕರ ಪಕ್ಷ, ಬಿಬಿಎಂಪಿ ಮಾಜಿ ಉಪ ಮೇಯರ್ ಅವರ ಪಕ್ಷ, ಇಬ್ಬರು ಐಎಎಸ್, ಐದು ಕೆಎಎಸ್ ಅಧಿಕಾರಿಗಳು ಈ ಪ್ರಕರಣದಲ್ಲಿ ಭಾಗಿಯಾಗಿದ್ದು, ಭ್ರಷ್ಟಾಚಾರ, ನಕಲಿ ದಾಖಲೆ ತಯಾರಿಕೆ, ವಂಚನೆ, ಸರ್ಕಾರಿ ಜಮೀನು ಕಬಳಿಕೆ ಸಹಕಾರ, ಅಧಿಕಾರ ದುರುಪಯೋಗ ಆರೋಪಗಳ ಪ್ರಕರಣ ದಾಖಲಿಸಬೇಕು ಕೋರಲಾಗಿದೆ' ಎಂದರು. 'ದೇವ ಮಾಚೋಹಳ್ಳಿ, ಯಲಚಗುಪ್ಪೆ ರಾಂಪುರ, ಗಾಣಕಲ್ಲು, ಯಲಚಗುಪ್ಪೆ, ಕುರುಬರಹಳ್ಳಿ, ತಾವರೆಕೆರೆ ಗ್ರಾಮಗಳಲ್ಲಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಲಾಗಿದೆ' ಎಂದು ತಿಳಿಸಿದರು.

ಕಾರಾಗೃಹ ಸಿಬ್ಬಂದಿ ಮೇಲೆ ಹಲ್ಲೆ

ಕಾರವಾರ: ಇಲ್ಲಿನ ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳಿಬ್ಬರು ಶನಿವಾರ ಕಾರಾಗೃಹ ಅಧಿಕಾರಿ, ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ.

ಮಂಗಳೂರು ಮೂಲದ ಮೊಹ್ಮದ್ ಅಬ್ದುಲ್ ಫಯಾನ್ (28) ಹಾಗೂ ಕೌಶಿಕ ನಿಹಾಲ್ (28) ಹಲ್ಲೆ ನಡೆಸಿದ ಆರೋಪಿಗಳು.

'ಮೊಹ್ಮದ್ ವಿರುದ್ಧ ಡಕಾಯಿತಿ ಸೇರಿದಂತೆ 12ಕ್ಕೂ ಹೆಚ್ಚು ಗಂಭೀರ ಪ್ರಕರಣಗಳಿವೆ. ಕೌಶಿಕ್ ಮೇಲೂ 4 ಪ್ರಕರಣಗಳಿವೆ. ಮಂಗಳೂರು ಕಾರಾಗೃಹದಲ್ಲಿ ಕೈದಿಗಳ ಸಂಖ್ಯೆ ಹೆಚ್ಚಾದ ಕಾರಣ ಕಾರವಾರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿತ್ತು. ಸಿಬ್ಬಂದಿಯೊಂದಿಗೆ ತಗಾದೆ ತೆಗೆದು ಹಲ್ಲೆ ನಡೆಸಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್. ತಿಳಿಸಿದರು.

'ಕಾರಾಗೃಹದಲ್ಲಿ ಕದ್ದುಮುಚ್ಚಿ ಮಾದಕ ದ್ರವ್ಯಗಳನ್ನು ಕೈದಿಗಳು ಪಡೆದುಕೊಳ್ಳುತ್ತಿದ್ದರು. ಕೆಲ ದಿನಗಳಿಂದ ಇದಕ್ಕೆ ಕಡಿವಾಣ ಬಿದ್ದಿದೆ. ಇದೇ ಕಾರಣಕ್ಕೆ ಕೈದಿಗಳಿಬ್ಬರು ಗಲಾಟೆ ಮಾಡಿದ್ದಾರೆ' ಎಂದು ಕಾರಾಗೃಹ ಮೂಲಗಳು ತಿಳಿಸಿವೆ. ಹಲ್ಲೆಗೆ ಒಳಗಾದ ಸಿಬ್ಬಂದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) ಅಂಗವಿಕಲರ ನೆರವಿಗಾಗಿ ಅಳವಡಿಸಿಕೊಂಡಿರುವ 'ಆನ್‌ಬೋರ್ಡ್' ತಂತ್ರಜ್ಞಾನ ಯೋಜನೆಗಾಗಿ ಡಿಜಿಟಲ್ ಒಳಗೊಳ್ಳುವಿಕೆ ಮತ್ತು ಪ್ರವೇಶಾರ್ಹತೆ ವರ್ಗದಲ್ಲಿ ರಾಷ್ಟ್ರೀಯ ಡಿಜಿಟಲ್ ಟ್ರಾನ್ಸ್‌ಫಾರ್ಮೇಷನ್ ಪ್ರಶಸ್ತಿ ಪಡೆದಿದ್ದು, ಬಿಎಂಟಿಸಿ ನಿರ್ದೇಶಕ (ಭದ್ರತೆ ಮತ್ತು ಜಾಗೃತಿ) ಅಬ್ದುಲ್ ಅಹದ್ ಪ್ರಶಸ್ತಿ ಸ್ವೀಕರಿಸಿದರು

ಶಾಲಾ ಶೈಕ್ಷಣಿಕ ಪ್ರವಾಸ: ಸುರಕ್ಷತೆಗೆ ಆದ್ಯತೆ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ, ಕಾಲೇಜು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ ಆರಂಭ ಆಗಿದ್ದು, ಪ್ರಯಾಣ ಮಾಡುವ ಬಸ್ ಸೇರಿದಂತೆ ಇನ್ನಿತರ ವಾಹನಗಳಲ್ಲಿ ಸುರಕ್ಷತೆಗೆ ಆದ್ಯತೆ ಕೊಡಬೇಕು ಎಂದು ಸಂಚಾರ ಹಾಗೂ ರಸ್ತೆ ಸುರಕ್ಷತಾ ವಿಭಾಗದ ಪೊಲೀಸರು ಸುತ್ತೋಲೆ ಹೊರಡಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳಲ್ಲಿ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯಲಾಗುತ್ತಿದೆ. ಪ್ರವಾಸಕ್ಕೆ ತೆರಳುವ ಮುನ್ನ ಬಸ್ 'ಫಿಟ್‌ನೆಸ್' ಹೊಂದಿರುವ ಬಗ್ಗೆ ಆರ್‌ಟಿಒಯಿಂದ ಖಾತ್ರಿಪಡಿಸಿಕೊಂಡಿರಬೇಕು ಎಂದು ತಿಳಿಸಲಾಗಿದೆ.

ಚಾಲಕರು ಮಾದಕ ದ್ರವ್ಯ ಹಾಗೂ ಮದ್ಯಪಾನ ಸೇವನೆ ವ್ಯಸನಿಯಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಪ್ರವಾಸದ ಅವಧಿಯಲ್ಲಿ ರಾತ್ರಿ ವೇಳೆ ತಂಗುವ ಅವಶ್ಯಕತೆ ಕಂಡು ಬಂದರೆ ಚಾಲಕರ ಮೇಲೆ ಶಿಕ್ಷಕರು ನಿಗಾ ವಹಿಸಬೇಕೆಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಪ್ರವಾಸದ ಸಂದರ್ಭದಲ್ಲಿ ಬೇರೆ, ಬೇರೆ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡಾಗ ಆಯಾ ಜಿಲ್ಲೆಯ ಪೊಲೀಸ್ ನಿಯಂತ್ರಣ ಕೊಠಡಿ ಹಾಗೂ ಸಂಬಂಧಪಟ್ಟ ದೂರವಾಣಿ ಸಂಖ್ಯೆಗಳನ್ನು ಪಡೆದುಕೊಂಡಿರಬೇಕು ಎಂದು ಎಡಿಜಿಪಿ ಹಿತೇಂದ್ರ ಅವರು ತಿಳಿಸಿದ್ದಾರೆ.

ಪ್ರವಾಸದ ಉದ್ದೇಶ, ಸುರಕ್ಷತೆ, ಅನುಮತಿ, ವೆಚ್ಚದ ವಿವರಗಳು, ಪೋಷಕರ ಸಮ್ಮತಿ, ತುರ್ತು ಸಂಪರ್ಕ ಮತ್ತು ಮಾರ್ಗದರ್ಶನ ಮುಖ್ಯವಾಗಿದ್ದು, ಇವುಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಲಾಗಿದೆ.

'ಪ್ರವಾಸದ ಸ್ಥಳ, ದಿನಾಂಕ, ಅವಧಿ, ಶೈಕ್ಷಣಿಕ ಉದ್ದೇಶವನ್ನು ಮೊದಲೇ ನಿರ್ಧರಿಸಿರಬೇಕು. ಶಾಲಾ ಮುಖ್ಯಶಿಕ್ಷಕರು ಜಿಲ್ಲಾಡಳಿತದಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕು. ಬಸ್‌ಗಳು ಮತ್ತು ಸಾರಿಗೆ ವ್ಯವಸ್ಥೆ ವಿಶ್ವಾಸಾರ್ಹ ಸಂಸ್ಥೆಯಿಂದ ಇರಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

'ಬಸ್‌ನಲ್ಲಿ ಕನಿಷ್ಠ ಒಬ್ಬ ಶಿಕ್ಷಕರು ಮತ್ತು ಒಬ್ಬ ಗಾರ್ಡ್ ಇರುವಂತೆ ನೋಡಿಕೊಳ್ಳಬೇಕು. ಪ್ರಥಮ ಚಿಕಿತ್ಸಾ ಪೆಟ್ಟಿಗೆ ಮತ್ತು ತುರ್ತು ವೈದ್ಯಕೀಯ ಸಂಪರ್ಕದ ವ್ಯವಸ್ಥೆ ಇರಬೇಕು. ವಿದ್ಯಾರ್ಥಿಗಳ ಪೂರ್ಣ ಪಟ್ಟಿ, ಪೋಷಕರ ಮೊಬೈಲ್ ನಂಬರ್ ಸಂಗ್ರಹಿಸಬೇಕು. ಪೋಷಕರ ಅನುಮತಿ ಪತ್ರ ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಪ್ರಯಾಣದ ಪ್ರತಿ ಹಂತದಲ್ಲೂ ಸುರಕ್ಷತೆ ಕಾಪಾಡಿಕೊಳ್ಳಬೇಕು' ಎಂದು ಸೂಚಿಸಲಾಗಿದೆ.

ನಗರದಲ್ಲಿ ಇಂದು

'ಶ್ರೀ ಹರಿಭಕ್ತಿ ನಾದ ಯಾತ್ರಾ' ಕರ್ನಾಟಕ, ಹಿಂದೂಸ್ತಾನಿ ಸಂಗೀತ ಕಛೇರಿ: ವೆಂಕಟೇಶ ಶರ್ಮಾ, ಪಿಟೀಲು: ಸಿ.ಎನ್. ಚಂದ್ರಶೇಖರ್, ಆರ್. ಅಚ್ಯುತರಾವ್, ಶೃತಿ ಸಿ.ವಿ., ಮೃದಂಗ: ಅನೂರು ಅನಂತಕೃಷ್ಣ ಶರ್ಮಾ, ಎನ್. ವಾಸುದೇವ, ರವಿಶಂಕರ್ ಶರ್ಮಾ ಕೆ.ವಿ., ತಬಲಾ: ಗುರುಮೂರ್ತಿ ವೈದ್ಯ, ಕೌಶಿಕ್ ಭಟ್, ಶೌರಿ ಶಾನಭಾಗ್, ರೂಪಕ್ ವೈದ್ಯ, ಹಾರ್ಮೋನಿಯಂ: ಮಧುಸೂದನ್ ಭಟ್, ನೀತಾ ಅಜೆಯ್, ವಿಘ್ನೇಶ್ ಭಗವತ್, ಆಯೋಜನೆ: ಸಮನ್ವಿತ ಸಂಗೀತ ಪರಂಪರಾ ಟ್ರಸ್ಟ್, ಸ್ಥಳ: ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಭಾಂಗಣ, ಎರಡನೇ ಹಂತ, ಬನಶಂಕರಿ, ಬೆಳಿಗ್ಗೆ 8ರಿಂದ



ಮಾದಕ ವಸ್ತುಗಳ ದುರುಪಯೋಗ ಮತ್ತು ಕಳ್ಳಸಾಗಾಣಿಕೆಯ ವಿರೋಧದ ಹೋರಾಟಕ್ಕೆ ಬೆಂಬಲವಾಗಿ ವಿಂಟೇಜ್ ಕಾರುಗಳ ರ‍್ಯಾಲಿಗೆ ಚಾಲನೆ: ಜಿ. ಪರಮೇಶ್ವರ, ಅತಿಥಿ: ಎಂ.ಎ. ಸಲೀಂ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಬೃಹತ್ ಮೆಟ್ಟಿಲುಗಳು, ವಿಧಾನಸೌಧ, ಬೆಳಿಗ್ಗೆ 9

ಯುವ ವೈಭವ-2025: ಉದ್ಘಾಟನೆ: ದೀಕ್ಷಾ, ಅಧ್ಯಕ್ಷತೆ: ಶಶಿಧರ್ ಕೋಟ್ಯಾನ್, ಲೋಕೇಶ್ ಕೋಟ್ಯಾನ್, ಅತಿಥಿಗಳು: ಮಧು ಬಂಗಾರಪ್ಪ, ಶಿವರಾಜ ಎಸ್. ತಂಗಡಗಿ, ದಿನೇಶ್ ಗುಂಡೂರಾವ್, ಬೇಳೂರು ಗೋಪಾಲಕೃಷ್ಣ, ವಿ. ಸುನಿಲ್ ಕುಮಾರ್, ಉಮಾನಾಥ ಕೋಟ್ಯಾನ್, ಬಿ.ಕೆ. ಹರಿಪ್ರಸಾದ್, ಭೀಮಣ್ಣ ನಾಯ್ಕ್, ಜೆ.ಪಿ. ಸುಧಾಕರ್, ಮಂಜುನಾಥ ಪೂಜಾರಿ, ಆಯೋಜನೆ: ಯುವವಾಹಿನಿ, ಸ್ಥಳ: ಶಿಕ್ಷಕರ ಸದನ, ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 9ರಿಂದ

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಸಿ. ಅಶ್ವತ್ಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 5 ಮತ್ತು 7ಕ್ಕೆ

ನಾಟಕ ಬೆಂಗ್ಳೂರು–18 ರಂಗ ಸಂಭ್ರಮ: 'ನಾನು ಪೊಲೀಸನಾಗಿದ್ದೆ' ನಾಟಕ ಪ್ರದರ್ಶನ: ರಚನೆ: ಬಸವರಾಜ ಕಟ್ಟಿಮನಿ, ನಿರ್ದೇಶನ: ಸಂದೀಪ್ ಪೈ.ಎಸ್., ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಬೃಹತ್ ನೀರುಗಾಲುವೆಯ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ: ಎಂ. ಕೃಷ್ಣಪ್ಪ, ಸ್ಥಳ: ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ವಿಜಯನಗರ, ಬೆಳಿಗ್ಗೆ 9

ಬೆಂಗಳೂರು ಸಾಹಿತ್ಯ ಉತ್ಸವ: ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10ರಿಂದ

ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ: ಅತಿಥಿಗಳು: ಥಾವರಚಂದ್ ಗೆಹಲೋತ್, ಅಧ್ಯಕ್ಷತೆ: ಜಿ. ಪರಮೇಶ್ವರ, ಕೆ.ವಿ. ಶರತ್ ಚಂದ್ರ, ಎಂ.ಎಸ್. ಲೋಲಾಕ್ಷ, ಆಯೋಜನೆ: ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಸ್ಥಳ: ಗಾಜಿನಮನೆ, ರಾಜಭವನ, ಬೆಳಿಗ್ಗೆ 10

ಸುರೇಶ ಪಾಟೀಲ ಅವರ 'ಸನ್ನಿಧಿ' ಪುಸ್ತಕ ಬಿಡುಗಡೆ: ಮನು ಬಳಿಗಾರ್, ಪುಸ್ತಕದ ಕುರಿತು: ವೀಣಾ ಬನ್ನಂಜೆ, ಅಧ್ಯಕ್ಷತೆ: ಕೃಷ್ಣ ಕಟ್ಟಿ, ಆಯೋಜನೆ: ಗೋಧೂಳಿ ಕನ್ನಡ ಸಂಘ, ಸುಮೇರು ಟ್ರಸ್ಟ್, ಐಸಿರಿ ಪ್ರಕಾಶನ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ಕಲಾಂಗನ–2025 ನೃತ್ಯ ಸಂಗಮ: ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮ, ರಾಣಾ, ಹರೀಶ್ ರಾಯಪ್ಪ, ಸುನೇತ್ರಾ ಪಂಡಿತ್, ದಿವ್ಯಾ ಸುರೇಶ್, ಆಯೋಜನೆ: ನೃತ್ಯಾಂಕುರ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಗ್ಲೋಬಲ್ ಆರ್ಯವೈಶ್ಯ ಸಮ್ಮಿಟ್‌ನ ಲಾಂಛನ ಬಿಡುಗಡೆ: ಜಿ. ವೆಂಕಟೇಶ್, ಡಿ.ಎಸ್. ಅರುಣ್, ಕೆ. ಶ್ರೀನಿವಾಸನ್, ಡಿ.ವಿ. ಮಂಜುನಾಥ್, ರಾಮಪ್ರಸಾದ್ ಕೆ.ವಿ., ಆಯೋಜನೆ: ಕರ್ನಾಟಕ ಆರ್ಯವೈಶ್ಯ ಮಹಾಸಭಾ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10

ಜಿ.ಎಸ್. ಶರ್ಮಾಜಿ ಅವರ ಜನ್ಮ ಶತಮಾನೋತ್ಸವ: ಅತಿಥಿಗಳು: ಪಿ.ಎಸ್. ದಿನೇಶ್‌ಕುಮಾರ್, ಕೆ.ವಿ. ಧನಂಜಯ್ಯ, ಮಿಹಿರ್ ಕುಮಾರ್, ಅನಿಕೇತ್ ಅನಿಲ್ ಅಂಬೇಕರ್, ಮನೋಜ್ ಕುಮಾರ್, ಅಧ್ಯಕ್ಷತೆ: ಎಸ್. ಸತ್ಯಮೂರ್ತಿ, ಆಯೋಜನೆ: ಕರ್ನಾಟಕ ಅನ್‌ಏಡೆಡ್ ಸ್ಕೂಲ್ಸ್ ಮ್ಯಾನೇಜ್‌ಮೆಂಟ್ಸ್ ಅಸೋಸಿಯೇಷನ್, ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜಿನ ಸಭಾಂಗಣ, ಜಯನಗರ, ಬೆಳಿಗ್ಗೆ 10.30

ಕವನ ವಾಚನ ಸ್ಪರ್ಧೆ: ಉದ್ಘಾಟನೆ: ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'ಜಾಗತಿಕ ತಾಪಮಾನ ಮತ್ತು ಕೃಷಿ' ಜಾಗೃತಿ ಸಮಾವೇಶ: ಭಾಗವಹಿಸುವವರು: ಜಿ.ಎಸ್. ಜಯದೇವ, ಕೆ.ಪಿ. ಸುರೇಶ, ಅವಿನಾಶ್ ಟಿ.ಜಿ. ಎಸ್., ನಾಗೇಶ ಹೆಗಡೆ, ಎಂ.ಸಿ. ನರೇಂದ್ರ, ಕೆ.ಸಿ. ಶಿವಾರೆಡ್ಡಿ, ಕೇಶವ ಮಳಗಿ, ಸ್ಥಳ: ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ (ರಾಗಿ ಕಣ), ಗೊಟ್ಟಿಗೆರೆ, ಬೆಳಿಗ್ಗೆ 10.30

ಸು. ರುದ್ರಮೂರ್ತಿ ಶಾಸ್ತ್ರಿ ಅವರ 'ಜನ ಭಾರತ', ಉಷಾ ನರಸಿಂಹನ್ ಅವರ 'ಆರ್ಯಾವರ್ತ', ವಿಕ್ರಮ ಹತ್ವಾರ ಅವರ 'ಓದಿದ್ದು ನೋಡಿದ್ದು', ಎನ್. ಸಂಧ್ಯಾರಾಣಿ ಅವರ 'ಕದಡಿದ ಕೊಳವು ತಿಳಿಯಾಗಿರಲು', ಹಳೆಮನೆ ರಾಜಶೇಖರ ಅವರ 'ಮಾಯೆಯೆಂಬು ಮಾಯೆಯಲ್ಲ', ಗುರುರಾಜ ಕೊಡ್ಕಣಿ ಅವರ 'ಹೆಕ್ಕಿ ತಂದ ನೆನಪುಗಳು' ಪುಸ್ತಕಗಳ ಬಿಡುಗಡೆ: ಶ್ರೀನಿವಾಸ ಪ್ರಭು, ಅತಿಥಿಗಳು: ಎಚ್.ಎಸ್. ಸತ್ಯನಾರಾಯಣ, ವಿಕಾಸ ನೇಗಿಲೋಣಿ, ಶರತ್ ಭಟ್ ಸೇರಾಜೆ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಸುಚಿತ್ರ ಸಭಾಂಗಣ, ಎರಡನೇ ಹಂತ, ಬನಶಂಕರಿ, ಬೆಳಿಗ್ಗೆ 10.30



ಶ್ರೀನಿವಾಸ ಪ್ರಭು

ಕಲಾ ಸಂಪರ್ಕ: ಅತಿಥಿಗಳು: ಪಿ.ಎಸ್. ಕುಮಾರ್, ಜಿ.ಎಚ್. ರಾಮಚಂದ್ರ, ಸಿ.ಎಸ್. ಕೃಷ್ಣ ಸೆಟ್ಟಿ, ಆಯೋಜನೆ: ಕೋಬಾಲ್ಟ್, ಸ್ಥಳ: ಮಾವಿನತೋಪು ಉದ್ಯಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 11

ಮಾಸದ ಮಂಥನ 'ಸ್ವರ ಶೃಂಗಾರ': ಸೋಮಪ್ರಿಯಾ ಮುಖರ್ಜಿ, ಸ್ಥಳ: ನಂ. 17, ಸಾನಿಧ್ಯ, ಒಂದನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಮಕರಂದ ನನಗೆ ಕನ್ನಡ ಗೊತ್ತು ಕಾರ್ಯಕ್ರಮ, ಆರನೇ ಘಟಿಕೋತ್ಸವ: ಅತಿಥಿಗಳು: ಡಿ.ಕೆ. ಮೋಹನ್‌ಬಾಬು, ಸತೀಶ್ ಮಲ್ಯ, ನಿತಿನ್ ಮೋಹನ್, ಸುಜಿತ್ ಜಾನ್, ಪ್ರಸನ್ನ ರೈ ಕೆ., ವಿಕ್ರಂ ರೈ, ಮಿನಿ ಥಾಮಸ್, ಸ್ಮಿತಾ ಶೆಟ್ಟಿ, ಆಯೋಜನೆ ಮಕರಂದ, ಸ್ಥಳ: ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೆ.ಆರ್. ಪುರ, ಮಧ್ಯಾಹ್ನ 2

ಕರ್ನಾಟಕ ರಾಜ್ಯೋತ್ಸವ, ಮಹರ್ಷಿ ವಾಲ್ಮೀಕಿ ಜಯಂತಿ, ಗಣ್ಯರಿಗೆ ಸನ್ಮಾನ: ಉದ್ಘಾಟನೆ: ಸತೀಶ್ ಜಾರಕಿಹೊಳಿ, ಅತಿಥಿಗಳು: ಎಂ. ಕೃಷ್ಣಪ್ಪ, ದಿನೇಶ್ ಗುಂಡೂರಾವ್, ಅನಿಲ್ ಚಿಕ್ಕಮಾದು, ಕೆ.ಎಸ್. ಮೃತ್ಯುಂಜಯ, ಅಧ್ಯಕ್ಷತೆ: ಜಮೀರ್ ಅಹಮದ್ ಖಾನ್, ಆಯೋಜನೆ: ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟ, ಸ್ಥಳ: ಅಕ್ಕ ಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4



ಎಚ್.ಎಸ್. ವೆಂಕಟೇಶಮೂರ್ತಿ, ಎಸ್. ಬಾಲಿ ಅವರಿಗೆ ಗಾನ ನಮನ: ಅಧ್ಯಕ್ಷತೆ: ಶ್ರೀನಿವಾಸ ಉಡುಪ, ಗಾಯನ: ಅಪರ್ಣಾ ನರೇಂದ್ರ, ನಿತಿನ್ ರಾಜಾರಾಮ್ ಶಾಸ್ತ್ರಿ, ಆಯೋಜನೆ: ವಿಕಸನ ಟ್ರಸ್ಟ್, ಸ್ಥಳ: ಶ್ರೀ ಶಂಕರ ಕೃಪಾ ಸಭಾಂಗಣ, ಶೃಂಗೇರಿ ಶಾರದಾಂಬಾ ದೇವಸ್ಥಾನ, ಗಿರಿನಗರ, ಸಂಜೆ 4

'ನಾಟ್ಯ ಸಿಂಚನ–4': ಅತಿಥಿಗಳು: ಸತೀಶ್ ಹಂಪಿಹೊಳಿ, ಶ್ರೀವತ್ಸ ಶಾಂಡಿಲ್ಯ, ಪೂರ್ಣಾ ಆಚಾರ್ಯ, ಕವಿತಾಗೌಡ, ಯಶಸ್ವಿನಿ ಕೆ. ಸ್ವಾಮಿ, ಆಯೋಜನೆ: ಕಾವ್ಯಶ್ರೀ ಆರ್ಟ್ ಫೌಂಡೇಷನ್, ಸ್ಥಳ: ಪದ್ಮಿನಿ ರಾವ್ ಪರಂಪರ ಸಭಾಂಗಣ, ಸಂಜೆ 4.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

'ಅಪಾರ್ಟ್‌ಮೆಂಟ್ ಕಾಯ್ದೆ ನವೀಕರಿಸಿ ಮಂಡಿಸಿ'

ಬೆಂಗಳೂರು: 'ಅಪಾರ್ಟ್‌ಮೆಂಟ್ ಮಾಲೀಕರ ಮತ್ತು ಸಂಘಗಳ ಹಿತಾಸಕ್ತಿ ರಕ್ಷಣೆಗೆ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣಾ ಕಾಯ್ದೆ–1972 ಅನ್ನು ನವೀಕರಿಸಿ, ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಬೇಕು' ಎಂದು ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ (ಬಿಎಎಫ್) ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಎಎಫ್ ಅಧ್ಯಕ್ಷ ಸತೀಶ್ ಮಲ್ಯ, 'ಸಂಘವು 3.50 ಲಕ್ಷಕ್ಕೂ ಹೆಚ್ಚು ಕುಟುಂಬಗಳನ್ನು ಪ್ರತಿನಿಧಿಸುತ್ತಿದೆ. ಈಗಾಗಲೇ ಜಾರಿಯಲ್ಲಿರುವ ಕಾಯ್ದೆಯನ್ನು ನವೀಕರಿಸಿ, ಸಮಗ್ರ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣಾ ಕಾಯ್ದೆಯನ್ನು ಅನುಷ್ಠಾನ ಮಾಡಬೇಕಿದೆ. ಈ ಮೂಲಕ ಆಸ್ತಿ ಹಕ್ಕುಗಳ ವರ್ಗಾವಣೆ ಮತ್ತು ಮಾಲೀಕತ್ವದ ಬಗ್ಗೆ ಸ್ಪಷ್ಟತೆ ಒದಗಿಸಬೇಕು' ಎಂದು ಹೇಳಿದರು.

ಬಿಎಎಫ್ ಪ್ರಧಾನ ಕಾರ್ಯದರ್ಶಿ ಕೆ. ಅರುಣ್ ಕುಮಾರ್, 'ಕಾಂಗ್ರೆಸ್ ನೇತೃತ್ವದ ಸರ್ಕಾರ ಈ ಹಿಂದೆ ನೀಡಿದ ಭರವಸೆಯಂತೆ ಕಾಯ್ದೆಯನ್ನು ಜಾರಿಗೆ ತರಬೇಕು' ಎಂದು ಒತ್ತಾಯಿಸಿದರು.

ನಿಧನ ವಾರ್ತೆ

ಪಾರ್ವತಮ್ಮ

ನೆಲಮಂಗಲ: ಪಟ್ಟಣದ ಕೋಟೆ ಬೀದಿ ನಿವಾಸಿ, ಸ್ವಾತಂತ್ರ್ಯ ಹೋರಾಟಗಾರರಾದ ಪಾರ್ವತಮ್ಮ (95) ಶನಿವಾರ ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ.

ಅವರಿಗೆ ಪುತ್ರಿ ಇದ್ದಾರೆ. ಭಾನುವಾರ ಬೆಳಿಗ್ಗೆ ಅಂತ್ಯ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಹಿತಿಗೆ 8050566859 (ಮಂಜುನಾಥ್) ಸಂಪರ್ಕಿಸಬಹುದು.

ರಾಜಣ್ಣ

ಬೆಂಗಳೂರು: ನಾಗರಬಾವಿಯ ಪತ್ರಿಕಾ ವಿತರಕ ರಾಜಣ್ಣ (65) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯ ಸಂಸ್ಕಾರವು ದೊಡ್ಡ ಬೆಳವಂಗಲ ಹತ್ತಿರ ಕಸರಘಟ್ಟದಲ್ಲಿ ಶನಿವಾರ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಬಿ.ಎನ್‌ಆರ್‌ಮೆಮೋರಿಯಲ್ ಶಾಲೆಯ ಮಕ್ಕಳು ಕತ್ತಿ ನೃತ್ಯ ಪ್ರದರ್ಶನ ನೀಡಿದರು

ಕತ್ತಿ ನೃತ್ಯ ಪ್ರದರ್ಶನದಲ್ಲಿ ದಾಖಲೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಮಮೂರ್ತಿನಗರದ ಬಿ.ಎನ್.ಆರ್. ಮೆಮೋರಿಯಲ್ ಶಾಲೆಯ ವಿದ್ಯಾರ್ಥಿಗಳು 5.26 ನಿಮಿಷದಲ್ಲಿ ಒಂದೇ ವೇದಿಕೆಯಲ್ಲಿ ಸಾಂಪ್ರದಾಯಿಕ ಕತ್ತಿ ನೃತ್ಯ ಪ್ರದರ್ಶನ ಮಾಡಿ ವಿಶ್ವ ದಾಖಲೆ ನಿರ್ಮಿಸಿದರು.

ಕೆ.ಆರ್.ಪುರದ ಐಟಿಐನ ಡಾ.ಬಿ. ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ 391 ವಿದ್ಯಾರ್ಥಿಗಳು ಏಕಕಾಲದಲ್ಲಿ ನೃತ್ಯ ಪ್ರದರ್ಶಿಸಿ ಎಲೈಟ್ ವರ್ಲ್ಡ್ ರೆಕಾರ್ಡ್, ಏಷ್ಯನ್ ಬುಕ್ ಆಫ್ ರೆಕಾರ್ಡ್ ಹಾಗೂ ಇಂಡಿಯನ್ ಬುಕ್ ಆಫ್ ರೆಕಾರ್ಡ್‌ಗೆ ಭಾಜನರಾದರು.

ಈ ಹಿಂದೆ 2010ರಲ್ಲಿ ಇದೇ ವಿಭಾಗದಲ್ಲಿ ಸ್ಮಾರ್ಟ್‌ಲ್ಯಾಂಡ್ ಶಾಲೆಯ 301 ವಿದ್ಯಾರ್ಥಿಗಳು ದಾಖಲೆ ನಿರ್ಮಿಸಿದ್ದರು.

ಪ್ರಾಂಶುಪಾಲರಾದ ಎಂ.ಶಿಲ್ಪಾ ಶ್ರೀನಿವಾಸ್ ಮಾತನಾಡಿದರು. ಪೂರ್ವ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ. ಮೋಹನ್, ನಿರ್ಮಾಪಕ ಉಮಾಪತಿ ಶ್ರೀನಿವಾಸ್ ಗೌಡ, ಗಾಯಕಿ ಅನನ್ಯ ಭಟ್, ನೃತ್ಯ ಸಂಯೋಜಕ ಭೂಷಣ್, ಶಾಲೆಯ ಅಧ್ಯಕ್ಷ ಎಂ.ರಾಜಹಂಸ, ಕಾರ್ಯದರ್ಶಿ ಆರ್.ನಾಗಭೂಷಣ್ ಉಪಸ್ಥಿತರಿದ್ದರು.

ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕಾರ್ಯಾಗಾರ

'ಹಸ್ತಪ್ರತಿ ಸಂರಕ್ಷಣೆಗೆ ಕಾನೂನು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಸ್ಮಾರಕಗಳ ರಕ್ಷಣೆಗೆ ಕಾನೂನು ರಚಿಸಿದ ರೀತಿಯಲ್ಲಿಯೇ ಹಸ್ತಪ್ರತಿಗಳನ್ನು ಸಂರಕ್ಷಿಸಲು ಹೊಸ ಕಾನೂನು ರೂಪಿಸಲಾಗುವುದು' ಎಂದು ಪ್ರವಾಸೋದ್ಯಮ ಹಾಗೂ ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ಮತ್ತು ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ ನಗರದ ವೆಂಕಟಪ್ಪ ಚಿತ್ರ ಶಾಲೆಯಲ್ಲಿ ಆಯೋಜಿಸಿದ್ದ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಕರ್ನಾಟಕದಲ್ಲಿ 25 ಸಾವಿರ ಸ್ಮಾರಕಗಳಿದ್ದು, ಕಾನೂನು ರೂಪಿಸಿದ ನಂತರ 800 ರಕ್ಷಿತ ಸ್ಮಾರಕಗಳೆಂದು ಘೋಷಿಸಲು ಸಹಕಾರಿಯಾಗಿದೆ. 5,000 ಸ್ಮಾರಕಗಳ ಘೋಷಣೆಗೆ ಪ್ರಯತ್ನ ನಡೆದಿದೆ. ಇದೇ ಮಾದರಿಯಲ್ಲಿಯೇ ಇತಿಹಾಸದ ಮಹತ್ವ ತಿಳಿಸುವ ಹಸ್ತಪ್ರತಿಗಳನ್ನು ಮುಂದಿನ ಪೀಳಿಗೆಗೆ ರಕ್ಷಿಸಲು ಕಾನೂನು ಬೇಕಾಗಿದೆ. ಕಾನೂನು ಹೇಗಿರಬೇಕು ಎಂದು ಈ ಕ್ಷೇತ್ರದ ಪರಿಣಿತರು ಸಲಹೆ ನೀಡಬೇಕು' ಎಂದು ತಿಳಿಸಿದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿ, '1 ಲಕ್ಷಕ್ಕೂ ಅಧಿಕ ಹಸ್ತಪ್ರತಿಗಳು ಕರ್ನಾಟಕದಲ್ಲಿ ಸಂಗ್ರಹವಾಗಿವೆ. ಡಿಜಿಟಲೀಕರಣದ ಭಾಗವಾಗಿ ಹಲವು ಕಡೆ ಇರುವ ಹಸ್ತಪ್ರತಿಗಳ ಸಂಗ್ರಹಕ್ಕೆ ಈಗ ವೇಗ ಸಿಗಲಿದೆ. ಆಯುರ್ವೇದ ಪದ್ಧತಿ ಸೇರಿದಂತೆ ಹಲವು ವಿಷಯಗಳನ್ನು ಹಸ್ತಪ್ರತಿಗಳಿಂದ ಪಡೆದುಕೊಂಡು ನಾವು ಜ್ಞಾನವಾಗಿ ಮಾತ್ರವಲ್ಲದೇ ಆರೋಗ್ಯ ಸುಧಾರಣೆಗೂ ಬಳಸಿಕೊಳ್ಳಲು ಅವಕಾಶವಿದೆ' ಎಂದು ಹೇಳಿದರು.

ಜ್ಞಾನ ಭಾರತಂ ಮಿಷನ್ ಮುಖ್ಯ ಸಂಚಾಲಕ ಬಿ.ಗೋಪಾಲಾಚಾರ್ಯ, ತಜ್ಞರಾದ ಎಚ್.ವಿ.ನಾಗರಾಜ ರಾವ್, ಎ.ವಿ.ನಾಗಸಂಪಿಗೆ ವಿಷಯ ಮಂಡಿಸಿದರು.

ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕುರಿತ ಕಾರ್ಯಾಗಾರದಲ್ಲಿ ಎ. ದೇವರಾಜು, ಕೆ.ವಿ. ತ್ರಿಲೋಕ್ ಚಂದ್ರ, ಎಚ್.ಕೆ. ಪಾಟೀಲ್, ಶಾಲಿನಿ ರಜನೀಶ್, ಬಿ. ಗೋಪಾಲಾಚಾರ್ಯ ಉಪಸ್ಥಿತರಿದ್ದರು

'ಆದಾಯವೂ ಸಿಗಬಹುದು'

ಪರಂಪರೆ, ಪುರಾತತ್ವ ಇಲಾಖೆ ಆಯುಕ್ತ ಎ.ದೇವರಾಜು ಮಾತನಾಡಿ, 'ಕೇಂದ್ರ ಸರ್ಕಾರವು ಜ್ಞಾನಭಾರತಂ ಯೋಜನೆಯಡಿ ಹಸ್ತಪ್ರತಿಗಳ ಡಿಜಿಟಲೀಕರಣಕ್ಕೆ ಒತ್ತು ನೀಡಿದೆ. ಕೇಂದ್ರ ಸಂಸ್ಕೃತಿ ಇಲಾಖೆ ಆರ್ಥಿಕ ನೆರವು ನೀಡಲಿದೆ. ಹಸ್ತ ಪ್ರತಿ ಇಟ್ಟುಕೊಂಡವರು ನಮಗೇ ಇದನ್ನು ನೀಡಬೇಕಿಲ್ಲ. ಮಾಹಿತಿ ಒದಗಿಸಿದರೆ ಒಪ್ಪಂದ ಮಾಡಿಕೊಂಡ ಸಂಸ್ಥೆ ಮೂಲಕವೇ ಡಿಜಿಟಲೀಕರಣ ಪ್ರಕ್ರಿಯೆ ಮುಗಿಸಿ ಸಂಬಂಧಪಟ್ಟವರಿಗೆ ಹಿಂದಿರುಗಿಸಲಾಗುತ್ತದೆ. ಬೌದ್ಧಿಕ ಹಕ್ಕು ಸ್ವಾಮ್ಯದ ಅಡಿ ಹಸ್ತಪ್ರತಿ ಬಳಸಿದವರಿಂದ ಸಂಗ್ರಹಕಾರರಿಗೆ ಆದಾಯವೂ ಬರಬಹುದು' ಎಂದರು.

ಸರ್ಕಾರ ಸಾಕುವ ಬಿಳಿಯಾನೆ

ಒಂದನೇ ಪುಟದಿಂದ..

ನಷ್ಟದಲ್ಲಿರುವ ಹಾಗೂ ಜನರಿಗೆ ಉಪಯೋಗವಾಗದ ನಿಗಮ–ಮಂಡಳಿಗಳ ಪೈಕಿ ಏಳನ್ನು ಸಂಪೂರ್ಣವಾಗಿ ಮುಚ್ಚಬೇಕು ಎಂದು ಆಯೋಗವು ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಶಿಫಾರಸು ಮಾಡಿದೆ. ಅಲ್ಲದೆ, ಒಂಬತ್ತನ್ನು ವಿಲೀನಗೊಳಿಸಲು ಸಲಹೆ ನೀಡಿದೆ. 60 ನಿಗಮ–ಮಂಡಳಿ ಬಲಪಡಿಸಲು ಕೆಲವು ಸೂಚನೆಗಳನ್ನೂ ನೀಡಿದೆ. ನಷ್ಟದಲ್ಲಿರುವ ಮತ್ತು ನಿಷ್ಕ್ರಿಯವಾಗಿರುವ ನಿಗಮ–ಮಂಡಳಿಗಳಿಗೆ ಬೀಗ ಹಾಕಲು ಅಥವಾ ವಿಲೀನಗೊಳಿಸಲು ಆರು ತಿಂಗಳ ಒಳಗೆ ಏಕೀಕೃತ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು ಎಂದೂ ಆಯೋಗ ಹೇಳಿದೆ.

ಸದ್ಯ ಕಾರ್ಯನಿರ್ವಹಿಸುತ್ತಿರುವ ಮತ್ತು ಕಾರ್ಯನಿರ್ವಹಿಸದಿರುವ ನಿಗಮ, ಮಂಡಳಿ ಹಾಗೂ ಕಂಪನಿಗಳಲ್ಲಿ ರಾಜ್ಯ ಸರ್ಕಾರ ₹ 64,440 ಕೋಟಿಗೂ ಹೆಚ್ಚು ಮೊತ್ತವನ್ನು ಹೂಡಿಕೆ ಮಾಡಿದೆ. ಆದರೆ, ಈ ದೊಡ್ಡ ಮೊತ್ತದ ಹೂಡಿಕೆಯ ಮೇಲೆ 2023–24ನೇ ಆರ್ಥಿಕ ವರ್ಷದಲ್ಲಿ ಸರ್ಕಾರ ಗಳಿಸಿದ ಲಾಭಾಂಶ ಕೇವಲ ₹ 285 ಕೋಟಿ. ಇದು ಕೆಲವೇ ಕೆಲವು ಉದ್ದಿಮೆಗಳ ಕೊಡುಗೆ. ಒಟ್ಟು ಹೂಡಿಕೆಯ ಪ್ರಮಾಣಕ್ಕೆ ಹೋಲಿಸಿದರೆ ಈ ಲಾಭಾಂಶ ತೀರಾ ಕಡಿಮೆ. ಈಕ್ವಿಟಿಯ ಮೇಲಿನ ಲಾಭ ಶೇ 0.46ರಷ್ಟು ಮಾತ್ರ ಎನ್ನುವುದನ್ನು ಆರ್ಥಿಕ ಇಲಾಖೆ ಪತ್ತೆ ಮಾಡಿದೆ.

ರಾಜ್ಯದ ಎಲ್ಲ ಸಾರ್ವಜನಿಕ ಉದ್ದಿಮೆಗಳ ಹೂಡಿಕೆಗಳ ಮೇಲಿನ ಆದಾಯದ ಸಂಪೂರ್ಣ ಹೊರೆಯನ್ನು ಲಾಭದಾಯಕವಾಗಿರುವ 34 ಉದ್ದಿಮೆಗಳು (ಶೇ 26ರಷ್ಟಿರುವ) ಮಾತ್ರ ಹೊರಬೇಕಾಗಿದೆ. ಹೂಡಿಕೆ ಮೇಲಿನ ಆದಾಯ (ಆರ್‌ಒಐ) ತುಂಬಿಕೊಡಲು 2024ರ ಜುಲೈ 15ರಂದು ಆದೇಶವೊಂದನ್ನು ಹೊರಡಿಸಿ, ವಿಶೇಷ ಲಾಭಾಂಶವನ್ನು ಕೂಡಾ ಪಾವತಿಸುವಂತೆ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸಲಹೆ ನೀಡಲಾಗಿತ್ತು. ನಿಷ್ಕ್ರಿಯಗೊಂಡ ಹಾಗೂ ನಷ್ಟದಲ್ಲಿರುವ ಕಂಪನಿಗಳನ್ನು ಪಟ್ಟಿ ಮಾಡಿ, ಅವುಗಳ ಮೌಲ್ಯಮಾಪನ ಮಾಡಿ ಬೀಗ ಹಾಕುವ ಅಥವಾ ವಿಲೀನಗೊಳಿಸಲು ಪ್ರಕ್ರಿಯೆ ಆರಂಭಿಸಲಾಗುವುದು. ಈ ಬಗ್ಗೆ ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಈಗಾಗಲೇ ನಿರ್ದೇಶನವನ್ನೂ ನೀಡಲಾಗಿದೆ ಎಂದು ಆರ್ಥಿಕ ಇಲಾಖೆಯ ಮೂಲಗಳು ತಿಳಿಸಿವೆ.

ನಷ್ಟದ ಹಾದಿಯಲ್ಲಿರುವ ಕಂಪನಿಗಳ ಬಗ್ಗೆಯೂ ತಜ್ಞರ ಮೂಲಕ ಮೌಲ್ಯಮಾಪನ ನಡೆಸಬೇಕು. ಜೊತೆಗೆ, ಸರ್ಕಾರದ ಹೂಡಿಕೆ ಮೇಲೆ ಉತ್ತಮ ಲಾಭ ಗಳಿಸಲು ಸಾಧ್ಯವಾಗುವಂತೆ ಇತರ ಕಂಪನಿಗಳ ಕಾರ್ಯಚಟುವಟಿಕೆಯ ಬಗ್ಗೆಯೂ ಮೌಲ್ಯಮಾಪನ ನಡೆಸಬೇಕು. ನಿಷ್ಕ್ರಿಯಗೊಂಡಿರುವ ಕಂಪನಿಗಳನ್ನು ಮುಚ್ಚುವುದರಿಂದ ಕಾರ್ಯಾಚರಣೆಗಳಿಗೆ ತಗಲುವ ವೆಚ್ಚವನ್ನು ಉಳಿತಾಯ ಮಾಡಬಹುದು. ಅಲ್ಲದೆ, ಸಂಪನ್ಮೂಲ ಕ್ರೋಡೀಕರಣ ಮತ್ತು ಉತ್ತಮ ಬಂಡವಾಳ ನಿರ್ವಹಣೆಯೂ ಸಾಧ್ಯವಾಗಲಿದೆ. ನಿಗದಿಪಡಿಸಿದ ರೀತಿಯಲ್ಲಿಯೇ ಕಂಪನಿಗಳನ್ನು ವಿಲೀನಗೊಳಿಸಿದರೆ ಆರ್ಥಿಕ ಲಾಭ ಪಡೆಯಬಹುದು ಎನ್ನುವುದು ಆರ್ಥಿಕ ಇಲಾಖೆಯ ಲೆಕ್ಕಾಚಾರ.

ಸಚಿವ ಸಂಪುಟ ಉಪ ಸಮಿತಿಯ ಶಿಫಾರಸಿನ ಅನ್ವಯ ಸಾರ್ವಜನಿಕ ಉದ್ಯಮಗಳ ಇಲಾಖೆಯನ್ನು 2022ರ ಮೇ 25ರಂದು ರದ್ದುಪಡಿಸಲಾಗಿದೆ. ಈ ಇಲಾಖೆಯು ನಿರ್ವಹಿಸುತ್ತಿದ್ದ ಉದ್ದಿಮೆಗಳನ್ನು ಆರ್ಥಿಕ ಇಲಾಖೆಗೆ ವಹಿಸಲಾಗಿದೆ. ಆ ನಂತರ ಸಾರ್ವಜನಿಕ ಉದ್ದಿಮೆಗಳನ್ನು ಪುನರ್ ರಚಿಸುವ ಮತ್ತು ಸದೃಢಗೊಳಿಸಲು ಹಲವು ಕ್ರಮಗಳನ್ನು ಆರ್ಥಿಕ ಇಲಾಖೆ ತೆಗೆದುಕೊಂಡಿದೆ. ಹಣಕಾಸು ಬೆಂಬಲ ನೀಡಲು ಆಂತರಿಕ ಕಾರ್ಪೊರೇಟ್ ಠೇವಣಿಗಳನ್ನು ಆರಂಭಿಸಲು ಸಚಿವ ಸಂಪುಟದಿಂದ ಅನುಮೋದನೆಯನ್ನೂ ಇಲಾಖೆ ಪಡೆದುಕೊಂಡಿತ್ತು.

‘ನಷ್ಟದಲ್ಲಿರುವ ಮತ್ತು ನಷ್ಟದ ಕಡೆಗೆ ಸಾಗಿರುವ ಉದ್ಯಮಗಳನ್ನು ಲಾಭದ ಕಡೆಗೆ ಕೊಂಡೊಯ್ಯಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಂಡ ಹೊರತಾಗಿಯೂ ಹೆಚ್ಚಿನ ಸಂಖ್ಯೆ ಸಾರ್ವಜನಿಕ ಉದ್ಯಮಗಳು ಯಶಸ್ವಿಯಾಗಿ ನಡೆಯುತ್ತಿಲ್ಲ. ಪ್ರಸ್ತುತ 33 ವಾಣಿಜ್ಯ ಲಾಭರಹಿತ ಕಂಪನಿಗಳಿವೆ. ಅವುಗಳನ್ನು ಲಾಭದ ಕಡೆಗೆ ಕೊಂಡೊಯ್ಯಲು ರಚನಾತ್ಮಕ ಆಡಳಿತ ಚೌಕಟ್ಟು, ಹಣಕಾಸು ವ್ಯವಸ್ಥೆ ಒದಗಿಸುವ ನಿಟ್ಟಿನಲ್ಲಿ ಆಡಳಿತ ಇಲಾಖೆಗಳು ಮೇಲ್ವಿಚಾರಣೆ ನಡೆಸಬೇಕಿದೆ. ಈ ಕುರಿತಂತೆ ಮೌಲ್ಯಮಾಪನ ಮಾಡುವಂತೆ ಇದೇ ಫೆ. 15ರಂದೇ ಆದೇಶ ಹೊರಡಿಸಲಾಗಿದೆ. ನಿಷ್ಕ್ರಿಯಗೊಂಡಿರುವ ಕಂಪನಿಗಳನ್ನು ಮುಚ್ಚುವ ಪ್ರಸ್ತಾವದ ಬಗ್ಗೆ 2024ರ ಅ. 9ರಂದು ನಡೆದ ವಿಧಾನ ಮಂಡಲದ ಸಾರ್ವಜನಿಕ ಉದ್ದಿಮೆಗಳ ಸಭೆಯಲ್ಲಿ ಕೂಡಾ ಚರ್ಚಿಸಲಾಗಿತ್ತು. ಅಲ್ಲದೆ, ಈ ಕಂಪನಿಗಳು ಕುರಿತಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆರ್ಥಿಕ ಇಲಾಖೆಗೆ ಸಲಹೆ ನೀಡಲಾಗಿತ್ತು’ ಎಂದು ಆರ್ಥಿಕ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಕೆಲವು ಕಂಪನಿಗಳು ತುಂಬ ಹಳೆಯದಾಗಿದ್ದು, ಸುದೀರ್ಘ ಅವಧಿಯಿಂದ ನಷ್ಟದಲ್ಲಿವೆ. ಎಲ್ಲ ಕಂಪನಿಗಳು ಕಂಪನಿ ಕಾಯ್ದೆಯಡಿ ನೋಂದಣಿಯಾಗಿವೆ. ಹೀಗಾಗಿ, ಅವುಗಳನ್ನು ಮುಚ್ಚುವ, ವಿಲೀನಗೊಳಿಸುವ ಮೊದಲು ಕಾಯ್ದೆಯಲ್ಲಿರುವ ನಿಯಮಗಳನ್ನು ಪಾಲಿಸಬೇಕಿದೆ. ದಿವಾಳಿಯಾಗಿರುವ ಕಂಪನಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯಲ್ಲಿ (ಎನ್‌ಸಿಎಲ್‌ಟಿ) ಅರ್ಜಿ ಸಲ್ಲಿಸಬೇಕಾಗುತ್ತದೆ. ಈ ಕ್ರಮಗಳಿಂದ ಮಾನವ ಸಂಪನ್ಮೂಲ ಮತ್ತು ಕಂಪನಿ ಹೊಂದಿರುವ ಆಸ್ತಿಯ ಸಮರ್ಪಕ ಬಳಕೆ ಸಾಧ್ಯ. ನಿಷ್ಕ್ರಿಯ ಮತ್ತು ಲಾಭದ ಹಳಿಗೆ ತರಲು ಸಾಧ್ಯವೇ ಇಲ್ಲದ ತುಂಬಾ ನಷ್ಟದಲ್ಲಿರುವ ಕಂಪನಿಗಳನ್ನು ಮುಚ್ಚಲು, ಸ್ವಲ್ಪ ಪ್ರಮಾಣದ ನಷ್ಟ ಅಥವಾ ಲಾಭವೂ ಇಲ್ಲದ ನಷ್ಟವೂ ಇಲ್ಲದ ಕಂಪನಿಗೆ ದೊಡ್ಡ ಬಂಡವಾಳ ಹಾಕದೆ ಉತ್ತೇಜನ ನೀಡಲು, ಉತ್ತಮವಾಗಿ ನಡೆಯುವ ಕಂಪನಿಗಳನ್ನು ಇನ್ನಷ್ಟು ಸದೃಢಗೊಳಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ’ ಎಂದೂ ಅವರು ವಿವರಿಸಿದರು.

ವಿಪರ್ಯಾಸವೆಂದರೆ, ಹಲವು ವರ್ಷಗಳ ಹಿಂದೆಯೇ ಮುಚ್ಚಲು ಅಥವಾ ವಿಲೀನಕ್ಕೆ ಸೂಚನೆ ನೀಡಿದ್ದ ಹಲವು ನಿಗಮ–ಮಂಡಳಿಗಳು, ಉದ್ದಿಮೆಗಳು, ಕೆಲವು ಸಿಬ್ಬಂದಿಗಳ ಕಾರಣಕ್ಕೆ, ಸಾಲ ಬಾಧ್ಯತೆಗಳ ಕಾರಣಕ್ಕೆ ಇನ್ನೂ ‘ಜೀವಂತ’ವಾಗಿರುವುದರಿಂದ ನಷ್ಟದ ಹೊರೆ ಹೆಚ್ಚುತ್ತಲೇ ಇದೆ. ಮುಚ್ಚಲು ಅಥವಾ ವಿಲೀನ ಪ್ರಕ್ರಿಯೆ ವಿಳಂಬವಾಗಲು ಹೊಣೆಗಾರಿಕೆಯನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳ ಸಮನ್ವಯದೊಂದಿಗೆ ನಿಗದಿಪಡಿಸುವ ಕೆಲಸ ಆಗಬೇಕಿದೆ. ಮುಚ್ಚಲು ಸ್ಪಷ್ಟ ಕಾಲಮಿತಿ ನಿಗದಿಪಡಿಸಬೇಕು. ನಷ್ಟದಲ್ಲಿರುವ ಮತ್ತು ನಿಷ್ಕ್ರಿಯವಾಗಿರುವ ನಿಗಮ, ಮಂಡಳಿಗಳನ್ನು ಮುಚ್ಚಲು, ವಿಲೀನಗೊಳಿಸಲು ಅಥವಾ ಪುನರ್‌ರಚಿಸಲು ಪ್ರತಿ ಇಲಾಖೆಯು ಪ್ರಸ್ತಾವ ಸಲ್ಲಿಸಬೇಕು’ ಎಂದು ಹೇಳಿದರು. ❖



ಎಐ ಚಿತ್ರ: ಕಣಕಾಲಮಠ

ನಷ್ಟದಲ್ಲಿರುವ 33 ಕಂಪನಿಗಳು

1. ಬೆಸ್ಕಾಂ, 2. ಚೆಸ್ಕಾಂ, 3. ಮೈಸೂರು ಕಾಗದ ಕಾರ್ಖಾನೆ, 4. ಹೆಸ್ಕಾಂ, 5. ರಾಯಚೂರು ಪವರ್ ಕಾರ್ಪೊರೇಷನ್ ಲಿಮಿಟೆಡ್, 6. ಕೆಎಸ್‌ಆರ್‌ಟಿಸಿ, 7. ಬಿಎಂಟಿಸಿ, 8. ರಾಜೀವ್ ಗಾಂಧಿ ವಸತಿ ನಿಗಮ, 9. ಜೆಸ್ಕಾಂ 10. ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ, 11. ಆಹಾರ ಕರ್ನಾಟಕ ನಿಯಮಿತ, 12. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ, 13. ಶ್ರೀ ಕಂಠೀರವ ಸ್ಟುಡಿಯೊ ನಿಯಮಿತ, 14. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ 15. ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ 16. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ 17. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, 18. ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ, 19. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, 20. ಮೈಸೂರು ಸಕ್ಕರೆ ಕಂಪನಿ ನಿಯಮಿತ, 21. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, 22 ಹುಬ್ಬಳ್ಳಿ– ಧಾರವಾಡ ಬಿಆರ್‌ಟಿಎಸ್ ಕಂಪನಿ ಲಿಮಿಟೆಡ್, 23 ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, 24. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ, 25. ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, 26. ಎನ್‌ಜಿಇಎಫ್ (ಹುಬ್ಬಳ್ಳಿ), 27, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, 28. ಕರ್ನಾಟಕ ಗೇರು ಅಭಿವೃದ್ಧಿ ನಿಗಮ, 29. ದಿ ಮೈಸೂರು ಇಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್, 30. ಮೆಸ್ಕಾಂ, 31. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ, 32. ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್. 33. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ.

ಆಡಳಿತ ಸುಧಾರಣಾ ಆಯೋಗ ಮುಚ್ಚಲು ಶಿಫಾರಸು ಮಾಡಿದ ನಿಗಮ– ಮಂಡಳಿ

- ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ
- ಕರ್ನಾಟಕ ರಾಜ್ಯ ಸಂಯಮ ಮಂಡಳಿ
- ಕರ್ನಾಟಕ ಸಹಕಾರಿ ಕೋಳಿ ಸಾಕಾಣಿಕೆ ಒಕ್ಕೂಟ
- ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್
- ಕರ್ನಾಟಕ ರಾಜ್ಯ ಆಗ್ರೋ –ಕಾರ್ನ್ ಪ್ರಾಡಕ್ಟ್ ಲಿಮಿಟೆಡ್
- ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್
- ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್

ಆಡಳಿತ ಸುಧಾರಣಾ ಆಯೋಗ ವಿಲೀನಕ್ಕೆ ಶಿಫಾರಸು ಮಾಡಿರುವ ನಿಗಮ- ಮಂಡಳಿಗಳು

ಮಂಡಳಿ/ನಿಗಮ	ಎಲ್ಲಿಗೆ ವಿಲೀನ
1. ಕರ್ನಾಟಕ ರಾಜ್ಯ ಏಡ್ಸ್ ತಡೆಗಟ್ಟುವ ಸೊಸೈಟಿ	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
2. ಕರ್ನಾಟಕ ರೇಷ್ಮೆ ಕೈಗಾರಿಕೆ ನಿಗಮ ನಿಯಮಿತ	ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ
3. ಆಹಾರ ಕರ್ನಾಟಕ ಲಿಮಿಟೆಡ್	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ
4. ಬೆಂಗಳೂರು ಸಬ್ ಅರ್ಬನ್ ರೈಲ್ವೆ ಕಂಪನಿ ಲಿಮಿಟೆಡ್ (ಬಿ–ರೈಡ್)	ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿಮಿಟೆಡ್ (ಕೆ–ರೈಡ್)
5. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ	ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮ
6. ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್	ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
7. ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತ
8. ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ	ಕೃಷಿ ವಿಜ್ಞಾನ ವಿಶ್ವವಿದ್ಯಾಲಯ (ಜಿಕೆವಿಕೆ)
9. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಸಿಎಡಿಎ)	ಸಂಬಂಧಿಸಿದ ನೀರಾವರಿ ನಿಗಮಗಳು

ಅತಿ ಹೆಚ್ಚು ಲಾಭದಲ್ಲಿರುವ ನಿಗಮ– ಮಂಡಳಿಗಳು

- **ಕರ್ನಾಟಕ ಸೋಪ್ಸ್ ಆ್ಯಂಡ್ ಡಿಟರ್ಜೆಂಟ್ ಲಿಮಿಟೆಡ್ (ಕೆಎಸ್‌ಡಿಎಲ್)**

ಸರ್ಕಾರಿ ಸ್ವಾಮ್ಯದ ಬ್ರ್ಯಾಂಡ್‌ಗಳಲ್ಲಿ ಅತ್ಯಂತ ಮಾನ್ಯತೆ ಪಡೆದ ಮತ್ತು ಲಾಭದಾಯಕ ಉದ್ಯಮವಿದು. ಮೈಸೂರು ಸ್ಯಾಂಡಲ್ ಸೋಪ್ ಇದರ ಪ್ರಮುಖ ಉತ್ಪನ್ನ. ಮುಖ್ಯವಾಗಿ, 2020–21ರಿಂದ 2024–25ವರೆಗೆ ಯಾವುದೇ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಈ ಸಂಸ್ಥೆ ಆರ್ಥಿಕವಾಗಿ ಸ್ವಾವಲಂಬಿಯಾಗಿದೆ. 2020–21ರಲ್ಲಿ ₹ 112.94 ಕೋಟಿಯಷ್ಟಿದ್ದ ಲಾಭ 2024–25ರಲ್ಲಿ ₹ 451.04 ಕೋಟಿಗೆ ಏರಿಕೆ ಆಗಿದೆ. 2024–25ನೇ ಸಾಲಿನಲ್ಲಿ ಸಂಸ್ಥೆಯು ₹ 1,700 ಕೋಟಿ ವಹಿವಾಟು ನಡೆಸಿದೆ. ಇದರಲ್ಲಿ ಶೇ 30ರಷ್ಟು ಲಾಭಾಂಶವನ್ನು (₹ 135 ಕೋಟಿ) ಸರ್ಕಾರಕ್ಕೆ ಹಸ್ತಾಂತರಿಸಿದೆ. 2022–23ರಲ್ಲಿ ₹ 54 ಕೋಟಿ, 2023–24ರಲ್ಲಿ ₹ 108 ಕೋಟಿ ಲಾಭಾಂಶವನ್ನು ನಿಗಮವು ಸರ್ಕಾರಕ್ಕೆ ಹಸ್ತಾಂತರಿಸಿತ್ತು.

- **ಮೈಸೂರು ಪೇಂಟ್ಸ್ ಮತ್ತು ವಾರ್ನಿಶ್ ಲಿಮಿಟೆಡ್ (ಎಂಪಿವಿಎಲ್)**

ಮೈಸೂರಿನಲ್ಲಿ ಮಾರಾಟ ಮಳಿಗೆ ಮತ್ತು ಬೆಂಗಳೂರಿನಲ್ಲಿ ಪ್ರಾದೇಶಿಕ ಕಚೇರಿ ಹೊಂದಿರುವ ಈ ಸಂಸ್ಥೆಯು, ಚುನಾವಣೆಗಳಲ್ಲಿ ಬಳಸುವ ಅಳಿಸಲಾಗದ ಶಾಯಿಯನ್ನು ತಯಾರಿಸುವ ಅಧಿಕಾರ ಹೊಂದಿರುವ ದೇಶದ ಏಕೈಕ ಕಂಪನಿ. ಇಲ್ಲಿ ತಯಾರಾಗುವ ಶಾಯಿಯನ್ನು ನೇರವಾಗಿ ಕೇಂದ್ರ ಚುನಾವಣಾ ಆಯೋಗಕ್ಕೆ ಪೂರೈಕೆ ಮಾಡಲಾಗುತ್ತದೆ. ಎಂಪಿವಿಎಲ್ 2019ರಿಂದ ಈವರೆಗೆ ಸ್ಥಿರವಾಗಿ ಲಾಭದಾಯಕವಾಗಿದೆ. ಲಾಭವು 2020–21ರಲ್ಲಿ ₹ 4.81 ಕೋಟಿಯಿಂದ 2023–24ರಲ್ಲಿ ₹ 11.95 ಕೋಟಿಗಳಿಗೆ ಹೆಚ್ಚಳವಾಗಿತ್ತು. ನಿಗಮವು ಆಧುನೀಕರಣ ಮತ್ತು ವಿಸ್ತರಣೆಗಾಗಿ ₹ 50 ಕೋಟಿ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

- **ಕರ್ನಾಟಕ ರಾಜ್ಯ ಮಾರುಕಟ್ಟೆ ಸಂವಹನ ಮತ್ತು ಜಾಹೀರಾತು ನಿಯಮಿತ**

17 ಶಾಖೆಗಳನ್ನು ಹೊಂದಿರುವ ಈ ನಿಗಮವು ಸರ್ಕಾರದಿಂದ ಯಾವುದೇ ಅನುದಾನ ಪಡೆಯುವುದಿಲ್ಲ. 2019–20ರಿಂದ ನಿರಂತರ ಆದಾಯ ಗಳಿಸುತ್ತಿದ್ದು, 2022–23ರಲ್ಲಿ ₹ 26.32 ಕೋಟಿ, 2023–24ರಲ್ಲಿ ₹ 17.87 ಕೋಟಿ ಲಾಭ ಗಳಿಸಿದೆ.

- **ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ**

ನವದೆಹಲಿ, ಹೈದರಾಬಾದ್, ಕೊಲ್ಕತ್ತಾ, ಗುಜರಾತಿನ ನರ್ಮದಾ, ಚೆನ್ನೈನಲ್ಲಿ ಶಾಖೆಗಳೊಂದಿಗೆ ಕರ್ನಾಟಕದಲ್ಲಿ ಏಳು ಶೋ ರೂಂಗಳನ್ನು ಹೊಂದಿರುವ ಈ ನಿಗಮವು ಸ್ಥಿರವಾದ ಲಾಭ ಗಳಿಸಿದೆ. ಅದರಲ್ಲೂ ಕರ್ನಾಟಕ, ದೆಹಲಿ, ಚೆನ್ನೈನ ಮಳಿಗೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. 2020–21ರಲ್ಲಿ ₹ 68.34 ಲಕ್ಷ, 2021–22ರಲ್ಲಿ ₹ 41.51 ಲಕ್ಷ, 2022–23ರಲ್ಲಿ ₹ 6.12 ಕೋಟಿ, 2023–24ರಲ್ಲಿ ₹ 8.91 ಕೋಟಿ, 2024–25ರಲ್ಲಿ ₹ 10.83 ಕೋಟಿಯ ಲಾಭ ತೋರಿಸುವ ಮೂಲಕ ಸಕಾರಾತ್ಮಕ ತಿರುವು ತೋರಿಸಿದೆ.

- **ಕರ್ನಾಟಕ ರಾಜ್ಯ ಉಗ್ರಾಣ ಅಭಿವೃದ್ಧಿ ನಿಗಮ**

ಕೇಂದ್ರ ಉಗ್ರಾಣ ನಿಗಮ ಮತ್ತು ರಾಜ್ಯ ಸರ್ಕಾರದ ನಡುವೆ 50:50 ಅನುಪಾತದಲ್ಲಿ ಷೇರುದಾರರ ಮಾದರಿಯಲ್ಲಿ ಜಂಟಿ ಸ್ವಾಮ್ಯದ ಈ ನಿಗಮ ರಾಜ್ಯದ 30 ಜಿಲ್ಲೆಗಳಲ್ಲಿ ಉಗ್ರಾಣ ಸೌಲಭ್ಯ ಹೊಂದಿದೆ. ರೈತರ ಮತ್ತು ಠೇವಣಿದಾರರ ಬೇಡಿಕೆ ಆಧಾರದಲ್ಲಿ ವಾರ್ಷಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಈ ನಿಗಮವು, 2022–23ರಲ್ಲಿ ₹ 6.64 ಕೋಟಿ ನಷ್ಟ ಅನುಭವಿಸಿದ್ದರೂ 2020–21, 2021–22, 2023–24, 2024–25ನೇ ಸಾಲಿನಲ್ಲಿ ಆದಾಯ ಗಳಿಸುತ್ತಲೇ ಬಂದಿದೆ. 2024–25ರಲ್ಲಿ ₹ 20.90 ಕೋಟಿ ಲಾಭ ಗಳಿಸಿದೆ.

ಆಡಳಿತ ಸುಧಾರಣಾ ಆಯೋಗ ಮುಚ್ಚಲು ಶಿಫಾರಸು ಮಾಡಿರುವ ನಿಗಮ– ಮಂಡಳಿಗಳ ವಸ್ತುಸ್ಥಿತಿ

- **ರಾಜ್ಯ ಸಮಾಜ ಕಲ್ಯಾಣ ಮಂಡಳಿ**

ಈ ಮಂಡಳಿಗೆ ನೀಡುತ್ತಿದ್ದ ಅನುದಾನವನ್ನು 2023ರ ಏಪ್ರಿಲ್‌ನಿಂದಲೇ ಸ್ಥಗಿತಗೊಳಿಸಲಾಗಿದೆ. ಮಂಡಳಿಯಲ್ಲಿ ಕಾರ್ಯನಿರತ ಸಿಬ್ಬಂದಿಯನ್ನು ರಾಜ್ಯ ಸರ್ಕಾರದ ಜೊತೆ ವಿಲೀನಗೊಳಿಸಲು ಮತ್ತು 23 ಪಿಂಚಣಿದಾರರಿಗೆ ಪಿಂಚಣಿ ಮುಂದುವರಿಸುವ ಕುರಿತ ಪ್ರಸ್ತಾವದ ಕಡತ ಆರ್ಥಿಕ ಇಲಾಖೆಯಲ್ಲಿದೆ. 2024–25ನೇ ಸಾಲಿನಲ್ಲಿ ಮಂಡಳಿಯ 8 ಸಿಬ್ಬಂದಿಗೆ ಮಾತ್ರ ಅನುದಾನ ಬಿಡುಗಡೆ ಮಾಡಲಾಗಿದೆ. ಪಿಂಚಣಿದಾರರಿಗೆ ಪಿಂಚಣಿ ಅನುದಾನವನ್ನೇ ಬಿಡುಗಡೆ ಮಾಡಿಲ್ಲ.

- **ಕರ್ನಾಟಕ ರಾಜ್ಯ ಸಂಯಮ ಮಂಡಳಿ**

ಅತ್ತ ಮದ್ಯ ಮಾರಾಟದಿಂದ ಲಾಭ ಪಡೆಯಲು ಸರ್ಕಾರ ಯತ್ನಿಸುತ್ತಿದ್ದರೆ, ಇತ್ತ ‘ಕರ್ನಾಟಕ ರಾಜ್ಯ ಸಂಯಮ ಮಂಡಳಿ’ ಮದ್ಯ ಸೇವನೆಯನ್ನು ಕಡಿಮೆ ಮಾಡುವಂತೆ ಜಾಗೃತಿ ಮೂಡಿಸಲು ಯತ್ನಿಸುತ್ತಿದೆ. ಈ ‘ಸಂಘರ್ಷ’ವನ್ನು ಗಮನಿಸಿರುವ ಆಡಳಿತ ಸುಧಾರಣಾ ಆಯೋಗ, ಈ ಮಂಡಳಿಯನ್ನು ಮುಚ್ಚುವಂತೆ ಸಲಹೆ ನೀಡಿದೆ. ಹಾರನಹಳ್ಳಿ ರಾಮಸ್ವಾಮಿ ವರದಿಯಲ್ಲಿಯೂ ಮುಚ್ಚಲು ಶಿಫಾರಸು ಮಾಡಲಾಗಿತ್ತು.ಈ ಮಂಡಳಿಗೆ 13 ಹುದ್ದೆಗಳು ಮಂಜೂರಾಗಿದ್ದು, ಸದ್ಯ 4 ಸಿಬ್ಬಂದಿ ಇದ್ದಾರೆ.

- **ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿಗೆ (ಕೆಸಿಪಿಎಫ್)**

ಸಹಕಾರಿ ತತ್ವದಲ್ಲಿ ಕಳೆದ 30 ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಕೆಸಿಪಿಎಫ್‌ಗೆ ಆದಾಯ ಗಳಿಸಲು ಸಾಧ್ಯವಾಗಿಲ್ಲ. 1995ರಿಂದ ಇಲ್ಲಿಯವರೆಗೆ ಈ ಒಕ್ಕೂಟವು ಸರ್ಕಾರದ ಅನುದಾನದ ಮೇಲೆ ಸಂಪೂರ್ಣ ಅವಲಂಬಿತವಾಗಿದೆ. ಇದರ ಅಡಿಯಲ್ಲಿ ನೋಂದಣಿಯಾಗಿರುವ ಕೋಳಿ ಸಹಕಾರ ಸಂಘಗಳು ತಮ್ಮ ಉದ್ದೇಶಗಳನ್ನು ಈಡೇರಿಸಲು ವಿಫಲವಾಗಿವೆ.

- **ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್**

ಅರಣ್ಯ ಅಭಿವೃದ್ಧಿ ನಿಗಮ ಮತ್ತು ಹರಿಹರ ಪಾಲಿಫೈಬರ್ಸ್ ನಡುವಿನ ಜಂಟಿ ಉದ್ಯಮವಾಗಿ 1985ರಲ್ಲಿ 51:49ರ ಈಕ್ವಿಟಿ ಷೇರು ಅನುಪಾತದಲ್ಲಿ ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್‌ನ್ನು ಸ್ಥಾಪಿಸಲಾಗಿತ್ತು. ಅರಣ್ಯ ಕಾಯ್ದೆಯನ್ವಯ ಖಾಸಗಿ ಸಂಸ್ಥೆಗಳು ಅರಣ್ಯ ಚಟುವಟಿಕೆಯಲ್ಲಿ ಕೆಲಸ ಮಾಡಲು ಸಾಧ್ಯ ಇಲ್ಲ ಎಂಬ ದೂರಿನ ಕಾರಣಕ್ಕೆ ಸರ್ಕಾರವು ಈ ಕಂಪನಿಯನ್ನು 2005ರ ಫೆಬ್ರುವರಿಯಲ್ಲಿ ಮುಚ್ಚಲು ಆದೇಶಿಸಿತ್ತು. ಸರ್ಕಾರಕ್ಕೆ ಪಾವತಿಸಲು ಬಾಕಿ ಇರುವ ₹ 3.80 ಕೋಟಿಯನ್ನು ಮನ್ನಾ ಮಾಡಬೇಕು. ಕಂಪನಿಯ ಬಾಕಿ ಬಾಧ್ಯತೆಗಳನ್ನು ತೀರಿಸಲು ₹ 1.86 ಕೋಟಿ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವ ಆರ್ಥಿಕ ಇಲಾಖೆಯಲ್ಲಿದೆ.

- **ಕರ್ನಾಟಕ ರಾಜ್ಯ ಆಗ್ರೋ –ಕಾರ್ನ್ ಪ್ರಾಡಕ್ಟ್ ಲಿಮಿಟೆಡ್**

ಮೆಕ್ಕಜೋಳ ಮತ್ತು ಸಂಬಂಧಿತ ಕೃಷಿ ಉತ್ಪನ್ನಗಳ ಮೌಲ್ಯವರ್ಧಿತ ಸಂಸ್ಕರಣೆಯನ್ನು ಉತ್ತೇಜಿಸಲು ಈ ಸಂಸ್ಥೆಯನ್ನು ಸ್ಥಾಪಿಸಲಾಗಿತ್ತು. ಕೆಟಿಟಿಪಿ ಕಾಯ್ದೆ ಮತ್ತು ಆನ್‌ಲೈನ್ ವ್ಯವಹಾರ ವ್ಯವಸ್ಥೆ ಬಂದ ನಂತರ ಅದರ ಉತ್ಪನ್ನಗಳು ಮತ್ತು ಸೇವೆಗಳಿಗೆ ಬೇಡಿಕೆ ತೀವ್ರವಾಗಿ ಕುಸಿಯಿತು. ಹೀಗಾಗಿ 2012ರಿಂದ ಕಾರ್ಯನಿರ್ವಹಿಸುತ್ತಿಲ್ಲ. ಆದರೂ ಉಳಿದ ವೆಚ್ಚಗಳನ್ನು ಭರಿಸುತ್ತಿದೆ ಮತ್ತು ಬಾಕಿ ಮೊಕದ್ದಮೆಗಳನ್ನು ನಿರ್ವಹಿಸುತ್ತಿದೆ.

- **ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್**

2003ರ ಜೂನ್ 11ರಂದು ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್‌ನ್ನು ಅಧಿಕೃತವಾಗಿ ಮುಕ್ತಾಯಗೊಳಿಸಲಾಗಿದೆ. ಅಂದಿನಿಂದ ನಿರಂತರ ನಷ್ಟ ಅನುಭವಿಸುತ್ತಿದೆ. ಕಂಪನಿಯನ್ನು ಮುಚ್ಚಿದ್ದರೂ ಆಸ್ತಿಗಳು ಇನ್ನೂ ಸಾಲದ ಬಾಧ್ಯತೆಗಳಲ್ಲಿ ಸಿಲುಕಿವೆ. 2023–24ರಲ್ಲಿ ₹ 14.47 ಕೋಟಿ, 2024–25ರಲ್ಲಿ ₹ 13.85 ಕೋಟಿ ನಷ್ಟ ಅನುಭವಿಸಿದೆ.

- **ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್**

ಕೃಷಿ ಉಪಕರಣಗಳನ್ನು ಮಾರಾಟ ಮಾಡುವ ಪ್ರಾಥಮಿಕ ಉದ್ದೇಶದಿಂದ ರಾಜ್ಯ ಶೇ 51 ಮತ್ತು ಕೇಂದ್ರದ ಶೇ 49 ಆರಂಭಿಕ ಪಾಲಿನಲ್ಲಿ 1967ರಲ್ಲಿ ಈ ನಿಗಮವನ್ನು ಸ್ಥಾಪಿಸಲಾಗಿತ್ತು. ನಂತರ ಕೇಂದ್ರದ ಷೇರುಗಳನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಿ, ರಾಜ್ಯದ ಒಡೆತನದ ನಿಗಮವಾಗಿ ಮಾಡಲಾಗಿತ್ತು. 1990ರ ದಶಕದಲ್ಲಿ ಮತ್ತು 2000ರ ದಶಕದ ಆರಂಭದಲ್ಲಿ ಈ ನಿಗಮ ನಷ್ಟ ಅನುಭವಿಸಲು ಆರಂಭವಾಯಿತು. ನಿರಂತರ ನಷ್ಟದ ಕಾರಣಕ್ಕೆ ನಿಗಮವನ್ನು ಮುಚ್ಚಲು ತೀರ್ಮಾನಿಸಲಾಯಿತು. 2003ರಲ್ಲಿ ಎಲ್ಲ 656 ಉದ್ಯೋಗಿಗಳಿಗೆ ಸ್ವಯಂ ಪ್ರೇರಿತ ನಿವೃತ್ತಿ ನೀಡಿ ನಿಗಮದ ಕಚೇರಿಗಳನ್ನು 2004ರಲ್ಲಿ ಮುಚ್ಚಲಾಯಿತು. ಮುಚ್ಚಿದ ನಂತರವೂ ವರ್ಷದಿಂದ ವರ್ಷಕ್ಕೆ ಪುಸ್ತಕದ ನಷ್ಟ ಅನುಭವಿಸುತ್ತಲೇ ಇದೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 7-12-2000

- **ಪರಿಶಿಷ್ಟರ ಹಕ್ಕು ರಕ್ಷಣೆಗೆ ಆಯೋಗ**

ಬೆಂಗಳೂರು, ಡಿ.6– ಪರಿಶಿಷ್ಟ ಜಾತಿ ಮತ್ತು ವರ್ಗದ ಜನರ ಹಕ್ಕುಗಳ ರಕ್ಷಣೆಗೆ ಪ್ರತ್ಯೇಕ ಆಯೋಗ ಮತ್ತು ಸ್ಥಿತಿಗತಿ ಸುಧಾರಣೆಗೆ ಪ್ರತ್ಯೇಕ ಹಣಕಾಸು ನಿಗಮ ಸ್ಥಾಪಿಸಲು ರಾಜ್ಯ ಸರ್ಕಾರ ಇಂದು ನಿರ್ಧರಿಸಿದೆ.

ಈ ವರ್ಗಗಳ ಮೇಲಿನ ದೌರ್ಜನ್ಯ ತಡೆ ಕುರಿತ ಸಮಿತಿಯ ಸಭೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಇಂದು ಸೇರಿದ್ದಾಗ ಈ ತೀರ್ಮಾನ ತೆಗೆದುಕೊಳ್ಳಲಾಯಿತು.

ಈ ಬಗ್ಗೆ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಬೇಕಿದ್ದು, ರೂಪುರೇಷೆ ಅಂತಿಮಗೊಳಿಸಲಾಗಿದೆ.

75 ವರ್ಷಗಳ ಹಿಂದೆ

ಗುರುವಾರ, 7-12-1950

- **ಕ್ರೂರ ಅಣುಬಾಂಬಿನ ಪ್ರಯೋಗ ಎಂದೆಂದಿಗೂ ಬೇಡ**

ನವದೆಹಲಿ, ಡಿ.6– ‘ಇಂದಿನ ವಿಶ್ವದ ವಿಷಮ ಪರಿಸ್ಥಿತಿಗೆ ಶಾಂತಿಯುತವಾದ ಪರಿಹಾರ ಕಂಡುಹಿಡಿಯಲು ಸರ್ವ ಪ್ರಯತ್ನ ಮಾಡಿ’ ಎಂಬುವುದಾಗಿ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂರವರು ಇಂದು ಅಮೆರಿಕ, ಬ್ರಿಟನ್, ಸೋವಿಯತ್ ರಷ್ಯಾ ಮತ್ತು ಚೀಣಾಗಳಲ್ಲಿ ಹೃತ್ಪೂರ್ವಕ ಮನವಿ ಮಾಡಿದರು. ‘ದುಷ್ಟತನದ ಸಾಕ್ಷಾತ್ಕಾರದಂತಿರುವ ಅಣು ಬಾಂಬನ್ನು ಈಗಾಗಲಿ, ಮುಂದಾಗಲಿ ಉಪಯೋಗಿಸುವ ಪ್ರಶ್ನೆಯೇ ಏಳದು’ ಎಂದು ಭರವಸೆ ವ್ಯಕ್ತಪಡಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

07 ಡಿಸೆಂಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ತೃತೀಯ ಗಂ. 18-26 ನಕ್ಷತ್ರ: ಪುನರ್ವಸು ಗಂ. 28-12 ಯೋಗ: ಶುಕ್ಲ (ಶುಕ್ರ) ಗಂ. 20-08 ಕರಣ: ವಣಿಜ ಗಂ. 7-52 ವೃಶ್ಚಿಕ ಮಾಸದ 21 ನೇ ದಿನ. ಮಳೆ ನಕ್ಷತ್ರ : ಜ್ಯೇಷ್ಠ 2 ನೇ ಪಾದ. ರಾಹುಕಾಲ : ಸಾಯಂಕಾಲ 04-30 - 06-00, ಸೂರ್ಯೋದಯ : 06-45 ಸೂರ್ಯಾಸ್ತ : 05-59, ಮುಸ್ಲಿಂ ದಿನಾಂಕ : 15 ಜುಮಾದುಸ್ಸಾನಿ, ಅದೃಷ್ಟ ಸಂಖ್ಯೆ : 2, 10

ಮೇಷ: ಬಹುದಿನದಿಂದ ಮುಂದೂಡಲ್ಪಟ್ಟಿದ್ದ ದೂರದ ಪ್ರಯಾಣವನ್ನು ಅನಿವಾರ್ಯವಾಗಿ ಕೈಗೊಳ್ಳಬೇಕಾಗುತ್ತದೆ. ದೈವಾನುಗ್ರಹದಿಂದ ಕಾರ್ಯಗಳು ಕೈಗೂಡಿ ಬಹುಮಟ್ಟಿಗೆ ನಿರೀಕ್ಷಿತ ಫಲ ಲಭಿಸಲಿದೆ.

ವೃಷಭ: ನಿಮಗಿಂತಲೂ ಕಷ್ಟಪಡುತ್ತಿರುವಂಥ ವ್ಯಕ್ತಿಗಳನ್ನು ನೋಡಿ, ಕಷ್ಟಗಳನ್ನು ಎದುರಿಸುವ ಧೈರ್ಯ ಪಡೆಯುವಿರಿ. ಉತ್ತಮವಾದ ಕಾರ್ಯಕ್ಷೇತ್ರಕ್ಕೆ ಪ್ರವೇಶಿಸಿದ ನಿಮ್ಮನ್ನು ಸ್ವಸ್ಥಾನದ ಜನರು ಶ್ಲಾಘಿಸುತ್ತಾರೆ.

ಮಿಥುನ: ವೃತ್ತಿಯಲ್ಲಿ ಹೆಚ್ಚಿನ ಜವಾಬ್ದಾರಿ ಇರುವುದರಿಂದ ವೈಯಕ್ತಿಕ ಜೀವನದ ಬಗ್ಗೆ ಗಮನ ಕಡಿಮೆ ಆಗುವುದು. ತೆರೆಮರೆಯಲ್ಲಿನ ಕೆಲಸದಿಂದಾಗಿ ಅಧಿಕಾರ ಪಡೆದುಕೊಳ್ಳುವಿರಿ. ಅವಿವಾಹಿತರಿಗೆ ಶುಭ ಫಲಗಳು ಲಭಿಸುವುದು.

ಕರ್ಕಾಟಕ: ಒಂದು ಕಾಯಿಲೆಗೆಂದು ತೆಗೆದುಕೊಂಡ ಔಷಧಿ ಬೇರೆ ಕಾಯಿಲೆಗೆ ಕಾರಣವಾಗಬಹುದು. ಒಳ ಮನಸ್ಸಿಗೆ ಗೋಚರಿಸಿದ ಅವಘಡವು ನಿಜವಾಗುವ ಸಂಭವವಿದೆ. ಸಂಸಾರದ ಬಗ್ಗೆ ಹೆಚ್ಚು ಗಮನಹರಿಸಬೇಕಾಗುವುದು.

ಸಿಂಹ: ಅಳಿಯನ ಸಹಾಯ ಪಡೆದು ಹೊಸ ನಿವೇಶನವನ್ನು ವ್ಯಾವಹಾರಿಕ ದೃಷ್ಟಿಯಿಂದ ಖರೀದಿಸುವಿರಿ. ಮನೆಯಲ್ಲಿ ಮಗುವಿನ ಸಂಶಯನ್ನು ಬಗೆಹರಿಸುವುದರಲ್ಲಿ ದಿನ ಕಳೆಯುವಿರಿ.

ಕನ್ಯಾ: ನಿಮ್ಮ ಮನೆಯಲ್ಲಿನ ಪುರುಷ –ಸ್ತ್ರೀಯರ ನಡುವಿನ ಅಂತರ ಕಡಿಮೆ ಮಾಡಲು ಪ್ರಯತ್ನಿಸುವಿರಿ. ಮುಕ್ತ ಮನೋಭಾವದಿಂದ ಆಡುವ ಮಾತುಗಳಿಂದ ಹಲವಾರು ಗುಪ್ತ ವಿಷಯಗಳು ಬಹಿರಂಗಗೊಳ್ಳಲಿವೆ.

ತುಲಾ: ಆಹಾರದಲ್ಲಿನ ವ್ಯತ್ಯಾಸದಿಂದಾಗಿ ಹಲವು ಕಾಯಿಲೆಗಳು ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಸಣ್ಣ ಕಾರಣಗಳಿಂದ ಶುರುವಾದ ವಾದ– ಪ್ರತಿವಾದ ದೊಡ್ಡ ಮಟ್ಟಕ್ಕೆ ತಲುಪಿ, ಸಂಸಾರವನ್ನು ಒಡೆಯಲು ಬಿಡದಿರಿ.

ವೃಶ್ಚಿಕ: ಯಾವುದೇ ಸಂದರ್ಭದಲ್ಲೂ ಒತ್ತಡಕ್ಕೆ ಸಿಲುಕದೆ ಕಾರ್ಯ ನಿರ್ವಹಿಸುವ ನೀವು ಎಲ್ಲರಿಂದಲೂ ಗುರುತಿಸಲ್ಪಡುವಿರಿ. ವಿದ್ವಾನ್‌ಗಳ ಎದುರು ಮಾತನಾಡುವ ಬದಲು ಮೌನವಾಗಿದ್ದರೆ ಗೌರವ ಹೆಚ್ಚುತ್ತದೆ.

ಧನು: ಸಣ್ಣ ವಯಸ್ಸಿಗೆ ವಯಸ್ಸನ್ನು ಮೀರಿದ ಜವಾಬ್ದಾರಿ ಹೊರಬೇಕಾದ ಸಂದರ್ಭ ಬರುತ್ತದೆ. ವರಮಾನದಲ್ಲಿ ಈ ದಿನ ಯಾವುದೇ ರೀತಿಯ ಕೊರತೆ ಇರುವುದಿಲ್ಲ. ಗಾರ್ಮೆಂಟ್ಸ್ ಉದ್ಯಮದವರು ಲಾಭ ಹೊಂದಲಿದ್ದೀರಿ.

ಮಕರ: ರಾಜಕಾರಣದ ರಹಸ್ಯ ಮಾತುಕತೆಗಳಲ್ಲಿ ನಿಮ್ಮ ಸ್ಥಾನ ಮುಖ್ಯವಾಗಿರುವುದು. ತಾಯಿಯಿಂದ ಕಲಿತ ಪಾಠಗಳನ್ನು ನಿಮ್ಮ ಮುಂದಿನ ಪೀಳಿಗೆಗೆ ಕಲಿಸಿಕೊಡುವಂಥ ಸಂತಸದ ದಿನಗಳನ್ನ ನಿರೀಕ್ಷಿಸುವಿರಿ.

ಕುಂಭ: ನಿಮಗೆ ಬೇಕಾದ ವಸ್ತುಗಳು ನಿಮ್ಮ ಬಳಿ ಇಲ್ಲದಿದ್ದರು ಸಹ ಸ್ನೇಹಿತರಿಂದಾಗಿ ಸಮಯಕ್ಕೆ ಸರಿಯಾಗಿ ಬಂದೊದಗುತ್ತದೆ. ಲಕ್ಷ್ಯಗೊಟ್ಟು ಕೇಳಿದ ವಿಷಯಗಳು ಅಗತ್ಯ ಸಮಯದಲ್ಲಿ ಪ್ರಯೋಜನಕ್ಕೆ ಬರಲಿದೆ.

ಮೀನ: ಈ ದಿನದ ನಿಮ್ಮ ಕೆಲವು ತಪ್ಪುಗಳಿಗೆ ನಿಮ್ಮ ಸಣ್ಣ ವಯಸ್ಸಿನ ಕಾರಣಕ್ಕೆ ಕ್ಷಮೆ ಸಿಗಬಹುದು. ಶುಭ್ರವಾದಂತಹ ಉಡುಗೆ ತೊಡುಗೆಗಳು ನಿಮ್ಮ ಸ್ಥಾನಮಾನವನ್ನು ಹೆಚ್ಚಿಸುತ್ತದೆ. ತಾಳ್ಮೆ ನಿಮ್ಮ ಮಂತ್ರವಾಗಿರಲಿ.

ಪದಬಂಧ 6246

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅನುಕೂಲ ಸಂದರ್ಭ (4)
3.ಮಿತಿ ಮೀರಿದ ಸಿಟ್ಟು (3)
4.ವಾಸ್ತವ ಸಂಗತಿಯಿದು (4)
6.ವ್ಯವಸಾಯಗಾರನ ಅಳಲು (3)
7.ಅಧಿಕಾರ ನಡೆಸುವವನು (4)
8.ತಲೆಯಲ್ಲಿರಿಸಿಕೊಂಡಿರುವ ಅಡುಗೆಯ ಪಾತ್ರೆ (3)
9.ಈಕೆ ವಿದ್ಯಾಧಿದೇವತೆ (4)
12.ನೀರ ಮೇಲಣ ಗುಳ್ಳೆ (3)
13.ವರ ಪಡೆದಿರುವ ಬೇಡ (4)
15.ಬೆಟ್ಟದ ಗವಿ(3)
16.ಮಜದಲ್ಲಿರುವ ಚಕ್ರವರ್ತಿ! (4)

ಮೇಲಿಂದ ಕೆಳಕ್ಕೆ

1.ಅವಶ್ಯವಿಲ್ಲದ ಖರ್ಚು (4)
2.ವಶಕ್ಕೆ ಸಿಕ್ಕಿರುವ ಹೆಣ (2)
3.ತಪ್ಪು ತಿಳುವಳಿಕೆಯಿದು (3)
5.ಅಮೂಲ್ಯ ವಸ್ತುಗಳನ್ನಿಡುವ ಕಬ್ಬಿಣದ ಭಾರಿ ಪೆಟ್ಟಿಗೆ (3)
7.ಅಲೆದಾಡುವಾಗ ಅಪ್ಪಳಿಸಿದ ತೆರೆ (2)
8.ತರಗತಿಯಲ್ಲಿರುವ ಸಮೂಹ ಕಾಣುತ್ತಿದೆಯೇ? (2)
9.ಒಳ್ಳೆಯ ಭಾವನೆ (3)
10.ಕೊಬ್ಬಿದ ಆನೆ (4)
11. ಟಾರ ರಸ್ತೆಯಲ್ಲಿರುವ ಮೋರಿ (3)
14.ತಿರುವು ಮುರುವಾಗಿರುವ ವೃಕ್ಷ (2)



6245ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಸ್ತೂರಿ 3.ಬೆವರು 4.ವಾದ್ಯ 5.ಕಾರ್ಕಳ 6.ಗುಂಡು 9.ಕರ್ಣ 10.ವಿಜಯಪುರ 12.ಬಿಲ 13.ಗರ 14.ದಾತಾರ 15.ಪದ 16.ಸಂಚಾರಿ 17.ಗಣಿತ

ಮೇಲಿಂದ ಕೆಳಕ್ಕೆ:
1.ಕರು 2.ರಿವಾಜು 3.ಬೆಳಗಾವಿ 5.ಕಾಮನಬಿಲ್ಲು 7.ವರ್ಣಸಂಕರ 8.ಪಯಣ 11.ರಹದಾರಿ 13.ಗದಗ 16.ಸಂತ

ಸುಡೊಕು 6630

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		4	1	5			8	
				8		5		9
8		3			9		1	
3		9	5		1			
	6			9				
5		1	6		8			
	7			3	5	2		4
4		5						
	8			6		3		1

6629 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ದುಷ್ಕೃತ್ಯ, ಹೋಟೆಲ್‌ನಲ್ಲಿ ಔತಣಕೂಟ’

ಬಂಡಾಯವೆಂದರೆ ಪ್ರತಿರೋಧದ ಕಿಡಿ: ಲೇಖಕಿ ಬಾನು ಮುಷ್ತಾಕ್ ಮನದಾಳ

ಪ್ರಜಾವಾಣಿ ವಾರ್ತೆ

ಬಾನು ಅವರ ಮಾತು
- ಅನ್ಯಾಯದ ವಿಚಾರದಲ್ಲಿ ತಟಸ್ಥ ನಿಲುವು ಸರಿಯಲ್ಲ
- ದಮನಿತರ ಪರ ದನಿ ಎತ್ತುವುದೇ ಬಂಡಾಯದ ಬದ್ಧತೆ

ಬೆಂಗಳೂರು ಸಾಹಿತ್ಯ ಉತ್ಸವ

ಬೆಂಗಳೂರು: ‘ಇಡೀ ಜಗತ್ತು ಈಗ ವಿಧ್ವಂಸಕ ಮನಸ್ಥಿತಿಯಲ್ಲಿ ಇದೆ. ಎಷ್ಟೋ ನಾಯಕರು ಏನನ್ನೋ ಒಂದನ್ನು ಧ್ವಂಸಗೊಳಿಸುವ ಕಾರ್ಯದಲ್ಲಿದ್ದಾರೆ. ಜತೆಗೆ ತಾರಾ ಹೋಟೆಲುಗಳಲ್ಲಿ ಔತಣಕೂಟ ನಡೆಸುತ್ತಾರೆ’ ಎಂದು ಸಾಹಿತಿ ಬಾನು ಮುಷ್ತಾಕ್ ಹೇಳಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಆರಂಭವಾದ ಬೆಂಗಳೂರು ಸಾಹಿತ್ಯ ಉತ್ಸವದ 14ನೇ ಆವೃತ್ತಿಯ ಆಶಯ ನುಡಿಗಳ ಜತೆಗೆ, ‘ಬಾನು ಬಾನುವಾಗಿ, ಬಾನು ಬಂಡಾಯವಾಗಿ’ ಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ಪ್ಯಾಲೆಸ್ಟೀನ್ ಧ್ವಂಸವಾಗುತ್ತಿದೆ. ಇಸ್ರೇಲ್‌ನ ಜೈಲಿನಲ್ಲಿ ಕುಳಿತ ಪ್ಯಾಲೆಸ್ಟೈನಿಯನ್ ಲೇಖಕ ಬಶೀರ್, ತನ್ನ ನಾಡು ಛಿದ್ರವಾಗುತ್ತಿರುವ ಬಗ್ಗೆ ಬರೆದ ಕಾದಂಬರಿಗೆ ಪ್ರತಿಷ್ಠಿತ ಪ್ರಶಸ್ತಿ ಬಂದಿತು. ಆ ಪ್ರಶಸ್ತಿ ಸ್ವೀಕರಿಸುವಾಗ ಬಶೀರ್ ಅವರ ತುಟಿಗಳು ಅದುರುತ್ತಿದ್ದವು, ಗಂಟಲು ಉಬ್ಬಿತ್ತು, ಕಣ್ಣಾಲಿಗಳು ತುಂಬಿದ್ದವು. ತನ್ನ ಜಗತ್ತು ಧ್ವಂಸವಾಗುತ್ತಿರುವ ಕುರಿತಾಗಿ ಬಶೀರ್ ತಟಸ್ಥನಾಗೂ ಇರಲಿಲ್ಲ, ಮೌನವಾಗೂ ಇರಲಿಲ್ಲ’ ಎಂದರು.

‘ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆ ಮತ್ತು ಕ್ರೌರ್ಯಗಳ ವಿಚಾರದಲ್ಲಿ ತಟಸ್ಥ ಅಥವಾ ಮೌನವಾಗಿ ಬಿಟ್ಟರೆ, ಅವು ಸರಿ ಎಂದು ಆ ಕೃತ್ಯಗಳನ್ನು ದೃಢೀಕರಿಸಿದಂತಾಗುತ್ತದೆ. ಇಲ್ಲದವರ, ತುಳಿತಕ್ಕೆ ಒಳಗಾದವರ, ಮಹಿಳೆಯರ, ನೋವುಂಡವರ ಪರವಾಗಿ ದನಿ ಎತ್ತುವುದು ಮತ್ತು ಅವರ ಪರವಾಗಿ ನಿಲ್ಲುವುದು ಬಂಡಾಯದ ಬದ್ಧತೆ. ಹೀಗಾಗಿ ಮೌನ ಯಾವತ್ತಿಗೂ ನನ್ನ ಆಯ್ಕೆಯಾಗಿರಲಿಲ್ಲ’ ಎಂದರು.

‘ಎಷ್ಟೋ ಸಂದರ್ಭದಲ್ಲಿ ನೇರವಾಗಿ ಮೌನ ಮುರಿಯುವುದು ಸಾಧ್ಯವಾಗುವುದಿಲ್ಲ. ಆದರೆ ಪ್ರತಿರೋಧವನ್ನು ತೋರಲೇಬೇಕಲ್ಲವೇ? ಇಂತಹ ಪ್ರತಿರೋಧದ ಕಿಡಿಗಳು ಬಂಡಾಯ ಸಾಹಿತ್ಯವನ್ನು ರೂಪಿಸಿದ್ದು. ನನ್ನ ಕಥೆಗಳ ಪಾತ್ರಗಳೂ ಇದಕ್ಕೆ ಹೊರತಲ್ಲ. ವ್ಯಕ್ತವೋ ಅಥವಾ ಅವ್ಯಕ್ತವೋ, ಪ್ರತಿರೋಧದಿಂದಲೇ ಅವು ರೂಪುಗೊಂಡಿವೆ’ ಎಂದರು.

‘ಎದೆಯ ಹಣತೆ’ಯ ‘ಹೈಹೀಲ್ಡ್ ಶೂ’ನ ಆರಿಫಾ ಅಂಥದ್ದೇ ಒಂದು ಪಾತ್ರ. ಆಕೆಯ ಗಂಡ ನಯಾಜ್, ತನ್ನ ಅತ್ತಿಗೆ ನಸೀಮಾಳ ಹೈಹೀಲ್ಡ್ ಚಪ್ಪಲಿಗಳಿಂದ ಆಕರ್ಷಿತನಾಗಿ, ಆರಿಫಾಳೂ ಅದನ್ನು ಧರಿಸಲಿ ಎಂದು ಬಯಸುತ್ತಾನೆ. ಒಂದು ಹಂತದಲ್ಲಿ ಬಲವಂತದಿಂದ ಆರಿಫಾಳ ಕಾಲಿಗೆ ಅವುಗಳನ್ನು ತೊಡಿಸುತ್ತಾನೆ. ಆಕೆ ಐದು ತಿಂಗಳ ಗರ್ಭಿಣಿ. ಗಂಡನ ಒತ್ತಾಸೆಗೆ ಹೈಹೀಲ್ಡ್ ಚಪ್ಪಲಿ ಹಾಕುತ್ತಾಳೆ. ಹಿಂಸೆಯಾದರೂ ಸಹಿಸಿಕೊಳ್ಳುತ್ತಾಳೆ. ಆದರೆ ತನ್ನ ಒಡಲಲ್ಲಿರುವ ಮಗುವಿಗೆ ಉಸಿರುಕಟ್ಟುತ್ತಿದೆ ಎಂದು ಗೊತ್ತಾದಾಗ, ತನ್ನೆಲ್ಲಾ ಭಾರವನ್ನು ಚಪ್ಪಲಿ ಮೇಲೆ ಹೇರಿ ಅದನ್ನು ಮುರಿಯುತ್ತಾಳೆ. ನೇರ ಪ್ರತಿರೋಧ ಸಾಧ್ಯವಿರದಾಗ, ಈ ರೀತಿಯ ಪ್ರತಿರೋಧ ಬೇಕು’ ಎಂದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಪ್ರತೀತಿ ಪೂಂಜಾ ಬಲ್ಲಾಳ್ ಅವರು ನಡೆಸಿಕೊಟ್ಟ ಸಂವಾದದಲ್ಲಿ ಬಾನು ಮುಷ್ತಾಕ್ ಅವರ ಮಾತು–ಕತೆ —ಪ್ರಜಾವಾಣಿ ಚಿತ್ರ

‘ಧ್ವಂಸವಾಗಿದ್ದು ಮಸೀದಿಯಲ್ಲ, ಭ್ರಾತೃತ್ವ’

‘ಭಾರತವು ಅಂಬೇಡ್ಕರ್ ಮತ್ತು ಭ್ರಾತೃತ್ವವನ್ನು ಕಳೆದುಕೊಂಡದ್ದು ಇದೇ ಡಿ. 6 ರಂದು. ಇದು ಕರಾಳ ಡಿ. 6’ ಎಂದು ಬಾನು ಮುಷ್ತಾಕ್ ಅವರು ಹೇಳಿದರು.

‘ದೇಶದ ಜನರಿಗೆ ಸಮಾನತೆ, ಭ್ರಾತೃತ್ವವನ್ನು ಬೋಧಿಸಿದ್ದ ಅಂಬೇಡ್ಕರ್ ಅವರು ಪರಿನಿರ್ವಾಣವಾದದ್ದು ಇದೇ ದಿನ. ಇದೇ ದಿನ ಬಾಬರಿ ಮಸೀದಿಯೂ ಧ್ವಂಸವಾಯಿತು. ಅಲ್ಲಿ ಧ್ವಂಸವಾಗಿದ್ದು ಮಸೀದಿಯಲ್ಲ, ಬದಲಿಗೆ ದೇಶದ ಜನರ ಭ್ರಾತೃತ್ವ ಭಾವನೆ. ಇವೆರಡೂ ನಮ್ಮ ಪ್ರಜಾಪ್ರಭುತ್ವಕ್ಕೆ ಆದ ನಷ್ಟ’ ಎಂದರು.

‘ಕೆಲವೊಮ್ಮೆ ಇತಿಹಾಸವನ್ನು ತಿರುಗಿ ನೋಡಲೇಬೇಕಾಗುತ್ತದೆ. ನಾವು ಕಳೆದುಕೊಂಡದ್ದು ಏನು ಮತ್ತು ಮುಂದೇನು ಮಾಡಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳಲು ನಾವು ಹಿಂತಿರುಗಿ ನೋಡಲೇಬೇಕು’ ಎಂದರು.

ಮೀಸಲಾತಿ ಹೆಚ್ಚಳ: 9ನೇ ಪರಿಚ್ಛೇದಕ್ಕೆ ಸೇರಿಸಲು ಉಗ್ರಪ್ಪ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣವನ್ನು ಶೇಕಡ 56ರಷ್ಟು ಹೆಚ್ಚಿಸಿರುವುದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸುವಂತೆ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ಹೇರಬೇಕು’ ಎಂದು ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ವಿ.ಎಸ್. ಉಗ್ರಪ್ಪ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೀಸಲಾತಿ ಹೆಚ್ಚಿಸುವ ಕಾಯ್ದೆ ರೂಪಿಸಲಾಗಿತ್ತು. ಆದರೆ, ಅದನ್ನು ಅನುಷ್ಠಾನ ಮಾಡದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಸಮುದಾಯದವರೊಂದಿಗೆ ಚೆಲ್ಲಾಟ ಆಡಲಾಗುತ್ತಿದೆ. ಕೂಡಲೇ ರಾಜ್ಯ ಸರ್ಕಾರ ಸರ್ವ ಪಕ್ಷಗಳ ಸಭೆ ಕರೆದು ಈ ಬಗ್ಗೆ ಚರ್ಚಿಸಬೇಕು. ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ’ ಎಂದರು.

‘ತಮಿಳುನಾಡಿನಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 69ಕ್ಕೆ ಹೆಚ್ಚಿಸಿದ್ದನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಲಾಗಿದೆ. ಈ ಮೂಲಕ ಕಾಯ್ದೆಯ ಸಿಂಧುತ್ವವನ್ನು ನ್ಯಾಯಾಲಯದಲ್ಲಿ ಯಾರೂ ಪ್ರಶ್ನಿಸದಂತೆ ಮಾಡಲಾಗಿದೆ. ಇದು ಎಲ್ಲ ರಾಜ್ಯಗಳಿಗೂ ಮಾದರಿ. ರಾಜ್ಯದ ಕಾಂಗ್ರೆಸ್ ಸರ್ಕಾರವೂ ಈ ಪ್ರಯತ್ನ ಮಾಡಬೇಕು. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಿಸಲಾಗಿತ್ತು. ಈಗ ಅವರು, ಗೋವಿಂದ ಕಾರಜೋಳ ಹಾಗೂ ಜಗದೀಶ ಶೆಟ್ಟರ್ ಅವರು ಸಂಸದರಾಗಿದ್ದಾರೆ. ಈ ವಿಚಾರದಲ್ಲಿ ಎಲ್ಲ ಪಕ್ಷಗಳು ಬೆಂಬಲಿಸಬೇಕು’ ಎಂದು ಹೇಳಿದರು.

‘ಮೀಸಲಾತಿ ಪ್ರಮಾಣ ಹೆಚ್ಚಿಸಲಾಗಿದ್ದರೂ ಅನುಷ್ಠಾನಗೊಂಡಿಲ್ಲ. ಇದರಿಂದ ಸಾಮಾಜಿಕ ನ್ಯಾಯಕ್ಕೆ ಪೆಟ್ಟು ಬಿದ್ದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಈ ಬಗ್ಗೆ ಸ್ಪಷ್ಟ ಕಾನೂನು ರೂಪಿಸಬೇಕು’ ಎಂದು ಆಗ್ರಹಿಸಿದರು.

‘ಎಸ್‌ಟಿಗೆ ಯಾರನ್ನಾದರೂ ಸೇರಿಸಿ’

‘ಪರಿಶಿಷ್ಟ ಪಂಗಡಕ್ಕೆ(ಎಸ್‌ಟಿ) ಕುರುಬರು ಸೇರಿದಂತೆ ಬೇರೆ ಯಾವ ಜಾತಿಯವನ್ನಾದರೂ ಸೇರಿಸಬಹುದು. ಆದರೆ, ಆ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ನಂತರ ಅದನ್ನು ಪರಿಶೀಲಿಸಬೇಕು. ಆ ಸಮುದಾಯಗಳಿಗೆ ಈಗಿರುವ ಮೀಸಲಾತಿಯ ಪ್ರಮಾಣದ ಜೊತೆಗೆ ಎಸ್‌ಟಿಗೆ ಸೇರಬಹುದು’ ಎಂದು ವಿ.ಎಸ್. ಉಗ್ರಪ್ಪ ಹೇಳಿದರು.

‘ಕುರುಬರನ್ನು ಎಸ್‌ಟಿಗೆ ಸೇರಿಸಲು ಸಿದ್ದರಾಮಯ್ಯ ಶಿಫಾರಸು ಮಾಡಿಲ್ಲ. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಆಗಿದ್ದಾಗಲೇ ಕುರುಬರನ್ನು ಹಾಗೂ ವಾಲ್ಮೀಕಿ ಸಮುದಾಯಗಳನ್ನು ಎಸ್‌ಟಿಗೆ ಸೇರಿಸಲು ಶಿಫಾರಸು ಮಾಡಲಾಗಿತ್ತು. ಇದರಲ್ಲಿ ಪರಿಶಿಷ್ಟ ಪಂಗಡದ ಮೀಸಲಾತಿ ನಾಯಕರಿಗೆ ಮಾತ್ರ ಸಿಕ್ಕಿತ್ತು. ಹಿಂದಿನ ಬಿಜೆಪಿ ಸರ್ಕಾರ ಇದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು’ ಎಂದು ತಿಳಿಸಿದರು.

ಚಿಟಿಕೆ ಸುದ್ದಿ

ಯಶ್ ಅರ್ಜಿ ಮಾನ್ಯ: ಐಟಿ ನೋಟಿಸ್ ರದ್ದು

ಬೆಂಗಳೂರು: ಚಿತ್ರನಟ ಯಶ್ ಅವರಿಗೆ ಆದಾಯ ತೆರಿಗೆ ಇಲಾಖೆ ನೀಡಿದ್ದ ನೋಟಿಸ್‌ಗಳನ್ನು ಹೈಕೋರ್ಟ್ ರದ್ದುಪಡಿಸಿದೆ.

‘ಆದಾಯ ತೆರಿಗೆ ಕಾಯ್ದೆ-1961ರ ಕಲಂ 153 ಸಿ ಅಡಿಯಲ್ಲಿ ಆರು ವರ್ಷಗಳ ಅವಧಿಯ ಆದಾಯ ತೆರಿಗೆ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ನೀಡಲಾಗಿರುವ ನೋಟಿಸ್‌ಗಳನ್ನು ರದ್ದುಗೊಳಿಸಬೇಕು’ ಎಂದು ಕೋರಿ ಯಶ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

‘ನೋಟಿಸ್‌ಗಳು ಸಮರ್ಥನೀಯ ಕಾರಣಗಳಿಂದ ಕೂಡಿಲ್ಲ. ನೋಟಿಸ್ ನೀಡುವಾಗ ಕಾನೂನು ಪ್ರಕ್ರಿಯೆಯ ಉಲ್ಲಂಘನೆಯಾಗಿದೆ. ಹೀಗಾಗಿ, ಇವು ಊರ್ಜಿತವಾಗುವುದಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ಬೆಂಗಳೂರಿನ ನಿವಾಸದಲ್ಲಿ ಶೋಧ ನಡೆಸಿದ್ದರೂ ಅಧಿಕಾರಿಗಳು ಅವರನ್ನು ಶೋಧಿಸದ ವ್ಯಕ್ತಿ ಎಂದು ತಪ್ಪಾಗಿ ನಡೆಸಿಕೊಂಡಿದ್ದಾರೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಪೀಠ’ಗಳ ವರದಿ ಪರಿಶೀಲನೆಗೆ ಬರಗೂರು ಸಮಿತಿ

ಬೆಂಗಳೂರು: ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿನ ಅಧ್ಯಯನ ಪೀಠಗಳ ಸ್ಥಿತಿಗತಿ ಕುರಿತು ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಓ.ಅನಂತರಾಮಯ್ಯ ಅವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಲು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ತ್ರಿಸದಸ್ಯ ಸಮಿತಿ ರಚಿಸಿ, ಸರ್ಕಾರ ಆದೇಶ ಹೊರಡಿಸಿದೆ.

ಬರಗೂರು ರಾಮಚಂದ್ರಪ್ಪ

ಸಾಹಿತಿಗಳಾದ ನಟರಾಜ ಹುಳಿಯಾರ್, ವಸುಂಧರಾ ಭೂಪತಿ ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಲಾಗಿರುವ ವಿವಿಧ ಅಧ್ಯಯನ ಪೀಠಗಳು ನಾಮಕಾವಾಸ್ತೆಗೆ ಎನ್ನುವಂತಾಗಿವೆ. ಅನುದಾನ ಕೊರತೆ, ವಿಶ್ವವಿದ್ಯಾಲಯಗಳ ನಿರಾಸಕ್ತಿ ಮತ್ತಿತರ ಕಾರಣಗಳಿಂದ ಬಹಳಷ್ಟು ಪೀಠಗಳು ನಿಷ್ಕ್ರಿಯಾಗಿವೆ. ಅವುಗಳ ಚಟುವಟಿಕೆ, ಸ್ಥಿತಿಗತಿ ಕುರಿತು ವರದಿ ನೀಡಲು ಅನಂತರಾಮಯ್ಯ ಅವರನ್ನು ನೇಮಿಸಲಾಗಿತ್ತು.

ಮೂರು ದಿನ ಚಳಿ

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮುಂದಿನ ಮೂರು ದಿನ ಬೆಳಗಿನ ಜಾವ ದಟ್ಟವಾದ ಮಂಜು ಕವಿದ ವಾತಾವರಣ ಇರಲಿದ್ದು, ಚಳಿಯ ತೀವ್ರತೆ ಇರಲಿದೆ. ಹಗಲು ವೇಳೆ ಅಲ್ಲಲ್ಲಿ ಮೋಡದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರು ನಗರದಲ್ಲಿ ಗರಿಷ್ಠ ತಾಪಮಾನ 27 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 17 ಡಿಗ್ರಿ ಸೆಲ್ಸಿಯಸ್ ಇರಲಿದೆ. ಕರಾವಳಿ ಭಾಗದಲ್ಲಿ ಕನಿಷ್ಠ ತಾಪಮಾನದಲ್ಲಿ ಯಾವುದೇ ಬದಲಾವಣೆ ಇಲ್ಲ. ಆದರೆ, ಒಳನಾಡು ಭಾಗದ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ ಮತ್ತಷ್ಟು ಇಳಿಕೆ ಆಗಲಿದೆ ಎಂದು ಮುನ್ಸೂಚನೆ ನೀಡಿದೆ.

ಕಳೆದ 24 ಗಂಟೆಯಲ್ಲಿ ಬೀದರ್‌ನಲ್ಲಿ ಗರಿಷ್ಠ ತಾಪಮಾನ 28 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ ತಾಪಮಾನ 13.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಧಾರವಾಡದಲ್ಲಿ ಗರಿಷ್ಠ 26.2 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ 16.6 ಸೆಲ್ಸಿಯಸ್ ಹಾಗೂ ಗದಗದಲ್ಲಿ ಗರಿಷ್ಠ 28.6 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ 17.4 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಸಾರಿಗೆ ಸದನ ಮುಖ್ಯ ರಸ್ತೆ, ಕಲಬುರಗಿ–585102
(ಯಾಂತ್ರಿಕ ಇಲಾಖೆ)
ಸಂ. ಕಕರಸಾ/ಕೇಕ/ಯಾಂ/1188/2025–26 ದಿನಾಂಕ : 06–12–2025
:: ಟೆಂಡರ ಆಹ್ವಾನ ಸೂಚನಾ ಪತ್ರ ::
ಟೆಂಡರ್ ಸಂಖ್ಯೆ ಟಿ–74 ದಿನಾಂಕ 05/12/2025
(KPP Portal Ref No KKRTC/2025-26/IND0178)
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ “ವೇಗದೂತ ಮಾದರಿಯ 400 ಹೊಸ ಬಸ್ಸುಗಳ ಖರೀದಿ” (Supply of Type-II Ndx Fully Built Mofussil buses) ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಹೆಚ್ಚಿನ ವಿವರಗಳನ್ನು ವೆಬ್ ಸೈಟ್ ವಿಳಾಸ http://kppp.karanataka.gov.in ನಲ್ಲಿ ಪಡೆಯಬಹುದಾಗಿದೆ. ಸದರಿ ಪೋರ್ಟಲ್ ನಲ್ಲಿ ದಿನಾಂಕ: 05.01.2026 ರಂದು ಸಮಯ: 17.30 ಗಂಟೆಯವರೆಗೆ ಬಿಡ್ ಸಲ್ಲಿಸಬಹುದಾಗಿರುತ್ತದೆ. ಟೆಂಡರಿನ ಅಂದಾಜು ಮೊತ್ತ ರೂ. 151.00 ಕೋಟಿಗಳಾಗಿರುತ್ತದೆ.
ಕ.ಕ.ರ.ಸಾ. ನಿಗಮದ ವತಿಯಿಂದ ಮಾಹಿತಿ ಅಗತ್ಯವಿದ್ದಲ್ಲಿ cme.kkrtc@gmail.com ಇ–ಮೇಲ್ ಮಾಡಬಹುದಾಗಿರುತ್ತದೆ. (ಮೊಬೈಲ್ ಸಂಖ್ಯೆ: 7760992001)
ಸಹಿ/– ಮುಖ್ಯ ಯಾಂತ್ರಿಕ ಅಭಿಯಂತರರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)
ವಾ.ಸಾ.ಸಂ.ಇ/ಕಲಬುರಗಿ/822/ಕೆ.ಎಸ್.ಎಂ.ಸಿ.&ಎ/2025–26

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು–577101
(Autonomous Medical Institution, Government of Karnataka)
Phone: 08262-295347 E-Mail Address: directorcims2020@gmail.com
ಸಂಖ್ಯೆ: ಸಿಮ್ಸ್/ಸರಬ/ಟೆಂಡರ್/ಪತ್ರಿಕಾ ಪ್ರಕಟಣೆ/01/2025–26 ದಿನಾಂಕ: 02.12.2025
ಇ–ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ)
ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಘಟಕಕ್ಕೆ ಮತ್ತು ಅರವಳಿಕೆಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ಕೆಳಕಂಡ ವಿವಿಧ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಮತ್ತಿತ್ತರ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.

ಕ್ರ.ಸಂ	ವಿವರಗಳು	ಟೆಂಡರ್‌ನ ಅಂದಾಜು ಮೊತ್ತ	ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ	ಅರ್ಜಿ ಸಲ್ಲಿಕೆ ಅಂತಿಮ ದಿನಾಂಕ
01	ಅರವಳಿಕೆಶಾಸ್ತ್ರ ವಿಭಾಗಕ್ಕೆ Fiber optic Bronchoscopy (Video bronchoscopy system with medical grade monitor ನ್ನು ಸರಬರಾಜು ಪಡೆಯುವ ಕುರಿತು	40.00 ಲಕ್ಷಗಳು (ಇ.ಎಂ.ಡಿ ರೂ.1,00,000/–)	06–12–2025	22–12–2025
02	ಅರಳಗುಪ್ಪೆ ಮಲ್ಲೇಗೌಡ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಘಟಕಕ್ಕೆ AUTO CLAVE ನ್ನು ಸರಬರಾಜು ಪಡೆಯುವ ಕುರಿತು	30.00 ಲಕ್ಷಗಳು (ಇ.ಎಂ.ಡಿ ರೂ.75,000/–)	06–12–2025	22–12–2025

ಸಹಿ/– ನಿರ್ದೇಶಕರು,
ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು

ಮಹಾನಗರ ಪಾಲಿಕೆ, ಕಲಬುರಗಿ
ದೂ. : 08472/278675 ಫ್ಯಾಕ್ಸ : 08472/260776, ಇ ಮೇಲ್ itstaff_ulb_gulbarga@yahoo.com
No: KMP/EE/ Amrut2.0/ 2025-26 ದಿನಾಂಕ:06.12.2025.
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ
ಸಂಖ್ಯೆ: 02/Amrut2.0/2025-26
1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ ಕೇಂದ್ರ ಪುರಸ್ಕೃತ ಅಮೃತ 2.0 ಹಾಗೂ ಜಲ ಹೀ ಅಮೃತ ಯೋಜನೆಯ ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (03) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ– 3 & 4 ರ ಮೂಲಕ 07 ದಿನಗಳ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ ರೂ. 92.68 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 200.00 ಲಕ್ಷಗಳು. 3) ಗುತ್ತಿಗೆದಾರರ ಅರ್ಹತೆ ವಿವರಃ 3ನೇ ದರ್ಜೆ ಮತ್ತು ಹೆಚ್ಚು, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 1,57,100.00 ಗಳು ಹಾಗೂ ಗರಿಷ್ಠ ರೂ. 2,55,000.00 ಗಳು. 5) ಪೂರ್ವಭಾವಿ ಸಭೆ ದಿನಾಂಕ:12.12.2025 ರಂದು ಬೆಳಿಗ್ಗೆ 11:00 ಗಂಟೆಗೆ. 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 15.12.2025 ರಂದು ಸಾಯಂಕಾಲ 4:30 ಗಂಟೆಗೆ. 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: 16.12.2025 ರಂದು ಸಾಯಂಕಾಲ 04:35 ಗಂಟೆಗೆ. 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.12.2025 ರಂದು ಬೆಳಿಗ್ಗೆ 11:30 ಗಂಟೆಗೆ. ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ ಃ ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/
Note: All subsequent corrigendum/amendment shall be published only on website and not in press. Hence, tenderers are advised to always be in touch with our said website until the tender is finally opened.
ಸಹಿ/– ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/829/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರಕಾರ
ಪುರಸಭೆ ಕಾರ್ಯಾಲಯ, ಕೆಂಭಾವಿ
ತಾ: ಸುರಪುರ ಜಿ: ಯಾದಗಿರಿ.
Website:www.kembhavitown.mrc.gov.in, e-mail:-ka.kembhavi.tmc@gmail.com
ಕ್ರ.ಸಂ.:ಪು.ಸ.ಕೆ:ಹೊ.ಗು:ಸಿ.ಆರ್:5:2025–26 ದಿನಾಂಕ:04.12.2025
:: ಮರು ಟೆಂಡರ್ ಪ್ರಕಟಣೆ ::(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ, ಈ ಕೆಳಗಡೆ ಸಹಿ ಮಾಡಿರುವವರು ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕಾಮಗರಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯಶಾಖೆಯಿಂದ ಪಡೆಯಬಹುದು.
2025–26 ನೇ ಸಾಲಿನ ಪುರಸಭಾ ನಿಧಿ
ಕಾಮಗಾರಿ ವಿವರ: Supplying of Drivers, Sanitary supervisor, Helper/Assistants/Watchmen. ಟೆಂಡರಿಗಿಟ್ಟ ಮೊತ್ತ (ಲಕ್ಷಗಳಲ್ಲಿ): Rs.58.66/-. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): 146650/-.ಟೆಂಡರ್ ಫಾರಂ ಬೆಲೆ (ರೂ. ಗಳಲ್ಲಿ):Refer e-procure mental portal. ಇಂಡೆಂಟ್ ಸಂಖ್ಯೆ:DMA/2025-26/SE6644/CALL-2
ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ:
1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 18.12.2025 ಸಂಜೆ 5.30 ಘಂಟೆ. 2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.12.2025 ಬೆಳಗ್ಗೆ 11.30 ಘಂಟೆ. 3) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 23.12.2025 ಬೆಳಗ್ಗೆ 11.30 ಘಂಟೆ.
ಸಹಿ/– ಮುಖ್ಯಾಧಿಕಾರಿ ಪುರಸಭೆ ಕೆಂಬಾವಿ
ವಾ.ಸಾ.ಸಂ.ಇ/ಯಾದಗಿರಿ/416/ಕೆ.ಎಸ್.ಎಂ.ಸಿ.&ಎ/2025–26

ಕಂದಾಯ ಇಲಾಖೆ
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
ಸಂ:ಎಜಿ.ಎಸ್.ಕೆ.ಸಿ.ಆರ್ /34/2025–26 ದಿನಾಂಕ:06.12.2025
ಇ–ಪ್ರಕ್ಯೂರ್‌ಮೆಂಟ್ ಇ–ಟೆಂಡರ್ ಪ್ರಕಟಣೆ
ಚಿತ್ರದುರ್ಗ ಜಿಲ್ಲೆಯ ಅಟಲ್ ಜೀ ಜನಸ್ನೇಹಿ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡುವ ಕುರಿತು ನೋಂದಾಯಿತ ಹೊರ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಇ–ಪೋರ್ಟಲ್ ಮುಖಾಂತರ ದಿನಾಂಕ:06.12.2025 ರಂದು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಂಖ್ಯೆ-RD/2025-26/SE0486) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:20.12.2025 ಸಂಜೆ 5–30 ಗಂಟೆಗೆ ನಿಗದಿಪಡಿಸಲಾಗಿದೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.inರಲ್ಲಿ ನೋಡಬಹುದಾಗಿದೆ.
ಟೆಂಡರ್ ಪ್ರಾರಂಭವಾದ ದಿನಾಂಕ :06.12.2025
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:20.12.2025 ಸಂಜೆ 5–30 ಗಂಟೆಗೆ
ಟೆಂಡರ್‌ನ ಅಂದಾಜು ಮೊತ್ತ ರೂ. 1,25,89949/– ಇಎಂಡಿ ಮೊತ್ತ ರೂ.1,90,000/–
DIPR/CTA/KSMCA/515/2025-26
ಸಹಿ/–ಜಿಲ್ಲಾಧಿಕಾರಿಗಳ ಪರವಾಗಿ ಚಿತ್ರದುರ್ಗ ಜಿಲ್ಲೆ.

ಕರ್ನಾಟಕ ಸರ್ಕಾರ ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ದಾವಣಗೆರೆ.
ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು ರಸ್ತೆ, ದಾವಣಗೆರೆ–577004
ದೂರವಾಣಿ ಸಂಖ್ಯೆ: 08192 222701 ಇ.ಮೇಲ್: dcpudvg1@gmail.com
ಸಂ:ಜಿಮರಘದಾ/ಬಾ.ಸಿ.ಟೆ.ಪ್ರ/2025–26 ದಿನಾಂಕ: 05.12.2025
ಟೆಂಡರ್ ಪ್ರಕಟಣೆ
ಟೆಂಡರ್ ಸಂಖ್ಯೆ: ಜಿಮರಘದಾ/ಸು.ಸಂಸ್ಥೆ/ಬಾ.ಸಿ/ಟೆ.ಆ/2025–26 ದಿ: 05.12.2025
ಟೆಂಡರ್ ಹೆಸರು:– 2025–26ನೇ ಸಾಲಿಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯ,– ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ, ಸರ್ಕಾರಿ ಬಾಲಕರ/ಬಾಲಕಿಯರ ಬಾಲಮಂದಿರ, ಸರ್ಕಾರಿ ವೀಕ್ಷಣಾಲಯ, ವಿಶೇಷ ದತ್ತು ಸಂಸ್ಥೆ ಅಮೂಲ್ಯ(ಜಿ), ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿ, ದಾವಣಗೆರೆಯಲ್ಲಿ ಹೊರ ಸಂಪನ್ಮೂಲ ಏಜೆನ್ಸಿಯಿಂದ 2025–26ನೇ ಸಾಲಿಗೆ ಒಟ್ಟು 69 ಬಾಹ್ಯಮೂಲ ಸಿಬ್ಬಂದಿಗಳ ಸೇವೆ ಪಡೆಯಲು KPPP ಮೂಲಕ ಟೆಂಡರ್ ಪಡೆಯುವ ಬಗ್ಗೆ.
ತಾಂತ್ರಿಕ ಮತ್ತು ಆರ್ಥಿಕ ಬಿಡ್ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 05–12–2025
ಟೆಂಡರ್ ಅಂದಾಜು ಮೌಲ್ಯ ರೂ.1.70 ಲಕ್ಷ. (170 ಲಕ್ಷಗಳು)
ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ ರೂ. 2,55,000/–ಗಳು
ತಾಂತ್ರಿಕ ಮತ್ತು ಆರ್ಥಿಕ ಬಿಡ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 19–12–2025.
ಟೆಂಡರ್ ಅರ್ಜಿ ಅಪ್ ಲೋಡ್ ಮಾಡಿದ ದಿನಾಂಕ: 05–12–2025
ಸೂಚನೆ:– ಟೆಂಡರ್ ಅರ್ಜಿಯನ್ನು https://kppp.karnataka.gov.in ಪೋರ್ಟಲ್ ಮೂಲಕ ಸಲ್ಲಿಸುವುದು.
DIPR/MCA/KSMCA/540/2025-26
ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ದಾವಣಗೆರೆ.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್,ಬಳ್ಳಾರಿ–583105
ಕುಲಸಚಿವರು(ಮೌಲ್ಯಮಾಪನ) ದೂಸಂ:08392241011
ಸಂಖ್ಯೆ:ವಿಶ್ರೀಕೃವಿಬ/ಪರೀಕ್ಷಾ/2025–26/1674 ದಿನಾಂಕ:04.12.2025
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್ ಮೆಂಟ್ ಮುಖಾಂತರ ಮಾತ್ರ)
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಅಗತ್ಯವಿರುವ ಉತ್ತರ ಪತ್ರಿಕೆಗಳನ್ನು ಈ ಕೆಳಕಂಡಂತೆ ಮುದ್ರಿಸಿ ಸರಬರಾಜು ಮಾಡವ ನಿಮಿತ್ತ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಪ್ರಕಟಣೆಯನ್ನು ದಿನಾಂಕ: 05.12.2025 ರಂದು ಆಹ್ವಾನಿಸಲಾಗಿದೆ.
ಕೆಲಸದ ಹೆಸರು: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡವ ಕುರಿತು. ಕೆಲಸದ ಅಂದಾಜು ಮೊತ್ತ ರೂ.ಗಳಲ್ಲಿ: 2,00,20,000/–. EMD (ರೂ.ಗಳಲ್ಲಿ): 5,00,500/– ಟೆಂಡರ್ ಪ್ರಕ್ರಿಯೆ ಶುಲ್ಕ (ರೂ.ಗಳಲ್ಲಿ): ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ. ಕೆಲಸ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ: 10 ದಿನಗಳು
ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸ್ವೀಕರಿಸಲಾಗುವುದು. ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ದಿನಾಂಕ: 18.12.2025ರ 05.00 ಗಂಟೆಯ ವರಗೆ ವೆಬ್‌ಸೈಟ್ www.e-proc.karnataka.gov.in ನಲ್ಲಿ ಹಾಗೂ ಇತರೆ ಮಾಹಿತಿಯನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು.
ಸಹಿ/–ಕುಲಸಚಿವರು(ಮೌಲ್ಯಮಾಪನ)
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ–583105.
ಡಿಐಪಿಆರ್/ಬಳ್ಳಾರಿ/755/ಕೆಎಸ್‌ಎಂಸಿಎ/2025–26

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯರಸ್ತೆ, 2ನೇ ಬ್ಲಾಕ್, ಜಯನಗರ, ಕನಕಪಾಳ್ಯ, ಬೆಂಗಳೂರು–560 011
ಸಂಖ್ಯೆ: ಕಾಪಾಅ/ಚಿಪೇ/ಇ–ಪ್ರೊಕ್/06/2025–26 ದಿನಾಂಕ: 06–12–2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, (ಚಿಕ್ಕಪೇಟೆ ವಿಭಾಗ) ಬೆಂ.ಕೇಂ.ನ.ಪಾಲಿಕೆ ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ /ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಎಸ್‌ಟಿಡಿ–ಕೆಡಬ್ಲ್ಯೂ–4)

ಕ್ರ ಸಂ.	ಕಾಮಗಾರಿಯ ಹೆಸರು
1	2025–26 ನೇ ಸಾಲಿಗೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಕೆಂಪೇಗೌಡನಗರ ಉಪವಿಭಾಗದಲ್ಲಿ ಆಯ್ದ ಪ್ರಧಾನ, ಉಪಪ್ರಧಾನ ಮತ್ತು ಇತರೆ ಪ್ರಮುಖ ರಸ್ತೆಗಳನ್ನು ರೀಸರ್ಫೇಸಿಂಗ್ ಮಾಡುವುದು. (ಸರ್ಕಾರದ ಅನುಬಂಧ–1ರಲ್ಲಿ 11 ಕಾಮಗಾರಿಗಳನ್ನು ಒಳಗೊಂಡಿದೆ ಕ್ರ. ಸಂ: 123, 124, 125, 128, 129, 130, 136, 137, 138, 140 & 141). (ಪ್ಯಾಕೇಜ್–3) 2ನೇ ಕರೆ. ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.1096.24 ಲಕ್ಷಗಳು, ಇಎಂಡಿ ಮೊತ್ತ: ₹.1.00 ಲಕ್ಷ ಕೆಪಿಪಿ ಪೋರ್ಟಲ್ ಮುಖಾಂತರ & ₹.14,00,000/– ಬಿಜಿ ಮೂಲಕ

ಟೆಂಡರ್ ವೇಳಾಪಟ್ಟಿ: (1) ಬಿಡ್–ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರು ವಲಯ–2 ರವರ ಕಚೇರಿ, ಬೆಂ.ಕೇಂ.ನ.ಪಾಲಿಕೆ, ಅನೆಕ್ಸರ್–3, ಜಿಬಿಎ ಕಚೇರಿ ಆವರಣ, ನರಸಿಂಹರಾಜ ಚೌಕ, ಬೆಂಗಳೂರು ಇಲ್ಲಿ ದಿನಾಂಕ 15–12–2025ರ ಮಧ್ಯಾಹ್ನ 3:00 ಗಂಟೆಗೆ ನಡೆಸಲಾಗುವುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 19–12–2025ರ ಸಂಜೆ 4:00 ಗಂಟೆಯವರೆಗೆ. (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 20–12–2025ರ ಸಂಜೆ 4:30 ಗಂಟೆಗೆ. (4) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ

ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ
9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ|| ಬಿ. ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂರವಾಣಿ: 080–22867172/22866302
ಫ್ಯಾಕ್ಸ್: 080–22863576 /22861665
ಇ–ಮೇಲ್: sedmatech@gmail.com Website: www.municipaladmn.gov.in
ಸಂಖ್ಯೆ: 1802916 DMA/TECH/MGNV/31/2025 ದಿನಾಂಕ: 03.12.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (ಹಂತ–2) ಯಡಿ UIDF ಮಾರ್ಗಸೂಚಿಯನ್ವಯ ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಈ ಕೆಳಕಂಡಂತೆ ಟೆಂಡರ್ ಪ್ರಕ್ರಿಯೆ ನಡೆಸಲು ಉದ್ದೇಶಿಸಲಾಗಿದೆ

Sl. No	Work Indent No.	Project cost (Rs. In Lakhs)
1.	DMA/2025-26/RD/WORK_INDENT39807/CALL-2 ಶಿವಮೊಗ್ಗ ಮಹಾನಗರ ಪಾಲಿಕೆ	886.00

ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚಾರಪಡಿಸಲಾಗಿದ್ದು, ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಬಿಡ್‌ದಾರರು/ ಏಜೆನ್ಸಿದಾರರು ಭಾಗವಹಿಸಲು ಕೋರಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಇತರೇ ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.
ಸಹಿ/– ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
DIPR/CP/4279/Zen/2025-26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810
ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:20/2025–26 ದಿ:28.11.2025
ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗದಡಿಯಲ್ಲಿನ ನಂ.2 ವಿಶೇಷ ಉಪ ವಿಭಾಗ, ಮೈಸೂರು ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ : 4059–80–051–0–29–386 ಇಲಾಖಾ ಕಟ್ಟಡಗಳ ನಿರ್ಮಾಣ ಅಡಿಯಲ್ಲಿ ಅನುಮೋದನೆಯಾದ ಒಟ್ಟು 02 ಸಂಖ್ಯೆಯ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ (viz https://kppp.karnataka.gov.in/)ಭಾಗವಹಿಸಬಹುದಾಗಿರುತ್ತದೆ. ಕ್ರಮ ಸಂಖ್ಯೆ (1) ಮತ್ತು (2)ರ ಕಾಮಗಾರಿಗಳಿಗೆ ದಿ:01.12.2025 ರಿಂದ 31.12.2025, ರ ಸಂಜೆ 17:00ರ ವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.312.38 ಲಕ್ಷಗಳು ಹಾಗೂ ಕನಿಷ್ಠ ಇ.ಎಂ.ಡಿ ರೂ.4.69 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.604.91 ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ರೂ.9.07 ಲಕ್ಷಗಳಾಗಿರುತ್ತದೆ. ಸದರಿ ಕಾಮಗಾರಿಗಳ ಪೂರ್ವಭಾವಿ ಸಭೆಯನ್ನು ದಿ: 15.12.2025 ರಂದು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಪೂರ್ವಾಹ್ನ 11.00ಕ್ಕೆ ನಿಗಧಿಪಡಿಸಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್
DIPR/DDMYS/1311/KSMCA/751/2025-26

ಕರ್ನಾಟಕ ಸರ್ಕಾರ
KEA ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.
ವೆಬ್‌ಸೈಟ್ https://cetonline.karnataka.gov.in/kea/ugneet2025
e-mail: keauthority-ka@nic.in
No. ED/KEA/ UGNEET /2025 Date: 06-12-2025
ವೈದ್ಯಕೀಯ ಮತ್ತು ದಂತವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ 3ನೇ ಸುತ್ತಿನ ಸೀಟು ಹಂಚಿಕೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಅನ್ವಯ ಪರಿಷ್ಕರಿಸಿದ ಫಲಿತಾಂಶ ಪ್ರಕಟಣೆ ಕುರಿತು
1. ದಿನಾಂಕ 24.10.2025 ರಂದು ಪ್ರಕಟಿಸಿದ 3ನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಕುರಿತು ರಿಟ್ ಅರ್ಜಿ 31934 / 2025 ಹಾಗೂ ಇದಕ್ಕೆ ಸಂಬಂಧಿಸಿದ ರಿಟ್ ಅರ್ಜಿ 32428, 32391, 32510, 32519 ರಲ್ಲಿ ಗೌರವಾನ್ವಿತ ಮೂವರು ನ್ಯಾಯಾಧೀಶರ ಪೀಠವು ದಿನಾಂಕ: 05.12.2025 ರಂದು ನೀಡಿದ ತೀರ್ಪಿನಲ್ಲಿ ಪ್ರಾಧಿಕಾರವು ದಿನಾಂಕ: 24.10.2025 ರಂದು ಪ್ರಕಟಿಸಿದ 3ನೇ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆಯ ಫಲಿತಾಂಶ ಪಟ್ಟಿಯನ್ನು ರದ್ದುಗೊಳಿಸಿರುತ್ತದೆ ಹಾಗೂ ಅಭ್ಯರ್ಥಿಗಳು ಈಗಾಗಲೇ ದಾಖಲಿಸಿರುವ OPTIONS ಪರಿಗಣಿಸಿ ಸೀಟು ಹಂಚಿಕೆಗೆ ಈ ಕೆಳಗಿನಂತೆ ನಿರ್ದೇಶನ ನೀಡಲಾಗಿರುತ್ತದೆ.
“[B] The KEA is issued with the following directions:
[ii] To firstly undertake the process for allotment of the additional seats [443 seats] for those candidates who are permitted to participate and this process shall be based on the options as already entered.
[iii] To secondly undertake the process for allotment of those additional seats which are not taken in the first stage as mentioned in direction [B][ii].
[iv] To next undertake the process for allotment of "the Consequential Seats" [377 seats] and the seats that remain after the process under direction [B][ii] and B[iii].”
ಈ ಮೇಲಿನ ಪೂರ್ಣ ಆದೇಶವನ್ನು ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/ugneet2025 ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.
2. ಈ ಮೇಲಿನ ಕ್ರಮದಂತೆ ಪರಿಷ್ಕೃತ ತಾತ್ಕಾಲಿಕ ಫಲಿತಾಂಶ ಪಟ್ಟಿಯನ್ನು ದಿನಾಂಕ 06.12.2025 ರಂದು ಪ್ರಕಟಿಸಲಾಗಿರುತ್ತದೆ; ಏನಾದರೂ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ 07.12.2025 ಮಧ್ಯಾಹ್ನ 3:00 ರೊಳಗೆ ಪ್ರಾಧಿಕಾರದ ಇಮೇಲ್ keauthority-ka@nic.inಗೆ ಸಲ್ಲಿಸಲು ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.
ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಸೀಟು ಹಂಚಿಕೆ ಕೈಗೊಂಡಿರುವ ಕ್ರಮಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಮತ್ತು 3ನೇ ಸುತ್ತಿನ ವಿವರವಾದ ವೇಳಾಪಟ್ಟಿಯನ್ನು ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಿಂದ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು.
ವಾಸಾಸಂಇ/ವಾ.ಪ್ರ/4280/2025–26

ಭಾರತಕ್ಕೆ ಮುಂದಿನ ವರ್ಷದಿಂದ ಎಲ್‌ಎಂಜಿ ಪೂರೈಕೆ ಶುರು

ಜೆರುಸಲೇಮ್ (ಪಿಟಿಐ): ಜನವರಿಯಿಂದ ಭಾರತಕ್ಕೆ ಎಲ್‌ಎಂಜಿ (ಲೈಟ್ ಮಶಿನ್ ಗನ್) ಪೂರೈಕೆ ಆರಂಭಿಸಲಾಗುವುದು ಎಂದು ಇಸ್ರೇಲ್‌ನ ಪ್ರಮುಖ ರಕ್ಷಣಾ ಸಾಮಗ್ರಿ ತಯಾರಕ ಸಂಸ್ಥೆಯೊಂದು ಹೇಳಿದೆ.

1.70 ಲಕ್ಷ ಹೊಸ ತಲೆಮಾರಿನ ರೈಫಲ್‌ಗಳ (ಎಲ್‌ಎಂಜಿ) ಪೂರೈಕೆಗೆ ಸಂಬಂಧಿಸಿದ ಒಪ್ಪಂದವು ಅಂತಿಮ ಹಂತದಲ್ಲಿದೆ. ಇದು, ಪೂರ್ಣಗೊಂಡ ಬಳಿಕ ಮೊದಲ ಹಂತದಲ್ಲಿ 40 ಸಾವಿರ ಎಲ್‌ಎಂಜಿ ಪೂರೈಕೆ ಮಾಡಲಾಗುವುದು ಎಂದು ಇಸ್ರೇಲ್ ವೆಪನ್ಸ್ ಇಂಡಸ್ಟ್ರೀಜ್ (ಐಡಬ್ಲುಐ) ಸಿಇಒ ಶುಕಿ ಸ್ವಾರ್ಟ್ಸ್ ಹೇಳಿದ್ದಾರೆ.

‘ಮುಂದಿನ ವರ್ಷದಿಂದ ಆರಂಭವಾಗಿ ಮುಂದಿನ ಐದು ವರ್ಷಗಳ ವರೆಗೆ ಈ ರೈಫಲ್‌ಗಳ ಪೂರೈಕೆ ಪ್ರಕ್ರಿಯೆ ನಡೆಯುವುದು. ವರ್ಷಾರಂಭಕ್ಕೆ ಮೊದಲ ಹಂತದ ಪೂರೈಕೆಗೆ ಚಾಲನೆ ನೀಡಲಾಗುವುದು’ ಎಂದು ಹೇಳಿದ್ದಾರೆ.

‘ಭಾರತಕ್ಕೆ ರಕ್ಷಣಾ ಸಾಮಗ್ರಿಗಳ ಪೂರೈಕೆಗೆ ಸಂಬಂಧಿಸಿ ಎಲ್‌ಎಂಜಿ ಪೂರೈಕೆ ಸೇರಿ ಮೂರು ಮಹತ್ವದ ಒಪ್ಪಂದಗಳನ್ನು ಮಾಡಿಕೊಳ್ಳಲಾಗುತ್ತಿದೆ. ಸಿಕ್ಯುಬಿ (ಕ್ಲೋಸ್ ಕ್ವಾರ್ಟರ್ಸ್ ಬ್ಯಾಟಲ್) ರೈಫಲ್ ಹಾಗೂ ಅಬೆಲ್ ತಂತ್ರಜ್ಞಾನ ಆಧಾರಿತ ಶಸ್ತ್ರಾಸ್ತ್ರ ಪೂರೈಕೆ ಇತರ ಒಪ್ಪಂದಗಳಾಗಿದ್ದು, ಇವುಗಳ ಕುರಿತು ಇನ್ನೂ ಮಾತುಕತೆ ನಡೆಯುತ್ತಿದೆ’ ಎಂದು ಹೇಳಿದ್ದಾರೆ.

‘ಎಲ್‌ಎಂಜಿಗಳ ಪರೀಕ್ಷಾರ್ಥ ಪ್ರಯೋಗಗಳು ಪೂರ್ಣಗೊಂಡಿದ್ದು, ಸರ್ಕಾರದಿಂದಲೂ ಪರಿಶೀಲನೆಯಾಗಿದೆ. ಇವುಗಳ ತಯಾರಿಕೆಗೆ ಪರವಾನಗಿ ಲಭಿಸಿದೆ. ಸ್ಥಳೀಯವಾಗಿ ಉತ್ಪಾದನೆ ಆರಂಭಿಸುವ ಮೂಲಕ ಮೇಕ್ ಇನ್ ಇಂಡಿಯಾ ಕಾರ್ಯಕ್ರಮಕ್ಕೆ ಬೆಂಬಲಿಸಿದ ಮೊದಲ ಕಂಪನಿ ನಮ್ಮದು’ ಎಂದೂ ಅವರು ಹೇಳಿದ್ದಾರೆ.

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1500-2600
ಮಧ್ಯಮ	₹1000-1500
ಸಣ್ಣ	₹200-1000

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹675
	12 ಕ್ಕೆ	₹96
ಮೈಸೂರು:	100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1475 (--)
ಪಾಮೋಲಿನ್	₹1245 (1250)

ರಷ್ಯಾ: ಬಿಡಿಭಾಗ ಉತ್ಪಾದನೆಗೆ ಅಸ್ತು

‘ಭಾರತದಲ್ಲೇ ತಯಾರಿಸಿ’ ಅಭಿಯಾನದ ಭಾಗವಾಗಿ ತಂತ್ರಜ್ಞಾನ ಹಸ್ತಾಂತರ

ನವದೆಹಲಿ (ಪಿಟಿಐ): ತನ್ನ ದೇಶದ ಶಸ್ತ್ರಾಸ್ತ್ರ ಹಾಗೂ ರಕ್ಷಣಾ ಉಪಕರಣಗಳ ನಿರ್ವಹಣೆಗಾಗಿ ಭಾರತದಲ್ಲಿಯೇ ಹಾರ್ಡ್‌ವೇರ್ ಹಾಗೂ ಬಿಡಿಭಾಗಗಳನ್ನು ತಯಾರಿಸಲು ರಷ್ಯಾ ಒಪ್ಪಿಗೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮಧ್ಯೆ ನಡೆದ ಮಾತುಕತೆಯಲ್ಲಿ ಉಭಯ ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ರಕ್ಷಣಾ ಸಹಕಾರವನ್ನು ಬಲಪಡಿಸುವ ನಿಟ್ಟಿನಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

ರಷ್ಯಾದಿಂದ ನಿರ್ಣಾಯಕ ಬಿಡಿಭಾಗಗಳು ಹಾಗೂ ಸಲಕರಣೆ ಪೂರೈಕೆಗೆ ದೀರ್ಘ ಅವಧಿ ಬೇಕಾಗುತ್ತಿದ್ದು, ಇದರಿಂದ ಆ ದೇಶದಿಂದ ಖರೀದಿಸುತ್ತಿದ್ದ ಸೇನಾ ಉಪಕರಣಗಳ ನಿರ್ವಹಣೆಯ ಮೇಲೂ ತೀವ್ರ ಪರಿಣಾಮ ಉಂಟಾಗುತ್ತಿದೆ ಎಂದು ಸೇನೆಯು ಬಹಳ ವರ್ಷಗಳಿಂದ ದೂರುತ್ತಿತ್ತು.

‘ಮೇಕ್ ಇನ್ ಇಂಡಿಯಾ ಯೋಜನೆ ಅಡಿಯಲ್ಲಿ ತಂತ್ರಜ್ಞಾನ ಹಸ್ತಾಂತರ ಮಾಡಿಕೊಂಡು, ರಷ್ಯಾ ಮೂಲದ ಶಸ್ತ್ರಾಸ್ತ್ರಗಳು ಹಾಗೂ ಸೇನಾ ಉಪಕರಣಗಳ ಬಿಡಿಭಾಗಗಳ ತಯಾರಿಕಾ ಘಟಕಗಳನ್ನು ಜಂಟಿಯಾಗಿ ಸ್ಥಾಪಿಸಲು ಎರಡೂ ರಾಷ್ಟ್ರಗಳು ಒಪ್ಪಿಕೊಂಡಿವೆ’ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಭಾರತೀಯ ಸೇನೆಗೆ ಅಗತ್ಯವಾದ ಉತ್ಪನ್ನಗಳನ್ನು ಪೂರೈಸಿ, ಸಮಾನ ಸ್ನೇಹಿಯಾದ ಮೂರನೇ ದೇಶಗಳಿಗೂ ರಫ್ತು ಮಾಡಲು ಜಂಟಿ ಸಹಭಾಗಿತ್ವದಲ್ಲಿ ಘಟಕ ಸ್ಥಾಪಿಸಲು ಸಭೆಯಲ್ಲಿ ಸಮ್ಮತಿಸಿವೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ರಷ್ಯಾ ರಕ್ಷಣಾ ಸಚಿವ ಆಂಡ್ರೆ ಬೆಲೊಸೊ ನಡುವೆ ಗುರುವಾರ ನಡೆದ ಸಭೆಯಲ್ಲೂ ದ್ವಿಪಕ್ಷೀಯ ರಕ್ಷಣಾ ಸಹಕಾರ ವೃದ್ಧಿಗೆ ಒಪ್ಪಿಗೆ ನೀಡಲಾಗಿತ್ತು.

ಭಾರತ–ರಷ್ಯಾ ಸಂಬಂಧ ವಿಶ್ವದಲ್ಲೇ ಸದೃಢ: ಸಚಿವ ಎಸ್ ಜೈಶಂಕರ್

ನವದೆಹಲಿ (ಪಿಟಿಐ): ಕಳೆದ 70–80 ವರ್ಷಗಳಿಂದಲೂ ಭಾರತ ಮತ್ತು ರಷ್ಯಾ ನಡುವಿನ ಪಾಲುದಾರಿಕೆಯು ಜಗತ್ತಿನ ‘ಅತ್ಯಂತ ಸದೃಢವಾದ ಸಂಬಂಧ’ಗಳಲ್ಲಿ ಒಂದಾಗಿದೆ. ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಭಾರತ ಭೇಟಿಯು ‘ಆರ್ಥಿಕ ಒಪ್ಪಂದಗಳಿಗೆ ಮರುಜೀವ ನೀಡುವ ಉದ್ದೇಶ ಹೊಂದಿತ್ತು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಶನಿವಾರ ಹೇಳಿದ್ದಾರೆ.

ಸಂವಾದವೊಂದರಲ್ಲಿ ಮಾತನಾಡಿದ ಸಚಿವರು, ಪುಟಿನ್ ಅವರ ಭಾರತ ಭೇಟಿಯು ಅಮೆರಿಕ–ಭಾರತದ ನಡುವೆ ನಡೆಯುತ್ತಿರುವ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮಾತುಕತೆಯನ್ನು ಜಟಿಲಗೊಳಿಸುತ್ತದೆ ಎಂಬ ವಾದಗಳನ್ನು ಅಲ್ಲಗಳೆದರು.

‘ವಿಶ್ವದ ಎಲ್ಲ ಬೃಹತ್ ರಾಷ್ಟ್ರಗಳೊಂದಿಗೂ ಭಾರತ ಸಂಬಂಧ ಹೊಂದಿದೆ ಎಂಬುದು ಎಲ್ಲರಿಗೂ ಗೊತ್ತು. ಇತರೆ ದೇಶಗಳೊಂದಿಗೆ ನಮ್ಮ ಸಂಬಂಧವನ್ನು ಹೀಗೆಯೇ ಇರಬೇಕು ಎಂದು ಬಯಸುವ ‘ವಿಶೇಷ ಅಧಿಕಾರ’ ಮತ್ತೊಂದು ದೇಶಕ್ಕೆ ಇರಬೇಕು ಎನ್ನುವುದು ಒಪ್ಪುವಂಥ ಸಂಗತಿಯಲ್ಲ’ ಎಂದು ಅವರು ‘ಹಿಂದೂಸ್ತಾನ್ ಟೈಮ್ಸ್ ನಾಯಕತ್ವ ಶೃಂಗ’ದಲ್ಲಿ ಹೇಳಿದರು.

ಸುದ್ದಿ 2 ನಿಮಿಷ

‘ಮೆಕ್ಕೆಜೋಳ: ಪ್ರತಿ ತಾಲ್ಲೂಕಲ್ಲಿ ಖರೀದಿ ಕೇಂದ್ರ ಆರಂಭಿಸಿ’

ಶಿರಸಿ: ‘ಮೆಕ್ಕೆಜೋಳ ಖರೀದಿ ಕೇಂದ್ರವನ್ನು ಪ್ರತಿ ತಾಲ್ಲೂಕಿನಲ್ಲಿ ಆರಂಭಿಸಬೇಕು. ಹೆಚ್ಚುವರಿ ಬೆಂಬಲ ಬೆಲೆ ನೀಡಿ ಸರಕನ್ನು ರೈತರಿಂದ ಖರೀದಿಸಬೇಕು. ರಾಜ್ಯ ಸರ್ಕಾರ ಜವಾಬ್ದಾರಿಯಿಂದ ನಿರ್ವಹಿಸಬೇಕು’ ಎಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

‘ಮೆಕ್ಕೆಜೋಳವನ್ನು ಬೆಂಬಲಬೆಲೆ ಯೋಜನೆಯಡಿ ಸರ್ಕಾರ ಖರೀದಿಸುವುದಾಗಿ ಘೋಷಿಸಿದೆ. ಆದರೂ ಬೆಂಬಲ ಬೆಲೆ ಮೊತ್ತ ಕಡಿಮೆಯಾಗಿದ್ದು, ಹೆಚ್ಚುವರಿ ದರಕ್ಕಾಗಿ ರೈತರು ಹೋರಾಟ ನಡೆಸಿದ್ದಾರೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.



‘ಕಳೆದ ವರ್ಷ ರಾಜ್ಯದಲ್ಲಿ 15 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 54 ಲಕ್ಷ ಟನ್ ಮೆಕ್ಕೆಜೋಳ ಬೆಳೆಯಲಾಗಿತ್ತು. ಈ ವರ್ಷ 17 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 54 ಲಕ್ಷ ಮೆಟ್ರಿಕ್ ಟನ್ ಬೆಳೆಯಲಾಗಿದೆ. 2 ಲಕ್ಷ ಮೆಟ್ರಿಕ್ ಟನ್ ನಷ್ಟ ಆಗಿದೆ. ಇಂತಹ ಸಂದರ್ಭದಲ್ಲಿ ರೈತರನ್ನು ಉಳಿಸಲು ರಾಜ್ಯ ಸರ್ಕಾರ ಆದ್ಯತೆ ನೀಡಬೇಕು. ಆದರೆ, ಸರ್ಕಾರಕ್ಕೆ ರೈತಪರ ಚಿಂತನೆಯಿಲ್ಲ’ ಎಂದರು.

ಐಸಿಐಸಿಐ ಪ್ರುಡೆನ್ಶಿಯಲ್ ಐಪಿಒ ಡಿ. 12ಕ್ಕೆ

ನವದೆಹಲಿ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ಅಂಗಸಂಸ್ಥೆಯಾಗಿರುವ ಐಸಿಐಸಿಐ ಪ್ರುಡೆನ್ಶಿಯಲ್ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿಯು ಐಪಿಒ ಮೂಲಕ ತನ್ನ ಷೇರುಗಳನ್ನು ಮಾರಾಟ ಮಾಡಲು ಸಜ್ಜಾಗುತ್ತಿದೆ. ಐಪಿಒ ಡಿಸೆಂಬರ್ 12ರಿಂದ ನಡೆಯುವ ನಿರೀಕ್ಷೆ ಇದೆ.

ಐಪಿಒ ಮೂಲಕ ₹10 ಸಾವಿರ ಕೋಟಿ ಸಂಗ್ರಹಿಸಬಹುದು ಎಂದು ಮೂಲಗಳು ಹೇಳಿವೆ. ಕಂಪನಿಯ ಪ್ರವರ್ತಕ ಸಂಸ್ಥೆ ಬ್ರಿಟನ್ ಮೂಲಕ ಪ್ರುಡೆನ್ಶಿಯಲ್ ಕಾರ್ಪೊರೇಷನ್ ಹೋಲ್ಡಿಂಗ್ಸ್ ತನ್ನ 4.89 ಕೋಟಿ ಷೇರುಗಳನ್ನು ಐಪಿಒ ಮೂಲಕ ಮಾರಾಟ ಮಾಡಲಿದೆ. ಪ್ರವರ್ತಕರು ಈಗಾಗಲೇ ಇರುವ ಷೇರುಗಳನ್ನು ಮಾರಾಟ ಮಾಡಲಿರುವುದರಿಂದ (ಒಎಫ್‌ಎಸ್), ಸಂಗ್ರಹ ಆಗುವ ಬಂಡವಾಳವು ನೇರವಾಗಿ ಪ್ರವರ್ತಕರ ಕೈ ಸೇರಲಿದೆ.

ಈಗ ಈ ಕಂಪನಿಯಲ್ಲಿ ಐಸಿಐಸಿಐ ಬ್ಯಾಂಕ್ ಶೇ 51ರಷ್ಟು ಷೇರು ಹೊಂದಿದೆ. ಇನ್ನುಳಿದ ಶೇ 49ರಷ್ಟು ಷೇರುಗಳು ಪ್ರುಡೆನ್ಶಿಯಲ್ ಕಾರ್ಪೊರೇಷನ್ ಹೋಲ್ಡಿಂಗ್ಸ್ ಬಳಿ ಇವೆ. ಆಸ್ತಿ ನಿರ್ವಹಣಾ ಕಂಪನಿಗಳಾದ ಎಚ್‌ಡಿಎಫ್‌ಸಿ ಎಎಂಸಿ, ಯುಟಿಐ ಎಎಂಸಿ, ಆದಿತ್ಯ ಬಿರ್ಲಾ ಸನ್‌ಲೈಫ್ ಎಎಂಸಿ, ಶ್ರೀರಾಮ್ ಎಎಂಸಿ, ನಿಪ್ಪಾನ್ ಲೈಫ್ ಇಂಡಿಯಾ ಅಸೆಟ್ ಮ್ಯಾನೇಜ್ಮೆಂಟ್ ಈಗಾಗಲೇ ಷೇರುಪೇಟೆಯಲ್ಲಿ ನೋಂದಾಯಿತ ಆಗಿವೆ.

ಮುಂಬೈ ಧಾರಣೆ (ಶೇಂಗಾ) 06-12-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8800-8900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಪಾಮ್ ವಾರದ ಡೆಲಿವರಿ	1243 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1425)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,27,550
ಬೆಳ್ಳಿ ಕೆ.ಜಿಗೆ	1,79,000 (1,78,250)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ

ಚಿತ್ರದುರ್ಗ	
ಅಪಿ	55229-55669
ಬೆಟ್ಟೆ	38619-39079
ಕೆಂಪುಗೋಟು	31409-31810
ರಾಶಿ	54739-55199
ಪುತ್ತೂರು	
ಕೋಕ	20000-35000
ಹೊಸತು	26000-41000

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹28750
ಎಸಿ	₹15820
ಆರ್‌ಪಿ	₹18900
ಆರ್‌ಸಿ	₹10475

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ರಷ್ಯಾ ಮಾರುಕಟ್ಟೆಗೆ ‘ಪತಂಜಲಿ’

ನವದೆಹಲಿ (ಪಿಟಿಐ): ಯೋಗ ಗುರು ಬಾಬಾ ರಾಮದೇವ ನೇತೃತ್ವದ ಪತಂಜಲಿ ಸಮೂಹವು ರಷ್ಯಾ ಸರ್ಕಾರದ ಜೊತೆ ಶನಿವಾರ ಒಪ್ಪಂದವೊಂದಕ್ಕೆ ಸಹಿ ಹಾಕಿದ್ದು, ಇದರ ಪರಿಣಾಮವಾಗಿ ಸಮೂಹಕ್ಕೆ ರಷ್ಯಾದ ಮಾರುಕಟ್ಟೆ ಪ್ರವೇಶಿಸಲು ಸಾಧ್ಯವಾಗಲಿದೆ.

ಒಪ್ಪಂದವು ಆರೋಗ್ಯ ಮತ್ತು ಆರೈಕೆ, ಆರೋಗ್ಯ ಪ್ರವಾಸೋದ್ಯಮ, ಕುಶಲ ಮಾನವ ಸಂಪನ್ಮೂಲದ ವಿನಿಮಯ, ಸಂಶೋಧನೆಗೆ ಸಂಬಂಧಿಸಿದ ಉಪಕ್ರಮಗಳಿಗೆ ಅನುವು ಮಾಡಿಕೊಡಲಿದೆ ಎಂದು ಪ್ರಕಟಣೆಯೊಂದು ತಿಳಿಸಿದೆ.

ಪತಂಜಲಿ ಸಮೂಹದ ಪರವಾಗಿ ರಾಮದೇವ ಅವರು ರಷ್ಯಾದ ವಾಣಿಜ್ಯ ಸಚಿವ ಹಾಗೂ ಇಂಡೊ–ರಷ್ಯಾ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸರ್ಗೈ ಚೆರೆಮಿನ್ ಅವರು ಒಪ್ಪಂದದ ದಾಖಲೆಗಳಿಗೆ ಸಹಿ ಮಾಡಿದರು.

ಬಾಬಾ ರಾಮದೇವ ಮತ್ತು ಆಚಾರ್ಯ ಬಾಲಕೃಷ್ಣ ಅವರು ಆರಂಭಿಸಿದ ಪತಂಜಲಿ ಸಮೂಹವು ಆಯುರ್ವೇದ ಉತ್ಪನ್ನಗಳು ಹಾಗೂ ಎಫ್‌ಎಂಸಿಜಿ ಉತ್ಪನ್ನಗಳಿಂದಾಗಿ ಹೆಸರುವಾಸಿ ಆಗಿದೆ. ಪತಂಜಲಿ ಆಯುರ್ವೇದ್ ಮತ್ತು ಪತಂಜಲಿ ಫುಡ್ಸ್ ಈ ಸಮೂಹದ ಅಂಗಸಂಸ್ಥೆಗಳಾಗಿವೆ.

ರಷ್ಯಾದ ಜನ ಆಯುರ್ವೇದವನ್ನು ಬಹಳ ಮೆಚ್ಚಿಕೊಂಡಿದ್ದಾರೆ, ಅವರು ಯೋಗ, ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸೆಯನ್ನು ಅಳವಡಿಸಿಕೊಂಡಿದ್ದಾರೆ ಎಂದು ರಾಮದೇವ ಅವರು ಹೇಳಿದ್ದಾರೆ.

‘ಋಷಿಗಳು ರೂಪಿಸಿದ ಈ ಆರೋಗ್ಯ ವಿಜ್ಞಾನವನ್ನು ಜಗತ್ತಿನ ಸರಿಸುಮಾರು 200 ದೇಶಗಳಿಗೆ ಕೊಂಡೊಯ್ಯುವುದು ನಮ್ಮ ಮುಖ್ಯ ಗುರಿ. ಇದಕ್ಕೆ ರಷ್ಯಾ ಹೆಬ್ಬಾಗಿಲಾಗಿ ಇರಲಿದೆ’ ಎಂದು ರಾಮದೇವ ವಿವರಿಸಿದ್ದಾರೆ.

‘ಪತಂಜಲಿ ಕಂಪನಿಯ ಆರೈಕೆ ಸೇವೆಗಳನ್ನು ರಷ್ಯಾಕ್ಕೆ ವಿಸ್ತರಿಸುವುದು ಒಪ್ಪಂದದ ಮುಖ್ಯ ಗುರಿ. ಭಾರತದ ಅಧ್ಯಾತ್ಮಿಕ ಜ್ಞಾನವನ್ನು, ಸಂಸ್ಕೃತಿಯನ್ನು, ಯೋಗವನ್ನು, ಆಯುರ್ವೇದವನ್ನು ಮತ್ತು ಅಮೂಲ್ಯವಾದ ಪರಂಪರೆಯನ್ನು ರಷ್ಯಾದ ಜೊತೆ ಹಂಚಿಕೊಳ್ಳುವುದು ಎರಡನೆಯ ಗುರಿ’ ಎಂದು ಅವರು ತಿಳಿಸಿದ್ದಾರೆ.

ಈ ಒಪ್ಪಂದದ ಭಾಗವಾಗಿ ಭಾರತದ ಪ್ರಮುಖ ಜನಪ್ರಿಯ ಬ್ರ್ಯಾಂಡ್‌ಗಳನ್ನು ರಷ್ಯಾದಲ್ಲಿ, ರಷ್ಯಾದ ಪ್ರಮುಖ ಬ್ರ್ಯಾಂಡ್‌ಗಳನ್ನು ಭಾರತದಲ್ಲಿ ಜನಪ್ರಿಯಗೊಳಿಸಲಾಗುತ್ತದೆ.

ಪತಂಜಲಿ ಕಂಪನಿಯ ಯೋಗ, ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸೆ ಪದ್ಧತಿ ಗಳನ್ನು ಅಳವಡಿಸಿಕೊಳ್ಳುವ ಮೂಲಕ ರಷ್ಯಾದ ಜನರ ಜೀವನಶೈಲಿಯನ್ನು ಬದಲಾಯಿಸುವ, ಅವರನ್ನು ರೋಗಮುಕ್ತವಾಗಿಸುವ ಉದ್ದೇಶ ಇದೆ ಎಂದು ಸರ್ಗೈ ಚೆರೆಮಿನ್ ಹೇಳಿದ್ದಾರೆ.

ಜನ್ಮದತ್ತ ಪೌರತ್ವ: ವಿಚಾರಣೆಗೆ ಸುಪ್ರೀಂ ಕೋರ್ಟ್ ಅಸ್ತು

ವಾಷಿಂಗ್ಟನ್ (ಎಪಿ): ಜನ್ಮದತ್ತ ಪೌರತ್ವಕ್ಕೆ ಸಂಬಂಧಿಸಿದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೊರಡಿಸಿರುವ ಆದೇಶದ ಸಾಂವಿಧಾನಿಕ ಸಿಂಧುತ್ವ ಕುರಿತು ವಿಚಾರಣೆ ನಡೆಸಲು ಇಲ್ಲಿನ ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ವಲಸಿಗರಿಗೆ ಜನಿಸುವ ಮಕ್ಕಳು ಅಮೆರಿಕದ ಪ್ರಜೆಗಳಲ್ಲ, ಹೀಗಾಗಿ ಅವರಿಗೆ ಹುಟ್ಟಿನಿಂದಲೇ ಸಿಗುತ್ತಿದ್ದ ಪೌರತ್ವದ ಹಕ್ಕನ್ನು ರದ್ದುಗೊಳಿಸಬೇಕು ಎಂಬ ಆದೇಶವನ್ನು ಟ್ರಂಪ್ ಹೊರಡಿಸಿದ್ದರು.

ಅಮೆರಿಕ ಸಂವಿಧಾನದ 14ನೇ ತಿದ್ದುಪಡಿಯು ಅಮೆರಿಕದಲ್ಲಿ ಜನಿಸುವ ಪ್ರತಿಯೊಬ್ಬರಿಗೂ ಜನ್ಮದತ್ತ ಪೌರತ್ವದ ಖಾತರಿ ನೀಡಿದೆ. ಹೀಗಿದ್ದರೂ ಜನ್ಮದತ್ತ ಪೌರತ್ವಕ್ಕೆ ಸಂಬಂಧಿಸಿದಂತೆ ನಿರ್ಬಂಧ ಹೇರುವುದು ಅಸಂವಿಧಾನಿಕ ನಡೆ ಎಂದು ನಿರ್ಧರಿಸಿ, ಕೆಳ ಹಂತದ ನ್ಯಾಯಾಲಯವೊಂದು ಟ್ರಂಪ್ ಅವರ ಆದೇಶವನ್ನು ರದ್ದುಗೊಳಿಸಿತ್ತು.

ಕೆಳ ಹಂತದ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ, ಟ್ರಂಪ್ ಸುಪ್ರೀಂ ಮೆಟ್ಟಿಲೇರಿದ್ದರು. ಇದೀಗ ಅವರ ಅರ್ಜಿಯನ್ನು ಆಲಿಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತಿಮ ತೀರ್ಪು ಜೂನ್ ವೇಳೆಗೆ ಹೊರಬೀಳುವ ನಿರೀಕ್ಷೆ ಇದೆ.

‘ಸೀಮಾ ಸುಂಕದಲ್ಲಿ ಸುಧಾರಣೆ’

ನವದೆಹಲಿ (ಪಿಟಿಐ): ಸೀಮಾ ಸುಂಕವನ್ನು ಸರಳವಾಗಿಸುವುದು ಕೇಂದ್ರ ಸರ್ಕಾರದ ಮುಂದಿನ ಹಂತದ ಸುಧಾರಣಾ ಪ್ರಕ್ರಿಯೆಯ ಭಾಗ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರವು ಜಿಎಸ್‌ಟಿ ದರ ಪರಿಷ್ಕರಣೆ, ಆದಾಯ ತೆರಿಗೆ ಮಿತಿ ಏರಿಕೆಯಂತಹ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ.

‘ನಾವು ಸೀಮಾ ಸುಂಕ ವ್ಯವಸ್ಥೆಯಲ್ಲಿ ಆಮೂಲಾಗ್ರವಾದ ಬದಲಾವಣೆಯನ್ನು ತರಬೇಕಿದೆ... ಸೀಮಾ ಸುಂಕ ವ್ಯವಸ್ಥೆಯು ಸಂಕೀರ್ಣವಾದುದಲ್ಲ ಎಂದು ಜನರಿಗೆ ಅನ್ನಿಸಬೇಕಾದರೆ ಅದನ್ನು ಸರಳಗೊಳಿಸಬೇಕು. ಅದನ್ನು ಇನ್ನಷ್ಟು ಹೆಚ್ಚು ಪಾರದರ್ಶಕ ಆಗಿಸಬೇಕು’ ಎಂದು ಸೀತಾರಾಮನ್ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಆದಾಯ ತೆರಿಗೆ ವ್ಯವಸ್ಥೆಯಲ್ಲಿನ ಪಾರದರ್ಶಕ ಅಂಶಗಳನ್ನು ಸೀಮಾಸುಂಕ ವ್ಯವಸ್ಥೆಗೆ ತರಬೇಕಿದೆ. ಸೀಮಾಸುಂಕ ವ್ಯವಸ್ಥೆಯಲ್ಲಿ ತರಲು ಉದ್ದೇಶಿಸಿರುವ ಸುಧಾರಣೆಗಳು ಸಮಗ್ರವಾಗಿರುತ್ತವೆ, ಸುಂಕದ ಪ್ರಮಾಣ ಪರಿಷ್ಕರಿಸುವುದನ್ನು ಒಳಗೊಂಡಿರುತ್ತವೆ ಎಂದು ನಿರ್ಮಲಾ ಅವರು ಹೇಳಿದ್ದಾರೆ.

ಇದಕ್ಕೆ ಸಂಬಂಧಿಸಿದ ಘೋಷಣೆಯು ಫೆಬ್ರುವರಿ 1ರಂದು ಮಂಡನೆಯಾಗುವ ಕೇಂದ್ರ ಬಜೆಟ್‌ನಲ್ಲಿ ಇರುವ ಸಾಧ್ಯತೆ ಇದೆ.

‘ಕಳೆದ ಎರಡು ವರ್ಷಗಳಲ್ಲಿ ನಾವು ಸೀಮಾಸುಂಕದ ಪ್ರಮಾಣವನ್ನು ಇಳಿಕೆ ಮಾಡಿದ್ದೇವೆ. ಆದರೆ ಕೆಲವು ಉತ್ಪನ್ನಗಳ ಮೇಲಿನ ಸೀಮಾಸುಂಕವು ಸರಿಯಾದ ಮಟ್ಟದಲ್ಲಿ ಇಲ್ಲ ಎಂದು ಭಾವಿಸಲಾಗಿದೆ, ಅವುಗಳ ಮೇಲಿನ ಸೀಮಾಸುಂಕವನ್ನು ಕೂಡ ಕಡಿಮೆ ಮಾಡಬೇಕಿದೆ. ಸೀಮಾಸುಂಕ ವಿಭಾಗವನ್ನು ಸ್ವಚ್ಛಗೊಳಿಸುವುದು ನನ್ನ ಮುಂದಿರುವ ದೊಡ್ಡ ಕೆಲಸ’ ಎಂದು ನಿರ್ಮಲಾ ಸೀತಾರಾಮನ್ ಅವರು ತಿಳಿಸಿದ್ದಾರೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿರುವುದರ ಕುರಿತು ಪ್ರತಿಕ್ರಿಯೆ ನೀಡಿದ ಸಚಿವೆ, ರೂಪಾಯಿ ತನ್ನ ಸಹಜ ಮೌಲ್ಯವನ್ನು ತಾನಾಗಿಯೇ ಕಂಡುಕೊಳ್ಳಲಿದೆ ಎಂದಿದ್ದಾರೆ.

‘ಕೌಶಲವುಳ್ಳವರಿಗೆ ಜಾಗತಿಕ ಬೇಡಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಕೌಶಲ್ಯಾಭಿವೃದ್ಧಿ ಇಲಾಖೆಯ ವತಿಯಿಂದ ತರಬೇತಿ ಪಡೆದು ಅತ್ಯುನ್ನತ ಮಟ್ಟದ ಕೌಶಲ ತರಬೇತಿ ಪಡೆದುಕೊಳ್ಳುತ್ತಿರುವ ಉದ್ಯೋಗಿಗಳಿಗೆ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಬೇಡಿಕೆ ಬರುತ್ತಿದೆ’ ಎಂದು ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ್ ಪಾಟೀಲ ತಿಳಿಸಿದ್ದಾರೆ.

ನಗರದಲ್ಲಿ 2026ರ ಫೆಬ್ರವರಿಯಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಉದ್ಯೋಗ ಮೇಳಕ್ಕೆ ಪೂರ್ವಭಾವಿಯಾಗಿ ಶರಣಪ್ರಕಾಶ್ ಆರ್. ಪಾಟೀಲ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ಯುರೋಪ್ ಖಂಡದ ಪ್ರವಾಸ ಕೈಗೊಂಡಿದ್ದು, ವಿವಿಧ ನಗರಗಳಲ್ಲಿ ರೋಡ್ ಶೋ ನಡೆಸಿದ್ದಾರೆ.

‘ಸ್ಲೋವಾಕಿಯಾ ರಾಜಧಾನಿ ಬ್ರಾಟಿಸ್ಲಾವಾದಲ್ಲಿರುವ ಸಿಟ್ರೋಯೆನ್ C3, C3 ಏರ್‌ಕ್ರಾಸ್ ಮತ್ತು ಒಪೆಲ್ ಫ್ರಾಂಟೆರಾ ಮಾದರಿಗಳ ವಾಹನ ತಯಾರಕ ಸಂಸ್ಥೆ ಸ್ಟೆಲ್ಲಾಂಟಿಸ್ ಈಗಾಗಲೇ ಆಟೊಮೊಬೈಲ್ ವಿದ್ಯುತ್ ಕೌಶಲ ತರಬೇತಿ ಹೊಂದಿದವರನ್ನು ಕಳುಹಿಸಿ ಕೊಡಬೇಕೆಂದು ಮನವಿ ಮಾಡಿದೆ. ಬ್ರಾಟಿಸ್ಲಾವಾ ಬಳಿಯ ತ್ರ್ವಾನಾ ಘಟಕದಲ್ಲಿ ಕರ್ನಾಟಕದ ಸುಮಾರು 100 ಅಸೆಂಬ್ಲಿ-ಲೈನ್ ಆಪರೇಟರ್‌ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿ ಪ್ರತಿದಿನ 4 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಸುಮಾರು 1,300 ವಾಹನಗಳನ್ನು ತಯಾರಿಸುತ್ತಿದ್ದಾರೆ.’ ಎಂದಿದ್ದಾರೆ.



ಸಚಿವರಾದ ಶರಣಪ್ರಕಾಶ್ ಪಾಟೀಲ ಮತ್ತು ಡಾ. ಎಂ.ಸಿ. ಸುಧಾಕರ್ ನೇತೃತ್ವದ ನಿಯೋಗವು ಸ್ಲೋವಾಕಿಯಾ ರಾಜಧಾನಿ ಬ್ರಾಟಿಸ್ಲಾವಾದಲ್ಲಿರುವ ವಾಹನ ತಯಾರಕ ಸಂಸ್ಥೆ ‘ಸ್ಟೆಲ್ಲಾಂಟಿಸ್’ಗೆ ಭೇಟಿ ನೀಡಿತ್ತು

ಅಸೆಂಬ್ಲಿ ಲೈನ್ ಆಪರೇಟರ್‌ಗಳಿಗೆ ಅವಕಾಶ: ‘ಸ್ಟೆಲ್ಲಾಂಟಿಸ್ ಕಂಪನಿಯು ಕರ್ನಾಟಕ ವೃತ್ತಿಪರ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದ (ಕೆವಿಟಿಎಸ್‌ಡಿಸಿ) ವತಿಯಿಂದ ತರಬೇತಿ ಪಡೆದಿರುವ 100 ಅಸೆಂಬ್ಲಿ-ಲೈನ್ ಆಪರೇಟರ್‌ಗಳನ್ನು ನೇಮಿಸಿಕೊಂಡಿದೆ. 50ಕ್ಕೂ ಹೆಚ್ಚು ಭಾರಿ ವಾಹನ ಚಾಲಕರನ್ನೂ ನೇಮಿಸಲಾಗಿದೆ’ ಎಂದಿದ್ದಾರೆ.

ಸ್ಟೆಲ್ಲಾಂಟಿಸ್ ನೇಮಕಾತಿ ಮುಖ್ಯಸ್ಥರಾದ ಕತ್ರಿನಾ ಫೆಲ್ಕೋವಾ, ವೀಸಾ ಪ್ರಕ್ರಿಯೆಯನ್ನು ತ್ವರಿತಗೊಳಿಸುವಂತೆ ಸ್ಲೋವಾಕಿಯಾದಲ್ಲಿ ಭಾರತೀಯ ರಾಯಭಾರಿ ಅಪೂರ್ವ ಶ್ರೀವಾಸ್ತವ ಅವರನ್ನು ಒತ್ತಾಯಿಸಿದರು.

‘ಕರ್ನಾಟಕದಿಂದ ವಾರ್ಷಿಕವಾಗಿ ಒಂದು ಲಕ್ಷಕ್ಕೂ ಹೆಚ್ಚು ಎಂಜಿನಿಯರಿಂಗ್ ಪದವೀಧರರು ಹೊರಬರುತ್ತಿದ್ದಾರೆ. ಕರ್ನಾಟಕದಲ್ಲಿ ಉತ್ಪಾದನಾ ಘಟಕವನ್ನು ಆರಂಭಿಸಿದರೆ ಎಲ್ಲ ಸೌಲಭ್ಯಗಳನ್ನು ಸರ್ಕಾರದ ವತಿಯಿಂದ ನೀಡಲಾಗುವುದು’ ಎಂದು ಡಾ. ಪಾಟೀಲ್ ಮತ್ತು ಡಾ. ಸುಧಾಕರ್ ವಿವರಿಸಿದರು.

ಡಿಎಚ್‌ಎಲ್ ಬೇಡಿಕೆ: ‘ಲಾಜಿಸ್ಟಿಕ್ಸ್ ಕ್ಷೇತ್ರದಲ್ಲಿ ಪ್ರಮುಖ ಸಂಸ್ಥೆಯಾಗಿರುವ ಡಿಎಚ್‌ಎಲ್ ಕರ್ನಾಟಕದಲ್ಲಿ ಕೌಶಲ ತರಬೇತಿ ಪಡೆದ ಮಾನವ ಸಂಪನ್ಮೂಲವನ್ನು ಪೂರೈಸಬೇಕು’ ಎಂದು ಡಿಎಚ್‌ಎಲ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಮಿಲೋಸ್ ಗೋಸಿಕ್ ಬೇಡಿಕೆ ಮಂಡಿಸಿದರು.

ಸ್ಲೋವಾಕಿಯಾದಲ್ಲಿ ಉದ್ಯೋಗ ಪಡೆದಿರುವ ಕಲಬುರಗಿ ಜಿಲ್ಲೆಯ ಸೇಡಂನ ಸುನಿಲ್ ಕುಮಾರ್ ಮತ್ತು ಧಾರವಾಡ ಜಿಲ್ಲೆಯ ಕಲಘಟಗಿಯ ರೋಹನ್ ಲಗಾಲಿ ಜೊತೆ ಸಚಿವರು ಚರ್ಚೆ ನಡೆಸಿದರು.

ಕೌಶಲ್ಯ ಅಭಿವೃದ್ಧಿ ನಿಗಮ ಅಧ್ಯಕ್ಷರಾದ ಶಿವಕಾಂತಮ್ಮ ನಾಯಕ್, ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಕೌಶಲ್ಯ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಕೆಎಸ್‌ಡಿಸಿ ವ್ಯವಸ್ಥಾಪಕ ನಿರ್ದೇಶಕ ಎನ್.ಎಂ. ನಾಗರಾಜ್, ಕ್ರಿಸ್ತಗೌಡ ತಾಯಣ್ಣವರ್, ರಾಮೇಗೌಡ ಮತ್ತು ಕೆ.ಎಸ್. ಅವಿನಾಶ್ ಇದ್ದರು.

ಭಾರತ–ಅಮೆರಿಕ ಮಾತುಕತೆ 10ಕ್ಕೆ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಮೊದಲ ಹಂತಕ್ಕೆ ಸಂಬಂಧಿಸಿದ ಮೂರು ದಿನಗಳ ಮಾತುಕತೆಯು ಡಿಸೆಂಬರ್ 10ರಿಂದ ಶುರುವಾಗಲಿದೆ ಎಂದು ಮೂಲಗಳು ಹೇಳಿವೆ.

ಅಮೆರಿಕವು ಭಾರತದ ಸರಕುಗಳ ಮೇಲೆ ಒಟ್ಟು ಶೇ 50ರಷ್ಟು ಸುಂಕ ಹೇರಿದ ನಂತರದಲ್ಲಿ ವ್ಯಾಪಾರ ಒಪ್ಪಂದದ ವಿಚಾರವಾಗಿ ಅಮೆರಿಕದ ತಂಡವು ಭಾರತಕ್ಕೆ ಭೇಟಿ ನೀಡುತ್ತಿರುವುದು ಇದು ಎರಡನೆಯ ಬಾರಿ.

ಅಮೆರಿಕದ ಅಧಿಕಾರಿಗಳು ಸೆಪ್ಟೆಂಬರ್ 16ರಂದು ಕೂಡ ಭಾರತಕ್ಕೆ ಬಂದಿದ್ದರು. ಭಾರತದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಅಧಿಕಾರಿಗಳ ತಂಡದೊಂದಿಗೆ ಸೆಪ್ಟೆಂಬರ್ 22ರಂದು ಅಮೆರಿಕಕ್ಕೆ ತೆರಳಿದ್ದರು.

‘ಕೈ’ ಹೈಕಮಾಂಡ್ ಚರ್ಚೆ

ಒಂದನೇ ಪುಟದಿಂದ...

ಕರ್ನಾಟಕ ‘ಕೈ’ ಸರ್ಕಾರದ ನಾಯಕತ್ವ ಬಿಕ್ಕಟ್ಟಿನ ಕುರಿತ ಚರ್ಚೆಯಲ್ಲಿ ಸೋನಿಯಾ ಅವರು ಇದೇ ಮೊದಲ ಬಾರಿ ಭಾಗವಹಿಸಿದ್ದಾರೆ. ಅವರು ಕೆಲವು ಸಮಯದಿಂದ ಅಂತಹ ರಾಜಕೀಯ ಚರ್ಚೆಗಳಿಂದ ದೂರವಿದ್ದಾರೆ.

ಕರ್ನಾಟಕದ ಕುರ್ಚಿ ಕಾದಾಟದ ಬಗ್ಗೆ ಸಭೆಯಲ್ಲಿ ವಿಸ್ತೃತ ಚರ್ಚೆ ಆಗಿದೆ. ಎರಡು ಬಣಗಳು ನಡೆಸಿದ ಚಟುವಟಿಕೆಗಳ ಬಗ್ಗೆ ಸೋನಿಯಾ ಗಾಂಧಿ ಮಾಹಿತಿ ಪಡೆದರು. ಉಪಾಹಾರ ಕೂಟ ನಡೆಸುವ ಮೂಲಕ ಉಭಯ ನಾಯಕರ ನಡುವಿನ ಗೊಂದಲ ಬಗೆಹರಿಸಿದ್ದು, ರಾಜ್ಯದ ವಿದ್ಯಮಾನಗಳ ಬಗ್ಗೆ ಆತಂಕ ಪಡಬೇಕಿಲ್ಲ ಎಂದು ವೇಣುಗೋಪಾಲ್ ಸ್ಪಷ್ಟಪಡಿಸಿದರು. ನಾಯಕತ್ವ ವಿಷಯದ ಕುರಿತ ಭಿನ್ನಮತ ಬಗೆಹರಿಸುವ ಬಗ್ಗೆ ಇನ್ನೊಂದು ಸುತ್ತಿನ ಸಭೆ ನಡೆಸಿ ಸಮಾಲೋಚಿಸಲು ತೀರ್ಮಾನಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಕೇಂದ್ರ ನಾಯಕತ್ವ ನಿರ್ಧಾರ ತೆಗೆದುಕೊಳ್ಳುವವರೆಗೆ ‘ಅಧಿಕಾರ ಹಸ್ತಾಂತರ’ ವಿಷಯದ ಬಗ್ಗೆ ಯಾವುದೇ ಸಾರ್ವಜನಿಕ ಹೇಳಿಕೆ ನೀಡದಂತೆ ಎರಡೂ ಬಣಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ಗೊತ್ತಾಗಿದೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ದೆಹಲಿಗೆ ಬುಲಾವ್ ನೀಡುವ ಬಗ್ಗೆ ಪ್ರತಿಕ್ರಿಯಿಸಲು ವೇಣುಗೋಪಾಲ್ ನಿರಾಕರಿಸಿದರು.

ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸುತ್ತಿದ್ದಂತೆ ‘ಅಧಿಕಾರ ಹಂಚಿಕೆಯ ಸೂತ್ರ’ದ ವಿಷಯ ಮುನ್ನೆಲೆಗೆ ಬಂದಿತ್ತು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿದಂತೆ ಉಭಯ ನಾಯಕರ ಹೇಳಿಕೆಗಳು ಸರ್ಕಾರದ ವರ್ಚಸ್ಸಿಗೆ ಧಕ್ಕೆ ತಂದಿದ್ದವು. ರಾಜ್ಯ ಕಾಂಗ್ರೆಸ್‌ನ ಆಂತರಿಕ ಸಂಘರ್ಷ ರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸದ್ದು ಮಾಡಿತ್ತು. 15 ದಿನಗಳ ಬಳಿಕ ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶಿಸಿ ಉಪಾಹಾರ ಕೂಟದ ಮೂಲಕ ಭಿನ್ನಮತ ಇತ್ಯರ್ಥಪಡಿಸಿಕೊಳ್ಳುವಂತೆ ಇಬ್ಬರು ನಾಯಕರಿಗೂ ಸೂಚಿಸಿತ್ತು. ಉಪಾಹಾರ ಕೂಟದ ಮೂಲಕ ಇಬ್ಬರೂ ಒಗ್ಗಟ್ಟಿನ ಮಂತ್ರ ಪಠಿಸಿದ್ದರು. ‘ನಾವು ಸಹೋದರರು ಇದ್ದಂತೆ. ಹೈಕಮಾಂಡ್ ಸೂಚನೆ ಪಾಲಿಸುತ್ತೇವೆ’ ಎಂದೂ ಹೇಳಿಕೆ ನೀಡಿದ್ದರು. ಸೋನಿಯಾ ಹಾಗೂ ರಾಹುಲ್ ಜತೆಗೆ ಸಮಾಲೋಚಿಸಿ ನಾಯಕತ್ವ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಖರ್ಗೆ ಸ್ಪಷ್ಟಪಡಿಸಿದ್ದರು.

ಮತ್ತೊಂದು ಸುತ್ತಿನ ಸಭೆ: ವೇಣುಗೋಪಾಲ್

‘ಸಭೆಯಲ್ಲಿ ಕರ್ನಾಟಕದ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ಆಗಿದೆ. ಆದರೆ, ಯಾವುದೇ ತೀರ್ಮಾನಕ್ಕೆ ಬಂದಿಲ್ಲ. ಮತ್ತೊಂದು ಸಭೆ ನಡೆಸಿ ಚರ್ಚೆ ನಡೆಸಲಾಗುವುದು’ ಎಂದು ಕೆ.ಸಿ. ವೇಣುಗೋಪಾಲ್ ತಿಳಿಸಿದರು.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಒಗ್ಗಟ್ಟಾಗಿದೆ. ಕರ್ನಾಟಕ ಕಾಂಗ್ರೆಸ್ ಒಗ್ಗಟ್ಟಿನ ಸಂದೇಶ ರವಾನಿಸಿದೆ. ಕರ್ನಾಟಕ ಅಲ್ಲದೇ ಬೇರೆ ಬೇರೆ ವಿಚಾರಗಳ ಬಗ್ಗೆ ಚರ್ಚೆಯಾಗಿದೆ. ಮತ ಕಳವು ವಿರುದ್ಧದ ಪ್ರತಿಭಟನಾ ಹೋರಾಟದ ಕುರಿತು ಚರ್ಚಿಸಲಾಗಿದೆ’ ಎಂದರು.

31.25 ಗಿಗಾವಾಟ್ ಹಸಿರು ಇಂಧನ ಉತ್ಪಾದನೆ

ಪುರಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ 31.25 ಗಿಗಾವಾಟ್ ಹಸಿರು ಇಂಧನವನ್ನು ದೇಶದಲ್ಲಿ ಉತ್ಪಾದಿಸಲಾಗಿದ್ದು, ಇದರಲ್ಲಿ ಸೋಲಾರ್ ವಿದ್ಯುತ್‌ನ ಪಾಲು 24.28 ಗಿಗಾವಾಟ್ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಶನಿವಾರ ತಿಳಿಸಿದರು.

ಪ್ರಲ್ಹಾದ ಜೋಶಿ

ಒಡಿಶಾದಲ್ಲಿ 1.5 ಲಕ್ಷ ಚಾವಣಿ ಸೋಲಾರ್ ಯುಎಲ್‌ಎ ಘಟಕಗಳನ್ನು ಸ್ಥಾಪಿಸಲಾಗುವುದು ಎಂದು ‘ಜಾಗತಿಕ ಇಂಧನ ನಾಯಕರ ಶೃಂಗಸಭೆ-2025’ರಲ್ಲಿ ಘೋಷಿಸಿದ ಸಚಿವರು, ಇದರಿಂದ ರಾಜ್ಯದ 7ಲಕ್ಷದಿಂದ 8 ಲಕ್ಷ ಜನರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಒಂದು ಟೆರಾವಾಟ್ ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಸುಮಾರು 70 ವರ್ಷಗಳನ್ನು ತೆಗೆದುಕೊಂಡರೆ (2022), ನಂತರದ ಎರಡು ವರ್ಷಗಳಲ್ಲಿ (2024) ಎರಡು ಟೆರಾವಾಟ್ ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯವನ್ನು ಜಗತ್ತು ಗಳಿಸಿದೆ ಎಂದರು.

ನವೀಕರಿಸಬಹುದಾದ ಇಂಧನ ಸಾಮರ್ಥ್ಯದ ಹೆಚ್ಚಳಕ್ಕೆ ಭಾರತವೇ ಪ್ರಮುಖ ಚಾಲಕ ಶಕ್ತಿಯಾಗಿದೆ. ಕಳೆದ 11 ವರ್ಷದ ಅವಧಿಯಲ್ಲಿ ದೇಶದ ಸೌರ ವಿದ್ಯುತ್‌ನ ಸಾಮರ್ಥ್ಯ 2.8 ಗಿಗಾವಾಟ್‌ನಿಂದ 130 ಗಿಗಾವಾಟ್‌ಗೆ ಹೆಚ್ಚಿದ್ದು, ಇದು ಶೇ 4,500 ಪಟ್ಟು ಏರಿಕೆಯಾಗಿದೆ. 2022ರಿಂದ 2024ರ ನಡುವೆ ಈ ಬೆಳವಣಿಗೆಯಾಗಿದೆ. ಜಾಗತಿಕ ಸೌರ ವಿದ್ಯುತ್ ವಲಯಕ್ಕೆ ದೇಶವು 46 ಗಿಗಾವಾಟ್ ಕೊಡುಗೆ ನೀಡಿದ್ದು, ಮೂರನೇ ಬೃಹತ್ ಕೊಡುಗೆಯಾಗಿದೆ ಎಂದು ಹೇಳಿದರು.

ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಶೃಂಗಸಭೆಯನ್ನು ಉದ್ಘಾಟಿಸಿದರು. ವಿವಿಧ ರಾಜ್ಯಗಳ ಇಂಧನ ಸಚಿವರು ಭಾಗವಹಿಸಿದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

8ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಆರ್. ಹನುಮಂತಪ್ಪ
(ಪೊಲೀಸ್ ಇಲಾಖೆ)
ಜನನ: 12.06.1957 ಮರಣ: 07.12.2017
“ಸದಾ ನಿಮ್ಮ ನೆನಪಿನಲ್ಲಿರುವ ಕುಟುಂಬದವರು”

ವೈಕುಂಠ ಸಮಾರಾಧನೆ



ಇವರು ತಾ॥ 27-11-2025ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ತಾ॥ 08-12-2025ನೇ ಸೋಮವಾರ, ಮಧ್ಯಾಹ್ನ 12-00 ಗಂಟೆಗೆ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.
ಸ್ಥಳ: 92, 2ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು-560079
ಇಂತಿ ದುಃಖತಪ್ತರು:
ಡಾ. ಎಂ. ಮಂಜುನಾಥ್, ಶಶಿಕುಮಾರ್
ಡಾ. ಚಂದ್ರಮೌಳಿ, ಡಾ. ರಾಜೇಶ್ವರಿ ಪುರುಷೋತ್ತಮ್
ಸೊಸೆಯಂದಿರು ಹಾಗೂ ಮೊಮ್ಮಕ್ಕಳು
ಮೊ: 9482603422, 9449452912
ಎಂ. ಮಾದಲಿಂಗಯ್ಯ
Rtd. Deputy Controller (SAD)
ಜಾಲಮಂಗಲ, ರಾಮನಗರ ತಾ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್
Sites
Electronic City
KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan
Call : 70260 13388
Vishweshwariah Layout
VISHWESHWARAIAH LAYOUT 6th Block 40'*60' BDA site available, near to KLE Law College. Direct Owner. Contact:- 9845061398, 9880245430

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರೆಂಟಲ್ ಪ್ರಾಪರ್ಟೀಸ್
Accommodation Available
Commercial
RENT COMMERCIAL Ground floor 2900sqft Beml 3stge Rajarajeshwari nagara Bangalore-9945479966

ಪ್ರವಾಸ
Travel
24.12.2025 ರಿಂದ 9 ದಿನಗಳ ಜಾರ್ಖಂಡ್ ವೈದ್ಯನಾಥ ಗಯಾ,ಕಾಶಿ ಚಿತ್ರಕೂಟ ಅಯೋಧ್ಯ ಅಲಹಾಬಾದ್ ನೈಮಿಶಾರಣ್ಯ. 07.01.2026 ರಿಂದ 12 ದಿನಗಳ ಆಗ್ರಾ,ಮಥುರ ಜೈಪುರ್ ಪುಷ್ಕರ್ ಜೈಸಲ್ಮೇರ್ ನಾಥದ್ವಾರ್ ಉದಯಪುರ್ ಮೌಂಟ್‌ಅಬು ವಿಮಾನ ಎಸಿರೂಂ ಎಸಿಬಸ್. ಸಂಪರ್ಕಿಸಿ. ವಿಷ್ಣನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 .9342287551 9482239855

ಪ್ಯಾಕೇಜ್ ಪ್ರವಾಸಗಳು ದುಬಾಯಿ, ಅಬುದಾಬಿ, ಶಾರ್ಜಾ 21.01.2026, ರಿಂದ 6 ದಿನಗಳು, ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್ 30.01.2026 ರಿಂದ 5/11 ದಿನಗಳು. ಜಪಾನ್ ಪ್ರವಾಸ 08.04.2026 ರಿಂದ 8 ದಿನಗಳು. ವಿಯೆಟ್ನಾಂ, ಕಾಂಬೋಡಿಯಾ 25.02.2026 ರಿಂದ 11 ದಿನಗಳು. ಕಾಶಿ, ಗಯಾ, ಚಿತ್ರಕೂಟ, ನೈಮಿಶಾರಣ್ಯ 05.02.2026, 04.03.2026 ರಿಂದ 8 ದಿನಗಳು. ಗುಜರಾತ್/ ಮಧ್ಯಪ್ರದೇಶ 20.01.2026, 28.01.2026 ರಿಂದ 8/11 ದಿನಗಳು. ರಾಜಸ್ಥಾನ 18.02.2026 ರಿಂದ 11 ದಿನಗಳು. ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂಡ್ರಂ 25.12.2025, 21.01.2026 ರಿಂದ 7 ದಿನಗಳು ಆನಂದ್ ವಿಹಾರಿ. ಬೆಂಗಳೂರು23 080 23385837, 8088887677

ಕೃಷ್ಣ ಹೆರಿಟೇಜ್ ಟೂರ್ಸ್, ಊಟ ರೂಮಿನೊಂದಿಗೆ 4ದಿನಗಳು 23.01.2026. ನವಗ್ರಹಗಳ ದರ್ಶನದೊಂದಿಗೆ ಒಟ್ಟು 18 ಕ್ಷೇತ್ರಗಳು ರೂ.7500. 26.04.2026 ಕಾಶಿ, ಗಯಾ,ಜಾರ್ ಖಂಡ್,ಅಯೋಧ್ಯ, ಪ್ರಯಾಗ್ ರಾಜ್, ನೇಮಿಷಾರಣ್ಯ 10 ದಿನಗಳು 9448390735, 9449721678

ASTRO YATRA

ಸಾಯಿದುರ್ಗಾ ಜ್ಯೋತಿಷ್ಯ ಕೇಂದ್ರ
ವಂಶಪಾರಂಪರ್ಯ ಜ್ಯೋತಿಷ್ಯರು
ಪಂ॥ ಶ್ರೀರಾಮ್ ಭಟ್
ಶ್ರೀ ದುರ್ಗಾದೇವಿಯ ಉಪಾಸಕರು
ನಂ.1 ವಶೀಕರಣ ಸ್ಪೆಷಲಿಸ್ಟ್
ಇವರು ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವಿವಾಹ, ಸತಿ-ಪತಿ ಕಲಹ, ಸಂತಾನ ಭಾಗ್ಯ, ದಾಂಪತ್ಯದಲ್ಲಿ ತೊಂದರೆ,ಅತ್ತೆ ಸೊಸೆ ಕಲಹ, ವಿದೇಶ ಪ್ರಯಾಣ, ಕೋರ್ಟ್ ಕೇಸ್, ರಾಜಕೀಯ, ಶತ್ರುಕಾಟ, ಅನಾರೋಗ್ಯ, ಸಾಲಬಾಧೆ, ಮನೆಯಲ್ಲಿ ಅಶಾಂತಿ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಪ್ರೀತಿಯಲ್ಲಿ ನಂಬಿ ಮೋಸ, ವಾಸ್ತು ದೋಷ, ಭೂತ ಪ್ರೇತ ಬಾಧೆ, ಕುಜ ದೋಷ, ಸರ್ಪ ದೋಷ, ಧನವಶ, ಜನವಶ, ಶತ್ರುಬಾದೆ, ಮಾಟ-ಮಂತ್ರ ತಡೆ, ಇನ್ನೂ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ ಕೇರಳದ ಶ್ರೀ ಭದ್ರಕಾಳಿ ಪೂಜಾ ಶಕ್ತಿಯಿಂದ ಕೇವಲ 9 ದಿನಗಳಲ್ಲಿ ಪರಿಹಾರ ಮಾಡಿಕೊಡಲಾಗುತ್ತದೆ.
ವಿಶೇಷ ಸೂಚನೆ: ಅಮಾವಾಸ್ಯೆ, ಹುಣ್ಣಿಮೆ, ಸೂರ್ಯ, ಚಂದ್ರ ಗ್ರಹಗಳ ಜಪಸಿದ್ಧಿಯಿಂದ ಸ್ತ್ರೀ-ಪುರುಷ ವಶೀಕರಣಕ್ಕೆ ಗಂಧರ್ವ ಸಂಮ್ಮೋಹಿನಿ ಕವಚವನ್ನು ಮಾಡಿಕೊಡಲಾಗುತ್ತದೆ.
ಫೋನಿನ ಮೂಲಕ ಪ್ರಶ್ನೆ, ಫೋನಿನ ಮೂಲಕ ಉತ್ತರ ಫೋನಿನ ಮೂಲಕ ಪರಿಹಾರ. ಸಂಪರ್ಕಿಸಿ: 9880403406

ಉದ್ಯೋಗಾವಕಾಶ
General
ಕನಕಪುರದ ಹತ್ತಿರ ತೋಟದಲ್ಲಿ ಹಸುಗಳನ್ನು ಮತ್ತು ತೋಟವನ್ನು ನೋಡಿಕೊಳ್ಳಲು ಕೆಲಸಗಾರರು ಬೇಕಾಗಿದ್ದಾರೆ ಸಂಪರ್ಕಿಸಿ: 8431686838

ವ್ಯಾಪಾರ
Business Offers
General
GET 20% off on Gold&Silver coins avail Loans. Contact: Greenheap. Ph :8618862730

ಚಿಟಿಕೆ ಸುದ್ದಿ

ಡೀಪ್‌ಫೇಕ್ ನಿಯಂತ್ರಣ ಮಸೂದೆ ಮಂಡನೆ

ನವದೆಹಲಿ (ಪಿಟಿಐ): ಡೀಪ್‌ಫೇಕ್ ನಿಯಂತ್ರಣಕ್ಕೆ ಸೂಕ್ತ ಕಾನೂನು ರೂಪಿಸುವಂತೆ ಸಂಸದರೊಬ್ಬರು ಕೋರಿರುವ ಮಸೂದೆಯೊಂದು ಲೋಕಸಭೆಯಲ್ಲಿ ಮಂಡನೆಯಾಗಿದೆ.

ಡೀಪ್‌ಫೇಕ್ ಮೊರೆಹೋಗುವವರಿಗೆ ಪೂರ್ವಾನುಮತಿ ಕಡ್ಡಾಯಗೊಳಿಸುವ ಮೂಲಕ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸುವ ಡೀಪ್‌ಫೇಕ್ ನಿಯಂತ್ರಣ ಮಸೂದೆಯನ್ನು ಶಿವಸೇನಾ ಸಂಸದ ಶ್ರೀಕಾಂತ್ ಶಿಂದೆ ಅವರು ಶುಕ್ರವಾರ ಮಂಡಿಸಿದರು.

'ದೌರ್ಜನ್ಯ, ವಂಚನೆ ಮತ್ತು ಸುಳ್ಳು-ಸುದ್ದಿಗಳನ್ನು ಹರಡಲು ಡೀಪ್‌ಫೇಕ್ ದುರ್ಬಳಕೆ ಹೆಚ್ಚುತ್ತಿದೆ. ಅದನ್ನು ತಡೆಯಲು ಸೂಕ್ತ ಕಾನೂನು ರೂಪಿಸುವ ಅಗತ್ಯ ಇದೆ' ಎಂದು ಹೇಳಿದರು.

9ನೇ ಆವೃತ್ತಿ ಪರೀಕ್ಷಾ ಪೇ ಚರ್ಚಾ: ನೋಂದಣಿ ಆರಂಭ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಾರ್ಷಿಕ 'ಪರೀಕ್ಷಾ ಪೇ ಚರ್ಚಾ'ದ ಒಂಬತ್ತನೇ ಆವೃತ್ತಿಯು ಜನವರಿಯಲ್ಲಿ ನಡೆಯಲಿದೆ. ಈಗಾಗಲೇ ಇದಕ್ಕೆ ನೋಂದಣಿ ಆರಂಭವಾಗಿದ್ದು, ಜನವರಿ 11ಕ್ಕೆ ಮುಕ್ತಾಯಗೊಳ್ಳಲಿದೆ ಎಂದು ಶಿಕ್ಷಣ ಸಚಿವಾಲಯದ ಅಧಿಕಾರಿಗಳು ತಿಳಿಸಿದರು.

2026ರ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮದಲ್ಲಿ ಭಾಗವಹಿಸುವವರ ಆಯ್ಕೆಗಾಗಿ, ಡಿಸೆಂಬರ್ 1ರಿಂದ ಜನವರಿ 11ರ ವರೆಗೆ MyGov.in ಪೋರ್ಟಲ್‌ನಲ್ಲಿ ಬಹುಆಯ್ಕೆಯ ಪ್ರಶ್ನೆಗಳೊಂದಿಗೆ ಆನ್‌ಲೈನ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ. 6ರಿಂದ 12ನೇ ತರಗತಿ ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಬಹುದು.

ಭಾರತ ಮತ್ತು ವಿದೇಶದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಪ್ರಧಾನಿ ಅವರೊಂದಿಗೆ ಪರೀಕ್ಷೆ ಒತ್ತಡವನ್ನು ಎದುರಿಸುವ ಕುರಿತು ಚರ್ಚಿಸಲಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಹುಲ್ ವಿರುದ್ಧದ ಪ್ರಕರಣ: ವಿಚಾರಣೆ ಮುಂದೂಡಿಕೆ

ಠಾಣೆ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ಕುರಿತು ವಿಚಾರಣೆ ನಡೆಸಿದ ಮಹಾರಾಷ್ಟ್ರದ ಠಾಣೆಯ ಭಿವಂಡಿ ನ್ಯಾಯಾಲಯವು ಸಾಕ್ಷಿದಾರರು ಗೈರಾಗಿದ್ದ ಕಾರಣ ವಿಚಾರಣೆಯನ್ನು ಡಿಸೆಂಬರ್ 20ಕ್ಕೆ ಮುಂದೂಡಿದೆ.

ರಾಹುಲ್ ಗಾಂಧಿ

ಸೋಲಾಪುರದ ಬಾರ್ಶಿ ಠಾಣೆಯಲ್ಲಿ ಪೊಲೀಸ್ ಉಪ ವರಿಷ್ಠಾಧಿಕಾರಿಯಾಗಿರುವ ಸಾಕ್ಷಿದಾರ ಅಶೋಕ್ ಸಾಯಕರ್ ಅವರು ವೈಯಕ್ತಿಕ ಕಾರಣಗಳಿಂದ ವಿಚಾರಣೆ ಹಾಜರಾಗಿಲ್ಲ ಎಂದು ರಾಹುಲ್ ಪರ ವಕೀಲ ನಾರಾಯಣ್ ಅಯ್ಯರ್ ಅವರು ದೃಢಪಡಿಸಿದರು.

ಡಿ.29ರಂದು ಅಶೋಕ್ ಅವರ ಸಾಕ್ಷ್ಯ ದಾಖಲಿಸಿ ಕೊಳ್ಳುವ ಸಾಧ್ಯತೆಯಿದೆ. ಅಶೋಕ್ ಅವರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿದ್ದಾಗ ಈ ಪ್ರಕರಣದ ಕುರಿತು ಪ್ರಾಥಮಿಕ ತನಿಖೆ ನಡೆಸಿದ್ದರು. ಹಾಗಾಗಿ ಇವರನ್ನು ಸಾಕ್ಷಿ ಎಂದು ಪರಿಗಣಿಸಲಾಗಿದೆ.

ಸಾಯಕರ್ ಸಲ್ಲಿಸಿದ್ದ ವರದಿ ಆಧಾರದ ಮೇಲೆ ನ್ಯಾಯಾಲಯವು ಐಪಿಸಿ ಸೆಕ್ಷನ್ 500ರ ಅಡಿ ರಾಹುಲ್ ಗಾಂಧಿ ಅವರಿಗೆ ಈ ಹಿಂದೆ ಸಮನ್ಸ್ ನೀಡಿತ್ತು.

ಪೀಠಿಕೆ: 'ಜಾತ್ಯತೀತ', 'ಸಮಾಜವಾದ' ತೆಗೆದುಹಾಕಿ

ನವದೆಹಲಿ (ಪಿಟಿಐ): 'ದೇಶದ ಸಂವಿಧಾನದ ಪೀಠಿಕೆಯಲ್ಲಿ 'ಜಾತ್ಯತೀತ', 'ಸಮಾಜವಾದ' ಪದಗಳ ಅಗತ್ಯವಿಲ್ಲ, ತುರ್ತು ಪರಿಸ್ಥಿತಿ ವೇಳೆ ಪ್ರಜಾಪ್ರಭುತ್ವ ವಿರೋಧಿ ನೀತಿ ವಿಧಾನದ ಅಡಿಯಲ್ಲಿ ಅವುಗಳನ್ನು ಸೇರಿಸಿದ್ದು, ಅವುಗಳನ್ನು ತೆಗೆದು ಹಾಕಬೇಕು' ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಭೀಮ್ ಸಿಂಗ್ ಅವರು ಖಾಸಗಿ ಮಸೂದೆ ಮಂಡಿಸಿದ್ದಾರೆ.

ಸಿಂಗ್ ಅವರು 'ಸಂವಿಧಾನ (ತಿದ್ದುಪಡಿ) ಕಾಯ್ದೆ 2025' ಅನ್ನು ರಾಜ್ಯಸಭೆಯಲ್ಲಿ ಶುಕ್ರವಾರ ಮಂಡಿಸಿದ್ದು, ಮೂಲ ಸಂವಿಧಾನದಲ್ಲಿ ಈ ಪದಗಳು ಇರಲಿಲ್ಲ, ಇದರಿಂದ ಗೊಂದಲ ಸೃಷ್ಟಿಯಾಗುತ್ತಿದೆ ಎಂದು ತಿಳಿಸಿದ್ದಾರೆ.

'ಸಂವಿಧಾನದ ಪೀಠಿಕೆಯಿಂದ ಸಮಾಜವಾದ, ಜಾತ್ಯತೀತ ಪದಗಳನ್ನು ತೆಗೆದುಹಾಕಬೇಕು ಎಂದು ಖಾಸಗಿ ಮಸೂದೆಯನ್ನು ಮಂಡಿಸಿದ್ದೇನೆ. ಮೂಲ ಸಂವಿಧಾನ 1950ರಲ್ಲಿ ಜಾರಿಗೆ ಬಂದಿತ್ತು, ತುರ್ತು ಪರಿಸ್ಥಿತಿ ವೇಳೆ ಸಂವಿಧಾನಕ್ಕೆ 42ನೇ ತಿದ್ದುಪಡಿ ತಂದು ಇಂದಿರಾ ಗಾಂಧಿ ಈ ಪದಗಳನ್ನು ಸೇರಿಸಿದರು. ಆ ವೇಳೆ ಈ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯೇ ನಡೆದಿರಲಿಲ್ಲ' ಎಂದಿದ್ದಾರೆ.

ಬಿಜೆಪಿ, ಟಿಎಂಸಿ ಜಟಾಪಟಿ

ಪಶ್ಚಿಮ ಬಂಗಾಳ: 'ಬಾಬರಿ ಮಸೀದಿ ಶೈಲಿ' ಮಸೀದಿ ನಿರ್ಮಾಣ ವಿವಾದ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ 'ಬಾಬರಿ ಮಸೀದಿ ಶೈಲಿ'ಯ ಮಸೀದಿಯೊಂದರ ನಿರ್ಮಾಣಕ್ಕೆ ಶಾಸಕ ಹುಮಾಯೂನ್ ಕಬೀರ್ ಶಂಕುಸ್ಥಾಪನೆ ನೆರವೇರಿಸಿದ್ದು, ಯೋಜನೆಯು ಆಡಳಿತಾರೂಢ ಟಿಎಂಸಿ ಹಾಗೂ ಬಿಜೆಪಿ ನಡುವೆ ಜಟಾಪಟಿಗೆ ಕಾರಣವಾಗಿದೆ.

'ಮುಸ್ಲಿಮರ ಧ್ರುವೀಕರಣಕ್ಕೆ ಪಕ್ಷದ ಶಾಸಕರನ್ನು ಟಿಎಂಸಿ ಬಳಸಿಕೊಳ್ಳುತ್ತಿದೆ' ಎಂದು ಬಿಜೆಪಿ ಟೀಕಿಸಿದೆ. ಬಿಜೆಪಿಯ ಆರೋಪಗಳು ಆಧಾರರಹಿತ ಎಂದು ಟಿಎಂಸಿ ತಿರುಗೇಟು ನೀಡಿದೆ.

ಈ ವಿವಾದಾತ್ಮಕ ಹೇಳಿಕೆಗಳ ಕಾರಣಕ್ಕೆ ಕಬೀರ್ ಅವರನ್ನು ಕಳೆದ ವಾರ ಟಿಎಂಸಿ ಪಕ್ಷದಿಂದ ಅಮಾನತು ಮಾಡಿದೆ.

ಈ ವಿಚಾರವಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ವಾಗ್ದಾಳಿ ನಡೆಸಿದ ಬಿಜೆಪಿ ನಾಯಕ ಅಮಿತ್ ಮಾಳವೀಯ, 'ಬಾಬರಿ ಮಸೀದಿ ಶೈಲಿಯ ಮಸೀದಿ ನಿರ್ಮಾಣಕ್ಕಾಗಿ ಕಬೀರ್ ಬೆಂಬಲಿಗರು 'ಇಟ್ಟಿಗೆಗಳನ್ನು ಹೊತ್ತೊಯ್ಯುತ್ತಿದ್ದರು. ಬೆಲ್ದಾಂಗದಲ್ಲಿ ಬೆಳವಣಿಗೆಗಳು ಆತಂಕ ಮೂಡಿಸುವಂತಿವೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕೋಮು ವಿಚಾರವಾಗಿ ಬೆಲ್ದಾಂಗ ಬಹಳ ಸೂಕ್ಷ್ಮ ಪ್ರದೇಶ. ಇಲ್ಲಿ ಭುಗಿಲೇಳುವ ಯಾವುದೇ ಘರ್ಷಣೆಯು ಪಶ್ಚಿಮ ಬಂಗಾಳದ ಜೀವನಾಡಿಯಾಗಿರುವ ರಾಷ್ಟ್ರೀಯ ಹೆದ್ದಾರಿ 12ರಲ್ಲಿನ ಸಂಚಾರಕ್ಕೆ ಧಕ್ಕೆ ತರಲಿದೆ' ಎಂದು ಮಾಳವೀಯ ಎಚ್ಚರಿಸಿದ್ದಾರೆ.

'ರಾಜ್ಯದ ಉತ್ತರ ಮತ್ತು ದಕ್ಷಿಣ ಭಾಗವನ್ನು ಸಂಪರ್ಕಿಸುವ ಪ್ರಮುಖ ಹೆದ್ದಾರಿ ಇದಾಗಿದ್ದು, ಇಲ್ಲಿ ಉದ್ಭವಿಸಬಹುದಾದ ಕಾನೂನು–ಸುವ್ಯವಸ್ಥೆ ಸಮಸ್ಯೆಯು ರಾಷ್ಟ್ರೀಯ ಭದ್ರತೆ ಮೇಲೂ ಗಂಭೀರ ಪರಿಣಾಮ ಬೀರಬಹುದು' ಎಂದು ಹೇಳಿದ್ದಾರೆ.

'ಮುಂಬರುವ ವಿಧಾನಸಭಾ ಚುನಾವಣೆ ಹೊತ್ತಿನಲ್ಲಿ ರಾಜ್ಯದಲ್ಲಿ ಕ್ಷೋಭೆಯನ್ನುಂಟು ಮಾಡುವುದಕ್ಕೆ ಟಿಎಂಸಿ ಶಾಸಕ ಹುಮಾಯೂನ್ ಕಬೀರ್ ಅವರನ್ನು ಬಳಸಿಕೊಳ್ಳುತ್ತಿದೆ' ಎಂದು ಬಿಜೆಪಿಯ ಹಿರಿಯ ನಾಯಕ ದಿಲೀಪ್ ಘೋಷ್ ಆರೋಪಿಸಿದ್ದಾರೆ.

'ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನೊಂದಿಗೆ ಕಬೀರ್ ಅಘೋಷಿತ ಒಪ್ಪಂದ ಮಾಡಿಕೊಂಡಿದ್ದು, ಜಿಲ್ಲೆಯಲ್ಲಿ ಶಾಂತಿ ಕದಡಲು ಕಬೀರ್ ಹವಣಿಸುತ್ತಿದ್ದಾರೆ' ಎಂದು ಟಿಎಂಸಿ ಆರೋಪಿಸಿದೆ.

'ಅಮಾನತು ಮಾಡಲಾಗಿರುವ ಶಾಸಕ ಕಬೀರ್‌ಗೆ ಬಿಜೆಪಿಯಿಂದ ಧನಸಹಾಯ ಸಿಗುತ್ತಿದೆ. ಗಲಭೆ ಭುಗಿಲೇಳುವಂತೆ ಮಾಡುವುದಕ್ಕೆ ಆತ ಬಿಜೆಪಿಯ ಏಜೆಂಟ್‌ನಂತೆ ಕೆಲಸ ಮಾಡುತ್ತಿದ್ದಾರೆ' ಎಂದು ಟಿಎಂಸಿ ಹಿರಿಯ ನಾಯಕರೊಬ್ಬರು ಆರೋಪಿಸಿದ್ದಾರೆ.

ಮುಖ್ಯಾಂಶಗಳು

- ಟಿಎಂಸಿಯಿಂದ ಓಲೈಕೆ ರಾಜಕಾರಣ: ಬಿಜೆಪಿ ಟೀಕೆ
- ಅಮಾನತು ಮಾಡಲಾದ ಶಾಸಕ ಕಬೀರ್ ಬಿಜೆಪಿ ಏಜೆಂಟ್: ಟಿಎಂಸಿ
- ಕಾನೂನು–ಸುವ್ಯವಸ್ಥೆ ಸರ್ಕಾರದ ಜವಾಬ್ದಾರಿ: ಹೈಕೋರ್ಟ್

ಶಾಸಕ ಹುಮಾಯೂನ್ ಕಬೀರ್ ಅವರು ಬಾಬರಿ ಮಸೀದಿಯನ್ನು ಹೋಲುವ ಮಸೀದಿ ನಿರ್ಮಾಣಕ್ಕೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿದ ಸಂದರ್ಭದಲ್ಲಿ ಮುಂಜಾಗ್ರತಾ ಕ್ರಮವಾಗಿ ಮುರ್ಶಿದಾಬಾದ್ ರೈಲು ನಿಲ್ದಾಣದ ಬಳಿ ಭದ್ರತಾ ಸಿಬ್ಬಂದಿ ಬಂದೋಬಸ್ತ್ ಮಾಡಿದ್ದರು –ಪಿಟಿಐ ಚಿತ್ರ

ಬಾಬರಿ ಧ್ವಂಸಕ್ಕೆ 33 ವರ್ಷ: ಹಲವೆಡೆ ಕಟ್ಟೆಚ್ಚರ

ವಾರಾಣಸಿ: ಬಾಬರಿ ಮಸೀದಿ ಧ್ವಂಸಗೊಳಿಸಿ 33 ವರ್ಷಗಳಾಗಿದ್ದು, ವಾರಾಣಸಿಯಾದ್ಯಂತ ಪೊಲೀಸರು ಶನಿವಾರ ಬಿಗಿ ಭದ್ರತೆ ವಹಿಸಿದ್ದರು.

ದಶಾಶ್ವಮೇಧ್ ಎಸಿಪಿ ಅತುಲ್ ಅಂಜನ್ ತ್ರಿಪಾಠಿ ಅವರು, 'ಶನಿವಾರ ವಿಶೇಷ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು. ಪೊಲೀಸರು ಹಲವು ಪ್ರದೇಶಗಳಲ್ಲಿ ಗಸ್ತು ತಿರುಗಿದರು. ಜನದಟ್ಟಣೆಯ ಸಾರ್ವಜನಿಕ ಸ್ಥಳಗಳಲ್ಲಿ ಭದ್ರತೆಗಾಗಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು' ಎಂದು ತಿಳಿಸಿದರು.

'ಕೆಲವು ಕಡೆಗಳಲ್ಲಿ ವಾಹನಗಳ ತಪಾಸಣೆ ನಡೆಸಲಾಯಿತು. ಪೊಲೀಸರು ಸಾಮಾನ್ಯ ಜನರಂತೆ ಇದ್ದು ಪರಿಶೀಲನೆ ನಡೆಸಿದರು. ಭದ್ರತಾ ಪಡೆಗಳು ಸೂಕ್ಷ್ಮ ಪ್ರದೇಶಗಳಲ್ಲಿ ಮನೆಗಳ ಚಾವಣಿಗಳಲ್ಲಿ ನಿಂತು ಕಣ್ಗಾವಲು ವಹಿಸಿದ್ದರು' ಎಂದರು.

'ಮಸೀದಿ: ಏಪ್ರಿಲ್‌ನಿಂದ ಕಾಮಗಾರಿ'

ಇಂಡೊ–ಇಸ್ಲಾಮಿಕ್ ಕಲ್ಚರಲ್ ಫೌಂಡೇಷನ್ ಮಾಹಿತಿ

ಲಖನೌ (ಪಿಟಿಐ): ಅಯೋಧ್ಯೆಯಿಂದ 25 ಕಿ.ಮೀ. ದೂರದ ಧನ್ನಿಪುರದಲ್ಲಿ ನೂತನ ಮಸೀದಿ ನಿರ್ಮಾಣವಾಗಲಿದೆ. ಅದರ ಕಾಮಗಾರಿಯು 2026ರ ಏಪ್ರಿಲ್‌ನಲ್ಲಿ ಆರಂಭವಾಗುವ ಸಾಧ್ಯತೆ ಇದೆ ಎಂದು ಮಸೀದಿ ನಿರ್ಮಾಣದ ಹೊಣೆ ಹೊತ್ತಿರುವ 'ಇಂಡೊ–ಇಸ್ಲಾಮಿಕ್ ಕಲ್ಚರಲ್ ಫೌಂಡೇಷನ್' (ಐಐಸಿಎಫ್) ತಿಳಿಸಿದೆ.

'ಮಸೀದಿ ನಿರ್ಮಾಣ ಕುರಿತ ಪರಿಷ್ಕೃತ ನೀಲನಕ್ಷೆಯನ್ನು ಡಿಸೆಂಬರ್ ಅಂತ್ಯದ ವೇಳೆಗೆ ಸಲ್ಲಿಸಲಿದ್ದು, ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರ (ಎಡಿಎ) ಅನುಮತಿ ನೀಡಬೇಕಿದೆ. ಎಲ್ಲವೂ ಅಂದುಕೊಂಡಂತೆ ಆದರೆ 2026ರ ಏಪ್ರಿಲ್ ವೇಳೆಗೆ ಕಾಮಗಾರಿಯು ಪ್ರಾರಂಭವಾಗಬಹುದು' ಎಂದು ಐಐಸಿಎಫ್ ಅಧ್ಯಕ್ಷ ಜುಫರ್ ಫಾರೂಕಿ ತಿಳಿಸಿದರು.

1992ರಲ್ಲಿ ಉದ್ರಿಕ್ತರ ಗುಂಪು ಬಾಬರಿ ಮಸೀದಿಯನ್ನು ಧ್ವಂಸ ಮಾಡಿತ್ತು. 2019ರ ನವೆಂಬರ್ 9ರಂದು ರಾಮ ಜನ್ಮಭೂಮಿ– ಬಾಬರಿ ಮಸೀದಿ ಪ್ರಕರಣದಲ್ಲಿ ಮಹತ್ವದ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ವಿವಾದಿತ ಜಾಗವನ್ನು ರಾಮಮಂದಿರ ಟ್ರಸ್ಟ್‌ಗೆ ನೀಡಿ, ಅಯೋಧ್ಯೆಯ ಸುತ್ತಮುತ್ತ ಐದು ಎಕರೆ ಭೂಮಿಯನ್ನು ಮಸೀದಿಗಾಗಿ ಮಂಜೂರು ಮಾಡುವಂತೆ ನಿರ್ದೇಶಿಸಿತ್ತು. ಅದರಂತೆ ಅಯೋಧ್ಯೆ ಜಿಲ್ಲಾಡಳಿತವು ಧನ್ನಿಪುರದಲ್ಲಿ ಐದು ಎಕರೆ ಭೂಮಿಯನ್ನು ಮಂಜೂರು ಮಾಡಿದೆ. ಆದ್ದರಿಂದ ಮಸೀದಿ ಸ್ಥಾಪನೆ ವಿಚಾರದಲ್ಲಿ ಅನಿಶ್ಚಿತತೆ ಮುಂದುವರಿದಿದೆ.

'ಮೊದಲಿಗೆ ಎಡಿಎ ಮಸೀದಿ ಯೋಜನೆಯ ನೀಲನಕ್ಷೆಯನ್ನು ತಿರಸ್ಕರಿಸಿತು. ಸಮುದಾಯದಿಂದ ಅಷ್ಟಾಗಿ ಧನಸಹಾಯ ಸಿಗದ ಕಾರಣ, ಐಐಸಿಎಫ್ ಸಹ ಆ ನೀಲನಕ್ಷೆಯನ್ನು ಕೈಬಿಟ್ಟಿದೆ. ಸದ್ಯ ಸಾಂಪ್ರದಾಯಿಕ ಶೈಲಿಯ ನಿರ್ಮಾಣಕ್ಕೆ ಅದು ಮುಂದಾಗಿದ್ದು, ಯೋಜನೆಯು ಸಿದ್ಧವಾಗಿದೆ' ಎಂದು ಫಾರೂಕಿ ತಿಳಿಸಿದರು.

'ಎಡಿಎ ಅನುಮೋದನೆಯು ಮಸೀದಿ ನಿರ್ಮಾಣ ಕಾರ್ಯದ ಮೊದಲ ಹೆಜ್ಜೆ. ಆದರೆ, ಧನ್ನಿಪುರದಲ್ಲಿ ಮೀಸಲಿಟ್ಟಿರುವ ಜಾಗದ ಸುತ್ತ ಅಭಿವೃದ್ಧಿಯ ಇರುವ ಭೂಮಿಯ ಸ್ವಾಧೀನ ಪ್ರಕ್ರಿಯೆ ಸೇರಿದಂತೆ ಹಲವು ವಿಷಯಗಳತ್ತ ಐಐಸಿಎಫ್ ಗಮನಹರಿಸುತ್ತಿದೆ' ಎಂದರು.

'ಮಸೀದಿ ನಿರ್ಮಾಣಕ್ಕೆ ಹೆಚ್ಚುವರಿ ಭೂಮಿಯ ಸ್ವಾಧೀನವೇ ಒಂದು ಸಮಸ್ಯೆಯಾಗಿದೆ. ಬೇರೆ ಬೇರೆ ಜಾಗಗಳಲ್ಲಿ, ಹಂತ ಹಂತವಾಗಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ' ಎಂದು ಮಾಹಿತಿ ನೀಡಿದರು.

'ಧನ್ನಿಪುರದಲ್ಲಿ ಐದು ಎಕರೆ ಜಾಗವನ್ನು ಟ್ರಸ್ಟ್‌ಗೆ ನೀಡಲಾಗಿದೆ. ಆದರೆ, ಕೆಲ ತಾಂತ್ರಿಕ ಕಾರಣಗಳಿಂದಾಗಿ ನಾಲ್ಕು ಎಕರೆ ಜಾಗ ಮಾತ್ರ ಲಭ್ಯವಿದೆ. ಹೀಗಾಗಿ ಒಂದಕ್ಕಿಂತ ಹೆಚ್ಚು ಪ್ರದೇಶಗಳಲ್ಲಿ ಮಸೀದಿ ಯೋಜನೆಯು ಅನುಷ್ಠಾನವಾಗುವ ಸಾಧ್ಯತೆ ಇದೆ' ಎಂದೂ ತಿಳಿಸಿದರು.

'ಮಸೀದಿ ನಿರ್ಮಾಣಕ್ಕೆ ಬೇಕು ₹65 ಕೋಟಿ'

'ರಾಮಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಂಡು 'ಧರ್ಮ ಧ್ವಜ'ವನ್ನು ಹಾರಿಸಲಾಗಿದೆ. ಆದರೆ ಮಸೀದಿ ನಿರ್ಮಾಣಕ್ಕೆ ಕಾಮಗಾರಿಯೇ ಆರಂಭವಾಗಿಲ್ಲ ಎಂಬ ಹೋಲಿಕೆಯೇ ಸರಿಯಲ್ಲ. ರಾಮಮಂದಿರವು ಸಾರ್ವಜನಿಕ ಆಂದೋಲನದಂತೆ ರೂಪುಗೊಂಡಿದೆ. ಮಸೀದಿ ನಿರ್ಮಾಣಕ್ಕೆ ಎಡಿಎ ಅನುಮೋದನೆ ನೀಡಿದರೂ ಅದಕ್ಕಾಗಿ ದೊಡ್ಡ ಮೊತ್ತದ ಹಣದ ಅಗತ್ಯವಿದೆ' ಎಂದು ಫಾರೂಕಿ ಹೇಳಿದರು.

'ಮಸೀದಿ ಮತ್ತು ಇತರ ಕಟ್ಟಡಗಳ ನಿರ್ಮಾಣಕ್ಕಾಗಿ ₹65 ಕೋಟಿ ಬೇಕಿದೆ ಎಂದು ಅಂದಾಜಿಸಲಾಗಿದೆ. ಆದರೆ ಈಗ ನಮ್ಮ ಬಳಿ ಕೇವಲ ₹3 ಕೋಟಿ ಇದೆ. ದೇಣಿಗೆ ಮತ್ತು ಸಾರ್ವಜನಿಕ ನೆರವಿನಿಂದ ಮಾತ್ರ ಆರ್ಥಿಕ ಅಡೆತಡೆಗಳು ನಿವಾರಣೆಯಾಗಿ ಮಸೀದಿ ನಿರ್ಮಾಣ ಸಾಧ್ಯ' ಎಂದು ತಿಳಿಸಿದರು.

'10–15 ಕೋಟಿ ಹಣವಿದ್ದರೂ ಯೋಜನೆಯನ್ನು ಆರಂಭಿಸಬಹುದು. ಹೀಗಾಗಿ ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆ (ಎಫ್‌ಸಿಆರ್‌ಎ)ಯಡಿ ನೋಂದಾಯಿಸುವುದೂ ಸೇರಿದಂತೆ ಹಲವು ಅನುಮತಿಗಳನ್ನು ಪಡೆಯಲು ಪ್ರಯತ್ನಿಸುತ್ತಿದ್ದೇವೆ. ಬಳಿಕ ವಿದೇಶಗಳಿಂದ ದೇಣಿಗೆಯನ್ನು ಪಡೆಯಬಹುದು' ಎಂದು ತಿಳಿಸಿದರು.

ಟಿಕೆಟ್ ಮೊತ್ತ ಪೂರ್ಣ ಮರುಪಾವತಿಗೆ ಆದೇಶ

ಒಂದನೇ ಪುಟದಿಂದ...

ವಿಮಾನ ಕಾರ್ಯಾಚರಣೆಗಳು ಯಥಾಸ್ಥಿತಿಗೆ ಬರುವವರೆಗೆ ಸ್ವಯಂ ಚಾಲಿತ ಮರುಪಾವತಿ ವ್ಯವಸ್ಥೆ ಸಕ್ರಿಯವಾಗಿರುತ್ತದೆ ಎಂದು ಆದೇಶ ಹೇಳಿದೆ.

400ಕ್ಕೂ ಹೆಚ್ಚು ವಿಮಾನ ಸಂಚಾರ ರದ್ದು: ದೇಶದ ನಾಲ್ಕು ಪ್ರಮುಖ ವಿಮಾನ ನಿಲ್ದಾಣಗಳಲ್ಲಿ 400ಕ್ಕೂ ಹೆಚ್ಚು ಇಂಡಿಗೊ ವಿಮಾನಗಳ ಸಂಚಾರ ರದ್ದಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಪೈಕಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 165 (79 ನಿರ್ಗಮನ, 86 ಆಗಮನ), ಮುಂಬೈ ವಿಮಾನ ನಿಲ್ದಾಣದಲ್ಲಿ 109 (51 ನಿರ್ಗಮನ, 58 ಆಗಮನ), ದೆಹಲಿ ವಿಮಾನ ನಿಲ್ದಾಣದಲ್ಲಿ 106 (54 ನಿರ್ಗಮನ, 52 ಆಗಮನ), ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ 66 ಇಂಡಿಗೊ ವಿಮಾನಗಳ ಹಾರಾಟ ರದ್ದುಗೊಂಡಿವೆ ಎಂದು ಮೂಲಗಳು ಮಾಹಿತಿ ನೀಡಿವೆ.

ಟರ್ಮಿನಲ್‌ಗಳಲ್ಲಿ ಕಾದು ಕುಳಿತಿದ್ದ ಪ್ರಯಾಣಿಕರಿಗೆ ಸಿಬ್ಬಂದಿ ಆಸನ, ಊಟದ ವ್ಯವಸ್ಥೆ ಮಾಡಿದ್ದಾರೆ.

ಸಿಇಒ ಕ್ಷಮೆಯಾಚನೆ: ಐದು ದಿನಗಳಿಂದ ಇಂಡಿಗೊ ವಿಮಾನಯಾನದಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಬಗ್ಗೆ ವಿಡಿಯೊ ಸಂದೇಶ ರವಾನಿಸಿರುವ ಇಂಡಿಗೊ ವಿಮಾನಯಾನ ಸಂಸ್ಥೆಯ ಸಿಇಒ ಪೀಟರ್ ಎಲ್ಬರ್ಸ್, 'ಅಡಚಣೆಗಳಿಂದ ಪ್ರಯಾಣಿಕರಿಗೆ ಆದ ಅನಾನುಕೂಲಕ್ಕೆ ಕ್ಷಮೆಯಾಚಿಸುತ್ತೇವೆ' ಎಂದಿದ್ದಾರೆ. ಶುಕ್ರವಾರ 1000ಕ್ಕೂ ಹೆಚ್ಚು ವಿಮಾನ ಹಾರಾಟ ರದ್ದಾಗಿತ್ತು. ಶನಿವಾರ ಆ ಸಂಖ್ಯೆ ಕಡಿಮೆ ಆಗುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ.

ಪೈಲಟ್‌ಗಳ ಸಂಘದ ಆಕ್ಷೇಪ

ಇಂಡಿಗೊ ವಿಮಾನಯಾನ ಸಂಸ್ಥೆಗೆ ತಾತ್ಕಾಲಿಕವಾಗಿ ವಿನಾಯಿತಿ ನೀಡುವ ಅವಕಾಶ ಕಲ್ಪಿಸಿರುವ ಡಿಜಿಸಿಎ ವಿರುದ್ಧ ಏರ್‌ಲೈನ್ ಪೈಲಟ್‌ಗಳ ಸಂಘ (ಎಎಲ್‌ಪಿಎ) ಆಕ್ಷೇಪ ವ್ಯಕ್ತಪಡಿಸಿದೆ. ಹೀಗೆ ನಿಯಮಗಳ ಸಡಿಲಿಕೆಯು ಸಮಾನತೆಯನ್ನು ನಾಶಪಡಿಸುತ್ತದೆ ಅಲ್ಲದೆ, ಲಕ್ಷಾಂತರ ಪ್ರಯಾಣಿಕರನ್ನು ಹೆಚ್ಚಿನ ಅಪಾಯಕ್ಕೆ ಸಿಲುಕಿಸುತ್ತದೆ ಎಂದು ಹೇಳಿದೆ.

'ಆಯಾಸ ತಗ್ಗಿಸುವ ಮಾನದಂಡಗಳ ಜಾರಿಗೊಳಿಸುವಿಕೆಯನ್ನು ಕಡ್ಡಾಯಗೊಳಿಸುವ ಕುರಿತು ನ್ಯಾಯಾಲಯ ನೀಡಿದ್ದ ನಿರ್ದೇಶನಗಳಿಗೆ ವಿರುದ್ಧವಾದ ಕ್ರಮವನ್ನು ಡಿಜಿಸಿಎ ತೆಗೆದುಕೊಂಡಿದೆ' ಎಂದು ಸಂಘ ಆರೋಪಿಸಿದೆ.

'ನಿರ್ದಿಷ್ಟ ದರ ಮಿತಿ ಪಾಲಿಸಿ'

ರಾಮ್‌ಮೋಹನ್ ನಾಯ್ಡು

ನವದೆಹಲಿ: ಇಂಡಿಗೊ ವಿಮಾನಗಳ ಸಂಚಾರ ರದ್ದಾದ ಸಂದರ್ಭವನ್ನು ಬಳಸಿಕೊಂಡು ದೇಶದ ಹಲವು ವಿಮಾನಯಾನ ಸಂಸ್ಥೆಗಳು ದರ ಏರಿಸಿರುವುದನ್ನು ಗಮನಿಸಿರುವ ನಾಗರಿಕ ವಿಮಾನಯಾನ ಸಚಿವಾಲಯ, ನಿರ್ದಿಷ್ಟ ದರ ಮಿತಿಗಳನ್ನು ಪಾಲಿಸುವಂತೆ ದೇಶದ ಎಲ್ಲ ವಿಮಾನಯಾನ ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ.

'500 ಕಿ.ಮೀವರೆಗಿನ 1,000 ಕಿ.ಮೀವರೆಗಿನ ವಿಮಾನ ಪ್ರಯಾಣಕ್ಕೆ ₹7,500 ದರ, 1,000–1,500 ಕಿ.ಮೀವರೆಗಿನ ಪ್ರಯಾಣಕ್ಕೆ ₹15,000 ಹಾಗೂ 1,500 ಕಿ.ಮೀಗಿಂತ ಹೆಚ್ಚಿನ ವಿಮಾನಯಾನಕ್ಕೆ ₹18,000 ದರ ಮಿತಿಯನ್ನು ನಿಗದಿಪಡಿಸಿ ಸರ್ಕಾರ ಆದೇಶಿಸಿದೆ.

ನಿಯಂತ್ರಕ ಅಧಿಕಾರ ಬಳಸಿದ ಸಚಿವಾಲಯ: 'ಸಂಕಷ್ಟದ ಸಮಯದಲ್ಲಿ ಪ್ರಯಾಣಿಕರನ್ನು ಸಮರ್ಪಕವಾಗಿ ರಕ್ಷಿಸಲು ನ್ಯಾಯಯುತ ಮತ್ತು ಸಮಂಜಸವಾದ ದರಗಳ ಮಿತಿಯನ್ನು ನಿಗದಿ ಮಾಡಲಾಗಿದೆ. ಇದಕ್ಕಾಗಿ ಸಚಿವಾಲಯವು ತನ್ನ ನಿಯಂತ್ರಕ ಅಧಿಕಾರವನ್ನು ಬಳಸಿಕೊಂಡಿದೆ' ಎಂದು ನಾಗರಿಕ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್ ನಾಯ್ಡು ಪ್ರತಿಕ್ರಿಯಿಸಿದರು.

'ಸಚಿವಾಲಯವು ದರ ಮಟ್ಟವನ್ನು ನಿಕಟವಾಗಿ ಮೇಲ್ವಿಚಾರಣೆ ನಡೆಸುತ್ತಿರುತ್ತದೆ. ನಿಗದಿತ ಮಾನದಂಡಗಳನ್ನು ಉಲ್ಲಂಘಿಸಿದರೆ, ತಕ್ಷಣವೇ ಕ್ರಮ ತೆಗೆದುಕೊಳ್ಳಲಾಗುತ್ತದೆ' ಎಂದು ಅವರು ಎಚ್ಚರಿಸಿದರು.

116 ಹೆಚ್ಚುವರಿ ಕೋಚ್‌ಗಳ ಅಳವಡಿಕೆ

ನವದೆಹಲಿ (ಪಿಟಿಐ): 'ಇಂಡಿಗೊ ವಿಮಾನಗಳ ರದ್ದತಿಯಿಂದ ಉಂಟಾದ ಪ್ರಯಾಣಿಕರ ದಟ್ಟಣೆಯನ್ನು ನಿರ್ವಹಿಸಲು, ಭಾರತೀಯ ರೈಲ್ವೆ ದೇಶದಾದ್ಯಂತ 37 ಪ್ರೀಮಿಯಂ ರೈಲುಗಳಲ್ಲಿ 116 ಹೆಚ್ಚುವರಿ ಕೋಚ್‌ಗಳನ್ನು ಅಳವಡಿಸಿದೆ. ಅಲ್ಲದೆ ಕೆಲ ಮಾರ್ಗಗಳಲ್ಲಿ ವಿಶೇಷ ರೈಲು ಸಂಚಾರಕ್ಕೆ ಅನುವು ಮಾಡಿಕೊಟ್ಟಿದೆ.

'ಹಿಂದೂ ಬೆಳವಣಿಗೆ ದರ'ದ ಕೊಂಕು–ಮೋದಿ ಟೀಕೆ

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ದೇಶದ ನಿಧಾನಗತಿಯ ಆರ್ಥಿಕ ಬೆಳವಣಿಗೆಯನ್ನು 'ಹಿಂದೂ ಬೆಳವಣಿಗೆ ದರ' ಎಂದು ಕರೆಯುವ ಮೂಲಕ, ಸ್ವಯಂ ಘೋಷಿತ ಬುದ್ಧಿಜೀವಿಗಳು ನಾಗರಿಕತೆಯ ಅವಮಾನ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ಹಿಂದೂಸ್ತಾನ್ ಟೈಮ್ಸ್ ನಾಯಕತ್ವ ಶೃಂಗ'ದಲ್ಲಿ ಶನಿವಾರ ಅವರು ಮಾತನಾಡಿದರು. 'ಮುಂದಿನ 10 ವರ್ಷಗಳಲ್ಲಿ, ಗುಲಾಮಗಿರಿ ಮನಸ್ಥಿತಿಯಿಂದ ದೇಶವನ್ನು ಸಂಪೂರ್ಣವಾಗಿ ಮುಕ್ತಗೊಳಿಸಬೇಕು' ಎಂದು ದೇಶದ ಜನರಿಗೆ ಕರೆ ನೀಡಿದರು.

'ಜಗತ್ತು ಆರ್ಥಿಕ ಅನಿಶ್ಚಿತತೆಯನ್ನು ಎದುರಿಸುತ್ತಿರುವ ಸಮಯದಲ್ಲಿ ಭಾರತವು ಆತ್ಮವಿಶ್ವಾಸದಿಂದಿದೆ. ಯಾವುದೇ ದೇಶವು ಆತ್ಮವಿಶ್ವಾಸವಿಲ್ಲದೇ ಮುಂದುವರಿಯಲು ಸಾಧ್ಯವಿಲ್ಲ' ಎಂದು ಹೇಳಿದರು.

'ಅಭಿವೃದ್ಧಿ ಹೊಂದಿದ ಭಾರತದ ಗುರಿ ಸಾಧಿಸಲು ವಸಾಹತುಶಾಹಿ ಮನಸ್ಥಿತಿಯು ಪ್ರಮುಖ ಅಡಚಣೆಯಾಗಿದೆ. ಇದರಿಂದ ಮುಕ್ತವಾಗುವತ್ತ ದೇಶವು ಕೆಲಸ ಮಾಡುತ್ತಿದೆ. ದೇಶದ ನಿಧಾನಗತಿಯ ಆರ್ಥಿಕತೆಯ ಮೇಲೆ ಹಿಂದೂ ನಾಗರಿಕತೆಯು ಪರಿಣಾಮ ಬೀರಿದೆ ಎಂಬ ತಪ್ಪು ಗ್ರಹಿಕೆಯನ್ನು ತಳ್ಳಿಹಾಕಲಾಗುತ್ತಿದೆ' ಎಂದರು.

'ಜನಸಾಮಾನ್ಯರಿಗಾಗಿ 'ಸುಪ್ರೀಂ'

ಸೂರ್ಯಕಾಂತ್

ನವದೆಹಲಿ (ಪಿಟಿಐ): 'ಸುಪ್ರೀಂ ಕೋರ್ಟ್ ಇರುವುದು ಜನಸಾಮಾನ್ಯರಿಗಾಗಿ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಶನಿವಾರ ಮಹತ್ವದ ಸಂದೇಶ ರವಾನಿಸಿದರು.

'ಸಾಮಾನ್ಯ ಕಕ್ಷಿದಾರನಿಗೂ ಸುಪ್ರೀಂ ಕೋರ್ಟ್ ಸಮಯ ಮತ್ತು ಸ್ಥಳಾವಕಾಶವಿದೆ. ಆದರೆ ಅತ್ಯಂತ ಗಂಭೀರ ವಿಷಯಗಳನ್ನು ಪಟ್ಟಿ ಮಾಡುತ್ತಿದ್ದೇವೆ. ನಾನು ಇರುವವರೆಗೂ ಇದನ್ನು ಮಾಡಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ' ಎಂದು ತಿಳಿಸಿದರು.

'ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಕುರಿತು ಏಕೀಕೃತ ರಾಷ್ಟ್ರೀಯ ನ್ಯಾಯಾಂಗ ನೀತಿ ಆಧಾರದಲ್ಲಿ ನಿರ್ಧಾರ ಕೈಗೊಳ್ಳುವುದು ಹಾಗೂ ಬಾಕಿ ಇರುವ ಯೋಗ್ಯ ಇಂತಹ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸುವುದು ನನ್ನ ಆದ್ಯತೆ' ಎಂದು ಹೇಳಿದರು.

'ಹಿಂದೂಸ್ತಾನ್ ಟೈಮ್ಸ್ ನಾಯಕತ್ವ ಶೃಂಗ'ದಲ್ಲಿ ಮಾತನಾಡಿದ ಅವರು, 'ಕಾನೂನು ಹೋರಾಟಕ್ಕೆ ತಗಲುವ ವೆಚ್ಚವನ್ನು ತಗ್ಗಿಸುವುದು ಮತ್ತು ಪ್ರಕರಣಗಳ ವಿಚಾರಣೆಯನ್ನು ನ್ಯಾಯಸಮ್ಮತವಾದ ಕಾಲಮಿತಿಯೊಳಗೆ ಪೂರ್ಣಗೊಳಿಸುವುದನ್ನು ಖಾತರಿಪಡಿಸುವುದು ನನ್ನ ಆದ್ಯತೆ' ಎಂದು ಒತ್ತಿ ಹೇಳಿದರು.

'ಎಲ್ಲ ಪ್ರಕರಣಗಳ ಇತ್ಯರ್ಥವಾಗಬೇಕು ಎಂದು ನಾನು ಹೇಳುತ್ತಿಲ್ಲ. ಅದು ಸಾಧ್ಯವೂ ಇಲ್ಲ. ಏಕೆಂದರೆ ನ್ಯಾಯದಾನವು ಸದಾ ಚಾಲ್ತಿಯಲ್ಲಿರುವ ಪ್ರಕ್ರಿಯೆ. ಜನರಿಗೆ ನ್ಯಾಯ ವ್ಯವಸ್ಥೆಯ ಬಗ್ಗೆ ನಂಬಿಕೆ ಮತ್ತು ವಿಶ್ವಾಸ ಇದೆ' ಎಂದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ

ಪ್ರಶ್ನೋತ್ತರದಲ್ಲೂ 'ಉತ್ತರ'ಕ್ಕೆ ಆದ್ಯತೆ

ಪ್ರಜಾವಾಣಿ ವಾರ್ತೆ


ಬಸವರಾಜ ಹೊರಟ್ಟಿ

ಬೆಂಗಳೂರು: ಬೆಳಗಾವಿಯಲ್ಲಿ ಡಿ.8ರಿಂದ ಆರಂಭವಾಗುವ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಚರ್ಚೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಜತೆಗೆ, ಪ್ರಶ್ನೋತ್ತರ ಹಾಗೂ ಶೂನ್ಯವೇಳೆಯಲ್ಲೂ ಉತ್ತರ ಕರ್ನಾಟಕದ ಪ್ರಶ್ನೆ, ಪ್ರಸ್ತಾವನೆಗಳಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಉತ್ತರ ಕರ್ನಾಟಕದ ಸಮಸ್ಯೆಗಳ ಮೇಲೆ ಪ್ರತಿ ಅಧಿವೇಶನದಲ್ಲೂ ಸದಸ್ಯರು ನಿರಂತರವಾಗಿ ಧ್ವನಿ ಎತ್ತುತ್ತಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ, ಆರೋಗ್ಯ, ಶಿಕ್ಷಣ ಕ್ಷೇತ್ರದ ಸಮಸ್ಯೆಗಳು ಸೇರಿದಂತೆ ಹಲವು ಬೇಡಿಕೆಗಳು ಈಡೇರಿಲ್ಲ. ಪ್ರತಿ ಬಾರಿಯೂ ಇಂತಹ ವಿಷಯಗಳ ಚರ್ಚೆಗೆ ಬಂದರೂ, ಪರಿಹಾರ ಸಿಕ್ಕಿಲ್ಲ. ಈ ಬಾರಿ ವಿಸ್ತೃತ ಚರ್ಚೆಗೆ ಅವಕಾಶ ನೀಡುವ ಜತೆಗೆ, ಸಮಸ್ಯೆಗಳಿಗೆ ಪರಿಹಾರ ನೀಡಲು ಆಯಾ ಇಲಾಖೆಗಳ ಸಚಿವರಿಗೆ ಸೂಚಿಸಲಾಗುವುದು. ಅದಕ್ಕಾಗಿ ಪ್ರತಿ ಬುಧವಾರ ಇಡೀ ಸಮಯ ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಮೀಸಲಿಡಲಾಗುವುದು' ಎಂದು ತಿಳಿಸಿದರು.

ಸಚಿವರ ಹಾಜರಿ ಕಡ್ಡಾಯ

'ಸದನದ ಸಮಯ ವ್ಯರ್ಥವಾಗುವುದನ್ನು ತಪ್ಪಿಸಲು ಹೆಚ್ಚಿನ ಸಂಖ್ಯೆಯ ಸಚಿವರು ವಿಧಾನಪರಿಷತ್ ಕಲಾಪಗಳಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಪ್ರತಿ ಬಾರಿಯೂ ಸಚಿವರ ಸಂಖ್ಯೆ ಕಡಿಮೆ ಇರುತ್ತದೆ. ಈ ಕುರಿತು ಕಟ್ಟುನಿಟ್ಟಿನ ಸೂಚನೆ ನೀಡಿದರೂ ಪ್ರಯೋಜನವಾಗಿಲ್ಲ' ಎಂದು ಹೊರಟ್ಟಿ ಹೇಳಿದರು.

'ಬೆಳಗಾವಿಯ ಅಧಿವೇಶನದಲ್ಲಿ ಸಚಿವರ ಹಾಜರಾತಿ ಖಚಿತಪಡಿಸಬೇಕು. ಸಂಪುಟದ ಎಲ್ಲ ಸದಸ್ಯರೂ ಹಾಜರಿರುವಂತೆ ಸೂಚಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವೆ. ಎಲ್ಲ ಪ್ರಶ್ನೆಗಳಿಗೂ ಸಮರ್ಪಕವಾಗಿ ಉತ್ತರ ನೀಡುವ ಸಂಪ್ರದಾಯ ಮುಂದುವರಿಯಬೇಕು. ಆಯಾ ಸಚಿವರೇ ಹಾಜರಿದ್ದು, ಉತ್ತರ ನೀಡಬೇಕು' ಎಂದರು.

ಜ್ವಲಂತ ಸಮಸ್ಯೆಗಳತ್ತ ಚಿತ್ತ: ವಿಜಯೇಂದ್ರ

ಅಧಿವೇಶನದಲ್ಲಿ ರಾಜ್ಯದ ಜ್ವಲಂತ ಸಮಸ್ಯೆ, ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ಕುರಿತು ಚರ್ಚಿಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಉತ್ತರ ಕರ್ನಾಟಕದ ರೈತರ ಸಂಕಷ್ಟ, ನೀರಾವರಿ ಸಮಸ್ಯೆಗಳ ಚರ್ಚೆಗೆ ಹೆಚ್ಚಿನ ಸಮಯ ಮೀಸಲಿಡಬೇಕಿದೆ. ಪ್ರತಿ ಬಾರಿ ಬೆಳಗಾವಿ ಅಧಿವೇಶನದಲ್ಲಿ ನಾಮಕಾವಾಸ್ತೆ ಚರ್ಚೆ ನಡೆಯುತ್ತಿದೆ. ಈ ಬಾರಿ ಸಮಯ ವ್ಯರ್ಥ ಮಾಡಲು, ಬರೀ ಭರವಸೆಗೆ ಸೀಮಿತವಾಗಲು ಬಿಡುವುದಿಲ್ಲ. ಅಧಿವೇಶನದ ಆರಂಭದ ದಿನಗಳಲ್ಲೇ ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಚರ್ಚಿಸಲು ತೀರ್ಮಾನಿಸಿದ್ದೇವೆ. ಕಬ್ಬಿನ ಬೆಳೆಗಾರರು, ಮೆಕ್ಕೆಜೋಳ ಬೆಳೆಯುವ ರೈತರ ಸಮಸ್ಯೆ ಪರಿಹಾರಕ್ಕೆ ಪಟ್ಟು ಹಿಡಿಯಲಾಗುವುದು' ಎಂದು ಹೇಳಿದರು.

ಮಹಾಪರಿನಿರ್ವಾಣ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮಹಾಪರಿನಿರ್ವಾಣ ದಿನಾಚರಣೆ ಅಂಗವಾಗಿ ಕಲಬುರಗಿಯಲ್ಲಿ ವಿದ್ಯಾರ್ಥಿನಿಯರು ಶನಿವಾರ ಸಂಜೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಹಿಡಿದು ಮೇಣದ ಬತ್ತಿ ಬೆಳಗಿ ಗೌರವ ಸಲ್ಲಿಸಿದರು

ವೈದ್ಯಕೀಯ: 3ನೇ ಸುತ್ತಿನ ಫಲಿತಾಂಶ ಪ್ರಕಟ

ಒಂದನೇ ಪುಟದಿಂದ...

ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು, ಡಿ.11ರ ಒಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ಮೂರನೇ ಸುತ್ತಿಗೆ ಹೊಸದಾಗಿ ಸೇರ್ಪಡೆಯಾದ ಒಂಬತ್ತು ಕಾಲೇಜುಗಳ 443 ಸೀಟುಗಳನ್ನೂ ಹಂಚಿಕೆಗೆ ಪರಿಗಣಿಸಲಾಗಿದೆ. 301 ಅಭ್ಯರ್ಥಿಗಳು ಈಗಾಗಲೇ ಮೊದಲ ಮತ್ತು ಎರಡನೇ ಸುತ್ತಿನಲ್ಲಿ ಪಡೆದವರಾಗಿದ್ದು, ತೆರವಾಗುವ ಅಷ್ಟೂ ಸೀಟುಗಳಿಗೆ ಉಳಿದ ಅಭ್ಯರ್ಥಿಗಳನ್ನು ಪರಿಗಣಿಸಲಾಗುತ್ತಿದೆ. ಮೂರನೇ ಸುತ್ತಿನ ಆರಂಭದಲ್ಲಿ ಇದ್ದ ಸೀಟು, ಡಿ.5ರವರೆಗೆ ಕೆಲವು ಕಾರಣಗಳಿಂದ ರದ್ದುಪಡಿಸಿಕೊಂಡಿರುವ ಸೀಟು ಹಾಗೂ ಮೇಲಿನ ಕ್ರಮದ ಸೀಟು ಹಂಚಿಕೆಯ ನಂತರ ಉಳಿಕೆಯಾಗುವ ಸೀಟುಗಳನ್ನು ಹಂಚಿಕೆಗೆ ಪರಿಗಣಿಸಲಾಗುತ್ತದೆ ಎಂದು ಹೇಳಿದ್ದಾರೆ.

ಪಿಜಿ–ವೈದ್ಯಕೀಯ ದಿನಾಂಕ ವಿಸ್ತರಣೆ: ಇಂಡಿಗೊ ವಿಮಾನಗಳ ಸಂಚಾರ ರದ್ದಾಗಿರುವ ಕಾರಣ ಪ್ರವೇಶ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶವನ್ನು ಡಿ.8ರವರೆಗೆ ವಿಸ್ತರಿಸಲಾಗಿದೆ.

ಎಂಬಿಬಿಎಸ್‌–ಬಿಡಿಎಸ್ ಸೀಟು ಹಂಚಿಕೆ ತಾತ್ಕಾಲಿಕ ಪಟ್ಟಿ ರದ್ದು

ಬೆಂಗಳೂರು: ಎಂಬಿಬಿಎಸ್ ಮತ್ತು ಬಿಡಿಎಸ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಳೆದ ಅಕ್ಟೋಬರ್ 24ರಂದು ಪ್ರಕಟಿಸಿದ್ದ ಮೂರನೇ ಸುತ್ತಿನ ಕೌನ್ಸೆಲಿಂಗ್‌ನ ತಾತ್ಕಾಲಿಕ ಹಂಚಿಕೆ ಪಟ್ಟಿಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ಚಂದನಾ ಎಂ.ಪವಾರ್ ಸೇರಿದಂತೆ 26 ವಿದ್ಯಾರ್ಥಿಗಳು ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಬಿ.ಎಂ.ಶ್ಯಾಮ್ ಪ್ರಸಾದ್, ಎಂ.ಐ.ಅರುಣ್ ಮತ್ತು ಟಿ.ಎಂ.ನದಾಫ್ ಅವರಿದ್ದ ತ್ರಿಸದಸ್ಯ ನ್ಯಾಯಪೀಠ ಭಾಗಶಃ ಮಾನ್ಯ ಮಾಡಿ ಈ ಕುರಿತಂತೆ ಆದೇಶಿಸಿದೆ.

'ಮೂರನೇ ಸುತ್ತಿನ ಕೌನ್ಸೆಲಿಂಗ್ ಅನ್ನು ಹೊಸದಾಗಿ ಕೈಗೊಳ್ಳಬೇಕು. ತೀರ್ಪನ್ನು ನಿಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು' ಎಂದು ಕೆಇಎಗೆ ನಿರ್ದೇಶಿಸಿದೆ.

ವೀಕ್ಷಕ ಸೆರೆ...

ಒಂದನೇ ಪುಟದಿಂದ...

ಈ ದೂರು ಆಧರಿಸಿ, ಕರ್ನಾಟಕ ಕಾರಾಗೃಹ (ತಿದ್ದುಪಡಿ) ಅಧಿನಿಯಮ–2022ರ ಕಲಂ 42ರ ಅನ್ವಯ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 323ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಗೆ ರಾಹುಲ್ ಅವರು 2018ರಲ್ಲಿ ಸೇರಿದ್ದರು. ಆರಂಭದಲ್ಲಿ ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿ ಕೆಲಸ ಮಾಡಿದ್ದರು. ಕಳೆದ ಜೂನ್ 29ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ವರ್ಗಾವಣೆಗೊಂಡಿದ್ದರು. ಡಿ.4ರಂದು ಕಾರಾಗೃಹದ ಪ್ರವೇಶದ್ವಾರದಲ್ಲಿ ಕರ್ತವ್ಯದಲ್ಲಿದ್ದ ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿದಾಗ ರಾಹುಲ್ ಪಾಟೀಲ ಅವರ ಜೇಬಿನಲ್ಲಿ ಎರಡು ಸಿಗರೇಟ್ ಪ್ಯಾಕ್ ಹಾಗೂ ಡ್ರಗ್ಸ್ ಪತ್ತೆ ಆಗಿತ್ತು. ಜೈಲಿನ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಪರಿಶೀಲನೆ ವೇಳೆ ಪತ್ತೆ: ಜೈಲಿನ ಸಹಾಯಕ ಸೂಪರಿಂಟೆಂಡೆಂಟ್ ಶಿವಾನಂದ ಶಿವಾಪುರ ಹಾಗೂ ಜೈಲರ್ ಎಚ್.ಎಸ್.ಅಭಿಷೇಕ್ ನೇತೃತ್ವದ ತಂಡವು ಕಳೆದ ವಾರ ವಿವಿಧ ಬ್ಯಾರಕ್‌ಗಳ ಮೇಲೆ ದಿಢೀರ್ ದಾಳಿ ನಡೆಸಿ, ಪರಿಶೀಲನೆ ನಡೆಸಿತ್ತು. ವಿವಿಧ ಬ್ಯಾರಕ್‌ಗಳಲ್ಲಿ 50 ಮೊಬೈಲ್ ಫೋನ್‌ಗಳು, 22 ಸಿಮ್ ಕಾರ್ಡ್‌ಗಳು, 5 ಚಾರ್ಜರ್‌ಗಳು, 4 ಇಯರ್ ಬಡ್ಸ್, ₹49 ಸಾವಿರ ನಗದು, ಚಾಕು ಪತ್ತೆ ಆಗಿದ್ದವು. ಅವುಗಳನ್ನು ಜಪ್ತಿ ಮಾಡಿಕೊಳ್ಳಲಾಗಿತ್ತು. ಮುಂದಿನ ದಿನಗಳಲ್ಲಿಯೂ ಬ್ಯಾರಕ್‌ಗಳಲ್ಲಿ ಪರಿಶೀಲನೆ ನಡೆಸಲಾಗುವುದು ಎಂದು ಕಾರಾಗೃಹದ ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು
ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ
ಉಲ್ಲೇಖ: ... ಟೆಂಡರ್–25/2025/3181 ದಿ: 06.12.2025
... https://kppp.karnataka.gov.in ... 15.12.2025 ... 4.00 ... (Download) ... (ದೂರವಾಣಿ ಸಂ: 0824–2440720)
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು
DIPR/DK/KSMCA/1199/25-26 dt. 06.12.2025

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
Tender No: DD/WCD/Poshan/CS Kit/2025-26 Dated:05/12/2025
ಪತ್ರಿಕಾ ಪ್ರಕಟಣೆ
... CLEAN STORAGE KIT ...
ದಿನಾಂಕ: 19.12.2025 ಸಂಜೆ 5:30 ...
ದಿನಾಂಕ:22.12.2025 ರ ಬೆಳಿಗ್ಗೆ 11:00 ...
ದಿನಾಂಕ:24.12.2025 ಬೆಳಿಗ್ಗೆ 11:00 ...
http://eproc.karnataka.gov.in ... 080– 29578688 ...
ಸಹಿ/– ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
DIPR/CP/4254/NR/2025-26

ಸಿಂಗಪುರದಲ್ಲಿ ಏನೇನ್ ಕಂಡೆ...
ಸಿಂಗಪುರ ಇರುವುದೇ 735 ಚದರ ಕಿಲೋಮೀಟರ್. ಇಂಥ ಪುಟ್ಟ ದೇಶದಲ್ಲಿ ನಾಲ್ಕು ದಿನ ಸುತ್ತಾಡಿದ ಅನುಭವ ಕಥನ. 13

ರೇಸ್ ಪಾರಿವಾಳಗಳ ಖಯಾಲಿ!

ದೇಶದಲ್ಲಿ ನಡೆದ ಪಾರಿವಾಳ ರೇಸ್‌ನಲ್ಲಿ ದೇವನಹಳ್ಳಿಯ ಪಾರಿವಾಳ ದಾಖಲೆ ಬರೆದಿದೆ! ರಾಜ್ಯದಲ್ಲಿ ಕುದುರೆ ರೇಸ್ ಇಲ್ಲವೇ ಕಂಬಳದ ಓಟದಷ್ಟು ಪ್ರಸಿದ್ಧಿಯನ್ನು ಪಾರಿವಾಳ ರೇಸ್ ಪಡೆದಿಲ್ಲ. ಆದರೆ, ಪಾರಿವಾಳಗಳ ರೇಸ್‌ನಲ್ಲಿ ಮುಳುಗಿರುವವರಿಗೆ ಇದು ಒಂದು ರೋಚಕ ಲೋಕ.

• ಅಬ್ದುಲ್ ರಹಿಮಾನ್

‘ಇದು ಇಡೀ ಭಾರತದಲ್ಲೇ ದಾಖಲೆ ಬರೆದಿದೆ’ ಎಂದು ತಮ್ಮ ಕೈಯಲ್ಲಿದ್ದ ಪಾರಿವಾಳವನ್ನು ತೋರಿಸುತ್ತಾ ದೇವನಹಳ್ಳಿಯ ರವಿ ಬೀಗಿದರು. ಅವರು ಸಾಕಿರುವ ಈ ಪಾರಿವಾಳ ದೆಹಲಿಯಿಂದ 1,750 ಕಿಲೋಮೀಟರ್ ದೂರದ ದೇವನಹಳ್ಳಿಗೆ ನಾಲ್ಕು ದಿನಗಳಲ್ಲೇ ತಲುಪಿತ್ತು. ದೇಶದ ಪಾರಿವಾಳ ರೇಸಿಂಗ್ ಇತಿಹಾಸದಲ್ಲಿ ಕಡಿಮೆ ಅವಧಿಯಲ್ಲಿ ಇಷ್ಟು ದೂರ ಕ್ರಮಿಸಿದ್ದು ಇದೇ ಮೊದಲು!

‘ನಾನು ರೇಸ್‌ಗೆ ಹಾಕಿದ್ದ ಏಳು ಪಾರಿವಾಳಗಳೂ ಹಿಂದಿರುಗಿ ಬಂದವು. ಅದೂ ಕೂಡ ದಾಖಲೆಯೇ’ ಎನ್ನುತ್ತಾ ರವಿ ಪಾರಿವಾಳಗಳನ್ನು ಮುದ್ದಿಸಿದರು. ಅವರ ಬಳಿ ರೇಸ್‌ಗೆಂದೇ ಸಾಕಿರುವ 250 ಪಾರಿವಾಳಗಳಿವೆ. ಅವುಗಳಲ್ಲಿ ಹಲವು ದಾಖಲೆ ಬರೆದಿವೆ. ಅವರು ಹದಿನೈದು ವರ್ಷಗಳಿಂದ ಪಾರಿವಾಳ ರೇಸ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

‘ಹೋಮರ್’ ಜಾತಿಯ ಪಾರಿವಾಳಗಳನ್ನು ಮಾತ್ರ ರೇಸ್‌ಗೆ ಬಳಸಲಾಗುತ್ತದೆ. ಈ ಜಾತಿಯ ಪಾರಿವಾಳಗಳನ್ನು ರಾಜರ ಕಾಲದಲ್ಲಿ ಸಂದೇಶ ಕಳುಹಿಸಲು ಬಳಸುತ್ತಿದ್ದರು. ಈ ಪಾರಿವಾಳಗಳು ಹುಟ್ಟಿನಿಂದ ಒಂದು ಸ್ಥಳದಲ್ಲಿ ರೂಢಿಯಾದರೆ, ಜೀವಂತ ಇರುವವರೆಗೂ ಬೇರೆ ಎಲ್ಲಿಗೂ ಹೋಗುವುದಿಲ್ಲ. ಬೇರೆಡೆ ಅವುಗಳನ್ನು ತೆಗೆದುಕೊಂಡು ಹೋಗಿ ಬಿಟ್ಟು ಬಂದರೂ ಮತ್ತೆ ಮೂಲಸ್ಥಾನಕ್ಕೆ ಮರಳುತ್ತವೆ. ಈ ಜಾತಿಯ ಪಾರಿವಾಳಗಳ ಸ್ವಭಾವವೇ ಹಾಗೆ. ಹಾಗಾಗಿ ‘ಹೋಮರ್’ ಜಾತಿಯ ಪಾರಿವಾಳಗಳನ್ನೇ ರೇಸ್‌ಗೆ ಬಳಸುತ್ತಾರೆ.

‘ಅಯಸ್ಕಾಂತಿಯ ಶಕ್ತಿಯಿಂದ, ಮೂಗಿನ ಮೇಲಿರುವ ವಿದ್ಯುತ್ಕಾಂತದ ಮೂಲಕ, ಸೂರ್ಯನ ಕಿರಣದಿಂದ, ವಾಸನೆಯಿಂದ ಅವುಗಳು ದಿಕ್ಕುಗಳನ್ನು ಗುರುತಿಸುತ್ತವೆ ಎನ್ನುವ ಚರ್ಚೆಗಳು ಇವೆ. ಈ ಬಗ್ಗೆ ಇನ್ನೂ ಸಂಶೋಧನೆ ನಡೆಯುತ್ತಿದೆ’ ಎನ್ನುತ್ತಾರೆ ಕರ್ನಾಟಕ ಹೋಮಿಂಗ್ ಪಿಜನ್ ಸೊಸೈಟಿಯ ಕಾರ್ಯದರ್ಶಿ ವಿಕಾಸ್ ಬಿ.ಆರ್.

ನಿತ್ಯ ಅಭ್ಯಾಸ ಮತ್ತು ಆಹಾರ

ಪಾರಿವಾಳಗಳನ್ನು ರೇಸ್‌ಗೆ ತಯಾರು ಮಾಡುವ ಮೊದಲು ಅವುಗಳಿಗೆ ನಿರಂತರ ಅಭ್ಯಾಸ ಮಾಡಿಸಬೇಕು. ಮರಿಯಾಗಿದ್ದಾಗಲೇ ತರಬೇತಿ ಆರಂಭವಾಗುತ್ತದೆ. ನಿತ್ಯವೂ ಎರಡರಿಂದ ಮೂರು ಗಂಟೆ ಅವುಗಳಿಗೆ ಹಾರಾಟ ಮಾಡಿಸಬೇಕು.

ಅಭ್ಯಾಸಕ್ಕೆ ತಕ್ಕಂತೆ ಅವುಗಳ ಆರೈಕೆ, ಪೋಷಣೆ ಮಾಡಬೇಕು. ರೇಸ್ ಶೋಕಿ ಇರುವವರ ಬಳಿ ಕನಿಷ್ಠ 100-300 ಪಾರಿವಾಳಗಳು ಇರುತ್ತವೆ. ಈ ಪೈಕಿ ಸಂತಾನೋತ್ಪತ್ತಿಗೆ ಇರುವ ಹಕ್ಕಿಗಳನ್ನು ಬೇರೆ ಗೂಡುಗಳಲ್ಲಿ ಸಾಕುತ್ತಾರೆ. ಬೆಳಿಗ್ಗೆ ಮನೆಯ ಸುತ್ತ 1-3 ಕಿ.ಮೀ ಹಾರಿಸಿ ಅಭ್ಯಾಸ ಮಾಡಿಸುತ್ತಾರೆ. ರೇಸ್ ದಿನ ಹತ್ತಿರವಾಗುತ್ತಿದ್ದಂತೆಯೇ 5,10, 20, 50 ಕಿ.ಮೀ ದೂರ ಬಿಟ್ಟು ಬರುತ್ತಾರೆ. ಬೇಗನೇ ಮರಳಿ ಬರುವ ಪಾರಿವಾಳಗಳನ್ನು ಗುರುತಿಸಿ ಅವುಗಳನ್ನು ರೇಸ್‌ಗೆ ಆಯ್ಕೆ ಮಾಡುತ್ತಾರೆ. ನಿತ್ಯ ಅಭ್ಯಾಸದ ಮೂಲಕ ಅವುಗಳಲ್ಲಿ ಶಿಸ್ತನ್ನು ರೂಢಿಸಲಾಗುತ್ತದೆ.

ರೇಸಿಂಗ್ ಪಾರಿವಾಳಗಳಿಗೆ ನೀಡುವ ಆಹಾರದಲ್ಲೂ ವಿಶೇಷ ಕಾಳಜಿ ವಹಿಸಬೇಕು. ಅವುಗಳು ದಿನಕ್ಕೆ ಒಂದು ಬಾರಿಗೆ 30-50 ಗ್ರಾಂ ಮಾತ್ರ ಆಹಾರ ತಿನ್ನುತ್ತವೆ. ರಾಗಿ, ಗೋಧಿ, ಜೋಳ, ಹೆಸರು, ಕಡಲೆ, ಅಗಸೆ, ತೊಗರಿ, ಉದ್ದು, ಅವರೆ, ಸಜ್ಜೆ, ಬಟಾಣಿ ಸೇರಿದಂತೆ 30-40 ಬಗೆಯ ಕಾಳುಗಳನ್ನು ಮಿಶ್ರಣ ಮಾಡಿ ಕೊಡಲಾಗುತ್ತದೆ. ಪಾರಿವಾಳದ ದೇಹಕ್ಕೆ ಬೇಕಾದ ನಾರು, ಕಾರ್ಬೋಹೈಡ್ರೇಟ್, ಪ್ರೋಟೀನ್, ಕ್ಯಾಲೊರಿ ಹಾಗೂ ಕೊಬ್ಬಿನ ಅಂಶಗಳುಳ್ಳ ಕಾಳುಗಳನ್ನು ನಿಗದಿತ ಪ್ರಮಾಣದಲ್ಲಿ ಬೆರೆಸಿ ನೀಡಲಾಗುತ್ತದೆ. ಆಹಾರದಲ್ಲಿಯೇ ಅವುಗಳ ತೂಕ ಸಮತೋಲನ ಕಾಪಾಡಿಕೊಳ್ಳಬೇಕು. ‘ಪ್ರೋಟೀನ್ ಹೆಚ್ಚು ನೀಡಿದರೆ ತೂಕ ಹೆಚ್ಚಾಗುತ್ತದೆ. ತೂಕ ಹೆಚ್ಚಾದರೆ ದೂರ ಹಾರುವಾಗ ಅವುಗಳು ಬಳಲುತ್ತವೆ. ಅಂಥವುಗಳು ಹೆಚ್ಚು ದೂರ ಹಾರುವುದಿಲ್ಲ. ರೇಸ್‌ಗೆ ಬಿಡುವ ಪಾರಿವಾಳಗಳಿಗೆ ಪ್ರೋಟೀನ್ ಕಡಿಮೆ ನೀಡಿ, ಕಾರ್ಬೋಹೈಡ್ರೇಟ್ ಹೆಚ್ಚಿಸಬೇಕು. ರೇಸ್‌ನ ಸಮಯದಲ್ಲಿ ಆಹಾರ ನೀಡುವಾಗ ಇವುಗಳನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಬೇಕು. ಅದಕ್ಕೆ ತಕ್ಕಂತೆ ಆಹಾರ ನೀಡಿ, ಆಹಾರದಲ್ಲಿಯೇ ಅವುಗಳ ದೇಹ ತೂಕದಲ್ಲಿ ಸಮತೋಲನ ತರಬೇಕು’ ಎನ್ನುತ್ತಾರೆ ರವಿ.

ಗೂಡಿನಲ್ಲಿರುವ ರೇಸ್ ಪಾರಿವಾಳಗಳು

‘ಕಂಬಳಕ್ಕೆ ಕೋಣಗಳನ್ನು, ರೇಸ್‌ಗೆ ಕುದುರೆಗಳನ್ನು ತಯಾರಿ ಮಾಡುವಷ್ಟೇ ಮುತುವರ್ಜಿಯಿಂದ ಪಾರಿವಾಳಗಳನ್ನು ಸಲಹಬೇಕು. ಒಂದು ಪಾರಿವಾಳಕ್ಕೆ ತಿಂಗಳಿಗೆ ಕನಿಷ್ಠ ₹5-6 ಸಾವಿರ ಖರ್ಚಾಗುತ್ತದೆ. ನಿತ್ಯ 3-4 ಗಂಟೆ ಅವುಗಳ ಆರೈಕೆಗೆ ಮೀಸಲಿಡಬೇಕು. ನಾಲ್ಕು ತಿಂಗಳು ಮಾತ್ರ ರೇಸ್ ಇರುತ್ತದೆ. ವರ್ಷದ ಉಳಿದ ಅವಧಿಯನ್ನು ತರಬೇತಿಗೆ, ಸಂತಾನೋತ್ಪತ್ತಿಗಾಗಿ ಮೀಸಲಿಡುತ್ತೇವೆ’ ಎಂದರು ರವಿ.

ರೇಸ್‌ಗೆ ಆಯ್ಕೆ ಹೀಗಿದೆ...

ದೇಹ ಸಣ್ಣದಾಗಿದ್ದು, ರೆಕ್ಕೆ ದೊಡ್ಡದಿದ್ದರೆ ಅಂತಹ ಪಾರಿವಾಳಗಳು ವೇಗವಾಗಿ ಹಾರುತ್ತವೆ. ವೇಗವಾಗಿ ಹಾರಿದ್ದ ಪಾರಿವಾಳಗಳ ಮರಿಗಳಿಗೂ ವೇಗ ಇರುತ್ತದೆ. ಹೀಗಾಗಿ ರೇಸ್‌ಗೆ ಪಾರಿವಾಳಗಳನ್ನು ಸೂಕ್ಷ್ಮವಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ರೆಕ್ಕೆಗಳ ವಿನ್ಯಾಸ, ದೇಹದ ತೂಕ, ದೇಹ ರಚನೆ, ಕಣ್ಣಿನ ಆರೋಗ್ಯ, ಎದೆಭಾಗದ ರಚನೆ ಹೀಗೆ ಹಲವು ವಿಷಯಗಳು ಅವುಗಳ ಆಯ್ಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹಿಂದಿನ ರೇಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಪಾರಿವಾಳಗಳ ಮರಿಗಳಿಗೆ ಬೇಡಿಕೆ ಹೆಚ್ಚು. ಅವುಗಳು ರೇಸಿಂಗ್‌ಗೆ ಸೂಕ್ತ ಎನ್ನುವುದು ನಂಬಿಕೆ. ಬೆಂಗಳೂರಿನಲ್ಲಿ ಶೋಕಿಗಾಗಿ ಈ ರೇಸ್‌ಗಳು ನಡೆಯುತ್ತಿದ್ದು, ಹೆಚ್ಚು ವಾಣಿಜ್ಯೀಕರಣಗೊಂಡಿಲ್ಲ. ಹೀಗಾಗಿ ಮರಿಗಳನ್ನು ಮಾರಾಟ ಮಾಡುವವರ ಸಂಖ್ಯೆ ಬೆರಳೆಣಿಕೆಯಷ್ಟಿರಬಹುದು ಎನ್ನುವುದು ಕ್ಲಬ್‌ಗಳ ಸದಸ್ಯರ ಅಭಿಪ್ರಾಯ. ವಿದೇಶಗಳಲ್ಲಿ ‘ರೇಸಿಂಗ್ ಪಿಜನ್’ಗಳಿಗೆ ಭಾರಿ ಬೆಲೆ ಇದೆ. ಅವುಗಳು ಜಗತ್ತಿನ ದುಬಾರಿ ಹಕ್ಕಿಗಳೂ ಹೌದು. ಬೆಲ್ಜಿಯಂ, ಇಂಗ್ಲೆಂಡ್‌ನಲ್ಲಿ ರೇಸಿಂಗ್ ಪಾರಿವಾಳಗಳಿಗೆ ಭಾರೀ ಹಣ ವ್ಯಯಿಸಲಾಗುತ್ತದೆ.

ಹೆಣ್ಣು ಪಾರಿವಾಳಗಳನ್ನು ರೇಸ್‌ಗೆ ಬಳಸಿಕೊಳ್ಳುವುದು ಹೆಚ್ಚು. ಹಟಮಾರಿ ಸ್ವಭಾವದ ಹೆಣ್ಣು ಪಾರಿವಾಳಗಳು ಎಂಥಹುದೇ ಅಡೆತಡೆಗಳನ್ನು ಮೀರಿ ಗುರಿ ತಲುಪುತ್ತವೆ. ಅವುಗಳ ದೇಹ ತೂಕವೂ ಕಡಿಮೆ ಇರುವುದರಿಂದ ಹಾರಾಟದ ವೇಗವೂ ಹೆಚ್ಚು. ಗಿಡುಗಗಳ ದಾಳಿಯಿಂದ ಗಾಯಗೊಂಡರೂ ಗುರಿಯತ್ತ ಸಾಗುತ್ತವೆ. ಆದರೆ ಗಂಡು ಪಾರಿವಾಳಗಳು ಉದಾಸೀನ ಪ್ರವೃತ್ತಿಯವು. ದೇಹದ ತೂಕವೂ ಹೆಚ್ಚಿರುವುದರಿಂದ ಹಾರಾಟ ಆರಂಭಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಬಳಲುತ್ತವೆ. ಪದೇ ಪದೇ ವಿಶ್ರಾಂತಿ ಪಡೆಯುತ್ತವೆ. ಹೀಗಾಗಿ ಅವುಗಳನ್ನು ರೇಸಿಂಗ್‌ಗೆ ನೆಚ್ಚಿಕೊಳ್ಳುವುದು ಕಷ್ಟ. ಕಡಿಮೆ ದೂರದ ರೇಸಿಂಗ್‌ಗೆ ಮಾತ್ರ ಗಂಡು ಹಕ್ಕಿಗಳನ್ನು ಬಳಸುತ್ತಾರೆ.

ರೇಸ್‌ನಲ್ಲಿ ಪಾಲ್ಗೊಳ್ಳುವ ಪಾರಿವಾಳಗಳನ್ನು ಗುರುತಿಸಲು ಅವುಗಳ ಕಾಲಿಗೆ ಉಂಗುರ ಹಾಕಲಾಗುತ್ತದೆ. ಹುಟ್ಟಿದ 4-5 ದಿನದೊಳಗೆ ಕಾಲಿಗೆ ಉಂಗುರ ಹಾಕಲಾಗುತ್ತದೆ. ರೇಸ್‌ನಲ್ಲಿ ಮೋಸ ಆಗದಂತೆ ಉಂಗುರಗಳನ್ನು ವಿನ್ಯಾಸ ಮಾಡಲಾಗುತ್ತದೆ. ಉಂಗುರದಲ್ಲಿ ಪಾರಿವಾಳವನ್ನು ಗುರುತಿಸಲು ವಿಶೇಷ ಸಂಖ್ಯೆ ನೀಡಲಾಗುತ್ತದೆ. ಹುಟ್ಟಿದ ವರ್ಷ ಸೇರಿ ಹಲವು ಮಾಹಿತಿಗಳು ಅದರಲ್ಲಿ ಅಡಕವಾಗಿರುತ್ತವೆ. ಕ್ಲಬ್‌ಗಳಿಂದಲೇ ಈ ಉಂಗುರಗಳನ್ನು ನೀಡಲಾಗುತ್ತದೆ. ಪ್ರತಿ ಸದಸ್ಯನಿಗೆ ವಾರ್ಷಿಕವಾಗಿ ನೂರು ಉಂಗುರಗಳು ಸಿಗುತ್ತವೆ. ಉಂಗುರ ಇಲ್ಲದ ಪಾರಿವಾಳಗಳು ರೇಸ್‌ನಲ್ಲಿ ಪಾಲ್ಗೊಳ್ಳುವ ಹಾಗಿಲ್ಲ.

ಹಲವು ತೊಡಕುಗಳು

ಪಾರಿವಾಳ ರೇಸ್‌ಗೆ ಕಾನೂನು ಮಾನ್ಯತೆ ಇಲ್ಲ. ಹೀಗಾಗಿ ಹಕ್ಕಿಗಳನ್ನು ರೇಸಿಂಗ್ ಪಾಯಿಂಟ್‌ಗೆ ಸಾಗಿಸುವುದೇ ಸಾಹಸದ ಕೆಲಸ. ಹಲವು ಇಲಾಖೆಗಳ ಅನುಮತಿ ಬೇಕು. ಪೊಲೀಸರ ಪ್ರಶ್ನೆಗಳನ್ನು ಎದುರಿಸಬೇಕು. ಪಾರಿವಾಳಗಳ ಮೂಲಕ ಶತ್ರುರಾಷ್ಟ್ರಗಳು ಗೂಢಚಾರಿಕೆ ಮಾಡುವುದರಿಂದ ಅದರ ಬಗ್ಗೆಯೂ ಎಚ್ಚರಿಕೆಯಿಂದ ಇರಬೇಕು. ಪೊಲೀಸರು ಪಾರಿವಾಳಗಳನ್ನು ವಶಪಡಿಸಿಕೊಂಡು ಎಫ್‌ಐಆರ್ ದಾಖಲಿಸಿದ ಉದಾಹರಣೆಗಳಿವೆ. ಪ್ರಾಣಿ ಹಿಂಸೆ ಎಂದು ರೇಸ್‌ಗೆ ಹಲವು ಬಾರಿ ತೊಂದರೆ ಉಂಟಾಗಿದೆ. ‘ನಾವು ಪಕ್ಷಿಗಳನ್ನು ನಮ್ಮ ಮಕ್ಕಳಂತೆ ನೋಡಿಕೊಳ್ಳುತ್ತೇವೆ. ಅವುಗಳಿಗೆ ಅತ್ಯುತ್ತಮ ಆಹಾರವನ್ನು ನೀಡುತ್ತೇವೆ. ಅವುಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುತ್ತೇವೆ’ ಎನ್ನುತ್ತಾರೆ ರವಿ.

ಪಾರಿವಾಳಗಳ ಆರೈಕೆಯಲ್ಲಿ ನಿರತ ರವಿ
ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್

ರೇಸ್‌ನಲ್ಲಿ ಗೆದ್ದ ಪಾರಿವಾಳದೊಂದಿಗೆ ರವಿ

ರೇಸಿಂಗ್ ಹೇಗೆ?

ಜನವರಿ–ಏಪ್ರಿಲ್ ರೇಸ್‌ನ ಅವಧಿ. ಮೊದಲು ಕ್ಲಬ್‌ಗಳಿಂದ ರೇಸ್ ಆರಂಭವಾಗುತ್ತದೆ. ಬೆಂಗಳೂರಿನಲ್ಲಿ ಐದಾರು ಕ್ಲಬ್‌ಗಳು ಇರಬಹುದು. ಪ್ರತಿ ಕ್ಲಬ್‌ನಲ್ಲಿ 25-30 ಮಂದಿ ಸದಸ್ಯರಿರುತ್ತಾರೆ. ಜನವರಿ ಮೊದಲ ವಾರದಲ್ಲಿ 150 ಕಿ.ಮೀ ದೂರದ ‘ಪರೀಕ್ಷಾರ್ಥ ಹಾರಾಟ’ ನಡೆಸಲಾಗುತ್ತದೆ. ಬಳಿಕ 200, 300 ಹಾಗೂ 500 ಕಿ.ಮೀ ದೂರದ ರೇಸ್‌ಗಳನ್ನು ನಡೆಸಲಾಗುತ್ತದೆ. ಪ್ರತಿ ರೇಸ್ ನಡುವೆ ಒಂದು ವಾರದ ಅಂತರ ಇರುತ್ತದೆ.

11ನೇ ಪುಟಕ್ಕೆ...

ಗುಡ್ಡದಲ್ಲಿ ಕೃಷಿ ಕಮತೆಯ ಕ್ಷಮತೆ

ಬೆಟ್ಟದ ಮೇಲಿರುವ ಕೆರೆ

‘ಬಂಗಾರದ ಮನುಷ್ಯ’ ಸಿನಿಮಾದ ‘ಆಗದು ಎಂದು...ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ’ ಗೀತೆಯಿಂದ ಪ್ರೇರೇಪಿತರಾದ ಸಣ್ಣಪ್ಪ ಕಮತೆ ಅವರು ಗುಡ್ಡದ ಮೇಲೆ ಎರಡು ಕೆರೆಗಳನ್ನು ನಿರ್ಮಿಸಿ, ಕೃಷಿ ಮಾಡಿ ಯಶಸ್ವಿಯಾಗಿದ್ದಾರೆ.

• ಚಂದ್ರಶೇಖರ ಎಸ್ ಚಿನಕೇಕರ

ಸಹ್ಯಾದ್ರಿ ಶ್ರೇಣಿಯ ಸೆರಗಿನಲ್ಲಿರುವ ಬೆಟ್ಟಗಳ ಸಾಲು. ಮಳೆಗಾಲದಲ್ಲಿ ಜುಳು ಜುಳು ಹರಿಯುವ ನೀರ ಝರಿ. ಬೇಸಿಗೆಯಲ್ಲಂತೂ ಅಕ್ಷರಶಃ ಬೆಂಗಾಡು. ಮುಳ್ಳಿನ ಪೊದೆ, ಬೃಹತ್ ಬಂಡೆಗಳಿಂದ ಕೂಡಿದ ಬೆಟ್ಟ ನೋಡಿ ವ್ಯಕ್ತಿಯೊಬ್ಬರು ಬೆಟ್ಟದಷ್ಟು ಕನಸು ಕಂಡರು. ಗುಡ್ಡದಿಂದ ಜಾರಿ ಹೋಗುವ ನೀರನ್ನು ತಡೆದು ನಿಲ್ಲಿಸಿದರೆ ಹೇಗೆ? ಇಂತಹದೊಂದು ಆಲೋಚನೆ ಬಂದಿದ್ದು ಸಣ್ಣಪ್ಪ ಕಮತೆ ಅವರಿಗೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹತ್ತರವಾಟವು ಬೋಳು ಬೆಟ್ಟದಿಂದ ಸುತ್ತುವರೆದ ಪುಟ್ಟ ಗ್ರಾಮ. ಬರಡುಭೂಮಿಯಂತೆ ಕಾಣುವ ಇಂತಹ ಬೆಟ್ಟದಲ್ಲಿ ದಶಕದ ಹಿಂದೆ ಕೆರೆ ನಿರ್ಮಿಸಲು ಹೊರಟ ಸಣ್ಣಪ್ಪ ಕಮತೆ ಕಾರ್ಯವನ್ನು ‘ಬೆಟ್ಟ ಅಗೆದು ಇಲಿ ಹಿಡಿಯುವ ಕೆಲಸ’ ಎಂದು ಗೇಲಿ ಮಾಡಿದವರೇ ಹೆಚ್ಚು. ‘ಬಂಗಾರದ ಮನುಷ್ಯ’ ಸಿನಿಮಾದ ‘ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ...’ ಎಂಬ ಹಾಡು ಇವರ ಈ ಸಾಧನೆಗೆ ಪ್ರೇರಣೆ ಆಯಿತು.

ಮಾವಿನ ತೋಟ

ಬೆಟ್ಟದ ಇಳಿಜಾರಿನಲ್ಲಿ ಮಳೆಗಾಲದಲ್ಲಿ ವ್ಯರ್ಥವಾಗಿ ಹರಿಯುವ ನೀರನ್ನು ಹಿಡಿದಿಟ್ಟುಕೊಳ್ಳಲು ಕೆರೆಗಳನ್ನು ನಿರ್ಮಾಣ ಮಾಡಿದರೆ ಬರಡುಭೂಮಿಯನ್ನು ಹಸಿರುಮಯ ಮಾಡಲು ಸಾಧ್ಯ ಎಂದು ಅರಿತರು. ಹನ್ನೊಂದು ವರ್ಷದ ಹಿಂದೆ ಎರಡು ಕೆರೆಗಳನ್ನು ನಿರ್ಮಿಸಿದರು. ಬೆಟ್ಟದಿಂದ ಕೂಡಿರುವ ಪ್ರದೇಶವಾಗಿದ್ದರೂ ಯಂತ್ರೋಪಕರಣಗಳ ಬಳಕೆ ಮಿತ ಪ್ರಮಾಣದಲ್ಲಿ ಮಾಡಲಾಗಿದೆ. ಸ್ಥಳೀಯ ಜನರಿಗೂ ಕೂಲಿ ದೊರೆತು ಆರ್ಥಿಕವಾಗಿ ಸದೃಢರಾಗಬೇಕೆಂಬ ಉದ್ದೇಶದಿಂದ ಕೂಲಿ ಕಾರ್ಮಿಕರನ್ನು ಬಳಸಿ ಕೆರೆಗಳನ್ನು ನಿರ್ಮಿಸಿದರು.

₹ 7 ಲಕ್ಷ ಖರ್ಚು ಮಾಡಿ ಎರಡು ಕೆರೆಗಳನ್ನು ನಿರ್ಮಿಸಿ ಒಂಬತ್ತು ಎಕರೆ ಬಂಜರುಭೂಮಿಯನ್ನು ಕೃಷಿಯೋಗ್ಯವಾಗಿ ಪರಿವರ್ತಿಸಿದರು. ಇಷ್ಟು ವರ್ಷ ಒಂದು ಚೀಲ ಸಜ್ಜೆಯೂ ಬೆಳೆಯದಂತಹ ಜಮೀನಿನಲ್ಲಿ ಇದೀಗ ವಾರ್ಷಿಕ ₹ 15 ಲಕ್ಷಕ್ಕೂ ಹೆಚ್ಚು ಆದಾಯ ಗಳಿಸುತ್ತಿದ್ದಾರೆ. ಕೆರೆಗಳ ನಿರ್ಮಾಣದಿಂದ ಅಂತರ್ಜಲ ಹೆಚ್ಚಳವಾಗಿದ್ದು, ಕಮತೆ ಅವರ ಜಮೀನಿನ ಕೆಳಭಾಗದ ರೈತರಿಗೂ ಅನುಕೂಲವಾಗಿದೆ.

‘ಸಣ್ಣಪ್ಪ ಕಮತೆ ಅವರು ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೂ ಮೊದಲು ಬೆಟ್ಟದ ಕೆಳಭಾಗದಲ್ಲಿ ನಾನೂ ಸೇರಿದಂತೆ ಹತ್ತಾರು ರೈತರು ಎಷ್ಟೋ ಕೊಳವೆಬಾವಿ, ತೆರೆದಬಾವಿ ತೋಡಿದರೂ ನೀರು ಬಂದಿರಲಿಲ್ಲ. ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ತಡೆದು ನಿಲ್ಲಿಸಲು ಕೆರೆಗಳ ನಿರ್ಮಾಣ ಮಾಡಿದ್ದರಿಂದ ನಮ್ಮ ಜಮೀನಿನಲ್ಲಿ ನೀರಿಗೆ ಕೊರತೆ ಇಲ್ಲ. ಶೇಂಗಾ, ಸಜ್ಜೆ ಬೆಳೆಯುತ್ತಿದ್ದ ನಾವು ಈಗ ಕಬ್ಬು, ತರಕಾರಿ, ಹಣ್ಣಿನಗಿಡಗಳನ್ನು ಬೆಳೆಯುವಂತಾಗಿದೆ’ ಎಂದು ಕಮತೆ ಅವರ ಕಾರ್ಯವನ್ನು ಕೃತಜ್ಞತೆಯಿಂದ ನೆನೆಯುತ್ತಾರೆ ರೈತ ಲಗಮಣ್ಣ ಗೌರೋಜಿ.

ಕ್ರಿಯಾ ಯೋಜನೆ ಸಿದ್ಧ

25-30 ಕಿ.ಮೀಗೂ ಹೆಚ್ಚು ಉದ್ದ, 4-5 ಕಿ.ಮೀ ಅಗಲವಾದ ಬೆಟ್ಟಗುಡ್ಡಗಳ ಶ್ರೇಣಿ ಇದ್ದು, ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಹಿಡಿದಿಟ್ಟುಕೊಳ್ಳಲು ಸರ್ಕಾರ ಇಲ್ಲಿ ಕೆರೆಗಳನ್ನು ನಿರ್ಮಿಸಬೇಕು. ಕೆಲವು ಕಡೆಗೆ ನದಿಯಿಂದ ನೀರೆತ್ತಿ ಏತ ನೀರಾವರಿ ಮಾಡಬೇಕು ಎಂಬ ಕುರಿತು ಸಣ್ಣಪ್ಪ ಕಮತೆ ಕೆಲ ವರ್ಷಗಳ ಹಿಂದೆ ಕ್ರಿಯಾ ಯೋಜನೆ ವರದಿಯನ್ನು ಸಿದ್ಧಪಡಿಸಿ ಸ್ಥಳೀಯ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಸಲ್ಲಿಸಿದ್ದಾರೆ.

ಕಮತೆ ಅವರ ಪ್ರೇರಣೆಯಿಂದ ಸುತ್ತಮುತ್ತಲಿನ ರೈತರು ತಮ್ಮ ಹೊಲಗದ್ದೆಗಳಲ್ಲಿ ಕೆರೆ, ಬಾವಿ ನಿರ್ಮಿಸಿಕೊಂಡು ಸ್ವಾವಲಂಬಿಯಾಗಿದ್ದಾರೆ. ಬಂಜರುಭೂಮಿಯನ್ನು ಕೃಷಿ ಯೋಗ್ಯವಾಗಿ ಪರಿವರ್ತಿಸಿಕೊಂಡು ಉತ್ತಮ ಇಳುವರಿ ಪಡೆಯುತ್ತಿದ್ದಾರೆ. ಹತ್ತರವಾಟ ಗ್ರಾಮದ ರೈತರಿಂದ ನೆರೆಹೊರೆ ಗ್ರಾಮಗಳ ರೈತರೂ ಬೆಟ್ಟದಿಂದ ವ್ಯರ್ಥವಾಗಿ ಹರಿದು ಹೋಗುವ ನೀರು ಸಂರಕ್ಷಿಸಿ ಕೃಷಿ ಮಾಡುವ ವಿಧಾನ ಅರಿತುಕೊಂಡಿದ್ದಾರೆ. ಹುಕ್ಕೇರಿ ತಾಲ್ಲೂಕಿನ ನಿಡಸೋಸಿಯಲ್ಲಿರುವ ಎಸ್‌ಜೆಪಿಎನ್ ಟ್ರಸ್ಟ್‌ನ ಹಿರಾ ಶುಗರ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿರುವ ಸಣ್ಣಪ್ಪ ಕಮತೆ ತಾಂತ್ರಿಕ ಕ್ಷೇತ್ರದಲ್ಲಿದ್ದರೂ ಕೃಷಿಯತ್ತ ಸೆಳೆತ ಹೊಂದಿದ್ದಾರೆ. ಬಿಡುವಿನ ವೇಳೆಯಲ್ಲಿ ಕೃಷಿಯಲ್ಲಿ ತೊಡಗಿಕೊಳ್ಳುತ್ತಾರೆ. ಅವರ ಕೃಷಿಗೆ ಪತ್ನಿ ರುಕ್ಮಿಣಿ, ಸಹೋದರ ಮಹೇಶ ಸಾಥ್ ನೀಡುತ್ತಾರೆ.

ಕಮತೆ ಮೂರು ಎಕರೆಯಲ್ಲಿ ಕೇಸರ, ಅಲ್ಫಾನ್ಸ್, ಮಲ್ಲಿಕಾ, ಪೈರಿ ತಳಿಯ ಮಾವು ಬೆಳೆಯನ್ನು ಹೊಂದಿದ್ದು, ಒಂದು ಎಕರೆಯಲ್ಲಿ ಎನ್‌ಎಂಕೆ ಗೋಲ್ಡ್ ತಳಿಯ ಸೀತಾಫಲವನ್ನು ಬೆಳೆಯುತ್ತಿದ್ದಾರೆ. ಇನ್ನುಳಿದ ಜಮೀನಿನಲ್ಲಿ ಶ್ರೀಗಂಧ, ಬೆಟ್ಟದನೆಲ್ಲಿ, ಕರಿಬೇವು, ಹುಣಸೆ, ಜಂಬು ನೇರಳೆ, ಬೋರೆ ಸೇರಿದಂತೆ ವಿವಿಧ ಹಣ್ಣಿನ ಬೆಳೆ ಬೆಳೆಯುವ ಮೂಲಕ ಹೆಚ್ಚುವರಿ ಆದಾಯ ಪಡೆದುಕೊಳ್ಳುತ್ತಿದ್ದಾರೆ. ಹಣ್ಣಿನಮರಗಳ ನಡುವೆ ಕುಂಬಳ ಬಳ್ಳಿ, ಸೋಯಾಬಿನ್, ಗೋಧಿ, ಜೋಳ, ಮೆಕ್ಕೆಜೋಳ ಮುಂತಾದ ಬೆಳೆ ಬೆಳೆಯುತ್ತಿದ್ದು, ಇವುಗಳಿಂದ ವಾರ್ಷಿಕ ₹ 4-5 ಲಕ್ಷ ಆದಾಯ ಬರುತ್ತಿದೆ. ಹಣ್ಣಿನ ಬೆಳೆಗೆ ಹನಿ ನೀರಾವರಿ ಕಲ್ಪಿಸಲಾಗಿದ್ದು, ವರ್ಷದಿಂದ ವರ್ಷಕ್ಕೆ ಇವುಗಳಿಂದ ದೊರೆಯುವ ಆದಾಯ ಹೆಚ್ಚಳವಾಗುತ್ತಿದೆ ಎಂದು ಸಣ್ಣಪ್ಪ ಕಮತೆ ಹೇಳುತ್ತಾರೆ.

ಬೋರಲು ಹಾಕಿದ ಹಂಡೆಯಂತೆ ಕಾಣುವ ಬೆಟ್ಟಗುಡ್ಡಗಳಿಂದ ಕೂಡಿದ ಹತ್ತರವಾಟ ಗ್ರಾಮದಲ್ಲಿ ಬೇಸಿಗೆಯಲ್ಲಿ ಹನಿ ನೀರಿಗೂ ತತ್ವಾರ ಪಡುವ ಪರಿಸ್ಥಿತಿ ಇರುತ್ತದೆ. ಹೀಗಾಗಿ ಕಮತೆ ನಿರ್ಮಿಸಿದ ಕೆರೆಗಳು ಬೇಸಿಗೆಯಲ್ಲಿ ನೂರಾರು ಜಾನುವಾರುಗಳ ದಾಹ ನೀಗಿಸುತ್ತವೆ. ಜೊತೆಗೆ ಕೆರೆಗಳ ಅಕ್ಕಪಕ್ಕದಲ್ಲಿ ಬೆಳೆದ ಹಸಿರುಹುಲ್ಲು, ಗಿಡಗಂಟಿಗಳನ್ನು ಮೇಯ್ದು ಹಸಿವು ನೀಗಿಸಿಕೊಳ್ಳುತ್ತವೆ. ಕೆರೆಗಳ ನಿರ್ಮಾಣದಿಂದ ಈ ಭಾಗದಲ್ಲಿ ನವಿಲು, ಗುಬ್ಬಚ್ಚಿ ಸೇರಿದಂತೆ ವಿವಿಧ ಪಕ್ಷಿಗಳ ಸಂತತಿಯೂ ಹೆಚ್ಚುತ್ತಿದೆ. ಕೃಷಿ ವಿಜ್ಞಾನಿಗಳು, ಕೃಷಿ ಕಾಲೇಜಿನ ವಿದ್ಯಾರ್ಥಿಗಳು, ಪ್ರಗತಿಪರ ರೈತರು ಕೆರೆ ಹಾಗೂ ಜಮೀನು ವೀಕ್ಷಣೆಗೆ ಭೇಟಿ ನೀಡುತ್ತಾರೆ. ಈಗ ಇದೊಂದು ಪ್ರಯೋಗ ಶಾಲೆಯಂತಾಗಿದೆ.

❖



ಸಣ್ಣಪ್ಪ ಕಮತೆ

ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ನೋಡುತ್ತಿರುವ ವಿದ್ಯಾರ್ಥಿಗಳು ಚಿತ್ರಗಳು: ಅನೂಪ್ ರಾಘ. ಟಿ.

ರಸ್ತೆ ಬದಿ ಪುಟಾಣಿ ಗ್ರಂಥಾಲಯಗಳು

• ಸುಧೀರ್‌ಕುಮಾರ್ ಎಚ್.ಕೆ

ಮೈಸೂರಿನ ಚಿತ್ರಭಾನು ರಸ್ತೆಯಲ್ಲಿ ಹೊರಟಿದ್ದ ಕೆಲವು ವಿದ್ಯಾರ್ಥಿಗಳು ಬದಿಯಲ್ಲಿದ್ದ ಹಕ್ಕಿಗೂಡಿನಂತಹ ಕಪಾಟನ್ನು ಗಮನಿಸಿದರು. ಅದರ ಮೇಲೆ ಬರೆದಿರುವ ‘ಲಿಟಲ್ ಫ್ರೀ ಲೈಬ್ರರಿ’ ಎನ್ನುವುದನ್ನು ಓದಿ, ಕುತೂಹಲದಿಂದಲೇ ಅತ್ತ ಹೆಜ್ಜೆ ಹಾಕಿದರು. ಜೋಪಾನವಾಗಿ ಬಾಗಿಲು ತೆರೆದು ಪುಸ್ತಕಗಳನ್ನು ಎತ್ತಿಕೊಂಡವರು, ‘ಇದು ನನಗೆ ಇರಲಿ’, ‘ಅದನ್ನು ನಾನು ಓದಿದ್ದೇನೆ’, ನೀನೂ ಓದು’ ಎನ್ನುತ್ತಾ ತಮ್ಮ ತಮ್ಮಲ್ಲೇ ಮಾತನಾಡಿಕೊಂಡರು. ಬಳಿಕ ಖುಷಿಯಿಂದಲೇ ಮನೆಯತ್ತ ಹೊರಟರು.

ಹೀಗೆ ದಾರಿಹೋಕರನ್ನು ಈ ಪುಟಾಣಿ ಗ್ರಂಥಾಲಯಗಳು ಆಕರ್ಷಿಸುತ್ತಿವೆ. ಓದಿನ ಆಸಕ್ತಿಯುಳ್ಳವರು ಪುಸ್ತಕಗಳನ್ನು ತೆಗೆದುಕೊಳ್ಳಬಹುದು. ‘ಒಂದು ಪುಸ್ತಕ ತೆಗೆದುಕೊಳ್ಳಿ, ಇನ್ನೊಂದು ಪುಸ್ತಕ ಇಟ್ಟು ಹೋಗಿ’ ಎಂಬ ಸಲಹೆಯನ್ನೂ ಇಲ್ಲಿ ನೀಡಲಾಗಿದೆ. ಪುಸ್ತಕ ತೆಗೆದುಕೊಂಡ ಮೇಲೆ ಇನ್ನೊಂದು ಪುಸ್ತಕವನ್ನು ಇಡಲೇಬೇಕು ಎಂದೇನೂ ಒತ್ತಾಯಿಸುವುದಿಲ್ಲ. ಪುಸ್ತಕಗಳ ಸೂಕ್ತ ಬಳಕೆಯೇ ಮುಖ್ಯ.

‘ಟಾಸ್ಕ್’ ಎಜುಕೇಷನಲ್ ಚಾರಿಟಬಲ್ ಆ್ಯಂಡ್ ವೆಲ್ಫೇರ್ ಟ್ರಸ್ಟ್ ಎಂಬ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಯ ಸಹಕಾರದಲ್ಲಿ ಇಲ್ಲಿನ ಕುವೆಂಪು ನಗರದ ಇ ಆ್ಯಂಡ್ ಎಫ್ ಬ್ಲಾಕ್‌ನ ಟಾಸ್ಕ್ ಟ್ರಸ್ಟ್ ಕಚೇರಿ, ಗೋಕುಲಂನ ಟೀನಾಸ್ ಕೆಫೆ ಹಾಗೂ ಬುಕ್ಸ್ ಆ್ಯಂಡ್ ಬ್ರಿವ್ಸ್ ಲೈಬ್ರರಿಯ ಮುಂಭಾಗ ಈ ಪುಟಾಣಿ ಗ್ರಂಥಾಲಯಗಳು ಇವೆ. ಈಗಾಗಲೇ ಓದುಗರ ಮೆಚ್ಚುಗೆಗೂ ಕಾರಣವಾಗಿದ್ದು, ಸುಮಾರು 300ಕ್ಕೂ ಅಧಿಕ ಪುಸ್ತಕಗಳು ಅಂಥವರ ಕೈಸೇರಿವೆ. ಹಲವರು ತಮ್ಮ ಅಭಿಪ್ರಾಯವನ್ನು ಚೀಟಿಗಳ ಮೂಲಕ ಇಲ್ಲಿ ದಾಖಲಿಸಿದ್ದಾರೆ.

ಹೀಗಿವೆ ಗ್ರಂಥಾಲಯಗಳು...

ಗಾಳಿ, ಮಳೆಯಿಂದ ರಕ್ಷಣೆಯುಳ್ಳ ಒಂದು ಸಣ್ಣ, ಆಕರ್ಷಕ ಕಪಾಟೇ ಗ್ರಂಥಾಲಯ. ದೊಡ್ಡಪಕ್ಷಿಗೂಡನ್ನು ಹೋಲುವ ಆಕಾರದ್ದು ಎನ್ನಬಹುದು. ಎರಡು ಅಥವಾ ಮೂರು ರ್‍ಯಾಕ್‌ಗಳನ್ನು ಇವು ಹೊಂದಿದ್ದು, ಅದಕ್ಕೆ ಗಾಜಿನಬಾಗಿಲನ್ನು ಅಳವಡಿಸಲಾಗಿದೆ. ಯಾರಾದರೂ ಬಾಗಿಲು ತೆರೆಯಬಹುದು ಮತ್ತು ಅಲ್ಲಿರುವ ಪುಸ್ತಕಗಳಲ್ಲಿ ತಮಗಿಷ್ಟವಾದ ಪುಸ್ತಕವನ್ನು ತೆಗೆದುಕೊಳ್ಳಬಹುದು. ಯಾವುದೇ ನೋಂದಣಿ ಅಗತ್ಯವಿಲ್ಲ. ಮುಂದಿನ ಓದುಗರಿಗಾಗಿ ಪುಸ್ತಕವನ್ನು ಹಿಂದಿರುಗಿಸುವುದು ಅಥವಾ ಪಡೆದ ಪುಸ್ತಕಕ್ಕೆ ಬದಲಿಯಾಗಿ ಇನ್ನೊಂದು ಪುಸ್ತಕ ನೀಡಬಹುದು ಎಂಬ ನಿರೀಕ್ಷೆಯೇ ಈ ಗ್ರಂಥಾಲಯದ ಚಾಲಕಶಕ್ತಿ. ಪುಸ್ತಕ ದಾನಿಗಳೂ ಈ ಯೋಜನೆಗೆ ಬಲ ತುಂಬುತ್ತಿದ್ದಾರೆ.

‘ಲಿಟಲ್ ಫ್ರೀ ಲೈಬ್ರರಿ’ ಕಲ್ಪನೆ ಇದೇ ಮೊದಲಲ್ಲ. ಇದಕ್ಕೆ ದಶಕದ ಇತಿಹಾಸವೇ ಇದೆ. 2009ರಲ್ಲಿ ಅಮೆರಿಕದ ಹಡ್ಸನ್ ನಗರದಲ್ಲಿ ಮೊದಲ ಗ್ರಂಥಾಲಯ ಪ್ರಾರಂಭವಾಯಿತು. ಪುಸ್ತಕ ಪ್ರೇಮಿ ತಾಯಿಯ ನೆನಪಿನಲ್ಲಿ ದಿ. ಟಾಡ್‌ಬಾಲ್ ಅವರು ಉದ್ಯಾನವೊಂದರಲ್ಲಿ ಪುಟ್ಟ ಗ್ರಂಥಾಲಯವನ್ನು ಆರಂಭಿಸಿದರು. ಈ ಕಲ್ಪನೆಯು ಈಗ 115 ದೇಶಗಳಲ್ಲಿ 1.5 ಲಕ್ಷಕ್ಕೂ ಅಧಿಕ ಪುಟಾಣಿ ಗ್ರಂಥಾಲಯಗಳ ಆರಂಭಕ್ಕೆ ಮುನ್ನುಡಿ ಬರೆಯಿತು. ನಿತ್ಯವೂ ಲಕ್ಷಾಂತರ ಪುಸ್ತಕಗಳು ಜನರ ನಡುವೆ ವಿನಿಮಯವಾಗುತ್ತಿದೆ.

‘ಲಿಟಲ್ ಫ್ರೀ ಲೈಬ್ರರಿ’ ಸಂಸ್ಥೆಯು ಲಾಭರಹಿತವಾಗಿ ಕಾರ್ಯನಿರ್ವಹಿಸುತ್ತಿದೆ. ಅಮೆರಿಕದ ಸೇಂಟ್ ಪಾಲ್ ನಗರದಿಂದ ಕಾರ್ಯಾಚರಣೆ ನಡೆಸುತ್ತಿದೆ. ಸಾಕ್ಷರತೆ ಮತ್ತು ಓದುವ ಪ್ರೀತಿಯನ್ನು ಉತ್ತೇಜಿಸುವ ಕೆಲಸಕ್ಕಾಗಿ ‘ನ್ಯಾಷನಲ್ ಬುಕ್ ಫೌಂಡೇಶನ್’, ‘ಲೈಬ್ರರಿ ಆಫ್ ಕಾಂಗ್ರೆಸ್’ ಮತ್ತು ‘ಲೈಬ್ರರಿ ಜರ್ನಲ್’ ಜಾಗತಿಕ ಪುರಸ್ಕಾರಗಳಿಗೆ ಪಾತ್ರವಾಗಿದೆ.

ಆಸಕ್ತರು ಆರಂಭಿಸಬಹುದು

‘ನಾನು ಟಾಸ್ಕ್ ಟ್ರಸ್ಟ್ ಕಚೇರಿ ಎದುರಿನ ಗ್ರಂಥಾಲಯವನ್ನು ನಿರ್ವಹಿಸುತ್ತಿದ್ದೇನೆ. ನಗರದಲ್ಲಿನ ಉಳಿದ ಎರಡು ಗ್ರಂಥಾಲಯಗಳು ಟ್ರಸ್ಟ್ ಸಹಕಾರದಲ್ಲಿ ಆರಂಭಗೊಂಡಿದ್ದರೂ ಅವುಗಳನ್ನು ಸ್ಥಳೀಯರೇ ನಿರ್ವಹಿಸುತ್ತಿದ್ದಾರೆ. ನಿರ್ವಹಣೆ ಮಾಡುವ ಸ್ಥಳೀಯ ಸ್ವಯಂಸೇವಕರನ್ನು ‘ಸ್ಟೀವರ್ಡ್’ ಎಂದು ಕರೆಯಲಾಗುತ್ತದೆ.

11ನೇ ಪುಟಕ್ಕೆ...

ಅಸಮಾನತೆಯನ್ನು ವಿಡಂಬಿಸುವ ವರ್ಣಪಲ್ಲಟ

• ರುದ್ರೇಶ್ ಅದರಂಗಿ

ಸಿಡ್ಲುಪಟ್ಟಣದ ಕೆಳಗಿನ ಕೇರಿಯ ಮಾಧ, ಮೇಷ್ಟ್ರು ಕಾರಣದಿಂದಾಗಿ ಮಾಧವನಾಗಿ ಪಲ್ಲಟಗೊಂಡವನು. ಬಡತನವೇ ಹಾಸುಹೊದ್ದವನು. ಶಾಲೆಯನ್ನು ಬಿಡಬೇಕಾದವನಿಗೆ ಕೈಹಿಡಿದದ್ದು ಸಂವಿಧಾನ. ದಕ್ಕಿದ ಅವಕಾಶವನ್ನು ಬಳಸಿಕೊಂಡು ಕಾಲೇಜಿನ ಮೆಟ್ಟಿಲನ್ನು ಹತ್ತಿದವನು. ಕೀಳರಿಮೆಯಿಂದ ಹೊರಬಂದು ಕವಿತೆ ಬರೆಯುವ ಪ್ರತಿಭಾವಂತ. ಮಾಧ ಮಾಧವನಾಗಿ, ಅಸಮಾನತೆಯಿಂದ ಸಮಾನತೆಯ ಕಡೆಗಿನ ಮೇಲ್ಮುಖ ಚಲನೆಯ ಕಥಾಹಂದರವನ್ನೊಳಗೊಂಡಿದ್ದು ಕೆ.ವೈ. ನಾರಾಯಣಸ್ವಾಮಿಯವರ ನಾಟಕ 'ವರ್ಣಪಲ್ಲಟ'. ಇತ್ತೀಚೆಗೆ ಬೆಂಗಳೂರಿನ ಕಲಾಗ್ರಾಮದಲ್ಲಿ 'ಅನಾವರಣ' ತಂಡದ ಕಲಾವಿದರು ಶಶಿಧರ ಭಾರಿಘಾಟ್ ನಿರ್ದೇಶನದಲ್ಲಿ ಈ ನಾಟಕವನ್ನು ಪ್ರದರ್ಶಿಸಿದರು.

ತರಗತಿ ಕೂಡ ಸಾಮಾಜಿಕ ಸಂರಚನೆ ತರವೇ ಇನ್ನೂ ಪಲ್ಲಟಗೊಂಡಿಲ್ಲವೆಂಬುದಕ್ಕೆ ಪ್ರತಿಭಾವಂತನಾದ ಮಾಧ ಕೊನೆಬೆಂಚಿನವನಾದರೆ, ಅಗ್ರಹಾರದ ರಾಧ ಮೊದಲಬೆಂಚಿನ ಸಹಪಾಠಿ. ಮಾಧವನಲ್ಲೊಬ್ಬ ಅಸಾಧಾರಣ ಕವಿಯಿದ್ದಾನೆ ಎನ್ನುವುದನ್ನು ರಾಧ ಬಲ್ಲವಳು. ಮಾಧವನ 'ನಾನು ಕುಡಿವ ನೀರು ರಕ್ತವೆಂದರಿವಾಯ್ತು' ಕವಿತೆಯ ತೀಕ್ಷ್ಣತೆಯನ್ನು ಗ್ರಹಿಸಿದ ಮೇಷ್ಟ್ರು ಮಾಧನಿಗೆ ಗೊತ್ತಿಲ್ಲದಂತೆ 'ಪ್ರಜಾವಾಣಿ ಕವನ ಸ್ಪರ್ಧೆ'ಗೆ ಕಳುಹಿಸುತ್ತಾರೆ. ಅಲ್ಲಿ ಮೊದಲ ಬಹುಮಾನ ಬಂದಾಗ ಕಾಲೇಜಿನ ನೋಟಿಸ್ ಬೋರ್ಡಿನ ಮೇಲೆ ರಾರಾಜಿಸುತ್ತದೆ. ರಾಧಳಿಂದ ಮಾಧವನಿಗೆ ಮೆಚ್ಚುಗೆಯ ನಲ್ನುಡಿ. ಮಾಧವನು ಬರೆದುಕೊಟ್ಟ ಕವನ 'ಮಹಾಪ್ರಾಣಪ್ರಿಯೆ ರಾಧ' ಮನೆಯಲ್ಲಿ ರಾದ್ಧಾಂತವನ್ನುಂಟುಮಾಡುತ್ತದೆ. ಅರ್ಥವು ಅಪಾರ್ಥಗೊಂಡು ರಾಧಳ ತಂದೆ ಪಾಪುವನ್ನು ಪತ್ತೇದಾರಿಗೆ ಕಳುಹಿಸುತ್ತಾನೆ. ಪಾಪು ಮಾಧವನ ಜಾತಿಯನ್ನು ಪತ್ತೆ ಹಚ್ಚುವುದು ಕಾಲ ಎಷ್ಟೇ ಬದಲಾದರೂ ಜಾತಿ ಬದಲಾಗುವುದಿಲ್ಲವೆಂಬುದನ್ನು ನಾಟಕ ವಿಡಂಬಿಸುತ್ತದೆ.

ರಾಧ-ಮಾಧವರ ಸ್ನೇಹ ಪ್ರೇಮವಾಗಿ ಪಲ್ಲಟಗೊಂಡಾಗ ರಾಜಕಾರಣಿ ಮತ್ತು ಪೊಲೀಸರ ಆಗಮನವಾಗುತ್ತದೆ. ಸಹಜವಾದ ಪ್ರೇಮ ಜಾತಿ ಬಣ್ಣ ಪಡೆದುಕೊಳ್ಳುತ್ತದೆ. ರಾಜಕಾರಣ ತನ್ನ ಅಧಿಕಾರದ ಬಲದಿಂದ ನಿಯಂತ್ರಿಸುವ ಹಾಗೂ ಮತೀಯಗೊಳಿಸುವ ಹುನ್ನಾರವನ್ನು ನಾಟಕ ಅನಾವರಣ ಮಾಡುತ್ತದೆ. ವ್ಯವಸ್ಥೆಯು ಯಾವಾಗಲೂ ಯಥಾಸ್ಥಿತಿ ಪರವಾಗಿದ್ದು, ಬದಲಾವಣೆಯನ್ನು ಬಯಸದ ಅಧಿಕಾರ ಮತ್ತು ಶ್ರೇಣೀಕೃತ ಸಮಾಜವು ರಾಧ-ಮಾಧವರ ಪ್ರೇಮವನ್ನು ಹತ್ತಿಕ್ಕುವ ಹುನ್ನಾರವನ್ನು ಮಾಡುತ್ತದೆ. ರಾಧ-ಮಾಧವರು ಕಾಣೆಯಾಗಲು ಮೇಷ್ಟ್ರು ಕಾರಣವೆಂದು ಶಿಕ್ಷೆಗೆ ಗುರಿಪಡಿಸಿ ಸೆರೆಮನೆಗೆ ತಳ್ಳಲಾಗುತ್ತದೆ. ಪ್ರಗತಿಪರ ವಿಚಾರವಾದಿಗಳಿಗೆ ನಗರ ನಕ್ಸಲರೆಂಬ ಹಣೆಪಟ್ಟಿಯನ್ನು ಹಚ್ಚಿ ಸೆರೆಮನೆಗೆ ತಳ್ಳಲಾಗುತ್ತಿದೆಯೆಂಬುದನ್ನು ಕೂಡ ನಾಟಕವು ಧ್ವನಿಸುತ್ತದೆ. ಹತ್ತು ವರ್ಷಗಳು ಕಳೆದರೂ ಮೇಷ್ಟ್ರು ಬಿಡುಗಡೆಯಿಲ್ಲವೆಂಬ ವಿಷಾದದೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ನಾಟಕದಲ್ಲಿ ಚುರುಕಾದ ಸಂಭಾಷಣೆಯಿದೆ. ಪಾಪು ಮಾಧವನ ಜಾತಿಯನ್ನು ಪತ್ತೆಹಚ್ಚುವ ಸಂದರ್ಭದಲ್ಲಿನ 'ಹಲಗೆಯ ನಾದದ ಮೂಲಕ ಶತಮಾನಗಳ ಕೋಪ ತಾಪಗಳು ಉನ್ಮಾದಗಳಾಗಿ ಹೊರಹೊಮ್ಮುವಾಗ ಕೇಳಬೇಕು' ಎನ್ನುವುದು ಕೇವಲ ಮಾತಾಗದೆ ಸಶಕ್ತ ಧ್ವನಿಯಾಗಿದೆ. ಮಾಧ ಪಾತ್ರವು ದೇವನೂರ ಮಹಾದೇವರ ಕುಸುಮಬಾಲೆಯೊಂದಿಗೆ ಸಂವಹನಿಸುವುದು ಕೇವಲ ತಂತ್ರವಾಗಿರದೆ ನಾಟಕೀಯ ಧ್ವನಿಯಾಗಿ ಪ್ರತಿಫಲಿತಗೊಂಡಿದೆ. ಮೇಷ್ಟ್ರು ತರಗತಿಯಲ್ಲಿ ಓದಿಸುವ ಲಂಕೇಶರ 'ಸಂಕ್ರಾಂತಿ' ನಾಟಕದ ರುದ್ರ ಮತ್ತು ಉಷಾ, ಮಾಧವ ಮತ್ತು ರಾಧಳ ಮೂಲಕ ಕಲ್ಯಾಣದ ಕ್ರಾಂತಿಯು ಧ್ವನಿತಗೊಂಡು ಬಸವಣ್ಣನ ಆಗಮನವನ್ನು ನಿರೀಕ್ಷಿಸುತ್ತದೆ. ನಾಟಕದಲ್ಲಿ ಮತ್ತೆ ಮತ್ತೆ ಅಂಬೇಡ್ಕರ್ ವಿಚಾರಗಳು ಪ್ರಸ್ತಾಪಗೊಂಡು ಸಂವಿಧಾನವೇ ಎಲ್ಲಕ್ಕೂ ಪರಿಹಾರವೆಂಬುದು ಸೂಚಿಸುತ್ತದೆ.

ನಾಟಕದ ದೃಶ್ಯ

ನಾಟಕಕಾರ ಕೆ.ವೈ. ನಾರಾಯಣಸ್ವಾಮಿ ಸಮಕಾಲೀನ ಸಂಗತಿಗಳೊಂದಿಗೆ ಸಂವಿಧಾನವನ್ನು ಬೆಸೆದಿರುವ ಕುಸುರಿ ಕೆಲಸ ಕಲಾತ್ಮಕಗೊಂಡಿದೆ. ಇದುವರೆಗಿನ ಅವರ ನಾಟಕಗಳಲ್ಲಿನ ವಸ್ತು ಪುರಾಣ ಮತ್ತು ಚರಿತ್ರೆಯಿಂದ ಹೆಣ್ಣು ಮತ್ತು ಸಮಾಜದ ಕಡೆಗೆ ಹೊರಳಿದ್ದು, ಅಂಬೇಡ್ಕರ್ ಹಾಗೂ ಸಂವಿಧಾನವನ್ನು ನಾಟಕದಲ್ಲಿ ಒಳಗೊಂಡಿರುವುದು ಒಳ್ಳೆಯ ಬೆಳವಣಿಗೆ.

ನಿರ್ದೇಶಕ ಶಶಿಧರ ಭಾರಿಘಾಟ್ ಮೇಳದ ಮೂಲಕ ನಾಟಕವನ್ನು ವಿನ್ಯಾಸಿಸಿದ್ದಾರೆ. ಮೇಳವೇ ಪಾತ್ರಗಳಾಗಿ, ದೃಶ್ಯಗಳಾಗಿ ಸಾಗುವ ವಿನ್ಯಾಸವು ಚಲನಶೀಲತೆಯನ್ನು ಪಡೆದುಕೊಂಡಿದೆ. ಒಂಬತ್ತು ಸ್ಟೂಲುಗಳನ್ನೇ ರಂಗ ಪರಿಕರಗಳಾಗಿ ಮರ, ಶ್ರೇಣೀಕರಣ, ತರಗತಿ, ಮನೆ, ಪೊಲೀಸ್ ಸ್ಟೇಷನ್, ಬೀದಿ, ಸಭೆಯನ್ನಾಗಿ ಬಳಸಿಕೊಳ್ಳುವಲ್ಲಿನ ತಂತ್ರವು ಚೆನ್ನಾಗಿದೆ. ನಾಟಕದ ಒಳಗಿರುವ ಅಂಬೇಡ್ಕರರ ಸಮಾನತೆ, ಶಿಕ್ಷಣ, ಸಂಘಟನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ವಿಸ್ತರಿಸುವ ಅವಕಾಶವೂ ಇದೆ. ಮೇಷ್ಟ್ರಾಗಿ ರಾಹುಲ್ ಅಭಿನಯ ಪರಿಣಾಮಕಾರಿಯಾಗಿದೆ. ಮಾಧವನಾಗಿ ಮನೋಜ್ ಮುಗ್ಧವಾಗಿ ಅಭಿನಯಿಸಿದ್ದಾರೆ. ಪಾಪುವಿನ ವಿಚಾರಣೆಯ ಸಂದರ್ಭದಲ್ಲಿನ ಅವರ ಮಾತುಗಳು ಆತ್ಮವಿಶ್ವಾಸದಿಂದ ಕೂಡಿದ್ದು ನಾಟಕದೊಳಗಿನ ವಿಚಾರಕ್ಕೆ ಧ್ವನಿಯಾಗಿದ್ದಾರೆ. ಅವರ ಮುಗ್ಧವಾದ ನಟನೆ ಪಾತ್ರಕ್ಕೆ ಪೂರಕವಾಗಿದೆ. ರಾಧಳಾಗಿ ಸಿಂಚನ ಲವಲವಿಕೆಯಿಂದ ಗಮನ ಸೆಳೆಯುತ್ತಾರೆ. ಪಾಪುವಾಗಿ ಮಹಾಂತೇಶ್ ಹಾಗೂ ಗುಂಪು ಪಾತ್ರಕ್ಕೆ ನ್ಯಾಯ ಸಲ್ಲಿಸಿದ್ದಾರೆ. ಸಂಗೀತ ಸಾಂಗತ್ಯದಲ್ಲಿ ಹವೀಶ್ ಶ್ರೀನಾಥ್ ನಾಟಕದ ವಸ್ತುವನ್ನು ಸಂವಹನ ಮಾಡುವಲ್ಲಿ ಇನ್ನಷ್ಟು ನಾದದ ಕಡೆಗೆ ಗಮನಹರಿಸಬೇಕು. ಮಾಧವ ಚರ್ಮದ ಹಲಗೆ ಇಷ್ಟವೆಂದಾಗ ಹಲಗೆಯ ಸದ್ದೇ ಇಲ್ಲದಿರುವುದು ಕೊರತೆಯೆನ್ನಿಸುತ್ತದೆ. ರಂಗ ಸಜ್ಜಿಕೆಯಲ್ಲಿ ವಿಠ್ಠಲ್ ಅಪ್ಪಯ್ಯ, ವರದರಾಜ, ಬೆಳಕಿನಲ್ಲಿ ರವಿ ಎಂ. ನಾಟಕವನ್ನು ಚಂದವಾಗಿಸಿದ್ದಾರೆ.

❖

ರೇಸ್ ಪಾರಿವಾಳಗಳ ಖಯಾಲಿ!

ಸಾಕಿದ ಪಾರಿವಾಳಗಳೊಂದಿಗೆ ರವಿ

10ನೇ ಪುಟದಿಂದ...

500 ಕಿ.ಮೀ ವರೆಗಿನ ರೇಸ್ ಅನ್ನು ಕ್ಲಬ್‌ನ ವತಿಯಿಂದಲೇ ನಡೆಸಲಾಗುತ್ತದೆ. ಬೆಂಗಳೂರು ಕೇಂದ್ರವಾಗಿಟ್ಟುಕೊಂಡು ವಾಯುಮಾರ್ಗ ಅಳತೆಯಲ್ಲಿ (ಏರಿಯಲ್ ಡಿಸ್ಟೆನ್ಸ್) ರೇಸ್ ಪಾಯಿಂಟ್ ಅನ್ನು ನಿರ್ಧರಿಸಲಾಗುತ್ತದೆ. ಉದಾಹರಣೆಗೆ 200 ಕಿ.ಮೀ ದೂರದ ರೇಸ್ ಅನ್ನು ಬೆಂಗಳೂರಿನಿಂದ ವಾಯುಮಾರ್ಗದಲ್ಲಿ ಇಷ್ಟೇ ದೂರ ಇರುವ ಆಂಧ್ರ ಪ್ರದೇಶ ಅನಂತಪುರದಿಂದ ಮಾಡಲಾಗುತ್ತದೆ. ರೇಸ್‌ನಲ್ಲಿ ಭಾಗಿಯಾಗುವವರು ತಮ್ಮ ಕ್ಲಬ್‌ನ ಮುಖಾಂತರ ಪಾರಿವಾಗಳನ್ನು ಅಲ್ಲಿಗೆ ಸಾಗಿಸುತ್ತಾರೆ. ಅಲ್ಲಿ ಎಲ್ಲಾ ಪಾರಿವಾಳಗಳನ್ನು ಒಂದೇ ಸಮಯದಲ್ಲಿ ಹಾರಿಸಲಾಗುತ್ತದೆ. ಬೇಗ ಮರಳಿ ಬಂದ ಪಾರಿವಾಳ ಗೆದ್ದಂತೆ.

1000–1750 ಕಿ.ಮೀ ದೂರದ ರೇಸ್ ಅನ್ನು ಫೆಡರೇಷನ್ ವತಿಯಿಂದ ನಡೆಸಲಾಗುತ್ತದೆ. 'ಕರ್ನಾಟಕ ಹೋಮಿಂಗ್ ಪಿಜನ್ ಫೆಡರೇಷನ್' ಅಡಿಯಲ್ಲಿ ಸುಮಾರು ಹನ್ನೊಂದು ಕ್ಲಬ್‌ಗಳಿವೆ. ಈ ಎಲ್ಲಾ ಕ್ಲಬ್ ಸದಸ್ಯರ ಪಾರಿವಾಳಗಳನ್ನು ಫೆಡರೇಷನ್ ವತಿಯಿಂದಲೇ ರೇಸ್ ಮಾಡಲಾಗುತ್ತದೆ. ಪ್ರತಿ ಪಾರಿವಾಳಕ್ಕೂ ಇಂತಿಷ್ಟು ಎಂದು ಪ್ರವೇಶ ಶುಲ್ಕ ಇರುತ್ತದೆ. ಒಬ್ಬ ಸ್ಪರ್ಧಿಗೆ 15 ಪಾರಿವಾಳಗಳನ್ನು ಬಿಡಲು ಮಾತ್ರ ಅವಕಾಶ ಇರುತ್ತದೆ. ವಿವಿಧ ವಿಭಾಗಗಳಲ್ಲಿ ಸ್ಪರ್ಧೆ ನಡೆಯುತ್ತದೆ. 1000 ಕಿ.ಮೀ ದೂರ ರೇಸ್ ಮಧ್ಯಪ್ರದೇಶ ಛಿಂದ್ವಾಡದಿಂದಲೂ 1500 ಕಿ.ಮೀ ಗ್ವಾಲಿಯರ್‌ನಿಂದಲೂ 1750 ಕಿ.ಮೀ ದೆಹಲಿಯಿಂದಲೂ ನಡೆಯುತ್ತದೆ. ನಗದು ಸೇರಿ ವಿವಿಧ ಬಹುಮಾನಗಳನ್ನು ನೀಡಲಾಗುತ್ತದೆ.

ಫಲಿತಾಂಶ ನಿರ್ಧಾರ ಹೇಗೆ?

ಫೆಡರೇಷನ್ ರೇಸಿಂಗ್‌ನಲ್ಲಿ ಪಾಲ್ಗೊಳ್ಳುವ ಪಾರಿವಾಳಗಳಿಗೆ ತಾತ್ಕಾಲಿಕವಾಗಿ ರಬ್ಬರ್ ಉಂಗುರ ಹಾಕಲಾಗುತ್ತದೆ. ಅದರ ಒಳಗೆ ಗೋಪ್ಯಸಂಖ್ಯೆ ಇರುತ್ತದೆ. ರೇಸ್ ಮುಗಿದ ಬಳಿಕ ಈ ಹಿಂದೆ ಹಾಕಿರುವ ಉಂಗುರ ಹಾಗೂ ರಬ್ಬರ್ ಉಂಗುರದಲ್ಲಿರುವ ಗೋಪ್ಯಸಂಖ್ಯೆಯನ್ನು ತಾಳೆ ಮಾಡಲಾಗುತ್ತದೆ. ಬ್ಯಾಸ್ಕೆಟಿಂಗ್ (ಹಕ್ಕಿಗಳನ್ನು ಬ್ಯಾಸ್ಕೆಟ್‌ನಲ್ಲಿ ಹಾಕುವ ಪ್ರಕ್ರಿಯೆ) ವೇಳೆ ಎಲ್ಲಾ ಹಕ್ಕಿಗಳ ಮಾಹಿತಿಗಳನ್ನು ಪರಿಶೀಲಿಸಿ, ಅವುಗಳನ್ನು ಬಿಡುವ ಸ್ಥಳಕ್ಕೆ ಟೆಂಪೊ, ರೈಲು ಅಥವಾ ವಿಮಾನದ ಮೂಲಕ ಸಾಗಿಸುತ್ತಾರೆ. 'ರಿಲೀಸಿಂಗ್ ಪಾಯಿಂಟ್'ನಲ್ಲಿ ಬಿಡುವಾಗ ಪಾರಿವಾಳ ರೇಸ್‌ಗೆಂದೇ ತಯಾರಿಸಲಾದ ವಿಶೇಷ ಆ್ಯಪ್ ಮೂಲಕ ಚಿತ್ರ ತೆಗೆದುಕೊಳ್ಳಲಾಗುತ್ತದೆ. ಬಿಟ್ಟ ಸಮಯ, ಸ್ಥಳವನ್ನು ಆ್ಯಪ್ ದಾಖಲಿಸಿಕೊಳ್ಳುತ್ತದೆ. ಪಾರಿವಾಳವನ್ನು ಸಾಕುವ 'ಲಾಫ್ಟ್'ನ (ಪಾರಿವಾಳ ಸಾಕುವ ಸ್ಥಳ) ಜಿಪಿಎಸ್ ಮಾಹಿತಿಯನ್ನು ಸ್ಪರ್ಧೆಗೂ ಮೊದಲೇ ಆ್ಯಪ್ ಮೂಲಕ ದಾಖಲಿಸಿಕೊಳ್ಳಲಾಗುತ್ತದೆ. ಹಕ್ಕಿ ಮರಳಿ ಬಂದ ಕೂಡಲೇ ಮತ್ತೊಮ್ಮೆ ಫೋಟೊ ತೆಗೆದು ಅಪ್ಲೋಡ್ ಮಾಡಬೇಕು. ಸಮಯ ಹಾಗೂ ವೇಗವನ್ನು ಅದೇ ಲೆಕ್ಕ ಮಾಡುತ್ತದೆ. ದೇವನಹಳ್ಳಿ ಹಾಗೂ ಬನಶಂಕರಿಯ ಇಬ್ಬರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರೆ, ಎರಡೂ ಸ್ಥಳಗಳಿಗೆ ಇರುವ ದೂರ ಹಾಗೂ ಹಕ್ಕಿಯ ವೇಗವನ್ನು ಲೆಕ್ಕ ಹಾಕಿ ಸರಾಸರಿ ತೆಗೆದು ಫಲಿತಾಂಶವನ್ನು ಆ್ಯಪ್ ನಿರ್ಧರಿಸುತ್ತದೆ. ಯಾವ ಹಾದಿಯಲ್ಲಿ ಬಂದಿದೆ. ಎಲ್ಲೆಲ್ಲಾ ತಂಗಿದೆ ಎಂದು ದಾಖಲಿಸುವ ದುಬಾರಿ ಆ್ಯಪ್ ವಿದೇಶಗಳಲ್ಲಿ ಇದೆ.

ಹವಾಮಾನ ಬದಲಾವಣೆ, ಭೌಗೋಳಿಕ ವ್ಯತ್ಯಾಸ, ಬೀಸುವ ಗಾಳಿ, ಶತ್ರು ಪಕ್ಷಿಗಳು, ಬೇಟೆಗಾರರಿಂದ ರಕ್ಷಿಸಿಕೊಂಡು ಈ ಪಾರಿವಾಳಗಳು ಗಮ್ಯ ತಲುಪಬೇಕು. ಗಿಡುಗಗಳ ದಾಳಿಗೆ ಒಳಗಾಗಿ ಗಾಯಗೊಂಡರೂ ರೇಸ್ ಪೂರ್ಣಗೊಳಿಸಿದ ಪಾರಿವಾಳಗಳೂ ಇವೆ. 'ಈ ಎಲ್ಲಾ ಅಡೆತಡೆಗಳನ್ನು ಮೀರಿ ಮತ್ತೆ ಬಂದಾಗ ಅವುಗಳ ಛಲ ನೋಡಿ ಹೆಮ್ಮೆಯಾಗುತ್ತದೆ. ಕಣ್ಣಿಂದ ಹನಿಗಳೂ ಜಾರುತ್ತವೆ. ಹೀಗೆ ಹಾರಲು ಬಿಟ್ಟ ಎಲ್ಲಾ ಹಕ್ಕಿಗಳು ಮರಳಿ ಬರಬೇಕು ಎಂದೇನಿಲ್ಲ. ಕ್ಲಬ್ ರೇಸ್ ಒಂದರಲ್ಲಿ ನಾವೆಲ್ಲಾ ಸೇರಿ ಹಾರಿಸಿದ್ದ 250 ಹಕ್ಕಿಗಳು ಬರಲೇ ಇಲ್ಲ. ಆ ದಿನ ಅನಿರೀಕ್ಷಿತವಾಗಿ ಜೋರು ಗಾಳಿ ಮಳೆಯಾಗಿತ್ತು' ಎಂದು ರವಿ ನೆನಪಿಸಿಕೊಂಡರು.

ವಿದೇಶಗಳಲ್ಲಿ ಪ್ರಸಿದ್ಧಿ

ಪಾರಿವಾಳ ರೇಸ್ ಹವ್ಯಾಸವಾಗಿ 1818ರಲ್ಲಿ ಬೆಲ್ಜಿಯಂನಲ್ಲಿ ಪ್ರಾರಂಭವಾಯಿತು ಎನ್ನಲಾಗುತ್ತದೆ. ಈಗಲೂ ಬೆಲ್ಜಿಯಂನಲ್ಲಿ ಈ ಕ್ರೀಡೆ ಭಾರಿ ಜನಪ್ರಿಯ. ಗೆದ್ದವರಿಗೆ ದೊಡ್ಡ ಮೊತ್ತದ ಬಹುಮಾನವೂ ಸಿಗುತ್ತದೆ. ಬ್ರಿಟಿಷರ ಮೂಲಕ ಈ ಶೋಕಿ ಭಾರತಕ್ಕೆ ಬಂತು. ಬೆಂಗಳೂರಿನಲ್ಲಿ 50 ವರ್ಷದಿಂದ ಪಾರಿವಾಳಗಳ ರೇಸ್ ನಡೆಯುತ್ತಿದೆ. ಶೋಕಿಗಾಗಿ ಮಾತ್ರ ಈ ರೇಸ್ ಇರುವುದರಿಂದ ಆರ್ಥಿಕವಾಗಿ ಶಕ್ತರಾದವರು ಪಾಲ್ಗೊಳ್ಳುತ್ತಾರೆ. ಬೆಂಗಳೂರು ಉತ್ತರ, ಕೋಲಾರ, ಚಿಕ್ಕಬಳ್ಳಾಪುರದಲ್ಲೂ ಕ್ಲಬ್‌ಗಳಿವೆ. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳ ಗ್ರಾಮೀಣರಿಗೂ ಪಾರಿವಾಳಗಳ ರೇಸ್ ನಡೆಸುವ ಹವ್ಯಾಸ ಇದ್ದು, ತಾವು ಸಾಕಿದ ಸ್ಥಳದಿಂದ ಕೆಲವು ಕಿ.ಮೀ ದೂರ ತೆಗೆದುಕೊಂಡು ಹೋಗಿ ಬಿಟ್ಟು ಬರುತ್ತಾರೆ. ಅಲ್ಲಿ ಬಾಜಿ ಕಟ್ಟುವುದೂ ಇದೆ.

ರೇಸ್‌ಗಾಗಿಯೇ ಸಾಕುವ ಪ್ರಾಣಿ ಪಕ್ಷಿಗಳನ್ನು ಅತ್ಯಂತ ಮುತುವರ್ಜಿಯಿಂದ ಮಾಲೀಕರು ನೋಡಿಕೊಳ್ಳುತ್ತಾರೆ. ಅವುಗಳು ಗೆದ್ದಾಗ ಬೀಗುತ್ತಾರೆ, ಸೋತಾಗ ಬೇಸರಗೊಳ್ಳುತ್ತಾರೆ. ಮತ್ತೆ ಮತ್ತೆ ಪ್ರಯತ್ನಿಸುತ್ತಲೇ ಇರುತ್ತಾರೆ; ಗೆಲುವಿಗಾಗಿ, ಆನಂದಕ್ಕಾಗಿ.

❖

ರೇಸ್ ಪಾರಿವಾಳದ ಕಾಲಿನಲ್ಲಿರುವ ವಿಶೇಷ ಗುರುತಿನ ರಿಂಗ್

ರಸ್ತೆ ಬದಿ ಪುಟಾಣಿ ಗ್ರಂಥಾಲಯಗಳು

10ನೇ ಪುಟದಿಂದ...

ಗ್ರಂಥಾಲಯದ ಸುರಕ್ಷತೆ ಮತ್ತು ಸ್ವಚ್ಛತೆ ನೋಡಿಕೊಳ್ಳುವುದು, ಜನರಿಗೆ ಮಾಹಿತಿ ನೀಡಿ ಬಳಕೆಗೆ ಪ್ರೋತ್ಸಾಹಿಸುವುದು ಅವರ ಕೆಲಸ' ಎಂದು ಟಾಸ್ಕ್ ಟ್ರಸ್ಟ್ ಕಾರ್ಯದರ್ಶಿ ಓಮರ್ ಹಕ್ ಹೇಳುತ್ತಾರೆ.

ಇಂತದ್ದೇ ಭಾಷೆಯ ಪುಸ್ತಕಗಳನ್ನು ಇರಿಸಬೇಕು ಎಂಬ ನಿಯಮಗಳಿಲ್ಲ. ಜನರು ಓದಿರುವ ಪುಸ್ತಕಗಳು ಮನೆಯಲ್ಲಿಯೇ ಅನುಪಯುಕ್ತವಾಗಿ ಉಳಿಯುವುದಕ್ಕಿಂತ ಅಗತ್ಯವುಳ್ಳವರಿಗೆ, ಪುಸ್ತಕಕೊಳ್ಳಲು ಆಗದವರಿಗೆ ಉಪಯುಕ್ತವಾಗಲಿ ಎಂಬುದೇ ಯೋಜನೆ ಉದ್ದೇಶ. ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಹೆಚ್ಚು ಭೇಟಿ ನೀಡುತ್ತಿದ್ದಾರೆ. ದಾನಿಗಳು ಇಂಗ್ಲಿಷ್ ಪುಸ್ತಕಗಳನ್ನೇ ಹೆಚ್ಚು ನೀಡುತ್ತಿದ್ದು, ಓದುಗರು ಅವನ್ನೇ ಕೊಂಡೊಯ್ಯುತ್ತಿದ್ದಾರೆ. ಸಸ್ಪೆನ್ಸ್ ಮತ್ತು ರೋಚಕ ಮಾದರಿಯ ಪುಸ್ತಕಗಳಿಗೆ ಬೇಡಿಕೆಯಿದೆ.

'ಇದಕ್ಕೆ ಮಾಲೀಕರು ಇರುವುದಿಲ್ಲ. ಸಮುದಾಯದ ಸಹಕಾರದಿಂದಲೇ ಗ್ರಂಥಾಲಯ ಆರಂಭ ಮಾಡಲಾಗುತ್ತದೆ. ನನಗೂ ಹಲವು ಸ್ನೇಹಿತರು ಸಹಕರಿಸಿದ್ದಾರೆ. ಬಳಕೆದಾರರೇ ಇದರ ಯಶಸ್ಸಿಗೆ ಜವಾಬ್ದಾರರು. ಪುಸ್ತಕಗಳ ಬಗ್ಗೆ ಆಸಕ್ತಿ ಹೊಂದಿರುವವರು, ಸಾರ್ವಜನಿಕರು ಬಂದು ಹೋಗಲು ಸೂಕ್ತ ಸ್ಥಳ ಹೊಂದಿರುವ ಯಾರೂ ಬೇಕಾದರೂ ಪ್ರಾರಂಭಿಸಬಹುದು. ಲಿಟಲ್ ಫ್ರೀ ಲೈಬ್ರರಿ ಸಂಸ್ಥೆಗೆ ಶುಲ್ಕ ನೀಡಿ ನೋಂದಣಿ ಮಾಡಿದರೆ ಗ್ರಂಥಾಲಯಕ್ಕೆ ನಿರ್ದಿಷ್ಟ ಸಂಖ್ಯೆ ದೊರೆಯಲಿದೆ. ಜಾಗತಿಕ ಮ್ಯಾಪ್‌ನಲ್ಲಿಯೂ ತಮ್ಮ ಸ್ಥಾನವನ್ನು ಗುರುತು ಮಾಡಬಹುದು. ಇದು ಕಡ್ಡಾಯವೇನಲ್ಲ. ಸದ್ಯ ನಮ್ಮಲ್ಲಿನ ಎರಡು ಗ್ರಂಥಾಲಯ ನೋಂದಣಿಯಾಗಿವೆ. ಆಸಕ್ತರಿಗೆ ಗ್ರಂಥಾಲಯ ಆರಂಭಿಸಲು ಅಗತ್ಯ ಮಾಹಿತಿ ನೀಡುತ್ತೇನೆ' ಎನ್ನುತ್ತಾರೆ ಟಾಸ್ಕ್ ಟ್ರಸ್ಟ್ ಕಾರ್ಯದರ್ಶಿ ಓಮರ್ ಹಕ್.

ಕುವೆಂಪು ನಗರದಲ್ಲಿರುವ ಟಾಸ್ಕ್ ಟ್ರಸ್ಟ್ ಮುಂದೆ ಉಚಿತ ಗ್ರಂಥಾಲಯ

ಗ್ರಂಥಾಲಯಕ್ಕೆ ಭೇಟಿ ನೀಡ ಬಯಸುವವರು, ತಮ್ಮ ಬಡಾವಣೆಯ ಸಮೀಪವಿರುವ ಸ್ಥಳವನ್ನು https://app.littlefreelibrary.org/ourmap ಲಿಂಕ್ ಬಳಸಿ ಪರಿಶೀಲಿಸಬಹುದು. ರಾಜ್ಯದಲ್ಲಿ ಈ ಗ್ರಂಥಾಲಯ ಕಾರ್ಯಾಚರಣೆ ನಡೆಸುತ್ತಿರುವ ಎರಡನೇ ನಗರ ಮೈಸೂರು, ಬೆಂಗಳೂರಿನಲ್ಲಿ ಎಚ್‌ಬಿಆರ್ ಬಡಾವಣೆ, ವಿದ್ಯಾರಣ್ಯಪುರ, ಕೋರಮಂಗಲ 7ನೇ ಹಂತ ಹಾಗೂ ಮಾರತಹಳ್ಳಿ ಸಮೀಪ ಇಂತಹ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. (ಸಂಪರ್ಕ ಸಂಖ್ಯೆ 94491 18357)

❖

ಮುನ್ನೋಟ 07-12-2025 ರಿಂದ 13-12-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಾರದ ಆರಂಭದಲ್ಲಿ ಸ್ವಲ್ಪ ಉದಾಸಿನತೆ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಅಪೇಕ್ಷಿಸಿದ ಸಹಾಯ ದೊರೆಯುತ್ತದೆ. ಭೂಮಿ ವ್ಯವಹಾರ ಮತ್ತು ಪಶು ವ್ಯಾಪಾರವನ್ನು ಮಾಡುವವರಿಗೆ ಲಾಭವಿರುತ್ತದೆ. ಸಂಸಾರದಲ್ಲಿ ಶಾಂತಿ ಇರುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ವ್ಯಕ್ತಿತ್ವದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಸ್ಥಿರಾಸ್ತಿಯನ್ನು ಮಾಡುವ ವಿಚಾರದಲ್ಲಿ ವ್ಯವಹಾರದಲ್ಲಿ ಅತಿ ಆತುರ ಬೇಡ. ಕಬ್ಬಿಣದ ವ್ಯಾಪಾರಿಗಳಿಗೆ ಲಾಭ ಹೆಚ್ಚು. ಅವಿವಾಹಿತರಿಗೆ ಕಂಕಣ ಬಲ ಒದಗುವ ಸಾಧ್ಯತೆ ಇದೆ. ಸಾಮಾಜಿಕ ಕೆಲಸಗಳನ್ನು ಮಾಡುವವರಿಗೆ ಜನಮನ್ನಣೆ ಸಿಗುತ್ತದೆ. ಚಿನ್ನದ ಆಭರಣಗಳನ್ನು ಕಂತಿನ ರೂಪದಲ್ಲಿ ಕೊಳ್ಳುವ ಯೋಗವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಸಮಾಜದಿಂದ ಉತ್ತಮ ಗೌರವ ಸಿಗುವ ಸಾಧ್ಯತೆಗಳಿವೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಒಳ್ಳೆಯ ಕೆಲಸಗಳಿಗೆ ಬಂಧುಗಳ ಸಹಕಾರ ದೊರೆಯುತ್ತದೆ. ಸ್ಥಿರಾಸ್ತಿಯನ್ನು ಕೊಳ್ಳುವ ಬಗ್ಗೆ ಆಲೋಚನೆ ಮಾಡಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಮಹಿಳೆಯರ ಜತೆ ಹಣಕಾಸಿನ ವ್ಯವಹಾರಗಳ ಬೇಡ. ಸ್ಥಾನಮಾನ ಅನಿರೀಕ್ಷಿತವಾಗಿ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯವು ಕಡಿಮೆ ಇರುತ್ತದೆ. ನಿಮ್ಮ ವ್ಯವಹಾರಗಳಿಗೆ ಬಂಧುಗಳು ಸಹಕಾರ ನೀಡುವರು. ಇಷ್ಟಪಟ್ಟ ಆಸ್ತಿಯನ್ನು ಕೊಳ್ಳುವ ಯತ್ನ ಮಾಡಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರೇಯಸ್ಸು ಇರುತ್ತದೆ. ಹಿರಿಯರ ಆಸ್ತಿ ಸಿಗುವ ಸಂದರ್ಭವಿದೆ. ಸಂಗೀತ ಮತ್ತು ಇತರೆ ಲಲಿತಕಲೆಗಳಲ್ಲಿ ಮನ್ನಣೆ ದೊರೆತು ಸಂತಸವಾಗುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಲಭಿಸುವ ಅವಕಾಶಗಳಿವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಧರ್ಮದ ಬಗ್ಗೆ ಹೆಚ್ಚು ಒಲವನ್ನು ಬೆಳೆಸಿಕೊಳ್ಳುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಯಾವುದೇ ಕೆಲಸವನ್ನು ಆತುರದಿಂದ ಮಾಡಬೇಡಿ. ಶುಭಕಾರ್ಯಗಳಿಗಾಗಿ ದೂರ ಪ್ರಯಾಣದ ಸಾಧ್ಯತೆಗಳಿವೆ. ನಿಮ್ಮ ಕೆಲಸ ಕಾರ್ಯಗಳಿಗೆ ಸ್ತ್ರೀಯರ ಸಹಕಾರ ದೊರೆಯುತ್ತದೆ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ಶತ್ರುಗಳನ್ನು ಜಾಣ್ಮೆಯಿಂದ ಗೆಲ್ಲುವಿರಿ. ಹೈನುಗಾರಿಕೆ ಮಾಡುವವರಿಗೆ ಲಾಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ಚುರುಕುತನದಿಂದ ಎಲ್ಲರ ಗಮನವನ್ನು ಸೆಳೆಯಬಹುದು. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳ ಹಾಗೂ ಸ್ನೇಹಿತರ ಸಹಕಾರ ಪಡೆಯಲು ಪ್ರಯತ್ನಪಡುವಿರಿ. ಆಸ್ತಿ ವಿಚಾರಗಳಲ್ಲಿ ಮುನ್ನಡೆಯನ್ನು ಕಾಣುವಿರಿ. ಸಂಗಾತಿಯ ಉದಾಸೀನತೆ ನಿಮಗೆ ಬೇಸರ ತರಿಸುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಮಟ್ಟದ ಯಶಸ್ಸು ಇರುವುದಿಲ್ಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಂಗೀತಗಾರರಿಗೆ ಅತಿ ಹೆಚ್ಚು ಮನ್ನಣೆ ದೊರೆತು ಆದಾಯ ಹೆಚ್ಚುತ್ತದೆ. ನಿಮ್ಮ ಸ್ವಂತ ಆದಾಯ ಏರಿಕೆಯ ಹಾದಿಯಲ್ಲಿರುತ್ತದೆ. ಹಿರಿಯರಿಂದ ನಿಮ್ಮ ಉದ್ಯೋಗದಲ್ಲಿ ಸ್ವಲ್ಪ ಅನುಕೂಲಗಳಾಗುತ್ತವೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಅವಕಾಶಗಳು ದೊರೆಯುತ್ತವೆ. ಔಷಧ ಸಂಶೋಧಕರಿಗೆ ಉತ್ತಮ ಫಲಿತಾಂಶಗಳು ದೊರೆಯುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಗೌರವವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವಿದೇಶದಲ್ಲಿರುವವರಿಗೆ ಆಸ್ತಿ ಮಾಡುವ ಯೋಗವಿದೆ. ಗಣಿ ವಿಜ್ಞಾನವನ್ನು ಓದುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ಸಾಂಸಾರಿಕ ಜೀವನದಲ್ಲಿ ಸಾಕಷ್ಟು ಹೊಂದಾಣಿಕೆಯನ್ನು ಕಾಣುವ ಸಾಧ್ಯತೆಗಳಿವೆ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು. ಕೀಲು ನೋವು ನಿಮ್ಮನ್ನು ಕಾಡಬಹುದು. ವೃತ್ತಿಯಲ್ಲಿ ಏರಿಳಿತಗಳು ಇರುವುದಿಲ್ಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಮನಸ್ಸಿನಲ್ಲಿ ಸಾಧಿಸಬೇಕೆಂಬ ಛಲ ಇರುತ್ತದೆ. ಆದಾಯವು ಕಡಿಮೆ ಇದ್ದರೂ ತೊಂದರೆ ಇರುವುದಿಲ್ಲ. ಬಂಧುಗಳ ವಿರೋಧವಿರುತ್ತದೆ. ಕೃಷಿಯಿಂದ ಹೆಚ್ಚು ಅನುಕೂಲವಿರುತ್ತದೆ. ಈಗ ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಸರ್ಕಾರಿ ಉದ್ಯೋಗಿಗಳಿಗೆ ಸ್ಥಾನ ಪಲ್ಲಟವಾಗುವ ಸಾಧ್ಯತೆ ಇದೆ. ಶುಭಕಾರ್ಯಗಳನ್ನು ಮಾಡುವ ಉತ್ಸಾಹ ಬರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಿಶಾಲ ಮನೋಭಾವದಿಂದ ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಕ್ಲಿಷ್ಟವಾದ ಕೆಲಸಗಳನ್ನು ಆಶ್ಚರ್ಯಕರವಾದ ರೀತಿಯಲ್ಲಿ ಸಾಧಿಸಿ ಪ್ರಶಂಸೆಗೆ ಒಳಗಾಗುವಿರಿ. ಆದಾಯವು ಮಂದಗತಿಯಲ್ಲಿರುತ್ತದೆ. ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ನಿಮ್ಮ ಒಂದು ಹವ್ಯಾಸ ಸಂಪಾದನೆ ಮಾಡುವ ವೃತ್ತಿಯಾಗಿ ಬದಲಾಗಬಹುದು. ವಿದ್ಯಾರ್ಥಿಗಳಿಗೆ ಸ್ವಲ್ಪ ಅನುಕೂಲಕರವಾದ ವಾತಾವರಣವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದೇಶಕ್ಕೆ ಹೋಗಬೇಕೆನ್ನುವವರ ಆಸೆ ಈಡೇರುತ್ತದೆ. ಆದಾಯ ಕಡಿಮೆ ಇರುತ್ತದೆ. ಚಿನ್ನದ ಸಗಟು ಆಭರಣ ತಯಾರಿಕರಿಗೆ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹೆಚ್ಚು ಅನುಕೂಲವಾಗುತ್ತದೆ. ಬಂಧುಗಳ ಸಹಕಾರ ನೀಡುವುದಿಲ್ಲ. ಸರ್ಕಾರಿ ನೌಕರರಿಗೆ ವೃತ್ತಿಯಲ್ಲಿನ ಅಕಾಲಿಕ ಪ್ರಯಾಣದಿಂದ ಕಿರಿಕಿರಿಯಾಗುತ್ತದೆ, ಮತ್ತು ವೃಥಾ ಖರ್ಚಾಗುತ್ತದೆ. ಮಹಿಳೆಯರು ನಡೆಸುವ ವ್ಯಾಪಾರ-ವ್ಯವಹಾರಗಳಲ್ಲಿ ಈಗ ಅಭಿವೃದ್ಧಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಾರದ ಆರಂಭದಲ್ಲಿ ಆಲಸ್ಯವಿರುತ್ತದೆ. ಸ್ನೇಹಿತರೊಂದಿಗೆ ಮುಕ್ತವಾಗಿ ಮಾತನಾಡುವುದರಿಂದ ಮನಸ್ಸಿನಲ್ಲಿ ಇದ್ದ ತಪ್ಪು ಕಲ್ಪನೆಗಳು ದೂರವಾಗಿ ಸಂಬಂಧಗಳು ಗಟ್ಟಿಯಾಗುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ವ್ಯವಸಾಯದಲ್ಲಿನ ಅಭಿವೃದ್ಧಿಯಿಂದ ನಿಮ್ಮ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

ಪದಬಂಧ 2921

ಮೇಲಿನಿಂದ ಕೆಳಕ್ಕೆ

1. ನಮ್ಮ ಗುರುತಿನ ಆಸೆ 3
2. ಹೆಣ್ಣಿಗೊಂದು ಪರ್ಯಾಯ 3
3. ಕಾಸಿನಿಂದ ಉರಿಯುವ ದೀಪ 3
4. ಹಮ್ಮಿನ ಪ್ರಿಯಕರನಿಗಾಗಿ ದೀರ್ಘ ಕೂಗು 3
7. ಬೆಳ್ಳಿತೆರೆಯಲ್ಲಿ ಕಾಣುವ ಛಾಯಾಲೋಕ 3
9. ಈಗಾಗಲೇ ಬರಹದಲ್ಲಿ ಮೂಡಿದ್ದು 3
10. ಅಗಲಿಕೆಯಲ್ಲಿ ಬಳಲುವವ 3
11. ಸಂಸ್ಕಾರ ಪಡೆದ ಹಿಂದಿಯವ 3
12, ಹಿತದಿಂದ ಕೂಡಿದ್ದರೂ ಹೊರತಾದದ್ದು 3
13. ಮತ್ತೇರಿಸುವ ಮತ್ತೊಂದು ಊರು 3
14. ಮಣ ಭಾರದ ಗಂಡ 3
16. ಪಾರಿವಾಳಕ್ಕೆ ಹೊಂಚು ಹಾಕುವ ಪಕ್ಷಿ 3
18. ಪಡೆದ ಹಣಕ್ಕೆ ನೀಡುವ ಪುರಾವೆ 3
20. ಮನಸ್ಸಿಗೆ ಸಮಾಧಾನ ನೀಡುವ ಪ್ರವೃತ್ತಿ 3
21, ನಲಿದಾಡುವ ಮಯೂರ 3
22. ನಯದಿಂದ ಕೂಡಿದ ವಿನಮ್ರತೆ 3
23. ನಗರದಲ್ಲಿ ಈ ರೀತಿ ಚಲಿಸುವುದು ಪ್ರಧಾನ 3

ಎಡದಿಂದ ಬಲಕ್ಕೆ

1. ಜೈನರ ಮೊದಲ ಆರಾಧ್ಯದೈವ 4
3. ದುಡ್ಡಿಗಾಗಿ ಬಾಯಾರಿಕೆ 4
5. ಸತ್ಯ ಸ್ವಭಾವ 4
6. ಜೀವನದ ರಸವನ್ನು ಅನುಭವಿಸುವ ಕಲೆ 4
8. ಕೃಷ್ಣದೇವರಾಯನ ಆಸ್ಥಾನ ವಿದೂಷಕ 5
10. ಆಕಾದಲ್ಲಿ ಹಾರುವ ಪ್ಲೇನ್‌ಗಳ ತಿರುಗಾಟ 6
13. ಪ್ರಜಾಪ್ರಭುತ್ವದ ಸೂತ್ರ ಹಿಡಿದ ಧರ್ಮೀಯ 4
15. ಮಂಜುಗಡ್ಡೆಯ ಪರ್ವತ 4
17. ಮುಂಬಾಗಿಲಿಗೆ ಕಳೆ ಕಟ್ಟುವ ಹಸಿರೆಲೆಯ ಸಾಲು 6
19. ಜೊತೆಯಲ್ಲೇ ದೃಷ್ಟಿ ಹರಿಸಿ ಹೊರಡುವುದು 5
22. ಹಾಸ್ಯ ಮನರಂಜನೆಯ ಹುಡುಗಿ 4
24. ವಿವಾಹದ ಬಂಧನದಿಂದ ಕಾನೂನು ರೀತಿ ಬಿಡುಗಡೆ 4
25. ಹಂಚಿಕೆಯಲ್ಲಿ ವ್ಯತ್ಯಾಸವಿಲ್ಲದೆ ಸಿಗುವ ಭಾಗ 4
26. ಮೊದಲಿದ್ದ ಮೂಲ ಸ್ಥಳ 4



ಪದಬಂಧ ಉತ್ತರ -2920

ಮೇಲಿಂದ ಕೆಳಕ್ಕೆ

1.ಸಮಾನ 2.ಜವಾನ 3.ಸರೀಕ 4.ತಮಾಷ 7.ನಿರ್ಮಲಾ 9.ಗಾನ-ಗಂಧರ್ವ 11.ಕತ್ತಿ 13. ಸರಳ 14.ವೃಕ್ಷಸಂಪತ್ತು 15.ಸಹಿ 17.ಕಟುಕ 18.ಭೈರವ 19.ವಿದೇಹ 20.ಮುರುಕು 21.ಜಟಕಾ

ಎಡದಿಂದ ಬಲಕ್ಕೆ

1.ಸರಸಿಜ 3.ಸಮ್ಮತ 5.ವಾಗೀಶ್ವರೀ 6.ಮಾರ್ದನಿ 8.ನವಗಾನ 10.ಕಲ್ಮಷ 11.ಕಲಾ 12.ಉರಗಂ 13.ಸಹಸ್ರಾವೃತ್ತಿ 15.ಸರ್ವಮಂಗಳ 16.ಸಂಸಾರಿ 17.ಕಹಿ 18.ಭೈರವಿ 20.ಮುತ್ತುರಾಜ 22.ಕವೇರ 23.ದೇವದಾರು 24.ವರಾಹ 25.ಕುಠಾರಿಕಾ

ಅಚ್ಚುಕಟ್ಟಾದ ಚಿತ್ರೋತ್ಸವ ಗಮನ ಸೆಳೆದ ನಿರ್ದೇಶಕಿಯರು

ಸ್ಕಿನ್ ಆಫ್ ಯೂತ್'

ಸು ಫ್ರಮ್ ಸೋ

ಇಂಬು ಚಿತ್ರದ ದೃಶ್ಯ

• ಪ್ರೇಮಕುಮಾರ್ ಹರಿಯಬ್ಬೆ

ಗೋವಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಕಳೆದ ವಾರ ಮುಕ್ತಾಯವಾಯಿತು. ಎಂಟು ದಿನಗಳ ಚಿತ್ರೋತ್ಸವದಲ್ಲಿ 81 ದೇಶಗಳ 240 ಸಿನಿಮಾಗಳು ಪ್ರದರ್ಶನವಾದವು. ದಿನಕ್ಕೆ ನಾಲ್ಕೈದು ಸಿನಿಮಾಗಳನ್ನು ನೋಡಿ ಚಿತ್ರೋತ್ಸವದ ಗುಣಮಟ್ಟದ ಬಗ್ಗೆ ಒಂದೆರಡು ವಾಕ್ಯಗಳಲ್ಲಿ ಏನನ್ನೂ ಹೇಳಲು ಸಾಧ್ಯವಿಲ್ಲ. ಸಿನಿಮಾಗಳಲ್ಲಿ ವೈವಿಧ್ಯತೆ ಇತ್ತು. ಆಯಾ ಕಾಲ, ದೇಶಗಳ ಜನ ಜೀವನದ ಸೂಕ್ಷ್ಮಗಳಿದ್ದವು ಎಂದಷ್ಟೇ ಹೇಳಲು ಸಾಧ್ಯ. ನಿಬ್ಬೆರಗಾಗಿಸುವ ಸಿನಿಮಾ ಒಂದೂ ಇರಲಿಲ್ಲ.

ಆಶಿಯೇಗ್ ಮೇಫೇರ್

ಮಾರಿಯಾ ಎಲ್ಸಾ ಗುಲಾಡೊ

ಸಿನಿಮಾ ನಿರ್ಮಾಣದಲ್ಲಿ ಬಳಕೆಯಾಗುವ ತಂತ್ರಜ್ಞಾನದ ಹೊಸ ಆವಿಷ್ಕಾರಗಳು, ಕೃತಕ ಬುದ್ಧಿಮತ್ತೆ ಇತ್ಯಾದಿಗಳನ್ನು ಬಳಸಿಕೊಂಡು ಏಳೆಂಟು ದಶಕಗಳ ಹಿಂದಿನ ಸಂದರ್ಭಗಳನ್ನು ಈ ಕಾಲದ್ದು ಎಂಬಂತೆ ಕಟ್ಟಿಕೊಡುವುದು ಈಗ ಸುಲಭವಾಗಿದೆ.

ಸಮಕಾಲೀನ ವಿದ್ಯಮಾನಗಳಿಗೆ 2025ರ ಸಿನಿಮಾಗಳು ಸ್ಪಂದಿಸಿದವೇ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಹಲವು ದೇಶಗಳಲ್ಲಿ ಪ್ರಾಕೃತಿಕ ವೈಪರೀತ್ಯಗಳು ಸಂಭವಿಸಿದವು. ವಿಕ್ಷಿಪ್ತ ಮನಸ್ಥಿತಿಯ ರಾಜಕೀಯ ನಾಯಕರ ತಿಕ್ಕಲುತನದ ನಿರ್ಧಾರಗಳಿಂದ ಯುದ್ಧ, ಆರ್ಥಿಕ ಪಲ್ಲಟಗಳ ಜತೆಗೆ ಕೋಮುವಾದ, ಜನಾಂಗೀಯ ದ್ವೇಷ ಹೆಚ್ಚಾದವು. ಜನಜೀವನ ದುರ್ಭರವಾಯಿತು. ಈ ಕಟು ವಾಸ್ತವಗಳಿಗೆ ಸಿನಿಮಾಗಳು ಸ್ಪಂದಿಸುತ್ತವೆ ಎಂಬ ನಿರೀಕ್ಷೆ ಇಟ್ಟುಕೊಂಡವರಿಗೆ ನಿರಾಸೆಯಾಯಿತು.

ಇತ್ತೀಚಿನ ವರ್ಷಗಳಲ್ಲಿ ಸಿನಿಮಾ ನಿರ್ದೇಶನದತ್ತ ಮಹಿಳೆಯರ ಒಲವು ಹೆಚ್ಚಾಗಿದೆ. ಈ ವರ್ಷ ಸ್ಪರ್ಧಾ ವಿಭಾಗದಲ್ಲಿ ಇದ್ದ ಹದಿನೈದು ಸಿನಿಮಾಗಳಲ್ಲಿ ಏಳನ್ನು ನಿರ್ದೇಶಿಸಿದವರು ಮಹಿಳೆಯರು. ಚಿತ್ರೋತ್ಸವದ 50 ಸಿನಿಮಾಗಳನ್ನು ನಿರ್ದೇಶಿಸಿದ್ದು ಮಹಿಳೆಯರೇ. ಕಾಲ, ದೇಶಗಳನ್ನು ಮೀರಿದ ಮಹಿಳೆಯರ ವೈಯಕ್ತಿಕ ಮತ್ತು ಸಮುದಾಯದ ತಲ್ಲಣಗಳನ್ನು ಸಿನಿಮಾ ಚೌಕಟ್ಟಿನಲ್ಲಿ ಹೇಳುವ ಅವರ ಬದ್ಧತೆ ಮೆಚ್ಚುವಂಥದ್ದು. ವಿಶ್ವದೆಲ್ಲೆಡೆ ನಿತ್ಯ ನಡೆಯುವ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಗಳು, ಲಿಂಗ ತಾರತಮ್ಯ ಇನ್ನಿತರ ಸಮಸ್ಯೆಗಳನ್ನು ಸಿನಿಮಾ ಚೌಕಟ್ಟಿಗೆ ಪಳಗಿಸಿ ಹೇಳುವ ಕಸುಬುದಾರಿಕೆ ಜತೆಗೆ ತಮ್ಮದೇ ಆದ ಅಭಿವ್ಯಕ್ತಿ ಕ್ರಮವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ನಿರ್ದೇಶಕಿಯರು ಹೆಚ್ಚೆಚ್ಚು ಯಶಸ್ವಿ ಆಗುತ್ತಿದ್ದಾರೆ.

'ಸ್ಕಿನ್ ಆಫ್ ಯೂತ್'ಗೆ ಸ್ವರ್ಣ ಮಯೂರ ಫಲಕ

ಸ್ಪರ್ಧಾ ವಿಭಾಗದಲ್ಲಿ 15 ಸಿನಿಮಾಗಳಿದ್ದವು. ₹40 ಲಕ್ಷ ನಗದು ಪುರಸ್ಕಾರದ ಜತೆಗೆ ಸ್ವರ್ಣ ಮಯೂರ ಫಲಕವನ್ನು ಪಡೆದುಕೊಂಡಿದ್ದು

ಆಪ್ತವಾದ ಎರಡು ಸಿನಿಮಾಗಳು

ಸ್ಪರ್ಧಾ ವಿಭಾಗದ ಸಿನಿಮಾಗಳ ಪೈಕಿ ಹೆಚ್ಚು ಆಪ್ತವಾದವು ನೈಜೀರಿಯಾ ದೇಶದ 'ಮೈ ಫಾದರ್ ಶಾಡೊ' ಮತ್ತು ಇರಾಕ್‌ನ 'ಸಾಂಗ್ಸ್ ಆಫ್ ಅದಾಮ್'.

ಅಕಿನೋಲ ಡೇವಿಯೆಸ್ ಜೂನಿಯರ್, ಮೈ ಫಾದರ್ ಶಾಡೊದ ನಿರ್ದೇಶಕರು. ಇದು ಕಾನ್ ಚಿತ್ರೋತ್ಸವಕ್ಕೆ ಪ್ರವೇಶ ಪಡೆದ ಮೊದಲ ನೈಜೀರಿಯಾ ಸಿನಿಮಾ. ಅಕಿನೋಲ ಡೇವಿಯೆಸ್ ನೈಜೀರಿಯಾದ ಬಡತನ, ದೇಶದ ಸಾಂಸ್ಕೃತಿಕ ಪರಂಪರೆಗಳನ್ನು ಸಿನಿಮಾಗಳ ಮೂಲಕ ಹೇಳುವುದರಲ್ಲಿ ಆಸಕ್ತರು.

1993ರ ನೈಜೀರಿಯಾ ಅಧ್ಯಕ್ಷೀಯ ಚುನಾವಣೆ ಸಂದರ್ಭದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬರುವ ನಿರೀಕ್ಷೆ ಇಟ್ಟುಕೊಂಡ ಫೊಲಾರಿಯನ್ ಎಂಬ ನಡುವಯಸ್ಸಿನ ಆ್ಯಕ್ಟಿವಿಸ್ಟ್, ಹೆಂಡತಿ, ಮಕ್ಕಳಿಂದ ದೂರ ಇದ್ದವನು. ಚುನಾವಣೆಯ ಫಲಿತಾಂಶದ ದಿನ ತನ್ನ ಇಬ್ಬರು ಮಕ್ಕಳೊಂದಿಗೆ ರಾಜಧಾನಿ ಲೊಗೊಸ್‌ನಲ್ಲಿ ಒಂದು ದಿನವಿಡೀ ಕಳೆಯುವ ಹಿನ್ನೆಲೆಯಲ್ಲಿ ದೇಶದ ರಾಜಕಾರಣ, ನಿರುದ್ಯೋಗ, ಮಿಲಿಟರಿ ಆಡಳಿತ ದಬ್ಬಾಳಿಕೆಗಳನ್ನು ಅನಾವರಣಗೊಳಿಸುತ್ತದೆ.

ಇರಾಕ್‌ನ ಸಾಂಗ್ ಆಫ್ ಅದಾಮ್ 1943ರ ಕಾಲಘಟ್ಟದ ಕಥೆ. ಕಥೆಯ ಆಶಯ ಅಸಹಜ ಅನ್ನಿಸಿದರೂ, ನಿರ್ದೇಶಕ ಒದಯ್ ರಶೀದ್ ಬದಲಾಗುತ್ತಲೇ ಇರುವ ಜನ ಜೀವನ ಮತ್ತು ಸಾಮಾಜಿಕ, ರಾಜಕೀಯ ಸಂದರ್ಭಗಳನ್ನು ಹೇಳಲು ಬಳಸಿಕೊಂಡಿದ್ದಾರೆ.

ತನ್ನ ಅಜ್ಜನ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವ ಹನ್ನೆರಡು ವರ್ಷದ ಬಾಲಕ ಅದಾಮ್ ಹೆಣಕ್ಕೆ ಸ್ನಾನ ಮಾಡಿಸುವುದನ್ನು ನೋಡುತ್ತಾನೆ. ದೊಡ್ಡವನಾಗದೆ ಉಳಿದು ಬಿಡಲು ನಿರ್ಧರಿಸುತ್ತಾನೆ. ಅದಾಮ್‌ನ ಅಪ್ಪ ಅವನನ್ನು ಮನೆಯೊಂದರಲ್ಲಿ ಪ್ರತ್ಯೇಕವಾಗಿ ಇರಿಸುತ್ತಾನೆ. ಬೆಳವಣಿಗೆ ಕಾಣದ ಅದಾಮ್‌ನನ್ನು ಊರ ಜನ ಶಾಪಗ್ರಸ್ಥ ಎಂದು ಭಾವಿಸುತ್ತಾರೆ. ಕೆಲವು ವರ್ಷಗಳ ನಂತರ ಅದಾಮ್ ಮನೆಯಿಂದ ಹೊರ ಬಂದಾಗ ಅವನ ಗೆಳೆಯರು, ಕುಟುಂಬ ಸದಸ್ಯರು ಬೆಳೆದು ದೊಡ್ಡವರಾಗಿರುತ್ತಾರೆ. ಊರು ಬದಲಾಗಿರುತ್ತದೆ. ಸುತ್ತಲಿನ ಪರಿಸರ ಮತ್ತು ದೇಶದಲ್ಲಿ ಅನೇಕ ಬೆಳವಣಿಗೆಗಳಾಗಿರುತ್ತವೆ. ಅದಾಮ್‌ನ ಗೆಳೆಯ, ತಮ್ಮ ಕ್ರಮೇಣ ಮುದುಕರೂ ಆಗುತ್ತಾರೆ. ದೇಶದಲ್ಲಿ ಐಸಿಸ್ ಉಗ್ರರ ಚಟುವಟಿಕೆಗಳು ಆರಂಭವಾಗಿರುವುದನ್ನು ಅದಾಮ್ ಗಮನಿಸುತ್ತಾನೆ. ಎಲ್ಲವೂ ಬದಲಾದರೂ ಸಂಪ್ರದಾಯ, ಆಚರಣೆಗಳು ಹಾಗೇ ಇರುತ್ತವೆ ಎಂಬುದನ್ನು ಈ ಸಿನಿಮಾ ನಾಟಕೀಯವಾಗಿ ಹೇಳುತ್ತದೆ.

ಸ್ಪರ್ಧೆಯಲ್ಲಿದ್ದ ತಮಿಳಿನ 'ಅಮರನ್', ಮರಾಠಿಯ 'ಗೊಂಧಾಲ್' ಹಾಗೂ ಪನೋರಮಾ ವಿಭಾಗದ ಭಾರತೀಯ ಸಿನಿಮಾಗಳಲ್ಲಿ ವೈವಿಧ್ಯತೆ ಇತ್ತು. ಕನ್ನಡದ 'ಸು ಫ್ರಮ್ ಸೋ', 'ವನ್ಯ', ತುಳು ಭಾಷೆಯ 'ಇಂಬು' ಮತ್ತು ಮಧ್ಯ ಭಾರತದ ಸಾಂಪ್ರದಾಯಿಕ ಬ್ರಾಜ್ ಭಾಷೆಯ 'ವಿಮುಕ್ತ್' ಸಿನಿಮಾಗಳೂ ಗಮನ ಸೆಳೆದವು.

ಜಪಾನ್ ದೇಶದ 'ಸ್ಕಿನ್ ಆಫ್ ಯೂತ್' ಸಿನಿಮಾ. ಆಶಿಯೇಗ್ ಮೇಫೇರ್ ಚಿತ್ರದ ನಿರ್ದೇಶಕಿ. 90ರ ಕಾಲಘಟ್ಟದ ಈ ಚಿತ್ರದ ನಾಯಕಿ ಸ್ಯಾನ್. ಅವಳು ಲಿಂಗತ್ವ ಅಲ್ಪಸಂಖ್ಯಾತೆ, ಲೈಂಗಿಕ ಕಾರ್ಯಕರ್ತೆ. ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಹೆಣ್ಣಾಗುವ ಆಸೆ ಇಟ್ಟುಕೊಂಡವಳು. ಬಾಕ್ಸರ್ ಒಬ್ಬನಲ್ಲಿ ಅವಳು ಅನುರಕ್ತೆ. ಅವನು ಮತ್ತೊಬ್ಬಳಲ್ಲೂ ಆಸಕ್ತ. ಈ ಮೂವರ ನಡುವಣ ಬದುಕಿನ ಏರಿಳಿತಗಳನ್ನು ಸೂಕ್ಷ್ಮವಾಗಿ ಹೇಳುವ ಪ್ರಯತ್ನ ಚಿತ್ರದಲ್ಲಿದೆ. ಈ ಸಿನಿಮಾಕ್ಕೆ ಮೊದಲ ಪುರಸ್ಕಾರ ಸಿಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಜಗತ್ತಿನ ಮಹಿಳೆಯರು ಎದುರಿಸುವ ಪ್ರಮುಖ ಸಮಸ್ಯೆ ಎಂದರೆ ಅವರ ಮೇಲೆ ನಿರಂತರವಾಗಿ ನಡೆಯುವ ಲೈಂಗಿಕ ಹಲ್ಲೆ. ಇದು ಎಲ್ಲ ದೇಶ, ಕಾಲಗಳಲ್ಲೂ ಸಂಭವಿಸುವಂಥದ್ದು.

ಅತ್ಯಾಚಾರಿ ಅಪ್ಪನ ವಿರುದ್ಧ ನ್ಯಾಯಾಧೀಶರಿಗೆ ದೂರು ಕೊಡುವ ಬಾಲಕಿಯ ಧೈರ್ಯ ಮತ್ತು ದಿಟ್ಟತನವನ್ನು ಕಟ್ಟಿಕೊಡುವ ಜರ್ಮನಿಯ ಸಿನಿಮಾ 'ಕಾರ್ಲಾ'. 1962ರಲ್ಲಿ ಮ್ಯೂನಿಕ್ ನಗರದಲ್ಲಿ ನಡೆದ ನೈಜ ಘಟನೆ ಆಧರಿಸಿದ್ದು. ಕ್ರಿಸ್ಟಿನಾ ಟೂರ್ನಾಟ್ಜ್ಸ್ ಇದರ ನಿರ್ದೇಶಕಿ. ಇದು ಅವರ ಚೊಚ್ಚಲ ಸಿನಿಮಾ.

12 ವರ್ಷದ ಕಾರ್ಲಾ, ಮಹಿಳೆಯರ ಸಾಂತ್ವನ ಕೇಂದ್ರದಲ್ಲಿ ಇದ್ದುಕೊಂಡೇ ತನಗಾದ ಅನ್ಯಾಯವನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡುವ ಪ್ರಯತ್ನದಲ್ಲಿ ಯಶಸ್ವಿಯಾಗುವುದು ಸಿನಿಮಾದ ಕಥೆ. ಸರಿಯಾದ ಸಾಕ್ಷಿಗಳಿಲ್ಲ ಎಂಬ ಕಾರಣಕ್ಕೆ ತಳ್ಳಿಹಾಕುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಗಳಂತೆ ತನ್ನದೂ ಆಗಲು ಬಿಡದೆ ತಾರ್ಕಿಕ ಅಂತ್ಯಕ್ಕೆ ಒಯ್ಯುವ ಬಾಲಕಿಯ ದಿಟ್ಟತನ ಚಿತ್ರದ ಉದ್ದಕ್ಕೂ ಎದ್ದು ಕಾಣುತ್ತದೆ. 60 ವರ್ಷದ ಹಿಂದಿನ ಪ್ರಕರಣವನ್ನು ಈ ಕಾಲದ ಹೊಸ ಪ್ರಕರಣ ಎಂಬಂತೆ ನಿರ್ದೇಶಕಿ ಕಟ್ಟಿಕೊಟ್ಟಿದ್ದಾರೆ.

ಅತ್ಯಾಚಾರಕ್ಕೆ ಒಳಗಾಗಿ ಗರ್ಭಿಣಿಯಾಗುವ 15 ವರ್ಷದ ಎಮ್ಮಾಳ ಆತಂಕದ ಬದುಕು ಮತ್ತು ಸಮಾಜವನ್ನು ಎದುರಿಸುವ ಅವಳ ದಿಟ್ಟತನವನ್ನು ಕಟ್ಟಿಕೊಡುವ ಇನ್ನೊಂದು ಸಿನಿಮಾ ಬೆಲ್ಜಿಯಂ ದೇಶ 'ಸೈಲೆಂಟ್ ರೆಬೆಲಿಯನ್'. 2ನೇ ಮಹಾಯುದ್ಧ ಕಾಲದ ಘಟನೆ ಆಧರಿಸಿದ್ದು. ಮಾರಿಯಾ ಎಲ್ಸಾ ಗುಲಾಡೊ ಇದರ ನಿರ್ದೇಶಕಿ. ಗರ್ಭಿಣಿ ಎಮ್ಮಾ ಮತ್ತೊಬ್ಬನನ್ನು ಮದುವೆಯಾಗುತ್ತಾಳೆ. ಸಮಾಜದ ಉಪೇಕ್ಷೆ ಮತ್ತು ಗಂಡನ ಅತಿಯಾದ ಕಾಮಾಸಕ್ತಿ ಮತ್ತು ಕಿರುಕುಳಗಳಿಂದ ಬೇಸತ್ತ ಅವಳು ವಿಚ್ಛೇದನ ಪಡೆದು ಆರ್ಥಿಕ ಸ್ವಾವಲಂಬಿಯಾಗುವುದನ್ನು ಹೇಳುತ್ತದೆ. ಸಿನಿಮಾದ ನಾಯಕಿ ಈ ಕಾಲದ ಸಂತ್ರಸ್ತೆಯರಿಗೆ ಮಾದರಿ.

ಈಜಿಪ್ಟ್‌ನ 'ಹ್ಯಾಪಿ ಬರ್ತ್‌ಡೇ' ಮನೆಗೆಲಸದ ತೋಹಾ ಎಂಬ ಎಂಟು ವರ್ಷದ ಬಾಲಕಿಯ ಸೂಕ್ಷ್ಮ ಮನಸ್ಥಿತಿಯನ್ನು ಕಟ್ಟಿಕೊಡುವ ಸಿನಿಮಾ. ತೋಹಾ ತಾನು ಕೆಲಸ ಮಾಡುತ್ತಿದ್ದ ಮನೆಯ ಸದಸ್ಯೆ ಎಂಬಂತೆ ಸಹಜವಾಗಿ ಒಡನಾಡುವ ಚುರುಕು ಹುಡುಗಿ. ತನ್ನದೇ ವಯಸ್ಸಿನ ಮನೆಯ ಯಜಮಾನಿಯ ಮಗಳ ಹುಟ್ಟುಹಬ್ಬದ ಸಿದ್ಧತೆಯಲ್ಲಿ ತೊಡಗುತ್ತಾಳೆ. ಸಂಜೆ ಪಾರ್ಟಿ ಆರಂಭವಾಗುವ ಹೊತ್ತಿಗೆ ಯಜಮಾನಿ, ತೋಹಾಳನ್ನು ಅವಳ ತಾಯಿಯ ಅನಾರೋಗ್ಯದ ಬಗ್ಗೆ ಸುಳ್ಳು ಹೇಳಿ ಮನೆಯಿಂದ ಹೊರಕ್ಕೆ ಕಳಿಸುತ್ತಾಳೆ. ಆದರೂ ಪಾರ್ಟಿ ನಡೆಯುತ್ತಿರುವಾಗ ತೋಹಾ ಮನೆಗೆ ಬರುತ್ತಾಳೆ. ಶ್ರೀಮಂತ ಅತಿಥಿಗಳ ನಡುವೆ ಬಡ ಹುಡುಗಿ ತೋಹಾ ಕಾಣಿಸಿಕೊಳ್ಳಬಾರದೆಂದು ಯಜಮಾನಿ ಅವಳನ್ನು ಮತ್ತೆ ಮನೆಯಿಂದ ಹೊರ ಹಾಕುತ್ತಾಳೆ. ಬಡತನದ ಕಾರಣಕ್ಕೆ ಉಪೇಕ್ಷೆಗೆ ಒಳಗಾದೆ ಎಂಬ ವಾಸ್ತವ ತೋಹಾಳಿಗೆ ಅರ್ಥವಾಗುತ್ತದೆ. ಬಡವರ ಮಕ್ಕಳ ಅಸಹಾಯಕತೆಯನ್ನು ಸೂಕ್ಷ್ಮವಾಗಿ ಹೇಳುವ ಈ ಸಿನಿಮಾ ಹಲವು ಭಾವನಾತ್ಮಕ ಸನ್ನಿವೇಶಗಳಿಂದ ಗಮನ ಸೆಳೆಯುತ್ತದೆ.

ಅಪ್ಪ ಮತ್ತು ಇಬ್ಬರು ವಯಸ್ಕ ಹೆಣ್ಣುಮಕ್ಕಳ ನಡುವಿನ ಭಾವನಾತ್ಮಕ ಸಂಬಂಧಗಳನ್ನು ನವಿರಾಗಿ ನಿರೂಪಿಸುವ 'ಸೆಂಟಿಮೆಂಟಲ್ ವ್ಯಾಲ್ಯು', 2018ರಲ್ಲಿ ಚಿಲಿ ದೇಶದಲ್ಲಿ ನಡೆದ ಕಾಲೇಜು ವಿದ್ಯಾರ್ಥಿನಿಯರ ಫೆಮಿನಿಸ್ಟ್ ಚಳವಳಿಯನ್ನು ನಾಟಕೀಯವಾಗಿ ಕಟ್ಟಿಕೊಡುವ 'ವೇವ್', ಮಧ್ಯವಯಸ್ಸಿನ ಹೆಣ್ಣಿನ ತಾಯ್ತನದ ನಿರೀಕ್ಷೆ, ಹಂಬಲಗಳನ್ನು ಕಟ್ಟಿಕೊಡುವ ಆಸ್ಟ್ರೇಲಿಯಾದ 'ಮದರ್ಸ್ ಬೇಬಿ', ಸ್ಥಿರಚಿತ್ರಗಳ ಮೂಲಕವೇ ಅರಬ್ ದೇಶಗಳ ಮಹಿಳೆಯರ ಕಟ್ಟುಪಾಡಿನ ಹಲವು ಆಯಾಮಗಳನ್ನು ಹೇಳುವ 'ದಿ ವಿಷುಯಲ್ ಫೆಮಿನಿಸ್ಟ್ ಮ್ಯಾನಿಫೆಸ್ಟೊ' ಗಮನ ಸೆಳೆದ ನಿರ್ದೇಶಕಿಯರ ಸಿನಿಮಾಗಳು.

ಮುಂಬರುವ ವರ್ಷಗಳಲ್ಲಿ ನಿರ್ದೇಶಕಿಯರ ಸಿನಿಮಾಗಳ ಸಂಖ್ಯೆ ಹೆಚ್ಚಾಗುವ ಮತ್ತು ಮಹಿಳೆಯರ ಸಮಸ್ಯೆಗಳನ್ನು ಇನ್ನಷ್ಟು ಪರಿಣಾಮಕಾರಿ ನಿರೂಪಿಸುವ ಸಿನಿಮಾಗಳು ನಿರ್ಮಾಣವಾಗುವ ಸಾಧ್ಯತೆಗಳು ಹೆಚ್ಚಾಗಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಎನ್‌ಎಫ್‌ಡಿಸಿ ಹಿಂದಿನ ವರ್ಷಗಳ ಲೋಪಗಳನ್ನು ಸರಿಪಡಿಸಿಕೊಂಡು ಚಿತ್ರೋತ್ಸವವನ್ನು ಅಚ್ಚುಕಟ್ಟಾಗಿ ಸಂಘಟಿಸಿದ್ದು ಈ ವರ್ಷದ ವಿಶೇಷ. ❖

ಮೊದಲ ಓದು



ಮಹಾಯಾನ
ಲೇ: ಎಚ್.ಟಿ. ಪೋತೆ
ಪ್ರ: ಸಪ್ನ ಬುಕ್ ಹೌಸ್
ಸಂ: 080– 40114455

ಭೀಮ ನಡೆಯ ಕಲಾತ್ಮಕ ಹೋಳಿಗೆ 'ಮಹಾಯಾನ'

ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ವಿಚಾರ, ಅವರ ಒಲವು–ನಿಲುವುಗಳ ಸೈದ್ಧಾಂತಿಕ ವಿಷಯ ಆಧಾರಿತ ವಿಪುಲ ಸಾಹಿತ್ಯ ಪ್ರಕಟವಾಗಿದೆ. ಕಾವ್ಯ–ಕಥೆಯಂತಹ ಸೃಜನಶೀಲ ಮಾಧ್ಯಮದಲ್ಲಿಯೂ ಅಂಬೇಡ್ಕರ್ ಅನುಸಂಧಾನ ಸಾಕಷ್ಟು ಪ್ರಮಾಣದಲ್ಲಿ ಆಗಿದೆ. ಆದರೆ, ಕಾದಂಬರಿ ಮಾಧ್ಯಮದಲ್ಲಿ ಅದಾಗಿಲ್ಲ. ಪ್ರೊ.ಎಚ್.ಟಿ. ಪೋತೆ 'ಮಹಾಯಾನ'ದ ಮೂಲಕ ಅಂತಹ ಸಾಧ್ಯತೆಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ.

ಕೃತಿಕಾರರು ಈ ಕಥನವನ್ನು ಚಾರಿತ್ರಿಕ ದಾಖಲೆಯಂತೆ ನಿರೂಪಿಸಿಲ್ಲ. ವಸ್ತುವನ್ನು ಕಾವ್ಯಾತ್ಮಕ ಮಾಡುವ ಉದ್ದೇಶವೂ ಅವರಿಗಿಲ್ಲ. ಬಾಬಾಸಾಹೇಬರ ಬದುಕು–ಹೋರಾಟ ಸೃಷ್ಟಿಸಿರುವ ಮನೋತಲ್ಲಣ ಒಂದು ಕಾಲಕ್ಕೆ ಸೀಮಿತವಾಗುವುದಿಲ್ಲ. ಅದು ಅನುದಿನವೂ ಅನುರಣಿಸುತ್ತದೆ. ಅದು ಎದುರಿಸುವ ವೈರುಧ್ಯಗಳಿಗೆ ಲೇಖಕರು ಈ ಕಾದಂಬರಿಯಲ್ಲಿ ಹೊಸದೃಷ್ಟಿಯನ್ನು ಬೀರಿದ್ದಾರೆ.

ಬಾಬಾ ಸಾಹೇಬರ ಸಹಾಯಕ ರತ್ತು ಅನನ್ಯವಾಗಿ ಚಿತ್ರಿತವಾಗಿದ್ದಾರೆ. 'ಮಹಾಯಾನ'ವನ್ನು ರತ್ತು ದಟ್ಟವಾಗಿ ಆವರಿಸಿದ್ದಾರೆ. ಒಂದು ದಿನ ರಾತ್ರಿ ತಡವಾಗಿ ಮನೆಗೆ ಬರುತ್ತಾರೆ. ಸಹಜವಾಗಿ ಪತ್ನಿ ಅಮೃತಾ ಕೌರ್ ಏಕೆ ತಡ ಎಂದು ಕೇಳುತ್ತಾರೆ. ಆಗ ಸಾಹೇಬರು 'ಬುದ್ಧ ಮತ್ತು ಧಮ್ಮ' ಕೃತಿಯನ್ನು ಬರೆದು ಮುಗಿಸಿದ ಸಂಗತಿಯನ್ನೂ ಮತ್ತು 'ಥಾಟ್ಸ್ ಆನ್ ಪಾಕಿಸ್ತಾನ' ಕೃತಿಯನ್ನು ರಮಾಬಾಯಿಗೆ ಸಮರ್ಪಿಸಿದ್ದನ್ನು ಹೇಳುತ್ತಾರೆ. ಆಗ ತಾಯಿ ರಮಾಬಾಯಿಯ ಅನುಪಸ್ಥಿತಿಗೆ ಮರುಗುತ್ತಾರೆ. ಸಾಹೇಬರ ಓದು–ಬರಹದ ಮೇಲಿನ ಪ್ರೀತಿ ಪ್ರಕಟವಾಗುತ್ತದೆ. ಆಗ ಕೌರ್ ನಾನೇನು ಅಕ್ಷರ ಬಲ್ಲವಳೇ ಎಂದು ರಾಗ ತೆಗೆಯುತ್ತಾರೆ.

ತಕ್ಷಣ ರತ್ತು 'ರಾತ್ರಿ ಶಾಲೆಗೆ ಹೋಗಿ ಓದಬಹುದು. ಇದು ಹಳೆಯ ಕಾಲವಲ್ಲ, ಎಲ್ಲಾ ಹೆಣ್ಣುಮಕ್ಕಳು ಓದಬಹುದು, ಇದು ವೇದಾಗಮಗಳ ಕಾಲವೂ ಅಲ್ಲ, ಸಂವಿಧಾನದ ಕಾಲ, ಸಂವಿಧಾನದಲ್ಲೆ ಹಕ್ಕಿದೆ ಗೊತ್ತಿಲ್ಲೇನ' ಎಂದು ಹೇಳುತ್ತಾರೆ. ಆ ಮೂಲಕ ಅಂಬೇಡ್ಕರ್ ವಿಚಾರ ಸೃಷ್ಟಿಸಿರುವ ಸಾಮಾಜಿಕ ಪರಿವರ್ತನೆ ಮತ್ತು ಅವರು ಅನುಗಾಲವೂ ಪ್ರಸ್ತುತ ಆಗುತ್ತಿರುವ ಪರಿಯನ್ನು ಇದು ತಿಳಿಸುತ್ತದೆ.

ದುಂಡು ಮೇಜಿನ ಸಮ್ಮೇಳನದಲ್ಲಿ ಅಂಬೇಡ್ಕರ್ ಏನು ಮಾತನಾಡಿದರು ಎನ್ನುವುದನ್ನು ರತ್ತು ರಾವ್‌ಬಹದ್ದೂರ್ ಶ್ರೀನಿವಾಸ್ ಅವರ ಬಳಿ ಕೇಳುತ್ತಾರೆ. 'ಸಭೆಯಲ್ಲಿ ಸಿಂಹ ಗರ್ಜನೆ ಮೊಳಗಿದಂತೆ ಇತ್ತು' ಎಂದು ಹೇಳುತ್ತಿದ್ದರೆ, ರತ್ತು ಮೈಯಲ್ಲಾ ಕಿವಿಯಾಗಿಸಿ ಆಲಿಸುತ್ತಾರೆ. ಸಾಹೇಬರು ಬ್ರಾತೃತ್ವ–ಸಮಾನತೆಯ ಸ್ವಾತಂತ್ರ್ಯವನ್ನು ಬಯಸಿದರು ಎನ್ನುವ ವಿವರವನ್ನು ರಾವ್ ನೀಡುತ್ತಾರೆ.

ಒಮ್ಮೆ ಬಾಬಾ ಸಾಹೇಬರು, 'ಏನಪ್ಪ ರತ್ತು ನನ್ನನ್ನೇ ನೋಡುತ್ತಿದ್ದೀಯಾ? ಅಂಥದೇನು ಬದಲಾವಣೆ ಆಗಿದೆ ನನ್ನ ಮುಖದಲ್ಲಿ' ಎಂದು ಕೇಳುತ್ತಾರೆ. 'ಮುಖದಲ್ಲಿ ರಾಜಕಳೆ ಕಾಣುತ್ತಿದೆ' ಎನ್ನುವುದು ರತ್ತು ಪ್ರತಿಕ್ರಿಯೆ. ರತ್ತು ಹೊಗಳುವುದನ್ನು ಬಿಟ್ಟುಬಿಡು. 'ನನ್ನ ಕೆಲಸ ತೃಪ್ತಿ ತಂದರೆ ಸಾಕು' ಎಂದು ದುಂಡು ಮೇಜಿನ ಸಮ್ಮೇಳನ ಕುರಿತ ಅವರ ಚರ್ಚೆಗೆ ಅಂಬೇಡ್ಕರ್ ಅಂತ್ಯ ಹಾಡುತ್ತಾರೆ. ಅಂತೆಯೇ ಪೂನಾ ಒಪ್ಪಂದಕ್ಕೂ ಮೊದಲಿನ ರಾಜಕೀಯ ಮತ್ತು ಆ ನಂತರದ ಸನ್ನಿವೇಶವನ್ನೂ ಹೇಳುತ್ತಾರೆ. ಅಂಬೇಡ್ಕರ್ ಬದುಕಿನ ಮಹತ್ವದ ಎಲ್ಲ ಘಟನೆಗಳನ್ನೇ ಹೂರಣವಾಗಿಸಿ ಕಲಾತ್ಮಕ ಕಣಕದಲ್ಲಿ 'ಮಹಾಯಾನ' ಎಂಬ ಹೋಳಿಗೆಯನ್ನು ಪೋತೆ ಅವರು ನೀಡಿದ್ದಾರೆ. ❖

ಪುಟ: 690 ₹750

ಕಥೆ

ಸ್ಮಿತಾ ಅಮೃತರಾಜ್ ಸಂಪಾಜೆ ಅವರ
ಮುಟ್ಟಾಗದವಳು

prajavani.net/short-story

ಕವನ

ಭಾಗ್ಯ ವಸು ಅವರ
ಲೋಕದ ಜೀವಾಂತಃಕರಣ ಬಟ್ಟಲು ಖಾಲಿ

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಹಾರಿದ ಸ್ನೇಹಿತೆ!

ಗುಂಡ ಡ್ರೋನ್‌ನಲ್ಲಿ ಆಟವಾಡುತ್ತಿದ್ದ. ಆಕಾಶದೆತ್ತರಕ್ಕೆ ಹೋಗಿದ್ದ ಡ್ರೋನ್ ಅನ್ನು ಮೆಲ್ಲನೆ ಕೆಳಗಿಳಿಸುತ್ತಿದ್ದ. ಆ ಸಂದರ್ಭದಲ್ಲೇ ತನ್ನ ಸ್ನೇಹಿತೆ ಬಂದಿರುವುದನ್ನು ಗಮನಿಸಿದ ಗುಂಡ ಕೈಮುಂದಕ್ಕೆ ಚಾಚಿ ಡ್ರೋನ್ ಹಿಡಿಯಲು ಹೇಳಿದ. ಆಕೆ ಆ ಡ್ರೋನ್ ಹಿಡಿಯುತ್ತಿದ್ದಂತೇ ಡ್ರೋನ್ ಮೇಲಕ್ಕೆ ಹಾರುವ ಬಟನ್ ಅನ್ನು ಗುಂಡ ಒತ್ತಿದ. ಡ್ರೋನ್ ಜೊತೆಗೆ ಆಕೆಯೂ ಕೊಂಚ ಮೇಲಕ್ಕೆ ಹಾರಿದಾಗ ಗುಂಡ ನಕ್ಕ.



ಡಗ್ಗ ಚಕ್ಕು ಕೇಶ್ರ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ನಗು	+	ಗಾಣ	+	ಜಿ	=	
2	ಪಾನ	+	ರಜ	+	ಅ	=	
3	ಸೇತು	+	ನಾಕ	+	ಡಿ	=	
4	ಪದ	+	ಹಿಟ್ಟು	+	ಡಿ	=	
5	ಲೋಪ	+	ಯೋಗಿ	+	ಕೋ	=	

ಸಣ್ಣಾಟ

123, 456, 789, 101112 ಹೀಗೆ ಮುಂದುವರಿಸಿ ಈ ಸರಣಿಯನ್ನು. ಇದರಲ್ಲಿ ಯಾವುದೇ ಮೂರು ಕ್ರಮ ಸಂಖ್ಯೆ ತೆಗೆದುಕೊಂಡು ಅದನ್ನು 3ರಿಂದ ಭಾಗಿಸಿದರೆ ಪೂರ್ಣಭಾಗವಾಗುತ್ತದೆ.

ಉದಾ: 789/3 = 263

ಕೊಂಚ–ತಂತ್ರ

ಗಜ್ಜರಿಯಲ್ಲಿರುವ 4 ಜೀವಸತ್ವಗಳ ಹೆಸರನ್ನು ಹೀಗೆ ಸುಲಭವಾಗಿ ನೆನಪಿಡಬಹುದು.

KDCBD (ಕೆಡಿಸಿಬಿಡಿ) –ಇವೆಲ್ಲವೂ ಜೀವಸತ್ವಗಳು

ಗಣಿತದಲ್ಲಿ ಗರ್ದಿಗಮ್ಮತ್ತು

ದೊಡ್ಡಾಟ: ಶೇಷ–ವಿಶೇಷ ಆಟ

3ಕ್ಕಿಂತ ದೊಡ್ಡದಿರುವ ಯಾವುದೇ ಅವಿಭಾಜ್ಯ ಸಂಖ್ಯೆ ತೆಗೆದುಕೊಳ್ಳಿ. ಅದನ್ನು ಅದೇ ಸಂಖ್ಯೆಯಿಂದ ಗುಣಿಸಿ. (ಅಂದರೆ ವರ್ಗಸಂಖ್ಯೆ ಮಾಡಿ) ಬಂದ ಉತ್ತರಕ್ಕೆ 3 ಕೂಡಿಸಿ, 8ರಿಂದ ಭಾಗಿಸಿದರೆ ಶೇಷ ಯಾವಾಗಲೂ 4 ಬರುತ್ತದೆ. ಆಡಿ ನೋಡಿ.

ಉದಾ 1:
7
X 7
49
+ 3
8) 52 (6
48
4 -ಶೇಷ

ಉದಾ 2:
11
11
121
3
8) 124 (15
8
44
40
4 -ಶೇಷ

ಶಬ್ದಾಟ

ಇಲ್ಲಿರುವ ಮೂರಕ್ಷರ ಪದಕ್ಕೆ ಇನ್ನೊಂದು ಅಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಬೇರೊಂದು ಪದ ಮಾಡಿ.

ಬೆತ್ತಲೆ + ತೆ =

ಪದ–ವಿನೋದ

ಇಲ್ಲಿ ಕೊಟ್ಟಿರುವ ಪದಗಳನ್ನು ಓದಿ ನೋಡಿ. ಎಡದಿಂದ ಓದಿದರೆ ಒಂದು ಪದ, ಬಲದಿಂದ ಓದಿದರೆ ಇನ್ನೊಂದು ಪದವಾಗುತ್ತದೆ.

1.ಕಲಿಮಾನವ
2.ಕೆರಿಏರದ
3.ಸುಳಿಇರದ

ಮೋಜಿನ ಇಂಗ್ಲಿಷ್

ಕೆಳಗೆ ಕೊಟ್ಟಿರುವ INK ಪದದ ಹಿಂದೆ ಕೆಲವು ಅಕ್ಷರಗಳನ್ನು ತುಂಬಿ 10 ಇಂಗ್ಲಿಷ್ ಪದಗಳನ್ನು ಮಾಡಿ.

1		I	N	K
2		I	N	K
3		I	N	K
4		I	N	K
5		I	N	K
6		I	N	K
7		I	N	K
8		I	N	K
9		I	N	K
10		I	N	K

ಜಾಣಪದ ಆಟ

'ನಾ' ಎಷ್ಟು ಬಲ್ಲೆ? 'ನೀ' ಎಷ್ಟು ಬಲ್ಲೆ?

ಇಲ್ಲಿ ಕೊಟ್ಟಿರುವ 'ನಾ' ಹಾಗೂ 'ನೀ' ಅಕ್ಷರಗಳಿಗೆ ಹೊಂದುವಂತೆ ಅಕ್ಷರ ಪಟ್ಟಿಯಿಂದ ಆಯ್ದು ಇನ್ನೊಂದು ಅಕ್ಷರ ತುಂಬಿ ಅರ್ಥಬದ್ಧ ಎರಡಕ್ಷರ ಪದರಚಿಸಿ.

1	ನಾ	
2	ನಾ	
3	ನಾ	
4	ನಾ	
5	ನಾ	
6	ನಾ	
7	ನಾ	
8	ನಾ	
9	ನಾ	
10	ನಾ	

ಅಕ್ಷರಪಟ್ಟಿ	
ವು	ಲಿ
ರು	ರೆ
ನು	ಗ
ಕ	ಚು
ನು	ಡು
ತಿ	ದ
ಟು	ಳ
ಚ	ಡು
ತ	ರು
ಮ	ಗು

1	ನೀ	
2	ನೀ	
3	ನೀ	
4	ನೀ	
5	ನೀ	
6	ನೀ	
7	ನೀ	
8	ನೀ	
9	ನೀ	
10	ನೀ	

2.ಇಲ್ಲಿ ಕೊಟ್ಟಿರುವ 'ಸಭಾ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಸ	ಭಾ		
2	ಸ	ಭಾ		
3	ಸ	ಭಾ		
4	ಸ	ಭಾ		
5	ಸ	ಭಾ		

ಅಕ್ಷರಪಟ್ಟಿ

ಸ	ಗ	ದ	ತ್ಯಾ	ತಿ
ಪ	ಕ್ಷ	ಧ್ಯ	ಹ	ಗೃ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕಾಲಹರಣ 2.ಕಲಬೆರಕೆ 3.ಸಾವಿರಕೋಟಿ 4.ಪಶುಪಾಲನೆ 5.ರಾಜನಡಿಗೆ
ಪದಬದಲಾಟ: ಆ ನಟಿ ನೋಟ
ಶಬ್ದಾಟ: ಕಡಲೆಬೇಳೆ
ಗೋಜು–ಮೋಜು: 4.5
ಜಾಣಪದ ಆಟ 1: 1.ಶಿವರಾಮ ಕಾರಂತ, 2.ಬೇಂದ್ರೆ, 3.ಕುವೆಂಪು, 4.ಯು.ಆರ್.ಅನಂತಮೂರ್ತಿ, 5.ಗೋವಿಂದ ಪೈ., 6.ಟಿ. ಪಿ.ಕೈಲಾಸಂ, 7.ಡಿ.ವಿ.ಗುಂಡಪ್ಪ
ಜಾಣಪದ ಆಟ 2: 1.ಪ್ರತಿಬಿಂಬ, 2.ಪ್ರತಿರೂಪ, 3.ಪ್ರತಿರೋಧ, 4.ಪ್ರತಿವಾದ, 5.ಪ್ರತಿಷ್ಠಿತ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಧವನ್ ಕೆ.ಜಿ.ಕಂಟಲಗೆರೆ, ಚಿಕ್ಕನಾಯಕನಹಳ್ಳಿ

ಸನ್ಮಿತ ಎಸ್. ಮಂಡ್ಯ

ವಿಶಿಷ್ಟ ಪೂರ್ಣ ರಾವ್ ಚಿಕ್ಕಮಗಳೂರು

ಸಂಸ್ಕೃತಿ ಎಂ.ಎಸ್. ಮೈಸೂರು

ವಚನಶ್ರೀ ಹೂಗಾರ ಕಲಬುರಗಿ

ದೀಪಾ ಓಂ.ರೇವಣ್ಣವರ ವಿಜಯಪುರ

ಸಿಂಗಪುರದಲ್ಲಿ ಏನೇನ್ ಕಂಡೆ...

ಇದು ದೊಡ್ಡ ದೇಶವೇನಲ್ಲ. ಈ ದ್ವೀಪ ರಾಷ್ಟ್ರ ಇರುವುದೇ 735 ಚದರ ಕಿಲೋಮೀಟರ್. ಅಂದರೆ 49 ಕಿಲೋಮೀಟರ್ ಅಗಲ, 28 ಕಿಲೋಮೀಟರ್ ಉದ್ದ. ಅತ್ಯಂತ ಸುರಕ್ಷಿತ, ಸುಸಜ್ಜಿತವಾಗಿರುವ ಇಲ್ಲಿನ ನಗರದಲ್ಲಿ ನಾಲ್ಕು ದಿನ ಕಳೆದು ತಮ್ಮ ಅನುಭವ ಹಂಚಿಕೊಂಡಿದ್ದಾರೆ ಲೇಖಕರು. ಜೊತೆಗೆ ಯೂನಿವರ್ಸಲ್ ಸ್ಟುಡಿಯೋಸ್, ಗಾರ್ಡನ್ ಬೈದಿ ಬೇ, ಮರಿನಾ ಬೇ ಸ್ಯಾಂಡ್ಸ್ ಹೀಗೆ ಹಲವು ಪ್ರದೇಶಗಳನ್ನು ಸುತ್ತಿದ ನೆನಪಿನ ಪಟಗಳನ್ನೂ ಇಲ್ಲಿ ತೆರೆದಿಟ್ಟಿದ್ದಾರೆ.

• ವಿ.ಶ್ರೀನಿವಾಸ

ಪ್ರವಾಸ

ಅದು ಎಸ್.ಎಂ.ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕಾಲ. ವಿದೇಶದಲ್ಲಿ ಕಲಿತು, ಹಲವಾರು ದೇಶಗಳನ್ನು ಕಂಡಿದ್ದ ಅವರು 'ಬೆಂಗಳೂರನ್ನು ಸಿಂಗಪುರದಂತೆ ಮಾಡಬೇಕು' ಎಂಬ ತಮ್ಮ ಮನದಾಸೆಯನ್ನು ಬಹಿರಂಗವಾಗಿ ಹೇಳಿದರು. ಆಗ ಸಿಂಗಪುರದ ಬಗ್ಗೆ ಒಂದಷ್ಟು ಮಾಹಿತಿ ಪತ್ರಿಕೆಗಳ ತುಂಬಾ ವಿಜೃಂಭಿಸಿತು. ಆಗಲೇ ಸಿಂಗಪುರ ಹೇಗಿದೆ ಎಂದು ನೋಡಬೇಕೆಂಬ ಕನಸು ನನ್ನಲ್ಲೂ ಸುಪ್ತವಾಗಿತ್ತು ಎನಿಸುತ್ತದೆ. ಪಾಸ್‌ಪೋರ್ಟ್ ಮಾಡಿಸಿ, ವಿದೇಶ ಪ್ರಯಾಣದ ತಯಾರಿ ನಡೆಸುತ್ತಿದ್ದಾಗ ಸಿಂಗಪುರ ನಮ್ಮ 'ಬಕೆಟ್ ಲಿಸ್ಟ್' ನಲ್ಲಿ ಅಗ್ರಸ್ಥಾನ ಪಡೆದಿತ್ತು. (ಇದು ಈಗಿನ ಭಾಷೆ. ಆಗ ಬಕೆಟ್ಟೂ ಇರಲಿಲ್ಲ, ಲಿಸ್ಟೂ ಇರಲಿಲ್ಲ). ಎಸ್.ಎಂ.ಕೃಷ್ಣ ಅವರ ಬೆಂಗಳೂರನ್ನು ಸಿಂಗಪುರದಂತೆ ಮಾಡುವ ಕನಸಿನ ಯೋಜನೆಗೆ ಸಿಕ್ಕ ಸಹಕಾರಕ್ಕಿಂತ ಆಡಿಕೊಂಡು ನಕ್ಕವರೇ ಹೆಚ್ಚು. ಈಗಿನ ಭಾಷೆಯಲ್ಲಿ ಹೇಳುವುದಾದರೆ, ಅದರ ಬಗೆಗಿನ ಟ್ರೋಲ್‌ಗಳು ವೈರಲ್ ಆಗಿದ್ದವು.

ಸಿಂಗಪುರ ಎಂದರೆ ಅಲ್ಲಿಯ ರಸ್ತೆಗಳು, ಶುಚಿತ್ವ ಮುಂತಾದ ಬಾಹ್ಯ ಲಕ್ಷಣಗಳ ಬಗ್ಗೆ ಮಾತ್ರ ಹೆಚ್ಚು ಪ್ರಚಾರವಾಗಿ, 'ಅಷ್ಟೇನಾ?' ಎಂದು ಭಾವಿಸುವವರೇ ಹೆಚ್ಚು. ವ್ಯಕ್ತಿಯ ಸೌಂದರ್ಯವೆಂದರೆ ಮುಖದ ಮೇಕಪ್ಪು, ಸೆಂಟು, ಬಟ್ಟೆ ಮಾತ್ರವಲ್ಲ. ವ್ಯಕ್ತಿಯ ದೈಹಿಕ ಸೌಷ್ಟವ ಹಾಗೂ ಮಾನಸಿಕ ಆರೋಗ್ಯ ಹೇಗೆ ಮುಖ್ಯವಾಗುತ್ತದೋ ಹಾಗೆ ಒಂದು ನಗರಕ್ಕೂ, ಒಂದು ದೇಶಕ್ಕೂ ರಸ್ತೆಗಳು, ಕಟ್ಟಡಗಳು ಮಾತ್ರ ಮಾನದಂಡವಲ್ಲ.

ಉನ್ನತ ಸ್ಥಾನ ಪಡೆಯುವುದಕ್ಕಿಂತ, ಸತತವಾಗಿ ಅದೇ ಸ್ಥಾನವನ್ನು ಕಾಯ್ದುಕೊಳ್ಳುವುದು ಬಹಳ ಕಷ್ಟ. ಅಲ್ಲಿಯ ಗೈಡ್ ಪದೇ ಪದೇ ಹೆಮ್ಮೆಯಿಂದ ಹೇಳಿಕೊಳ್ಳುವಂತೆ ಸಿಂಗಪುರ ಅತ್ಯಂತ ಸುರಕ್ಷಿತ ನಗರ. ಅಪರಾಧ ಪ್ರಕರಣಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಪ್ರಮಾಣದಲ್ಲಿವೆ. ಕಠಿಣ ಕಾನೂನುಗಳು, ಅವುಗಳ ಕಟ್ಟುನಿಟ್ಟಿನ ಅನುಷ್ಠಾನದ ಜೊತೆಗೆ ಅಪರಾಧಗಳ ಬಗೆಗೆ ಸಾಮಾಜಿಕ ಅರಿವು ಇದನ್ನು ಸಾಧಿಸಲು ಸಾಧ್ಯವಾಗಿದೆ. ಅತಿ ಹೆಚ್ಚು ಮಿಲಿಯನಿಯರ್‌ಗಳಿರುವ ಶ್ರೀಮಂತ ದೇಶ. ಒಬ್ಬೊಬ್ಬರೂ ಹತ್ತಾರು ಕಾರು, ಬಂಗಲೆಗಳನ್ನು ಕೊಳ್ಳಬಲ್ಲವರಾದರೂ, ಅಲ್ಲಿ ವಾಹನ ದಟ್ಟಣೆ ಇಲ್ಲ. ಏಕೆಂದರೆ ಕಾರುಗಳನ್ನು ಕೊಳ್ಳಲು ನಿಮ್ಮ ಬಳಿ ಹಣವಿದ್ದರೆ ಸಾಲದು. ಸರ್ಕಾರದ ಅನುಮತಿ ಬೇಕು. ಅದಕ್ಕಾಗಿ ದುಬಾರಿ ಶುಲ್ಕ ತೆರಬೇಕು. ಅದಕ್ಕಿಂತ ಮುಖ್ಯವಾಗಿ ನಗರದ ಧಾರಣಶಕ್ತಿಗನುಗುಣವಾಗಿ ಸರ್ಕಾರ ಕಾರುಗಳ ಸಂಖ್ಯೆಯನ್ನು ಮಿತಿಗೊಳಿಸಿದೆ. ಸಾರ್ವಜನಿಕ ಸಂಚಾರ ವ್ಯವಸ್ಥೆಗಳಾದ ಬಸ್ಸು, ಮೆಟ್ರೊಗಳನ್ನು ಹೆಚ್ಚು ಹೆಚ್ಚು ಜನಪ್ರಿಯಗೊಳಿಸಿದೆ.

ಮುಖ್ಯ ವಿಷಯವೆಂದರೆ, ದೇಶವು ಭ್ರಷ್ಟಾಚಾರ ಮುಕ್ತವಾಗಿದ್ದು ಜನರ ಶಿಕ್ಷಣ, ಆರೋಗ್ಯ ಸೇವೆಗಳಿಗೆ ಹೆಚ್ಚಿನ ಮಹತ್ವವನ್ನು ಸರ್ಕಾರ ನೀಡುತ್ತಿದೆ. ಸಿಂಗಪುರ ಇರುವುದೇ 735 ಚದರ ಕಿಲೋಮೀಟರ್. ಅಂದರೆ 49 ಕಿಲೋಮೀಟರ್ ಅಗಲ, 28 ಕಿಲೋಮೀಟರ್ ಉದ್ದದ ಪುಟ್ಟ ದ್ವೀಪ. ಸ್ವಲ್ಪ ಸ್ವಲ್ಪ ಸಮುದ್ರವನ್ನು ಒತ್ತುವರಿ ಮಾಡಿಕೊಂಡು ಬೆಳೆದಿದೆಯಾದರೂ, ಅತ್ತ ರಾಮನಗರ, ಇತ್ತ ತುಮಕೂರು ಎಲ್ಲವನ್ನೂ ಒತ್ತರಿಸಿಕೊಂಡು ಗ್ರೇಟರ್ ಬೆಂಗಳೂರಿನಂತೆ ಬೆಳೆಯಲು ಸಿಂಗಪುರಕ್ಕೆ ಸಾಧ್ಯವಿಲ್ಲ. ನಾವು ಭೇಟಿ ನೀಡಿದಾಗ, 1965 ಆಗಸ್ಟ್ 9 ರಂದು ಸ್ವತಂತ್ರ ಪಡೆದ ಸಿಂಗಪುರ ತನ್ನ 60ನೇ ವರ್ಷದ ಜನ್ಮದಿನದ ಸಂಭ್ರಮಾಚರಣೆಯ ತಯಾರಿಯಲ್ಲಿತ್ತು.

ಮೊದಲಿಗೆ ಸಿಂಗಪುರದ ಲಾಂಛನ 'ಮರ್ಲಯನ್' ತೋರಿಸುತ್ತಾರೆ. ಸಿಂಹದ ತಲೆ, ಮೀನಿನ ದೇಹವಿರುವ ಬಿಳಿ ಪ್ರತಿಮೆಯದು. ಸಿಂಗಪುರಕ್ಕೆ ಹೋಗಿದ್ದರ ನೆನಪಿಗಾಗಿ ಅದರೊಂದಿಗೆ ಫೋಟೊ ಶೂಟ್‌ಗಾಗಿ ಪ್ರವಾಸಿಗರು ನೆರೆದಿರುತ್ತಾರೆ. ಅದರ ಸುತ್ತಲೂ ಇರುವ ಅನೇಕ ಬಹುಮಹಡಿ ಕಟ್ಟಡಗಳಲ್ಲಿ ಪ್ರಪಂಚದ 130ಕ್ಕೂ ಹೆಚ್ಚು ದೇಶಗಳ ಎಲ್ಲ ಪ್ರಮುಖ ಬ್ಯಾಂಕುಗಳ ಶಾಖೆಗಳು ಕಾರ್ಯನಿರ್ವಹಿಸುವ ಫೈನಾನ್ಷಿಯಲ್ ಸಿಟಿ ಕಾಣುತ್ತದೆ. ಸತತವಾಗಿ ಅತ್ಯುನ್ನತ ಸ್ಥಾನವಾದ 'ಎಎಎ' ರೇಟಿಂಗ್ ಪಡೆದಿರುವ ಏಷ್ಯಾದ ಏಕೈಕ ದೇಶವಿದು.

ಬಿಡಿ ಬಿಡಿಯಾದ ಮೂರು ಗಗನಚುಂಬಿ ಕಟ್ಟಡಗಳ ಮೇಲೆ ಒಂದು ಹಡಗಿನಾಕಾರ ಜೋಡಿಸಿರುವ ಸಿಂಗಪುರದ ಐಕಾನಿಕ್ 'ಮರಿನಾ ಬೇ ಸ್ಯಾಂಡ್ಸ್' ಮೇಲಿನಿಂದ ನಗರದ ವಿಹಂಗಮ ನೋಟ ಕಣ್ತುಂಬಿಕೊಳ್ಳಬಹುದು. ಅಲ್ಲಿ ಐಷಾರಾಮಿ ಹೋಟೆಲಿನಲ್ಲಿ ವಾಸ್ತವ್ಯ ಇರುವವರಿಗಷ್ಟೇ ಮೇಲ್ಛಾವಣಿಯಲ್ಲಿರುವ ಈಜುಕೊಳ ಬಳಕೆ ಭಾಗ್ಯವಿದೆ. ನಂತರ ಕ್ಲೌಡ್ ಫಾರೆಸ್ಟ್ ಹಾಗೂ ಫ್ಲವರ್ ಡೋಂ ಎಂಬ ಬೃಹತ್ ಜೋಡಿ ಗ್ರೀನ್ ಹೌಸ್ ಡೋಂಗಳಿಗೆ ಭೇಟಿ ನೀಡಿದೆ. ಹೆಸರೇ ಹೇಳುವಂತೆ ಒಂದರಲ್ಲಿ ಮಳೆ ಕಾಡು, ಅದರಲ್ಲಿ ಅತಿ ಎತ್ತರದ ಕೃತಕ ಒಳಾಂಗಣ ಜಲಪಾತ, ಡೈನೋಸಾರ್ ಪ್ರತಿಮೆ ಇಲ್ಲಿಯ ಮುಖ್ಯ ಆಕರ್ಷಣೆ. ಇನ್ನೊಂದರಲ್ಲಿ ಬಗೆ ಬಗೆಯ ಹೂಗಳು. ನಂತರ ಪಕ್ಕದಲ್ಲಿರುವ 'ಗಾರ್ಡನ್ ಬೈದಿ ಬೇ'ಗೆ ಭೇಟಿ. ಇಲ್ಲಿ ಎತ್ತರದ ಮರಗಳ ಆಕಾರದ ಮೆಟಲ್ ರಚನೆಗಳ ಮೇಲೆ ಬಣ್ಣ ಬಣ್ಣದ ಲೈಟ್ ಶೋ ಕಾರ್ಯಕ್ರಮ ನೋಡಿದೆವು. ಇದು ಸಿಂಗಪುರದ ವಿಶೇಷ.

ಮರುದಿನ ಒಂದಿಡೀ ದಿವಸ 'ಯೂನಿವರ್ಸಲ್ ಸ್ಟುಡಿಯೋಸ್' ಪ್ರವಾಸ. ದುಬಾರಿ ಪ್ರವೇಶ ಶುಲ್ಕವಿದ್ದರೂ ಸದಾ ಜನ ಜಂಗುಳಿಯಿಂದ ತುಂಬಿರುತ್ತದೆ. ಹತ್ತು-ಹದಿನೈದು ನಿಮಿಷಗಳ ಒಂದೊಂದು ಶೋಗಳಿಗೂ ಒಂದರಿಂದ ಎರಡು ಗಂಟೆ, ಎರಡೂವರೆಗಂಟೆ ಸರತಿ ಸಾಲುಗಳಲ್ಲಿ ನಿಂತು ಕಾಯಬೇಕು.

ಮೂರನೇ ದಿನ 'ಸಂಟೋಸ ಐಲೆಂಡ್'ಗೆ ಮೊನೊ ರೈಲು, ಕೇಬಲ್ ಕಾರುಗಳ ಮೂಲಕ ಹೋಗುವ ಅನುಭವ. ಸಂಟೋಸ ಎಂದರೆ ನಮ್ಮ ಕನ್ನಡದ 'ಸಂತೋಷ' ಎಂದೇ ಅರ್ಥವಂತೆ. ಅಲ್ಲಿ ಆಟವಾಡಲು ಅನೇಕ ಥೀಮ್ ಪಾರ್ಕ್‌ಗಳೂ, ಬೀಚ್, ಮೇಡಂ ಟುಸಾಡ್ಸ್, ಬಂಜೀ ಜಂಪ್, ತಿಂಡಿ ತಿನಿಸುಗಳ ಅಂಗಡಿಗಳು, ಒಟ್ಟಿನಲ್ಲಿ ಮನರಂಜನಾ ದ್ವೀಪವದು. ತಮಗೆಲ್ಲ ತಿಳಿದಿರುವಂತೆ ಮೇಡಂ ಟುಸಾಡ್ಸ್‌ನಲ್ಲಿ ಖ್ಯಾತ ವ್ಯಕ್ತಿಗಳ ಯಥಾವತ್ ಮೇಣದಪ್ರತಿಮೆಗಳೊಂದಿಗೆ ಫೋಟೊ ತೆಗೆದುಕೊಳ್ಳುವ ಸಂಭ್ರಮ. ಸಂಜೆ ಬೀಚಿನಲ್ಲಿ 'ವಿಂಗ್ಸ್ ಆಫ್ ಫೈರ್' ಎಂಬ ಸ್ಥಳೀಯ ಜನಪದ ಕತೆಯ ರೂಪಕ, ಬೃಹತ್ ಲೇಸರ್ ಶೋ ಅಲ್ಲಿಯ ಪ್ರಮುಖ ಆಕರ್ಷಣೆ. ಸಿಂಗಪುರದ ಚೈನಾಟೌನ್ ಲಿಟಲ್ ಇಂಡಿಯಾ ಅಲ್ಲಿಯ ಸ್ಟ್ರೀಟ್ ಫುಡ್‌ಗಳ ಬಗ್ಗೆ ಕೇಳಿದ್ದೆ. ಆದರೆ ಸಮಯದ ಮಿತಿಯಿಂದಾಗಿ ಅಲ್ಲಿಗೆ ಹೋಗಲಾಗಲಿಲ್ಲ.

'ಫೈನ್ ಸಿಟಿ' ಅರ್ಥಾತ್ 'ದಂಡದ ನಗರ' ಎಂದು ಹೆಸರಾಗಿರುವ ಸಿಂಗಪುರದಲ್ಲಿ ಎಲ್ಲವೂ ಹೊರಗಿನಿಂದ ಬರಬೇಕಾಗಿರುವುದರಿಂದ ಪ್ರತಿ ವಸ್ತುವೂ ದುಬಾರಿ. ಎಲ್ಲ ಹೋಟೆಲ್‌ಗಳಲ್ಲೂ ತಿನ್ನದೇ ಬಿಡುವ ಆಹಾರಕ್ಕೆ ದಂಡ ವಿಧಿಸುತ್ತಾರೆ ಎಂದು ನಮ್ಮ ಗೈಡ್ ಮೊದಲೇ ಎಚ್ಚರಿಸಿದ್ದರು. ಅಂತೂ ಸಿಂಗಪುರದ 'ನಾಕು ದಿನದ ಬದುಕಿನಲಿ' ಹೊಂದಿಕೊಂಡು, ಯಾವುದೇ ದಂಡವಿಲ್ಲದೆ ಬಂದೆವು! 'ನಮ್ಮ ಮದುವೆ ಮನೆಗಳಲ್ಲೂ ಹೀಗೇ ದಂಡ ಹಾಕ್ಬೇಕು ಕಣ್ರೀ' ಎಂದು ಜೊತೆಗಿದ್ದವರೊಬ್ಬರು ಆಹಾರ ವ್ಯರ್ಥವಾಗುವುದರ ಬಗ್ಗೆ ಕಾಳಜಿಯಿಂದ ಮತ್ತೊಬ್ಬರಿಗೆ ಹೇಳುತ್ತಿದ್ದರು. ❖

ಒಳಾಂಗಣದಲ್ಲಿನ ಬೃಹತ್ ಜಲಪಾತ



ಗಾರ್ಡನ್ ಬೈದಿ ಬೇ

ಗಿಡಗಳಲ್ಲಿ ಜೀವತಳೆದ 'ಡೆಸ್ಪಿಕೇಬಲ್ ಮಿ' ಸಿನಿಮಾದ ಪಾತ್ರಗಳು

ಯೂನಿವರ್ಸಲ್ ಸ್ಟುಡಿಯೊದಲ್ಲಿ ಹೆಜ್ಜೆ ಹಾಕುತ್ತಾ...

ADVERTORIAL

'ಇಟ್ಸ್ ಟೈಮ್ ಫಾರ್ ಆಫ್ರಿಕಾ!'

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ದಕ್ಷಿಣ ಆಫ್ರಿಕಾವನ್ನು 'ಕಾಮನಬಿಲ್ಲಿನ ದೇಶ' (ರೈನ್‌ಬೋ ನೇಷನ್) ಎಂದೆನ್ನುವುದು ಬಹಳ ಅರ್ಥವತ್ತಾಗಿದೆ. ವೈವಿಧ್ಯಮಯ ಜನಸಮುದಾಯಗಳು, ಸಂಸ್ಕೃತಿಗಳು, ಸಂಪ್ರದಾಯಗಳ ಜೊತೆಗೆ ಬಗೆಬಗೆಯ ಭೂಪ್ರದೇಶಗಳು, ವರ್ಣಗಳು ಹಾಗೂ ಸ್ವಾದಗಳು ಒಂದೆಡೆ ಬೆರಗು ಮೂಡಿಸುವಂತೆ ಸಂಯೋಜನೆಗೊಂಡಿರುವುದೇ ಇದಕ್ಕೆ ಕಾರಣವಾಗಿದೆ. ಪರ್ವತಗಳು ಸಾಗರಗಳನ್ನು, ಮರುಭೂಮಿಗಳು ದ್ರಾಕ್ಷಿತೋಟಗಳನ್ನು, ಸಾಹಸೋದ್ವೇಗವು ಸಂಪೂರ್ಣ ಪ್ರಶಾಂತತೆಯನ್ನು ಸಂಧಿಸುವ ನಾಡು ಇದಾಗಿದೆ. ಒಂದೇ ಕಡೆ ಇಂತಹ ವೈರುಧ್ಯಗಳನ್ನು ತನ್ನೊಡಲಲ್ಲಿ ಅಡಗಿಸಿಕೊಂಡಿರುವ ಬೇರೊಂದು ದೇಶವನ್ನು ಹೆಸರಿಸುವುದು ಕಷ್ಟವೇ ಸರಿ.

ಪ್ರಪಂಚದಲ್ಲಿನ ನನ್ನ ಅಚ್ಚುಮೆಚ್ಚಿನ ನಗರಗಳನ್ನು ಪಟ್ಟಿ ಮಾಡಿದರೆ, ಅದರಲ್ಲಿ ಖಂಡಿತವಾಗಿಯೂ ಕೇಪ್‌ಟೌನ್ ಅಗ್ರಸ್ಥಾನದಲ್ಲಿರುತ್ತದೆ. ಕೆಲವು ನಗರಗಳು ನಮಗೆ ಕ್ರಮೇಣ ಆಪ್ತವಾಗುತ್ತವೆ. ಆದರೆ, ಕೇಪ್‌ಟೌನ್ ಹಾಗಲ್ಲ; ಕಾಲಿಡುತ್ತಿದ್ದಂತೆಯೋ ಅದು ನಮ್ಮನ್ನು ಸೆಳೆದುಬಿಡುತ್ತದೆ. ಆಫ್ರಿಕಾ ಭೂಖಂಡದ ದಕ್ಷಿಣದ ತುತ್ತುತುದಿಯಲ್ಲಿರುವ ಈ ನಗರವು ಪರ್ವತಗಳು, ಸಾಗರ ಜಲರಾಶಿ ಹಾಗೂ ವೈವಿಧ್ಯಮಯ ಸಂಸ್ಕೃತಿಯಿಂದ ಹೃದಯದಲ್ಲಿ ಅಚ್ಚಳಿಯದ ಮುದ್ರೆಯೊತ್ತುತ್ತದೆ. ಒಂದೊಮ್ಮೆ, ಗುಡ್ ಹೋಪ್ ಭೂಶೃಂಗವನ್ನು ಸುತ್ತುವರಿದು ಸಾಗುತ್ತಿದ್ದ ನಾವಿಕರಿಗೆ ಉಪಾಹಾರ–ಪಾನೀಯಗಳನ್ನು ಸೇವಿಸಿ ನವೋಲ್ಲಾಸ ಮೂಡಿಸಿಕೊಳ್ಳಲು ನಿಲುಗಡೆ ತಾಣವಾಗಿದ್ದ ಈ ನಗರದಲ್ಲಿ ಶತಮಾನಗಳ ಹಿಂದಿನ ಅದೇ ಆಪ್ತತೆಯನ್ನು ಹಾಗೂ ಸ್ಫೂರ್ತಿಯುತ ಬರಮಾಡಿಕೊಳ್ಳುವಿಕೆಯನ್ನು ಈಗಲೂ ಕಾಣಬಹುದಾಗಿದೆ.

ಈ ನಗರವು ನೋಡುಗರಿಗೆ ಅನನ್ಯ ಅನುಭವಗಳನ್ನು ನೀಡುವ ಗಣಿಯೇ ಹೌದು. ಸಂರಕ್ಷಕನಂತೆ ಮುಗಿಲೆತ್ತರಕ್ಕೆ ತಲೆಯೆತ್ತಿನಿಂತಿರುವ ಟೇಬಲ್ ಮೌಂಟೇನ್, ಮಂಡೇಲಾ ಅವರ ಕ್ಷಮತೆಯನ್ನು ಪ್ರತಿಧ್ವನಿಸುವ ರಾಬನ್ ಐಲ್ಯಾಂಡ್, ವಿವಿಧ ವರ್ಣಗಳ ನಿವಾಸಗಳು ಹಾಗೂ ಮಸಾಲೆ ಪರಿಮಳಕ್ಕೆ ಹೆಸರಾದ ಬೋ–ಕಾಪ್, ಒಂದು ಬದಿಯಲ್ಲಿ ಅಟ್ಲಾಂಟಿಕ್, ಮತ್ತೊಂದು ಬದಿಯಲ್ಲಿ ಹಿಂದೂ ಮಹಾಸಾಗರ, ಉಸಿರು ಬಿಗಿಹಿಡಿಯುವಂತೆ ಮಾಡುವ ಕರಾವಳಿಯ ತಿರುವುಗಳು ಇವುಗಳಿಂದಾಗಿ ಈ ನಗರವು ಮಹಾನ್ ಕಲಾವಿದನೊಬ್ಬ ರಚಿಸಿದ ವರ್ಣಚಿತ್ರವೇನೋ ಎಂಬಂತೆ ಭಾಸವಾಗುತ್ತದೆ; ಪ್ರಾಕೃತಿಕ ವಿಸ್ಮಯದಿಂದ ಮೂಕವಿಸ್ಮಿತರನ್ನಾಗಿಸುತ್ತದೆ.

ಇಲ್ಲಿ ವಿಂಟೇಜ್ ಮೋಟಾರ್ ಸೈಕಲ್ಲಿನ ಸೈಡ್‌ಕಾರ್‌ನಲ್ಲಿ ಸವಾರಿ ಕುಳಿತು ನಗರವನ್ನು ಸುತ್ತಾಡಿದ್ದು ನನಗೆ ಖುಷಿ ನೀಡುವ ನೆನಪುಗಳಲ್ಲಿ ಒಂದಾಗಿದೆ. ತಲೆಗೂದಲನ್ನು ತೀಡುವ ಗಾಳಿಯ ಬೀಸು, ಸಾಗರದ ಮೇಲಿನಿಂದ ತೇಲಿಬರುವ ಲವಣ ಮಿಶ್ರಿತ ತಂಗಾಳಿ, ಹಿನ್ನೆಲೆಯಲ್ಲಿ ಟೇಬಲ್ ಮೌಂಟನ್ ಇವು ಮೋಹಕ ಚೆಲುವು ಹಾಗೂ ಸಾಹಸಗಳು ಸಮಸಮವಾಗಿ ಮೇಳೈಸಿದ ಹಿಂದಿನ ಕಾಲದ ಸಿನಿಮಾದ ದೃಶ್ಯವನ್ನು ಕಣ್ಮುಂದೆ ತರಿಸುತ್ತವೆ. ಯಾಟ್ ಸವಾರಿ ಮಾಡುತ್ತಾ ಶಾಂಪೇನ್‌ನಿಂದ ಗಂಟಲನ್ನು ಒದ್ದೆಯಾಗಿಸಿಕೊಳ್ಳುತ್ತಿರುವಾಗ ಪಶ್ಚಿಮ ದಿಗಂತದಲ್ಲಿ ಸೂರ್ಯನು ಸಾಗರದ ನೀರಿನಲ್ಲಿ ಕರಗಿ ಕತ್ತಲು ಆವರಿಸಿದ್ದು ನಾನು ಮರೆಯಲಾಗದ ಕ್ಷಣಗಳಾಗಿವೆ. ಹೊಂಬಣ್ಣದಿಂದ ಕಂಗೊಳಿಸುತ್ತಿದ್ದ ಸಾಗರ ಜಲರಾಶಿಯು ರಕ್ತವರ್ಣಕ್ಕೆ ತಿರುಗಿ ನಂತರ ನೋಡನೋಡುತ್ತಿರುವಂತೆಯೇ ಇಡೀ ಪ್ರಪಂಚವೇ ಸ್ತಬ್ಧಗೊಂಡಂತೆನ್ನಿಸಿದ ಗಳಿಗೆಗಳವು.

ಕೇಪ್‌ಟೌನ್‌ನ ಆಚೆ ಅನತಿ ದೂರದಲ್ಲೇ ಪ್ರಪಂಚ ಪ್ರಸಿದ್ಧ ವೈನ್ ಪ್ರಾಂತ್ಯಗಳಾದ ಸ್ಟೆಲ್ಲನ್‌ಬೋಷ್ ಮತ್ತು ಫ್ರಾನ್ಸ್‌ಹೂಕ್ ಇವೆ. ವಿಶಿಷ್ಟ ಬನಿಯ ಶೆನಿ ಬ್ಲಾಂಕ್‌ನಿಂದ ಹಿಡಿದು ಪಿನೊಟೇಜ್‌ವರೆಗೆ ಈ ದೇಶದ ವೈನ್‌ಗಳ ಗಮ್ಮತ್ತೇ ಬೇರೆ. ಸುಮ್ಮನೆ ಒಂದು ಗುಟುಕು ಗಂಟಲಿಗಿಳಿಸೋಣವೆಂದು ಕುಳಿತರೆ ಅದು ಸುದೀರ್ಘವಾಗಿ ವಿಸ್ತರಿಸಿಬಿಡುತ್ತದೆ. ಕಾಲವು ಸಾವಧಾನ ತಾಳುತ್ತದೆ, ಮಾತುಕತೆಗಳು ಹೃದಯಗಳನ್ನು ಹತ್ತಿರವಾಗಿಸುತ್ತವೆ ಹಾಗೂ ವರ್ಣ ಕಲಾಕೃತಿಯೊಂದು ಜೀವಂತಿಕೆ ತಳೆದಿರುವಂತೆ ಭಾಸವಾಗುತ್ತದೆ.

ದಿ ಗಾರ್ಡನ್ ರೂಟ್

ಕೇಪ್‌ಟೌನ್‌ನ ಸೊಬಗಿನದ್ದು ಒಂದು ಮಜಲಾದರೆ, ಗಾರ್ಡನ್ ರೂಟ್‌ನಲ್ಲಿ ಡ್ರೈವ್ ಮಾಡುತ್ತಾ ಸಾಗುವಾಗಿನ ವಿಶಿಷ್ಟ ನೋಟಗಳ ಅನಾವರಣ ಮತ್ತೊಂದು ಮಜಲು; ಇಲ್ಲಿ ಹಸಿರು ಕಾಡುಗಳು, ಕಡಲ ದಂಡೆಯ ಪ್ರಶಾಂತ ಉಪ್ಪುನೀರಿನ ಕೊಳಗಳು, ಕಡಿದಾದ ಪರ್ವತ ಶೃಂಗಗಳು ಹಾಗೂ ಲವಲವಿಕೆಯ ಪಟ್ಟಣಗಳಿಗೆ ನಾವು ಸಾಕ್ಷಿಯಾಗುತ್ತೇವೆ. ಇಲ್ಲೂ ಎಡಬದಿ ವಾಹನ ಚಾಲನೆಯಾದ್ದರಿಂದ ಭಾರತದ ಪ್ರವಾಸಿಗರಿಗೆ ಇದು ಇನ್ನಷ್ಟು ಅನುಕೂಲಕರವೆನ್ನಿಸುತ್ತದೆ.

ಪೋರ್ಚುಗೀಸ್ ಅನ್ವೇಷಕನಾದ ಬಾರ್ಟೊಲೊಮೆಉ ಡಯಾಸ್ 1488ರಲ್ಲಿ ಬಂದಿಳಿದ ಕರಾವಳಿ ದಂಡೆಯ ಮೊಸೆಲ್ ಬೇ, ಚರಿತ್ರೆ ಹಾಗೂ ಸಮುದ್ರ ತಟದ ಮಾಯೆ ಇವೆರಡೂ ಸಂಯೋಜನೆಗೊಂಡಿರುವ ಪಟ್ಟಣವಾಗಿದೆ. ನೈಸ್ನಾದಲ್ಲಿ ಮರಳುಗಲ್ಲಿನ ಕಡಿದಾದ ಶೃಂಗಗಳ ನಡುವಿನ ನೀಲಿ ಬಣ್ಣದಿಂದ ಕಂಗೊಳಿಸುವ ಉಪ್ಪುನೀರಿನ ಕೊಳದ ಮುಂದೆ ನಿಂತಾಗ ಕನಸಿನ ಲೋಕವೇ ಧರೆಗಿಳಿದಿರುವಂತೆ ತೋರುತ್ತದೆ. ಇನ್ನು ಅಲ್ಲಿನ ತಾಜಾ ಆಯಿಸ್ಟರ್‌ಗಳ (ಒಂದು ಬಗೆಯ ಮೃದ್ವಂಗಿಗಳು) ಸವಿಯಂತೂ ನಾನು ಚಪ್ಪರಿಸಿರುವ ರುಚಿಗಳ ಪೈಕಿ ಅತ್ಯುತ್ಕೃಷ್ಟವಾದವುಗಳಲ್ಲಿ ಒಂದೆನ್ನಬಹುದು. ಶಾಂತಿಯನ್ನೇ ಹೊದ್ದುಕೊಂಡಂತೆ ವಿರಾಜಮಾನವಾಗಿರುವ ಜಾರ್ಜ್‌ನಲ್ಲಿನ ಪರ್ವತಗಳ ನೋಟವು ಪ್ರಯಾಣಕ್ಕೆ ಒಂದಷ್ಟು ವಿರಾಮ ನೀಡಲು ಪ್ರೇರೇಪಿಸಿ ನಿಸರ್ಗದ ಚೆಲುವಿನಲ್ಲಿ ಮೀಯಿಸುತ್ತದೆ

ಸಾಹಸ ಪ್ರಿಯರನ್ನು ಕೂಡ ಕೈಬೀಸಿ ಕರೆಯುವ ಮಾರ್ಗ ಇದಾಗಿದೆ. ಬ್ಲೌಕ್ರಾನ್ಸ್ ಬ್ರಿಡ್ಜ್‌ನಲ್ಲಿ ಪ್ರಪಂಚದ ಅತ್ಯಂತ ಎತ್ತರದ ಕಮರ್ಷಿಯಲ್ ಬಂಜೀ ಜಂಪಿಂಗ್‌ನ ರೋಮಾಂಚನ ಅನುಭವಿಸಿದೆ. ಭಯ ಹಾಗೂ ರೋಮಾಂಚನದ ಪರಾಕಾಷ್ಠೆ ಬೆರೆತ ಚಿರಂತನ ನೆನಪು ಅದಾಗಿದೆ. ನಂತರ, ಕಡಲ ದಂಡೆಯುದ್ದಕ್ಕೂ ನಿಶ್ಶಬ್ದ ಪರಿಸರದಲ್ಲಿ ಅಲೆಗಳ ನಡುವಿನಿಂದ ಪುಳಕ್ಕನೆ ಮೇಲೇಳುವ ತಿಮಿಂಗಲಗಳನ್ನು ನೋಡುತ್ತಾ ಸಾಗುವುದು ಆಧ್ಯಾತ್ಮಿಕ ಅನುಭೂತಿಯುಂಟು ಮಾಡುತ್ತದೆ.

ಔಟ್ಸೋರ್ನ್‌ನಲ್ಲಿರುವ ಆಸ್ಟ್ರಿಚ್ ಫಾರ್ಮ್ ಆಸಕ್ತಿದಾಯಕ. ಗಂಟೆಗೆ 70 ಕಿ.ಮೀ. ವೇಗದವರೆಗೂ ಓಡಬಲ್ಲ ಆಸ್ಟ್ರಿಚ್ ಹಕ್ಕಿಯ ಒಂದು ಮೊಟ್ಟೆ 10 ಜನರ ಹಸಿವನ್ನು ತಣಿಸಬಲ್ಲದು ಎಂಬುದು ಅಲ್ಲಿ ನನಗೆ ಗೊತ್ತಾಯಿತು. ಆ ಪಕ್ಷಿಯ ದೊಡ್ಡಗಾತ್ರದ ಮೊಟ್ಟೆಯೊಂದನ್ನು ಕೈಯಲ್ಲಿ ಹಿಡಿದಾಗ ಪ್ರಕೃತಿಯ ಅದ್ಭುತವೊಂದನ್ನು ಅಂಗೈಯಲ್ಲಿ ಹಿಡಿದಿಟ್ಟುಕೊಂಡಿರುವಂತೆ ಅನ್ನಿಸಿತು.

ಇಂತಹ ದಕ್ಷಿಣ ಆಫ್ರಿಕಾವು ಸಫಾರಿ ವೇಳೆ ಕಾಣಸಿಗುವ 'ಬಿಗ್ ಫೈವ್' ಎಂದೇ ಕರೆಸಿಕೊಳ್ಳುವ ಸಿಂಹ, ಚಿರತೆ, ಆನೆ, ಘೇಂಡಾಮೃಗ, ಕಾಡೆಮ್ಮೆಗಳ ನೆಲೆಯೂ ಹೌದು. ಹಾಗೆಯೇ 'ಮರೀನ್ ಫೈವ್' ಎಂದೇ ಗುರುತಾದ ತಿಮಿಂಗಿಲ, ಡಾಲ್ಫಿನ್, ಶಾರ್ಕ್, ಸೀಲ್, ಪೆಂಗ್ವಿನ್‌ಗಳ ಆವಾಸ ಸ್ಥಾನವೂ ಆಗಿದೆ. ಜೊತೆಗೆ, 'ಲಿಟ್ಲ್ ಫೈವ್' (ಆಂಟ್ ಲಯನ್, ಲೆಪರ್ಡ್ ಟಾರ್ಟಾಯೀಸ್, ಎಲಿಫೆಂಟ್ ಶ್ರೂ, ಬಫೆಲೊ ವೀವರ್, ರೈನೊ ಬೀಟ್) ಎನ್ನಲಾಗುವ ವಿಶಿಷ್ಟ ಐದು ಪುಟ್ಟ ಪ್ರಾಣಿಗಳ ಸಂಕುಲವೂ ಇದೆ; ಇಲ್ಲಿ ಇವುಗಳ ನೋಟವನ್ನು ಅರಸುವುದು ವನ್ಯಸಿರಿಯ ಅನುಭವವನ್ನು ಹೆಚ್ಚಿಸುವಂತಹ, ಆದರೆ ತಾಳ್ಮೆಯನ್ನು ಬೇಡುವ ಸವಾಲಾಗಿರುತ್ತದೆ

ವನಸಿರಿಯ ಕ್ರೂಗರ್ ಮತ್ತು ಪಿಲಾನ್ಸ್‌ಬರ್ಗ್

ದಕ್ಷಿಣ ಆಫ್ರಿಯಾದ ಯಾವುದೇ ಪ್ರವಾಸವೂ ಸಫಾರಿ ಇಲ್ಲದೆ ಪೂರ್ತಿ ಎನ್ನಿಸಿಕೊಳ್ಳುವುದಿಲ್ಲ. ಪ್ರಪಂಚದಲ್ಲಿರುವ ಅದೆಷ್ಟೋ ದೇಶಗಳಿಗಿಂತ ವಿಶಾಲವಾಗಿರುವ ಕ್ರೂಗರ್ ರಾಷ್ಟ್ರೀಯ ಉದ್ಯಾನವು ನಿಬ್ಬೆರಗಾಗಿಸುವ ವನ್ಯ ಸಂಪನ್ಮೂಲಕ್ಕೆ ಹೆಸರಾಗಿದೆ. ಇಲ್ಲಿ ಪ್ರತಿ ಸಫಾರಿಯೂ ಕಾಡಿನ ಹೊಸದೊಂದು ಮುಖದ ದರ್ಶನ ಮಾಡಿಸುತ್ತದೆ; ಪ್ರತಿ ಗಳಿಗೆಯೂ ವಿಶಿಷ್ಟ ನೋಟ ಎದುರಾಗುವ ಸಾಧ್ಯತೆಗಳಿಂದ ಕೂಡಿರುತ್ತದೆ.

ಜ್ವಾಲಾಮುಖಿಯಿಂದುಂಟಾದ ಕುಳಿಯಲ್ಲಿರುವ ಪಿಲಾನ್ಸ್‌ಬರ್ಗ್‌ನ ಮೋಡಿ ವಿಭಿನ್ನವಾದುದು. ಸಮೃದ್ಧ ವನಸಿರಿಯ ಈ ತಾಣವು ಕುಟುಂಬ ಪ್ರವಾಸ, ಹನಿಮೂನ್ ಹಾಗೂ ಕಾರ್ಪೊರೇಟ್ ತಂಡಗಳ ಪ್ರವಾಸಕ್ಕೆ ಹೇಳಿಮಾಡಿಸಿದಂತಿದೆ. ಹೀಗೆ, ದಕ್ಷಿಣ ಆಫ್ರಿಕಾವು ಹನಿಮೂನಿಗರ ಸ್ವರ್ಗವಾಗಿ, ಸಾಹಸಿಗರನ್ನು ಕೈಬೀಸಿ ಕರೆಯುವ ನಾಡಾಗಿ ಹಾಗೂ ತಂಡ ಪ್ರವಾಸಗಳಿಗೆ ಸೂಕ್ತ ಪ್ರದೇಶವಾಗಿ ಎಲ್ಲ ವಯೋಮಾನದವರನ್ನೂ ಬರಮಾಡಿಕೊಳ್ಳುತ್ತದೆ.

ಪಿಲಾನ್ಸ್‌ಬರ್ಗ್‌ನಲ್ಲಿನ ಸೂರ್ಯೋದಯದ ಬಿಸಿಗಾಳಿ ಬಲೂನು ಸಫಾರಿಯು ನನ್ನ ಮೇಲೆ ಗಾಢವಾಗಿ ಮೋಡಿ ಮಾಡಿದ್ದನ್ನು ಮರೆಯಲಾಗದು. ಈ ವೇಳೆಯಲ್ಲಿ ಪ್ರಾಣಿಗಳು ಅತ್ಯಂತ ಚಟುವಟಿಕೆಯಿಂದಿರುವುದನ್ನು ಕಾಣುತ್ತಾ ನಿಶ್ಶಬ್ದವಾಗಿ ಸಾಗುವಾಗ ಕಲ್ಪಿತ ಲೋಕದಲ್ಲಿ ತೇಲುತ್ತಿದ್ದೇವೇನೋ ಎನ್ನಿಸುತ್ತದೆ. ಅರಣ್ಯದಲ್ಲಿ ಆನೆ, ಸಿಂಹ, ಹುಲ್ಲೆಗಳನ್ನು ನೋಡುವಾಗ ಯಾವ ಸ್ಪರ್ಶವೂ ಸೋಂಕದ ನಿಸರ್ಗದ ರಮಣೀಯತೆ ಎದೆಗೆ ಇಳಿದಂತಾಗುತ್ತದೆ. ಇಲ್ಲಿ ಸಂಭ್ರಮಾಚರಣೆಯ ಸಂಕೇತವಾಗಿ ನೀಡಿದ ಪಾನೀಯ, ಆಪ್ತತೆ ತುಳುಕಿಸಿದ ಉಪಾಹಾರ ಹಾಗೂ ಫ್ಲೈಟ್ ಸರ್ಟಿಫಿಕೇಟ್‌ಗಳು ನನ್ನ ಅನುಭವವನ್ನು ಇನ್ನಷ್ಟು ಸ್ಮರಣೀಯವಾಗಿಸಿದವು.

ಡರ್ಬನ್‌ನಲ್ಲಿ ಭಾರತದ ಸ್ವಾದ

ಡರ್ಬನ್‌ನಲ್ಲಿ ಸವಿದ ಬನಿ ಚೌ ಸ್ವಾದಿಷ್ಟವಾಗಿತ್ತು. ಇದು ಬ್ರೆಡ್ ಸ್ಲೈಸಿನ ಮಧ್ಯೆ ಮಸಾಲೆಯುಕ್ತ ಕರ್ರಿಯನ್ನು ಹೂರಣವಾಗಿ ಇರಿಸಿ ಸಿದ್ಧಪಡಿಸುವ ಖಾದ್ಯವಾಗಿದೆ. ಹಿಂದೆ ಕಬ್ಬಿನ ಗದ್ದೆಗಳ ಕೂಲಿಯಾಳುಗಳಿಗೆ ಬುತ್ತಿಯ ಊಟಕ್ಕಾಗಿ ಡರ್ಬನ್‌ನಲ್ಲಿನ ಭಾರತೀಯ ಸಮುದಾಯದವರು ಕಂಡುಹಿಡಿದ ಆಹಾರವಿದು. ಸದ್ಯ ದಕ್ಷಿಣ ಆಫ್ರಿಕಾದ ಹೆಗ್ಗುರುತಿನ ಖಾದ್ಯ ಇದಾಗಿದೆ. ಅಲ್ಲಿ ಅದರ ರುಚಿಯು ಭಾರತದ ಖಾದ್ಯವನ್ನು ಸವಿದ ಭಾವನೆ ಮೂಡಿಸಿತು.

ಹೋರಾಟ ಹಾಗೂ ಸ್ವಾತಂತ್ರ್ಯದ ಕಥನಗಳು

ದಕ್ಷಿಣ ಆಫ್ರಿಕಾದ ಆತ್ಮವು ಅದರ ಚರಿತ್ರೆ ಹಾಗೂ ಕ್ಷಮತೆಯಲ್ಲಿ ಹುದುಗಿದೆ. ಇಲ್ಲಿ ನೆಲ್ಸನ್ ಮಂಡೇಲಾ ಅವರು ನೆನಪಿಗೆ ಬಾರದೆ ಪ್ರವಾಸ ಸಾಧ್ಯವೇ ಇಲ್ಲ. ಮಂಡೇಲಾ ತಮ್ಮ 27 ವರ್ಷಗಳ ಸೆರೆವಾಸದ ಪೈಕಿ 18 ವರ್ಷಗಳನ್ನು ಕಳೆದ ರಾಬನ್ ಐಲ್ಯಾಂಡ್‌ನಲ್ಲಿ ನಿಂತಾಗ ಹೃದಯವು ವಿನಮ್ರತೆ ಹಾಗೂ ಭಾವನೆಗಳ ಹೊನಲಾಗುತ್ತದೆ.

ಅಂತೆಯೇ, ಮಹಾತ್ಮಾ ಗಾಂಧಿ ಅವರ ಬದುಕಿನ ಪಯಣ ಕೂಡ ದಕ್ಷಿಣಾ ಆಫ್ರಿಕಾ ಚರಿತ್ರೆಯೊಂದಿಗೆ ಬಿಗಿಯಾಗಿ ಹೆಣೆದುಕೊಂಡಿದೆ. ಇಲ್ಲಿನ ಡರ್ಬನ್ ಮತ್ತು ಜೊಹಾನ್ಸ್‌ಬರ್ಗ್‌ನಲ್ಲಿ ಎದುರಿಸಿದ ತಾರತಮ್ಯದ ಕಹಿ ಪ್ರಸಂಗಗಳೇ ಗಾಂಧಿಯವರಿಗೆ ತಮ್ಮ ಅಹಿಂಸಾತ್ಮಕ ಪ್ರತಿಭಟನೆಯ ತತ್ವವನ್ನು ರೂಪಿಸಲು ಕಾರಣವಾದವು. ಈ ರೀತಿಯಲ್ಲಿ, ಈ ನೆಲವು ಪ್ರಪಂಚದ ಇಬ್ಬರು ಅತ್ಯುನ್ನತ ನಾಯಕರು ರೂಪುಗೊಳ್ಳುವುದಕ್ಕೂ ಭೂಮಿಕೆಯಾಗಿದೆ

ದಕ್ಷಿಣ ಆಫ್ರಿಕಾ ಏಕೆ ಇಷ್ಟವಾಗುತ್ತದೆಂದರೆ

ವೈರುಧ್ಯಗಳ ಸಹಜ ಸಂಯೋಜನೆಯೇ ದಕ್ಷಿಣ ಆಫ್ರಿಕಾದಲ್ಲಿನ ಮೋಹಕತೆ. ಇಲ್ಲಿ ದಟ್ಟ ಅರಣ್ಯ ಹಾಗೂ ಸುಸಜ್ಜಿತ ಸೌಕರ್ಯ, ಚರಿತ್ರೆ ಹಾಗೂ ಆಧುನಿಕತೆ, ಸಾಹಸ ಹಾಗೂ ಆಹ್ಲಾದಗಳು ಮೇಳೈಸಿವೆ. ಬೆಳಗ್ಗೆ ವೈನ್ ಗುಟುಕರಿಸಿ, ಮಧ್ಯಾಹ್ನ ಎತ್ತರದ ಸೇತುವೆ ಮೇಲಿಂದ ಪ್ರಪಾತಕ್ಕೆ ಬಂಜಿ ಜಂಪ್ ಮಾಡಿ, ಸಂಜೆಗೆ ಬನಿ ಚೌ ಸವಿದು, ಸೂರ್ಯಾಸ್ತದಲ್ಲಿ ತಿಮಿಂಗಲಗಳನ್ನು ಕಂಡು, ರಾತ್ರಿಯಲ್ಲಿ ಚುಕ್ಕಿಗಳು ಮಿನುಗುವ ಆಗಸವನ್ನು ಕಣ್ತುಂಬಿಕೊಳ್ಳುತ್ತಾ ಸವಿನಿದ್ರೆಗೆ ಜಾರಬಹುದು.

ನನ್ನ ಮಟ್ಟಿಗೆ ದಕ್ಷಿಣ ಆಫ್ರಿಕಾವು ವೈರುಧ್ಯಗಳ ಸುಂದರ ಸಮಾಗಮ– ಉದ್ವೇಗ ಹಾಗೂ ಸಾವಧಾನ, ಕ್ಷಮತೆ ಹಾಗೂ ಆಶಾಭಾವ, ಸ್ವಾದಗಳು ಹಾಗೂ ಕಥನಗಳು, ವೈವಿಧ್ಯಮಯ ಭೂಪ್ರದೇಶಗಳು ಹಾಗೂ ಭಾವನೆಗಳು ಒಂದನ್ನೊಂದು ಬಿಡಲಾರದೆ ಹೆಣೆದುಕೊಂಡ ನೆಲ ಇದಾಗಿದೆ.

ಹೀಗಾಗಿ, ನಿಮ್ಮ ಮುಂದಿನ ಸಾಹಸ ಪರ್ಯಟನೆಗೆ, ಹನಿಮೂನ್‌ಗೆ ಇಲ್ಲವೇ ಜೀವಿತಾವಧಿ ನೆನಪಿನಲ್ಲುಳಿಯುವ ತಂಡ ಪ್ರವಾಸಕ್ಕೆ ಸೂಕ್ತ ತಾಣ ಯಾವುದೆಂದು ಹುಡುಕುತ್ತಿದ್ದರೆ, ದಕ್ಷಿಣ ಆಫ್ರಿಕಾಗೆ ಹೊರಡಿ ಎಂಬುದೇ ನನ್ನ ಉತ್ತರವಾಗಿದೆ. ಏಕೆಂದರೆ, ಈ ನಾಡಿನಲ್ಲಿ ನಿಮಗೆ ವಿಶ್ವದರ್ಶನವನ್ನೇ ಮಾಡಿದಂತಹ ಸಮೃದ್ಧ ಅನುಭವ ಲಭ್ಯವಾಗುವುದು ಖಾತರಿ.



ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಸರಣಿ ಗೆದ್ದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು ಎಎಫ್‌ಪಿ ಚಿತ್ರ

ದಕ್ಷಿಣ ಆಫ್ರಿಕಾ ಸವಾಲ್ ಗೆದ್ದ 'ಜೈಸ್ವಾಲ್'

ಭಾರತ ತಂಡಕ್ಕೆ ಸರಣಿ ಜಯದ ಸಂಭ್ರಮ ಕುಲದೀಪ್, ಪ್ರಸಿದ್ಧಗೆ ತಲಾ ನಾಲ್ಕು ವಿಕೆಟ್

ವಿಶಾಖಪಟ್ಟಣಂ (ಪಿಟಿಐ): ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಏಕದಿನ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕ ದಾಖಲಿಸಿದರು. ಇದರಿಂದಾಗಿ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಜಯಗಳಿಸಲು ಸಾಧ್ಯವಾಯಿತು.

ಶನಿವಾರ ಇಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಮೂರನೇ ಮತ್ತು ಅಂತಿಮ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು 9 ವಿಕೆಟ್‌ಗಳ ಜಯಸಾಧಿಸಿತು. ಸರಣಿಯನ್ನು 2–1ರಿಂದ ಗೆದ್ದಿತು.

271 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ 'ಮುಂಬೈ ಜೋಡಿ' ಜೈಸ್ವಾಲ್ (116; 121ಎ) ಮತ್ತು ರೋಹಿತ್ ಶರ್ಮಾ (75; 73ಎ) ಅವರಿಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ 155 ರನ್ ಸೇರಿಸಿ ಅಮೋಘ ಆರಂಭ ನೀಡಿದರು. ಕಳೆದೆರಡೂ ಪಂದ್ಯಗಳಲ್ಲಿ ಶತಕ ಗಳಿಸಿದ್ದ ವಿರಾಟ್ (ಅಜೇಯ 65; 45ಎ) ಇಲ್ಲಿ ತಂಡವನ್ನು ಗೆಲುವಿನ ದಡ ಮುಟ್ಟಿಸುವಲ್ಲಿ ಯಶಸ್ವಿಯಾದರು.

ಭಾರತ ತಂಡದ ನಾಯಕ ಕೆ.ಎಲ್. ರಾಹುಲ್ ಅವರು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಕ್ವಿಂಟನ್ ಡಿಕಾಕ್ (106; 89ಎ, 4X8, 6X6) ಅವರ ಚೆಂದದ ಶತಕದ ಬಲದಿಂದ ದಕ್ಷಿಣ ಆಫ್ರಿಕಾ 47.5 ಓವರ್‌ಗಳಲ್ಲಿ 270 ರನ್ ಗಳಿಸಿತು. ವೇಗಿ, ಕನ್ನಡಿಗ ಪ್ರಸಿದ್ಧ ಕೃಷ್ಣ (66ಕ್ಕೆ4) ಮತ್ತು ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ (41ಕ್ಕೆ4) ಅವರ ಚುರುಕಿನ ದಾಳಿಯಿಂದಾಗಿ ಪ್ರವಾಸಿ ಬಳಗಕ್ಕೆ 300 ರನ್‌ಗಳ ಮೊತ್ತ ಪೇರಿಸಲು ಸಾಧ್ಯವಾಗಲಿಲ್ಲ. ಆತಿಥೇಯ ತಂಡವು ಈ ಗುರಿಯನ್ನು 39.5 ಓವರ್‌ಗಳಲ್ಲಿ 1 ವಿಕೆಟ್‌ಗೆ 271 ರನ್ ಗಳಿಸಿ ಗೆದ್ದಿತು.

ಕಳೆದೆರಡೂ ಪಂದ್ಯಗಳಲ್ಲಿ ಲಯ ಕಂಡುಕೊಳ್ಳಲು ಪರದಾಡಿದ್ದ ಜೈಸ್ವಾಲ್ ಇಲ್ಲಿಯೂ ಆರಂಭದಲ್ಲಿ ತುಸು ಕಷ್ಟಪಟ್ಟರು. ಇನ್ನೊಂದು ಬದಿಯಲ್ಲಿದ್ದ ಅನುಭವಿ ರೋಹಿತ್ ಅವರ ಬೆಂಬಲ ಮತ್ತು ಮಾರ್ಗದರ್ಶನವು ಜೈಸ್ವಾಲ್ ಆತ್ಮವಿಶ್ವಾಸ ಹೆಚ್ಚಿಸಿತು. ನಾಲ್ಕನೇ ಏಕದಿನ ಪಂದ್ಯವಾಡಿದ ಜೈಸ್ವಾಲ್ ಅವರು ಶತಕದತ್ತ ಹೆಜ್ಜೆ ಇಟ್ಟರು. 38 ವರ್ಷದ ರೋಹಿತ್ ಅವರು 54 ಎಸೆತಗಳಲ್ಲಿ ಅರ್ಧಶತಕದ ಗಡಿ ಮುಟ್ಟಿದರು. ತಮ್ಮ ನೆಚ್ಚಿನ ಪುಲ್ ಶಾಟ್‌ಗಳ ಮೂಲಕ ಮೂರು ಸಿಕ್ಸರ್ ಗಳಿಸಿದರು. ಅವರ ಬೀಸಾಟದಿಂದಾಗಿ ರನ್‌ಗಳು ಸರಾಗವಾಗಿ ತಂಡದ ಖಾತೆ ಸೇರಿದವು. ಎದುರಾಳಿ ಬೌಲರ್‌ಗಳು ನಿರುತ್ತರರಾದರು.

ರೋಹಿತ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 20 ಸಾವಿರ ರನ್ ಗಳಿಸಿದ ಭಾರತದ ನಾಲ್ಕನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್ ಮತ್ತು ವಿರಾಟ್ ಕೊಹ್ಲಿ ಅವರ ನಂತರ ರೋಹಿತ್ ಈ ಸಾಧನೆ ಮಾಡಿದರು.

ಜೈಸ್ವಾಲ್ 75 ಎಸೆತಗಳಲ್ಲಿ ಅರ್ಧಶತಕ ಪೂರ್ಣಗೊಳಿಸಿಕೊಂಡರು. ಅದರ ನಂತರ ಅವರ ಆಟದಲ್ಲಿ ವೇಗ ಹೆಚ್ಚಿತು. ಡ್ರೈವ್ ಮತ್ತು ಕಟ್‌ಗಳ ಮೂಲಕ ಚೆಂಡನ್ನು ಬೌಂಡರಿಗೆರೆ ದಾಟಿಸುವಲ್ಲಿ ಯಶಸ್ವಿಯಾದರು. ಒಟ್ಟು 111 ಎಸೆತಗಳಲ್ಲಿ 100ರ ಗಡಿ ಮುಟ್ಟಿದ 23 ವರ್ಷದ ಬ್ಯಾಟರ್ ಸಂಭ್ರಮಿಸಿದರು. ವೇಗವಾಗಿ ಓಡಿ, ಮೇಲಕ್ಕೆ ಜಿಗಿದು, ಗಾಳಿಯನ್ನು ಮುಷ್ಠಿಯಿಂದ ಗುದ್ದಿ, ಅಬ್ಬರಿಸಿದರು.

ಜೈಸ್ವಾಲ್ ಮತ್ತು ವಿರಾಟ್ ಸೇರಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 156 ರನ್ ಗಳಿಸಿದರು. ಮೈದಾನದಲ್ಲಿ ಹಾಜರಿದ್ದ 27 ಸಾವಿರ ಪ್ರೇಕ್ಷಕರಿಗೆ ರಸದೌತಣ ಉಣಬಡಿಸಿದರು.

ಕೊನೆಗೂ ಟಾಸ್ ಗೆದ್ದ ಭಾರತ

ಸತತ 20 ಏಕದಿನ ಪಂದ್ಯಗಳಲ್ಲಿ ಟಾಸ್ ಸೋತಿದ್ದ ಭಾರತ ತಂಡವು ವಿಶಾಖಪಟ್ಟಣಂನಲ್ಲಿ ಕೊನೆಗೂ ಟಾಸ್ ಗೆದ್ದಿದೆ.

ಹಂಗಾಮಿ ನಾಯಕ ಕೆ.ಎಲ್. ರಾಹುಲ್ ಎಡಗೈಯಿಂದ ನಾಣ್ಯ ಚಿಮ್ಮಿಸಿ ಹೆಡ್ ಎಂದು ಹೇಳಿದರು. ಹೆಡ್ ಬಿದ್ದ ಕೂಡಲೇ ನಗೆ ಬೀರಿ, ಬೌಲಿಂಗ್ ಆಯ್ದುಕೊಂಡರು.

ವಾಂಖೆಡೆ ಕ್ರೀಡಾಂಗಣದಲ್ಲಿ 2023ರ ನ.15ರಂದು ಭಾರತ ಕೊನೆಯ ಬಾರಿ ಟಾಸ್ ಗೆದ್ದಿತ್ತು. ಯಾವುದೇ ತಂಡ ಸತತ 20 ಪಂದ್ಯಗಳಲ್ಲಿ ಟಾಸ್ ಸೋತಿಲ್ಲ.

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ 270 (47.5 ಓವರ್‌ಗಳಲ್ಲಿ)
ಡಿಕಾಕ್ ಬಿ ಪ್ರಸಿದ್ಧ 106 (89ಎ, 4x8, 6x6)
ರಿಕೆಲ್ಟನ್ ಸಿ ರಾಹುಲ್ ಬಿ ಅರ್ಷದೀಪ್ 0 (4ಎ)
ಬವುಮಾ ಸಿ ಕೊಹ್ಲಿ ಬಿ ಜಡೇಜ 48 (67ಎ, 4x5)
ಬ್ರಿಝ್ಕೆ ಎಲ್‌ಬಿಡಬ್ಲ್ಯು ಬಿ ಪ್ರಸಿದ್ಧ 24 (23ಎ, 6x2)
ಮರ್ಕರಂ ಸಿ ಕೊಹ್ಲಿ ಬಿ ಪ್ರಸಿದ್ಧ 1 (3ಎ)
ಬ್ರೆವಿಸ್ ಸಿ ರೋಹಿತ್ ಬಿ ಕುಲದೀಪ್ 29 (29ಎ, 4x2, 6x1)
ಯಾನ್ಸೆನ್ ಸಿ ಜಡೇಜ ಬಿ ಕುಲದೀಪ್ 17 (15ಎ, 4x2)
ಕಾರ್ಬಿನ್ ಸಿ ಮತ್ತು ಬಿ ಕುಲದೀಪ್ 9 (12ಎ)
ಕೇಶವ್ ಮಹಾರಾಜ ಔಟಾಗದೇ 20 (29ಎ, 4x2)
ಎನ್‌ಗಿಡಿ ಎಲ್‌ಬಿಡಬ್ಲ್ಯು ಬಿ ಕುಲದೀಪ್ 1 (10ಎ)
ಬಾರ್ತಮನ್ ಸಿ ಪ್ರಸಿದ್ಧ 3 (7ಎ)
ಇತರೆ: 12 (ಲೆಗ್‌ಬೈ 4, ನೋಬಾಲ್ 1, ವೈಡ್ 7)
ವಿಕೆಟ್ ಪತನ: 1-1 (ರಿಯಾನ್ ರಿಕೆಲ್ಟನ್, 0.5), 2-114 (ತೆಂಬಾ ಬವುಮಾ, 20.6), 3-168 (ಮ್ಯಾಥ್ಯೂ ಬ್ರಿಝ್ಕೆ, 28.2), 4-170 (ಏಡೆನ್ ಮಾರ್ಕರಂ, 28.6), 5-199 (ಕ್ವಿಂಟನ್ ಡಿಕಾಕ್, 32.5), 6-234 (ಡೆವಾಲ್ಡ್ ಬ್ರೆವಿಸ್, 38.1), 7-235 (ಮಾರ್ಕೊ ಯಾನ್ಸೆನ್, 38.3), 8-252 (ಕಾರ್ಬಿನ್ ಬಾಷ್, 42.3), 9-258 (ಲುಂಗಿ ಎನ್‌ಗಿಡಿ, 44.4), 10-270 (ಓಟ್ನೀಲ್ ಬಾರ್ತಮನ್, 47.5)
ಬೌಲಿಂಗ್: ಅರ್ಷದೀಪ್ ಸಿಂಗ್ 8-1-36-1, ಹರ್ಷಿತ್ ರಾಣಾ 8-2-44-0, ಪ್ರಸಿದ್ಧ ಕೃಷ್ಣ 9.5-0-66-4, ರವೀಂದ್ರ ಜಡೇಜ 9-0-50-1, ಕುಲದೀಪ್ ಯಾದವ್ 10-1-41-4, ತಿಲಕ್ ವರ್ಮಾ 3-0-29-0

ಭಾರತ: 1ಕ್ಕೆ 271 (39.5 ಓವರ್‌ಗಳಲ್ಲಿ)
ಯಶಸ್ವಿ ಜೈಸ್ವಾಲ್ ಔಟಾಗದೇ 116 (121ಎ, 4x12, 6x2)
ರೋಹಿತ್ ಸಿ ಬ್ರಿಝ್ಕೆ ಬಿ ಮಹಾರಾಜ್ 75 (73ಎ, 4x7, 6x3)
ವಿರಾಟ್ ಕೊಹ್ಲಿ ಔಟಾಗದೇ 65 (45ಎ, 4x6, 6x3)
ಇತರೆ: 15 (ಲೆಗ್‌ಬೈ 2, ವೈಡ್ 13)
ವಿಕೆಟ್ ಪತನ: 1-155 (ರೋಹಿತ್ ಶರ್ಮಾ, 25.5)
ಬೌಲಿಂಗ್: ಯಾನ್ಸೆನ್ 8-1-39-0, ಎನ್‌ಗಿಡಿ 6.5-0-56-0, ಮಹಾರಾಜ್ 10-0-44-1, ಬಾರ್ತಮನ್ 7-0-60-0, ಕಾರ್ಬಿನ್ 6-0-53-0, ಮರ್ಕರಂ 2-0-17-0
ಪಂದ್ಯದ ಆಟಗಾರ: ಯಶಸ್ವಿ ಜೈಸ್ವಾಲ್
ಸರಣಿಯ ಆಟಗಾರ: ವಿರಾಟ್ ಕೊಹ್ಲಿ (302 ರನ್)

ಫಲಿತಾಂಶ: ಭಾರತಕ್ಕೆ 9 ವಿಕೆಟ್‌ಗಳ ಜಯ, ಸರಣಿ 2–1ರಿಂದ ವಶ

ಕೆಎಸ್‌ಸಿಎ ಚುನಾವಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ 88ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ಚುನಾವಣೆ ಪ್ರಕ್ರಿಯೆ ಭಾನುವಾರ ನಡೆಯಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬೆಳಿಗ್ಗೆ 10.30ರಿಂದ ಸಭೆ ನಡೆಯಲಿದೆ. 11 ರಿಂದ ರಾತ್ರಿ 7ರವರೆಗೆ ಚುನಾವಣೆ ಪ್ರಕ್ರಿಯೆ ನಡೆಯಲಿದೆ. ನಂತರ ಫಲಿತಾಂಶ ಪ್ರಕಟವಾಗಲಿದೆ.

ಎಜಿಎಂ ಮತ್ತು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ತಮ್ಮ ಸದಸ್ಯತ್ವದ ಗುರುತಿನ ಚೀಟಿಯನ್ನು ತರಬೇಕು. ಒಟ್ಟು ಐವರು ಪದಾಧಿಕಾರಿಗಳು ಹಾಗೂ ಆಡಳಿತ ಸಮಿತಿಯ 10 ಸದಸ್ಯರ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಅಧ್ಯಕ್ಷ ಸ್ಥಾನಕ್ಕಾಗಿ ಟೀಮ್ ಬ್ರಿಜೇಶ್ ಬಣದಿಂದ, ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ (ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕಾ ಸಮೂಹ) ನಿರ್ದೇಶಕ ಕೆ.ಎನ್. ಶಾಂತಕುಮಾರ್ ಮತ್ತು ಟೀಮ್ ಗೇಮ್ ಚೇಂಜರ್ಸ್ ಬಣದಿಂದ, ಮಾಜಿ ಕ್ರಿಕೆಟಿಗ ಬಿ.ಕೆ. ವೆಂಕಟೇಶ್ ಪ್ರಸಾದ್ ಅವರು ಸ್ಪರ್ಧಿಸಿದ್ದಾರೆ.

ಗಾಲಿಕುರ್ಚಿ ವ್ಯವಸ್ಥೆ: 12ನೇ ಸಂಖ್ಯೆಯ ಪ್ರವೇಶದ್ವಾರದಲ್ಲಿ ಗಾಲಿ ಕುರ್ಚಿ ಸೇವೆಯನ್ನು ಅಗತ್ಯವಿದ್ದವರಿಗೆ ನೀಡುವ ವ್ಯವಸ್ಥೆ ಮಾಡಲಾಗಿದೆ ಎಂದು ಕೆಎಸ್‌ಸಿಎ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೈಯದ್ ಮುಷ್ತಾಕ್ ಅಲಿ ಕ್ರಿಕೆಟ್: ದೇವದತ್ತ ಅರ್ಧಶತಕ

ಸೌರಾಷ್ಟ್ರಕ್ಕೆ 1 ರನ್ ರೋಚಕ ಜಯ

ಅಹಮದಾಬಾದ್: ದೇವದತ್ತ ಪಡಿಕ್ಕಲ್ ಅವರ ಅಮೋಘ ಅರ್ಧಶತಕ ಹಾಗೂ ಆರ್. ಸ್ಮರಣ್ ಅವರ ಉಪಯುಕ್ತ ಕಾಣಿಕೆಯ ಬುನಾದಿಯ ಮೇಲೆ ಗೆಲುವಿನ ಸೌಧ ಕಟ್ಟುವಲ್ಲಿ ಕರ್ನಾಟಕದ ಉಳಿದ ಬ್ಯಾಟರ್‌ಗಳು ವಿಫಲರಾದರು. ಅದರಿಂದಾಗಿ ಸೌರಾಷ್ಟ್ರ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 1 ರನ್ ಅಂತರದ ರೋಚಕ ಜಯ ಸಾಧಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಸೌರಾಷ್ಟ್ರ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ವಿಶ್ವರಾಜ್ ಜಡೇಜ (40; 24ಎ, 4X7) ಮತ್ತು ಸಿದ್ಧಾಂತ್ ರಾಣಾ (42; 27ಎ, 4X3, 6X2) ಅವರ ಆಟದ ಬಲದಿಂದ ಸೌರಾಷ್ಟ್ರ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 178 ರನ್ ಗಳಿಸಿತು. ಕರ್ನಾಟಕದ ವೇಗಿ ವೈಶಾಖ ವಿಜಯಕುಮಾರ್ (28ಕ್ಕೆ3) ಅವರು ಎದುರಾಳಿ ತಂಡವು ಬೃಹತ್ ಮೊತ್ತ ಗಳಿಸದಂತೆ ನಿಯಂತ್ರಿಸಿದರು.

ಗುರಿ ಬೆನ್ನಟ್ಟಿದ ಕರ್ನಾಟಕ ತಂಡದ ಆರಂಭ ಚೆನ್ನಾಗಿರಲಿಲ್ಲ. ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಬಿ.ಆರ್. ಶರತ್ ಖಾತೆ ತೆರೆಯದೇ ಔಟಾದರು. ಜಯದೇವ್ ಉನದ್ಕತ್ ಬೌಲಿಂಗ್‌ನಲ್ಲಿ ಅವರು ಹಾರ್ವಿಕ್ ದೇಸಾಯಿಗೆ ಕ್ಯಾಚಿತ್ತರು. ಮೂರನೇ ಓವರ್‌ನಲ್ಲಿ ಉನದ್ಕತ್ ಎಸೆತದಲ್ಲಿಯೇ ಪಾರ್ಥ್ ಬುಯಿಗೆ ಕ್ಯಾಚಿತ್ತ ಮೆಕ್ನಿಲ್ ನರೋನಾ ಔಟಾದರು. ಕ್ರೀಸ್‌ಗೆ ಬಂದ ದೇವದತ್ತ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಲು ಪ್ರಯತ್ನಿಸಿದರು. ಅವರು 46 ಎಸೆತಗಳಲ್ಲಿ 66 ರನ್ ಗಳಿಸಿದರು. 9 ಬೌಂಡರಿ ಮತ್ತು 1 ಸಿಕ್ಸರ್ ಸಿಡಿಸಿದರು. ಕರುಣ್ ನಾಯರ್ ಕೇವಲ 6 ರನ್ ಗಳಿಸಿ ಔಟಾದರು. ದೇವದತ್ತ ಜೊತೆಗೆ ಸ್ಮರಣ್ (30; 22ಎ, 6X2) ಜೊತೆ ನೀಡಿದರು. ಇಬ್ಬರ ಜೊತೆಯಾಟದಲ್ಲಿ 54 ರನ್ ಸೇರಿದವು.

ದೇವದತ್ತ ಪಡಿಕ್ಕಲ್

ಉಳಿದ ಬ್ಯಾಟರ್‌ಗಳಲ್ಲಿ ಶುಭಾಂಗ್ ಹೆಗ್ಡೆ (14 ರನ್), ವಿದ್ಯಾಧರ್ ಪಾಟೀಲ (14 ರನ್) ಹಾಗೂ ವೈಶಾಖ (ಔಟಾಗದೇ 11) ಎರಡಂಕಿ ಸ್ಕೋರ್ ಗಳಿಸಿದರು. ಕೊನೆಯಲ್ಲಿ ವೈಶಾಖ ಹೋರಾಟಕ್ಕೆ ಜಯ ಲಭಿಸಲಿಲ್ಲ.

ಸಂಕ್ಷಿಪ್ತ ಸ್ಕೋರು: ಸೌರಾಷ್ಟ್ರ: 20 ಓವರ್‌ಗಳಲ್ಲಿ 8ಕ್ಕೆ178 (ವಿಶ್ವರಾಜ್ ಜಡೇಜ 40, ಹಾರ್ವಿಕ್ ದೇಸಾಯಿ 28, ಸಿದ್ಧಾಂತ್ ರಾಣಾ 42, ಜೈ ಗೋಹಿಲ್ 27, ವೈಶಾಖ ವಿಜಯಕುಮಾರ್ 28ಕ್ಕೆ3) ಕರ್ನಾಟಕ: 20 ಓವರ್‌ಗಳಲ್ಲಿ 9ಕ್ಕೆ177 (ದೇವದತ್ತ ಪಡಿಕ್ಕಲ್ 66, ಸ್ಮರಣ್ ರವಿಚಂದ್ರನ್ 30, ಜಯದೇವ್ ಉನದ್ಕತ್ 29ಕ್ಕೆ2, ಚೇತನ್ ಸಕಾರಿಯಾ 37ಕ್ಕೆ2, ಪ್ರೇರಕ್ ಮಂಕಡ್ 37ಕ್ಕೆ2) ಫಲಿತಾಂಶ: ಸೌರಾಷ್ಟ್ರ ತಂಡಕ್ಕೆ 1 ರನ್ ಜಯ.

ವೆಸ್ಟ್ ಇಂಡೀಸ್‌ಗೆ ಸೋಲು ತಪ್ಪಿಸಿದ ಗ್ರೀವ್ಸ್, ಕೆಮರ್

ಜಸ್ಟಿನ್ ಗ್ರೀವ್ಸ್

ಕ್ರೈಸ್ಟ್‌ಚರ್ಚ್, ನ್ಯೂಜಿಲೆಂಡ್ (ಎಎಫ್‌ಪಿ): ಜಸ್ಟಿನ್ ಗ್ರೀವ್ಸ್ (ಔಟಾಗದೇ 202; 388ಎ, 4x19) ಅವರ ಅಮೋಘ ದ್ವಿಶತಕ ಮತ್ತು ಕೆಮರ್ ರೋಚ್ (ಔಟಾಗದೇ 58;233ಎ) ಅವರ ಹೋರಾಟದ ಬಲದಿಂದ ವೆಸ್ಟ್ ಇಂಡೀಸ್ ತಂಡವು ನ್ಯೂಜಿಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಸೋಲಿನ ಅಪಾಯದಿಂದ ಪಾರಾಗಿ, ಡ್ರಾ ಸಾಧಿಸಿತು.

ಗೆಲುವಿಗೆ 531 ರನ್‌ಗಳ ಗುರಿ ಪಡೆದಿದ್ದ ವಿಂಡೀಸ್ ತಂಡವು ಪಂದ್ಯ ಕೊನೆಗೊಂಡಾಗ 6 ವಿಕೆಟ್‌ಗಳಿಗೆ 457 ರನ್ ಗಳಿಸಿತು. ಟೆಸ್ಟ್ ಕ್ರಿಕೆಟ್‌ನಲ್ಲಿ ನಾಲ್ಕನೇ ಇನ್ನಿಂಗ್ಸ್‌ನ ಎರಡನೇ ಅತ್ಯಧಿಕ ಮೊತ್ತ ಇದಾಗಿದೆ.

277 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡು ಸೋಲಿನ ದವಡೆಯಲ್ಲಿದ್ದ ತಂಡಕ್ಕೆ ಗ್ರೀವ್ಸ್ ಮತ್ತು ಕೆಮರ್ ಅವರು ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 180 ರನ್ ಪೇರಿಸಿದರು. ಅದಕ್ಕಾಗಿ ಅವರಿಬ್ಬರು 410 ಎಸೆತಗಳನ್ನು ಬಳಸಿಕೊಂಡರು. ಸುಮಾರು 10 ಗಂಟೆಗಳ ಕಾಲ ಕ್ರೀಸ್‌ನಲ್ಲಿದ್ದ ಗ್ರೀವ್ಸ್, ಚೊಚ್ಚಲ ದ್ವಿಶತಕವನ್ನು ದಾಖಲಿಸಿದರು.

ಎರಡನೇ ಟೆಸ್ಟ್ ಬುಧವಾರ ವೆಲ್ಲಿಂಗ್ಟನ್‌ನಲ್ಲಿ ಆರಂಭವಾಗಲಿದೆ. ಮೂರು ಪಂದ್ಯಗಳ ಸರಣಿ ಇದಾಗಿದೆ.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್: 231 ಮತ್ತು 8 ವಿಕೆಟ್‌ಗೆ 466 ಡಿಕ್ಲೇರ್ಡ್. ವೆಸ್ಟ್ ಇಂಡೀಸ್: 167 ಮತ್ತು 6 ವಿಕೆಟ್‌ಗೆ 457 (ಶಾಯಿ ಹೋಪ್ 140, ಜಸ್ಟಿನ್ ಗ್ರೀವ್ಸ್ ಔಟಾಗದೇ 202, ಕೆಮರ್ ರೋಚ್ ಔಟಾಗದೇ 58; ಜಾಕೋಬ್ ಡಫ್ಫಿ 122ಕ್ಕೆ 3). ಫಲಿತಾಂಶ: ಪಂದ್ಯ ಡ್ರಾ

ಆ್ಯಷಸ್: ಸ್ಟಾರ್ಕ್ ಮಿಂಚಿನ ಬ್ಯಾಟಿಂಗ್

ಬ್ರಿಸ್ಬೇನ್ (ಎಪಿ): ಇಂಗ್ಲೆಂಡ್ ತಂಡವನ್ನು ತಮ್ಮ ಬೌಲಿಂಗ್ ಮೂಲಕ ಕಾಡಿದ್ದ ಮಿಚೆಲ್ ಸ್ಟಾರ್ಕ್‌ನಲ್ಲಿ ಬ್ಯಾಟಿಂಗ್‌ನಲ್ಲಿಯೂ ಅಬ್ಬರಿಸಿದರು.

ಗ್ಯಾಬಾದಲ್ಲಿ ನಡೆಯುತ್ತಿರುವ ಆ್ಯಷಸ್ ಸರಣಿಯ ಎರಡನೇ ಟೆಸ್ಟ್‌ನಲ್ಲಿ (ಹಗಲು ರಾತ್ರಿ) ಸ್ಟಾರ್ಕ್ ಅವರು ಅಮೋಘ ಅರ್ಧಶತಕ (77; 141ಎ, 4X13) ಗಳಿಸಿದರು. ಅದರಿಂದಾಗಿ ಆಸ್ಟ್ರೇಲಿಯಾ ತಂಡವು 117.3 ಓವರ್‌ಗಳಲ್ಲಿ 511 ರನ್ ಗಳಿಸಿತು. 177 ರನ್‌ಗಳ ಮುನ್ನಡೆ ಸಾಧಿಸಿತು.

ಇದಕ್ಕುತ್ತರವಾಗಿ ಎರಡನೇ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡವು ಶನಿವಾರ ದಿನದಾಟದ ಅಂತ್ಯಕ್ಕೆ 35 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 134 ರನ್ ಗಳಿಸಿತು. ಬೆನ್ ಸ್ಟೋಕ್ಸ್ (ಬ್ಯಾಟಿಂಗ್ 4) ಮತ್ತು ವಿಲ್ ಜ್ಯಾಕ್ಸ್ (ಬ್ಯಾಟಿಂಗ್ 4) ಕ್ರೀಸ್‌ನಲ್ಲಿದ್ದಾರೆ.

ಇಲ್ಲಿಯೂ ಸ್ಟಾರ್ಕ್ (48ಕ್ಕೆ2) ಅವರ ಬೌಲಿಂಗ್ ಪರಿಣಾಮಕಾರಿಯಾಗಿತ್ತು. ಅವರಿಗೆ ಸ್ಕಾಟ್ ಬೋಲ್ಯಾಂಡ್ (33ಕ್ಕೆ2) ಮತ್ತು ಮಿಚೆಲ್ ನೆಸೆರ್ (27ಕ್ಕೆ2) ಕೂಡ ಇಂಗ್ಲೆಂಡ್ ತಂಡವನ್ನು ಸಂಕಷ್ಟಕ್ಕೆ ತಳ್ಳಿದರು.

ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 76.2 ಓವರ್‌ಗಳಲ್ಲಿ 334. ಆಸ್ಟ್ರೇಲಿಯಾ: 117.3 ಓವರ್‌ಗಳಲ್ಲಿ 511 (ಮಿಚೆಲ್ ಸ್ಟಾರ್ಕ್ 77, ಸ್ಕಾಟ್ ಬೊಲ್ಯಾಂಡ್ ಔಟಾಗದೇ 21, ಬ್ರೈಡನ್ ಕಾರ್ಸ್ 152ಕ್ಕೆ4, ಬೆನ್ ಸ್ಟೋಕ್ಸ್ 113ಕ್ಕೆ3) ಎರಡನೇ ಇನಿಂಗ್ಸ್: ಇಂಗ್ಲೆಂಡ್: 35 ಓವರ್‌ಗಳಲ್ಲಿ 6ಕ್ಕೆ134 (ಜ್ಯಾಕ್ ಕ್ರಾಲಿ 44, ಒಲಿ ಪೋಪ್ 26, ಮಿಚೆಲ್ ಸ್ಟಾರ್ಕ್ 48ಕ್ಕೆ2, ಮಿಚೆಲ್ ನೆಸರ್ 27ಕ್ಕೆ2, ಸ್ಕಾಟ್ ಬೊಲ್ಯಾಂಡ್ 33ಕ್ಕೆ2)

ಸಾಯಿಗೆ ಬಾಲಕರ ಸಿಂಗಲ್ಸ್ ಪ್ರಶಸ್ತಿ

ಬೆಂಗಳೂರು: ನಗರದ ಸೆಲೆನೈಟ್ ಸ್ಪೋರ್ಟ್ಸ್ ಅಕಾಡೆಮಿಯ ಸಾಯಿ ಪುಷ್ಕರ್ ಅವರು ಒಡಿಶಾದ ಭುವನೇಶ್ವರದಲ್ಲಿ ಶನಿವಾರ ಮುಕ್ತಾಯಗೊಂಡ ಯಾನೆಕ್ಸ್-ಸನ್‌ರೈಸ್ 37ನೇ ಸಬ್ ಜೂನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

2023ರಲ್ಲಿ 13 ವರ್ಷದೊಳಗಿನ ವಿಭಾಗದಲ್ಲೂ ರಾಷ್ಟ್ರೀಯ ಚಾಂಪಿಯನ್ ಆಗಿದ್ದ ಪುಷ್ಕರ್ ಫೈನಲ್‌ನಲ್ಲಿ 21–17, 21–12ರಿಂದ ಹರ್ಷಿತ್ ಖತ್ರಿ ಅವರನ್ನು ಮಣಿಸಿದರು.

ಸೆಲೆನೈಟ್ ಅಕಾಡೆಮಿಯ ಆಟಗಾರರು 4 ಚಿನ್ನದ ಪದಕ ಗೆದ್ದಿದ್ದಾರೆ. 17 ವರ್ಷದೊಳಗಿನ ಬಾಲಕರ ಡಬಲ್ಸ್‌ನಲ್ಲಿ ಪವನ್ ಎಸ್–ಪುನೀತ್ ಎಸ್. 21–1–, 21–10ರಿಂದ ಆನಾಯನ್ ಬೋರಾ–ಮಾಲ್ಸಾವ್‌ಹ್ಲುವಾ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.

17 ವರ್ಷದೊಳಗಿನ ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ವೃದ್ಧಿ ಪೊನ್ನಮ್ಮ ಮತ್ತು ಅದಿತಿ ದೀಪಕ್ ರಾಜ್ 21–19, 21–16ರಿಂದ ಅನನ್ಯಾ ಎ. ಮತ್ತು ಅಂಜನಾ ಮಣಿಕಂದನ್ ಅವರನ್ನು ಮಣಿಸಿದರು. ಮಿಶ್ರ ಡಬಲ್ಸ್‌ನ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಅದಿತಿ ದೀಪರ್ ರಾಜ್ ಮತ್ತು ಪುನೀತ್ ಜೋಡಿಯು 21–16, 21–14ರಿಂದ ಅರ್ಣವ್ ಶರ್ಮಾ ಮತ್ತು ಅಂಜನಾ ಅವರನ್ನು ಸೋಲಿಸಿತು.

ಚುಟುಕು ಸುದ್ದಿ

ಟಿ20 ಪಂದ್ಯಕ್ಕೆ ಶುಭಮನ್ ಲಭ್ಯ

ಕಟಕ್, (ಪಿಟಿಐ): ಭಾರತ ಟಿ20 ತಂಡದ ಉಪನಾಯಕ ಶುಭಮನ್ ಗಿಲ್ ಅವರು ಫಿಟ್ನೆಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು, ಇದೇ 9ರಂದು ಇಲ್ಲಿ ನಡೆಯುವ ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಪಂದ್ಯಕ್ಕೆ ಲಭ್ಯವಾಗಿದ್ದಾರೆ.

ಕೋಲ್ಕತ್ತದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ವೇಳೆ ಕುತ್ತಿಗೆ ನೋವಿಗೆ ಒಳಗಾದ ಗಿಲ್ ವಿಶ್ರಾಂತಿಯಲ್ಲಿದ್ದರು. ಚೇತರಿಸಿಕೊಂಡಿರುವ ಅವರು ಟಿ20 ಕ್ರಿಕೆಟ್‌ಗೆ ಮರಳಲು ಬಿಸಿಸಿಐ ಉತ್ಕೃಷ್ಟತಾ ಕೇಂದ್ರದ ಕ್ರೀಡಾ ವಿಜ್ಞಾನ ತಂಡದಿಂದ ಅನುಮತಿ ಪಡೆದಿದ್ದಾರೆ.

ವಿಶ್ವಕಪ್ ಶೂಟಿಂಗ್ ಸುರುಚಿಗೆ ಚಿನ್ನ

ದೋಹಾ (ಪಿಟಿಐ): ಭಾರತದ ಶೂಟರ್‌ಗಳಾದ ಸುರುಚಿ ಸಿಂಗ್ ಮತ್ತು ಸೈನ್ಯಮ್ ಅವರು ಇಲ್ಲಿ ಶನಿವಾರ ಆರಂಭವಾದ ಐಎಸ್‌ಎಸ್‌ಎಫ್ ವಿಶ್ವಕಪ್ ಫೈನಲ್‌ನ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.

ಸುರುಚಿ 245.1 ಅಂಕಗಳನ್ನು ಗಳಿಸುವ ಮೂಲಕ ಭಾರತಕ್ಕೆ ಮೊದಲ ಚಿನ್ನ ದೊರಕಿಸಿಕೊಟ್ಟರು. ವಿಶ್ವ ಜೂನಿಯರ್ ಮಾಜಿ ಚಾಂಪಿಯನ್ ಸೈನ್ಯಮ್ (243.3 ಅಂಕ) ಎರಡನೇ ಸ್ಥಾನ ಪಡೆದರು. ಒಲಿಂಪಿಕ್ ಅವಳಿ ಪದಕ ವಿಜೇತೆ ಮನು ಭಾಕರ್ (179.2) ಐದನೇ ಸ್ಥಾನ ಗಳಿಸಿದರು.

ಪುರುಷರ 10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ವಿಶ್ವ ಚಾಂಪಿಯನ್ ಸಾಮ್ರಾಟ್ ರಾಣಾ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಅವರಿಗೆ ಪ್ರಬಲ ಪೈಪೋಟಿ ನೀಡಿದ ಸ್ವದೇಶದ ವರುಣ್ ತೋಮರ್ ನಾಲ್ಕನೇ ಸ್ಥಾನ ಪಡೆದರು.

ಶಾಟ್‌ಪಟ್ ತೇಜಸ್ವಿನಿಗೆ ಚಿನ್ನ

ಬೆಂಗಳೂರು: ನಗರದ ಸೇಂಟ್ ಮೇರಿಸ್ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ತೇಜಸ್ವಿನಿ ಜಿ. ರಾವ್ ಅವರು ಶಾಲಾ ಶಿಕ್ಷಣ ಇಲಾಖೆ ಆಯೋಜಿಸಿದ್ದ ರಾಜ್ಯಮಟ್ಟದ ಶಾಲಾ ಮಕ್ಕಳ ಆಟೋಟ ಸ್ಪರ್ಧೆಯ ಬಾಲಕಿಯರ ಶಾಟ್‌ಪಟ್‌ನಲ್ಲಿ ಚಿನ್ನದ ಸಾಧನೆ ಮಾಡಿದರು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ತೇಜಸ್ವಿನಿ 12.34 ಮೀಟರ್ ಸಾಧನೆಯೊಂದಿಗೆ ಅಗ್ರಸ್ಥಾನಿಯಾದರು. ಈಕೆ ಗಣೇಶ್ ಜನಾರ್ದನ್ ರಾವ್ ಅವರ ಪುತ್ರಿ.

ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್ ಸೆಮಿಫೈನಲ್

ಭಾರತಕ್ಕೆ ಬಲಿಷ್ಠ ಜರ್ಮನಿ ಸವಾಲು

ಚೆನ್ನೈ (ಪಿಟಿಐ): ಒಂಬತ್ತು ವರ್ಷಗಳ ಬಳಿಕ ಪ್ರಶಸ್ತಿ ಗೆಲ್ಲುವ ಛಲದಲ್ಲಿರುವ ಆತಿಥೇಯ ಭಾರತ ಪುರುಷರ ಹಾಕಿ ತಂಡವು ಭಾನುವಾರ ಇಲ್ಲಿ ನಡೆಯಲಿರುವ ಎಫ್‌ಐಎಚ್ ಜೂನಿಯರ್ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಏಳು ಬಾರಿಯ ಚಾಂಪಿಯನ್ ಜರ್ಮನಿಯನ್ನು ಎದುರಿಸಲಿದೆ.

ಎರಡು ಸಲದ ಚಾಂಪಿಯನ್ ಭಾರತ ತಂಡವು ಕೊನೆಯ ಬಾರಿಗೆ 2016ರಲ್ಲಿ ಲಖನೌದಲ್ಲಿ ಪ್ರಶಸ್ತಿ ಗೆದ್ದಿತ್ತು. ರೋಹಿತ್ ನಾಯಕತ್ವದ ಆತಿಥೇಯ ತಂಡವು ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಬಲಿಷ್ಠ ಜರ್ಮನಿ ವಿರುದ್ಧ ಸುಧಾರಿತ ಆಟ ಪ್ರದರ್ಶಿಸುವ ಒತ್ತಡದಲ್ಲಿದೆ.

ಭಾರತ ಗುಂಪು ಹಂತದಲ್ಲಿ ಅಮೋಘ ಆಟ ಪ್ರದರ್ಶಿಸಿತ್ತು. ಬಿ ಗುಂಪಿನಲ್ಲಿದ್ದ ಭಾರತ ತಂಡವು ಒಮಾನ್, ಚಿಲಿ ಮತ್ತು ಸ್ವಿಟ್ಜರ್ಲೆಂಡ್‌ನಂತಹ ದುರ್ಬಲ ತಂಡಗಳ ವಿರುದ್ಧ ಒಟ್ಟು 29 ಗೋಲುಗಳ ಸುರಿಮಳೆಗರೆದಿತ್ತು. ಮಾತ್ರವಲ್ಲದೆ, ಒಂದೂ ಗೋಲು ಬಿಟ್ಟುಕೊಡದೆ ಕ್ವಾರ್ಟರ್ ಫೈನಲ್ ಪ್ರವೇಶಿಸಿತ್ತು.

ಭಾರತದ ದಿಗ್ಗಜ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ತರಬೇತಿಯಲ್ಲಿರುವ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ ಬೆಲ್ಜಿಯಂ ವಿರುದ್ಧ ನಿಜವಾದ ಪರೀಕ್ಷೆಯನ್ನು ಎದುರಿಸಿತ್ತು. ನಿಗದಿತ ಸಮಯದಲ್ಲಿ ಎರಡೂ ತಂಡಗಳು 2-2 ಗೋಲುಗಳಿಂದ ಸಮಬಲ ಸಾಧಿಸಿದ ನಂತರ, ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತ 4-3ರಿಂದ ರೋಚಕ ಗೆಲುವು ಸಾಧಿಸಿತ್ತು.

ಬೆಲ್ಜಿಯಂ ವಿರುದ್ಧದ ಗೆಲುವಿನಲ್ಲಿ ಭಾರತದ ಗೋಲ್‌ಕೀಪರ್ ಪ್ರಿನ್ಸ್‌ದೀಪ್ ಸಿಂಗ್ ಪ್ರಮುಖ ಪಾತ್ರ ವಹಿಸಿದ್ದರು. ನಿಗದಿತ ಅವಧಿಯಲ್ಲಿ ಎದುರಾಳಿ ತಂಡದ ಕೆಲ ಗೋಲು ಅವಕಾಶಗಳನ್ನು ಅಮೋಘವಾಗಿ ತಡೆದಿದ್ದ ಅವರು, ಶೂಟೌಟ್‌ನಲ್ಲೂ ಪರಾಕ್ರಮ ಮೆರೆದಿದ್ದರು. ಬೆಲ್ಜಿಯಂ ಆಟಗಾರರ ಎರಡು ಪ್ರಯತ್ನಗಳಿಗೆ ಅದ್ಭುತವಾಗಿ ತಡೆಯೊಡ್ಡುವ ಮೂಲಕ ಭಾರತದ ಪಾಳಯದಲ್ಲಿ ಸಂಭ್ರಮ ಮೂಡಿಸಿದ್ದರು.

ಗುಂಪು ಹಂತದ ಪಂದ್ಯಗಳಲ್ಲಿ ಭಾರತದ ರಕ್ಷಣಾ ವಿಭಾಗವು ಅಷ್ಟೇನೂ ಪರೀಕ್ಷೆಗೆ ಒಳಗಾಗಿರಲಿಲ್ಲ. ಬೆಲ್ಜಿಯಂ ವಿರುದ್ಧದ ಪಂದ್ಯವು ಭಾರತಕ್ಕೆ ನಿಜವಾದ ಬಿಸಿ ತಟ್ಟಿದೆ. ಬೆಲ್ಜಿಯಂ ವಿರುದ್ಧ ಜಯ ಸಾಧಿಸಿದರೂ ತಂಡದ ಪ್ರದರ್ಶನ ಕೋಚ್ ಶ್ರೀಜೇಶ್ ಅವರಿಗೆ ಸಮಾಧಾನ ತಂದಿಲ್ಲ. ಈ ಗೆಲುವಿನಿಂದ ಮೈಮರೆಯದಂತೆ ಆಟಗಾರರಿಗೆ ಕಿವಿಮಾತು ಹೇಳಿದ್ದಾರೆ.

ಗುಂಪು ಹಂತದ ಪಂದ್ಯಗಳಲ್ಲಿ ಮಿಂಚಿದ್ದ ಭಾರತದ ಫಾರ್ವರ್ಡ್ ಆಟಗಾರರು ಬೆಲ್ಜಿಯಂ ವಿರುದ್ಧ ಹಲವು ಬಾರಿ ಗೋಲು ಗಳಿಸುವ ಅವಕಾಶಗಳನ್ನು ಸೃಷ್ಟಿಸಿದರೂ ಪದೇ ಪದೇ ವಿಫಲವಾಗಿದ್ದು ಶ್ರೀಜೇಶ್ ಅವರ ಚಿಂತೆಗೆ ಕಾರಣವಾಗಿದೆ. ಆಕ್ರಮಣಕಾರಿ ಆಟಕ್ಕೆ ಹೆಸರುವಾಸಿಯಾದ ಜರ್ಮನಿ ವಿರುದ್ಧ ಆ ತಪ್ಪು ಮಾಡದಂತೆ ಆಟಗಾರರನ್ನು ಎಚ್ಚರಿಸಿದ್ದಾರೆ.

ಮತ್ತೊಂದೆಡೆ ಹಾಲಿ ಚಾಂಪಿಯನ್ ಜರ್ಮನಿ ತಂಡವು ಗುಂಪು ಹಂತದಲ್ಲಿ ಮೂರು ಪಂದ್ಯಗಳನ್ನು ಗೆದ್ದು, ಕ್ವಾರ್ಟರ್ ಫೈನಲ್‌ನಲ್ಲಿ 3–1ರಿಂದ ಪೆನಾಲ್ಟಿ ಶೂಟೌಟ್‌ನಲ್ಲಿ ಫ್ರಾನ್ಸ್ ತಂಡವನ್ನು ಮಣಿಸಿದೆ. ನಿಗದಿತ ಅವಧಿಯ ಪಂದ್ಯ 2–2ರಿಂದ ಟೈ ಆಗಿತ್ತು.

ಭಾರತ ಜೂನಿಯರ್ ಹಾಕಿ ತಂಡದ ಆಟಗಾರರು ಪಿಟಿಐ ಚಿತ್ರ

ಇಂದಿನ ಪಂದ್ಯಗಳು

ಸ್ಪೇನ್ Vs ಅರ್ಜೆಂಟೀನಾ	(ಸಂಜೆ5)
ಭಾರತ Vs ಜರ್ಮನಿ	(ರಾತ್ರಿ8)

ಸ್ಥಳ: ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣ, ಚೆನ್ನೈ
ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಧನುಷ್, ರೂಹಿ ಚಾಂಪಿಯನ್

ರೂಹಿ ಸಿಂಗ್ ಮತ್ತು ಧನುಷ್

ಬೆಂಗಳೂರು: ಕರ್ನಾಟಕದ ಧನುಷ್ ಎಸ್.ಎಂ. ಮತ್ತು ರೂಹಿ ಸಿಂಗ್ ಅವರು ಎಐಟಿಎ 12 ವರ್ಷದೊಳಗಿನವರ ರಾಷ್ಟ್ರೀಯ ಸರಣಿಯ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಜಕ್ಕೂರಿನ ಇನ್‌ಫಿನಿಟಿ ಟೆನಿಸ್ ಅಕಾಡೆಮಿಯಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ ಧನುಷ್ 6-4, 6-1ರಿಂದ ತಮಿಳುನಾಡಿನ ಆದಿಶ್ ಪಿ.ಎಂ. ಅವರನ್ನು ಮಣಿಸಿದರು.

ಬಾಲಕಿಯರ ಫೈನಲ್‌ನಲ್ಲಿ ರೂಹಿ 2-6, 6-4, 6-3 ರಿಂದ ತೆಲಂಗಾಣದ ಅನೀಕ್ಷಾ ಜಿ. ಅವರನ್ನು ಹಿಮ್ಮೆಟ್ಟಿಸಿದರು.

ಧನುಷ್ ಅವರು ಗುಜರಾತ್‌ನ ರಿಯಾನ್ ನಂದಕುಮಾರ್ ಅವರ ಜೊತೆಗೂಡಿ ಬಾಲಕರ ಡಬಲ್ಸ್ ಪ್ರಶಸ್ತಿಯನ್ನೂ ಗೆದ್ದರು. ಅನೀಷಾ ಮರಿಯನ್ ಕಾರ್ನೆಲಿಯೊ ಮತ್ತು ಅನೀಕ್ಷಾ ಜೋಡಿ ಬಾಲಕಿಯರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿ: ಪ್ರಶಸ್ತಿ ಸುತ್ತಿಗೆ ತನ್ವಿ

ಪ್ರಶಸ್ತಿ ಸುತ್ತಿಗೆ ಮಿಥುನ್, ಸಂಸ್ಕಾರ್

ಗುವಾಹಟಿ (ಪಿಟಿಐ): ಮಿಥುನ್ ಮಂಜುನಾಥ್ ಮತ್ತು ಸಂಸ್ಕಾರ್ ಸಾರಸ್ವತ್ ಅವರು ಶನಿವಾರ ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿ ಪುರುಷರ ಸಿಂಗಲ್ಸ್‌ನಲ್ಲಿ ಫೈನಲ್ ತಲುಪಿದ್ದಾರೆ. ಇವರಲ್ಲಿ ಯಾರು ಗೆದ್ದರೂ ಪ್ರಶಸ್ತಿ ಭಾರತದ ಪಾಲಾಗಲಿದೆ. ಉದಯೋನ್ಮುಖ ತಾರೆ ತನ್ವಿ ಶರ್ಮಾ ಅವರೂ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ತಲುಪಿದ್ದಾರೆ.

ಕರ್ನಾಟಕದ ಮಿಥುನ್ ಸೆಮಿಫೈನಲ್‌ನಲ್ಲಿ 22-20, 21-8ರಿಂದ ಸ್ವದೇಶದ ತುಷಾರ್ ಸುವೀರ್ ಅವರನ್ನು ಸೋಲಿಸಿದರು. ವಿಶ್ವ ಕ್ರಮಾಂಕದಲ್ಲಿ 72ನೇ ಸ್ಥಾನದಲ್ಲಿರುವ ಮಿಥುನ್ ಅವರಿಗೆ ಮೊದಲ ಗೇಮ್‌ನಲ್ಲಿ ತುಷಾರ್ ಅವರಿಂದ ಪ್ರಬಲ ಪೈಪೋಟಿ ಎದುರಾಯಿತು. ಎರಡನೇ ಗೇಮ್ ಅನ್ನು ಮಿಥುನ್ ನಿರಾಯಾಸವಾಗಿ ಗೆದ್ದರು.

ಕಳೆದ ವರ್ಷ ಬೆಂಗಳೂರಿನಲ್ಲಿ ಅರ್ಶ್ ಮೊಹಮ್ಮದ್ ಜೊತೆಗೂಡಿ ಚೊಚ್ಚಲ ಸೀನಿಯರ್ ರಾಷ್ಟ್ರೀಯ ಡಬಲ್ಸ್ ಪ್ರಶಸ್ತಿ ಗೆದ್ದಿದ್ದ ಸಾರಸ್ವತ್ ಅವರು ಮತ್ತೊಂದು ಸೆಮಿ ಫೈನಲ್‌ನಲ್ಲಿ 21-19, 21-9ರಿಂದ ಇಂಡೊನೇಷ್ಯಾದ ಡೆಂಡಿ ಟ್ರಿಯಾನ್ಸ್ಯಾ ಅವರನ್ನು ಸೋಲಿಸಿದರು.

ಕರ್ನಾಟಕದ ಮಿಥುನ್ ಮಂಜುನಾಥ್

ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತೆ ತನ್ವಿ ಮಹಿಳಾ ಸಿಂಗಲ್ಸ್‌ನಲ್ಲಿ ತಮ್ಮ ಅದ್ಭುತ ಓಟವನ್ನು ಮುಂದುವರಿಸಿದರು. 42 ನಿಮಿಷಗಳ ಸೆಮಿಫೈನಲ್ ಪಂದ್ಯದಲ್ಲಿ ಅವರು 21-18, 21-16ರಿಂದ ಮೂರನೇ ಶ್ರೇಯಾಂಕದ ಹಿನಾ ಅಕೇಚಿ (ಜಪಾನ್) ಅವರನ್ನು ಹಿಮ್ಮೆಟ್ಟಿಸಿದರು.

ಕಳೆದ ವಾರ ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದ ಪಂಜಾಬ್‌ನ 16 ವರ್ಷದ ಆಟಗಾರ್ತಿ ಫೈನಲ್‌ನಲ್ಲಿ ತೈವಾನ್‌ನ ತುಂಗ್ ಸಿಯೊ ಟಾಂಗ್ ಅವರನ್ನು ಎದುರಿಸಲಿದ್ದಾರೆ.

ಕಳೆದ ವರ್ಷ ಒಡಿಶಾ ಮಾಸ್ಟರ್ಸ್ ಫೈನಲ್ ತಲುಪಿದ್ದ ತನ್ವಿ ಅವರು ಹಾಲಿ ಋತುವಿನಲ್ಲಿ ಯುಎಸ್ ಓಪನ್ ಸೂಪರ್ 300 ಮತ್ತು ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ ಅಪ್ ಆಗಿದ್ದಾರೆ. ಅವರು ಚೊಚ್ಚಲ ಸೂಪರ್ 100 ಪ್ರಶಸ್ತಿಯನ್ನು ಎದುರು ನೋಡುತ್ತಿದ್ದಾರೆ.

ಇದಕ್ಕೂ ಮುನ್ನ ಸ್ಥಳೀಯ ನೆಚ್ಚಿನ ಆಟಗಾರ್ತಿ ಅಶ್ಮಿತಾ ಚಾಲಿಹಾ ಸೆಮಿಫೈನಲ್‌ನಲ್ಲಿ ನಿರಾಸೆ ಮೂಡಿಸಿದರು. ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದ್ದ ಅಶ್ಮಿತಾ 21-12, 17-21, 14-21ರಿಂದ ಆರನೇ ಶ್ರೇಯಾಂಕದ ತುಂಗ್ ಅವರಿಗೆ ಸೋತರು.

ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಪೃಥ್ವಿ ಕೃಷ್ಣಮೂರ್ತಿ ರಾಯ್ ಮತ್ತು ಸಾಯಿ ಪ್ರತೀಕ್ ಕೆ. ಜೋಡಿಯು 21-16, 22-20ರಿಂದ ಇಂಡೊನೇಷ್ಯಾದ ಅನ್ಸೆಲ್ಮಸ್ ಬ್ರೀಗಿಟ್ ಮತ್ತು ಪುಲುಂಗ್ ರಮಧಾನ್ ಅವರನ್ನು ಮಣಿಸಿ ಫೈನಲ್‌ಗೆ ಮುನ್ನಡೆಯಿತು.

ಮಹಿಳಾ ಡಬಲ್ಸ್‌ನಲ್ಲಿ ಭಾರತದ ಅಭಿಯಾನಕ್ಕೆ ಸೆಮಿಫೈನಲ್‌ನಲ್ಲಿ ತೆರೆಬಿತ್ತು. ಎಂಟನೇ ಶ್ರೇಯಾಂಕದ ಅಶ್ವಿನಿ ಭಟ್ ಕೆ. ಮತ್ತು ಶಿಖಾ ಗೌತಮ್ 14-21, 10-21 ಅಂತರದಲ್ಲಿ ಎರಡನೇ ಶ್ರೇಯಾಂಕದ ಮಲೇಷ್ಯಾದ ಓಂಗ್ ಕ್ಸಿನ್ ಯೀ ಮತ್ತು ಕಾರ್ಮೆನ್ ಟಿಂಗ್ ವಿರುದ್ಧ ಸೋತರು.

ಮಿಶ್ರ ಡಬಲ್ಸ್ ಸೆಮಿಫೈನಲ್‌ನಲ್ಲಿ ಥಾಯ್ಲೆಂಡ್‌ನ ಟನಾಡಾನ್ ಪುನ್ಪಾನಿಚ್ ಮತ್ತು ಫಂಗ್ಪಾ ಕೊರ್ಪ್ತಮ್ಮಕಿಟ್ ಜೋಡಿಯು 21-15, 19-21, 21-17ರಿಂದ ಅಗ್ರ ಶ್ರೇಯಾಂಕಿತ ಭಾರತದ ಜೋಡಿ ರೋಹನ್ ಕಪೂರ್ ಮತ್ತು ರುತ್ವಿಕಾ ಶಿವಾನಿ ಅವರಿಗೆ ಆಘಾತ ನೀಡಿತು.

ಪ್ರತಿ ಕುಟುಂಬದ ಹೆಲ್ತ್ ಸ್ಪೆಷಲಿಸ್ಟ್

ಗ್ಯಾಸ್ ಮತ್ತು ಉರಿಯೂತದ ಅನುಭವ
ಅಜೀರ್ಣತೆ
ಹಸಿವಿನ ಕೊರತೆ
ಬಾಯಿ ಹುಣ್ಣು
ಶ್ವಾಸದಲ್ಲಿ ದುರ್ಗಂಧ
ಮೊಡವೆ/ಗುಳ್ಳೆ
ಕೂದಲು ಉದುರುವಿಕೆ
ನರೆ ಮತ್ತು ಕಪ್ಪು ಕಲೆ

ವೈರಲ್ ಸೋಂಕು
ಉಸಿರಾಟದ ಸಮಸ್ಯೆಗಳು
ಕೆಮ್ಮು
ಅಲರ್ಜಿ
ತ್ವಚೆಯ ಕಾಯಿಲೆಗಳು
ಏಕಾಗ್ರತೆ ಕೊರತೆ
ತಲೆಸುತ್ತು
ಅಶಕ್ತತೆ
ಜುಮ್ಮೆನಿಸುವುದು
ಕೀಲು ನೋವು
ಶಮನಕ್ಕೆ ಪರಿಣಾಮಕಾರಿ

ಜಾಲಿ ತುಳಸಿ 51 ಸತ್ವವನ್ನು 5 ಮಾದರಿಯ ತುಳಸಿ ಬಳಸಿಕೊಂಡು ವಿಶೇಷ ವಿಧಾನದಲ್ಲಿ ತಯಾರಿಸಲಾಗಿದೆ. ಎಲ್ಲಾ ಅಸ್ವಸ್ಥತೆಗಳನ್ನು ಶಮನಗೊಳಿಸಲು, ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲ ನಿಯಮಿತವಾಗಿ 5–5 ಹನಿ ಜಾಲಿ ತುಳಸಿ 51 ಸೇವಿಸಿರಿ. ಇದು ದೇಹದಲ್ಲಿ ಕಶ್ಮಲಗಳನ್ನು ನಿವಾರಿಸಲು ನೆರವಾಗುತ್ತದೆ ಮತ್ತು ಸಮಗ್ರ ಕುಟುಂಬವನ್ನು ವಿವಿಧ ಕಾಯಿಲೆಗಳಿಂದ ರಕ್ಷಿಸಲು ಪೂರಕವಾಗಿದೆ.

JOLLY
CLINICALLY TESTED
TULSI 51 ಡ್ರಾಪ್ಸ್
ಬೆಳಗ್ಗೆ ಸಂಜೆಗೆ 5–5 ಹನಿ ಸೇವಿಸಿ, ಸ್ವಸ್ಥ ನಿರೋಗಿ ಜೀವನ ಬಾಳಿರಿ
ದಶಕಗಳಷ್ಟು ಹಳೆಯದು & ಜಾಗತಿಕ ಮನ್ನಣೆ ಪಡೆದಿದೆ 1 ಕೋಟಿ+ ಸಂತೃಪ್ತ ಗ್ರಾಹಕರು
Super Stockist.»Shri Rama Stores,Yellapur. M:94491-38897
visit www.jollypharma.in ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ Helpline: 97813-30500